ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಸಶಸ್ತ್ರ ಪಡೆಗಳಲ್ಲಿ ಸಿರಿಧಾನ್ಯ ಬಳಕೆಗೆ ಕೇಂದ್ರ ಉತ್ತೇಜನ: ರಾಜನಾಥ್ ಸಿಂಗ್

| ೦೫

ಸಂಸತ್ ಆವರಣದಲ್ಲಿ ಮೋದಿ-ರಾಗಾ ಅಪರೂಪದ ಸಂಭಾಷಣೆ

| ೦೫



ಬೆಂಗಳೂರು

ಭಾನುವಾರ, 12 ಏಪ್ರಿಲ್ 2026

ಸಂಪುಟ 33, ಸಂಚಿಕೆ 161, ಪುಟಗಳು 12+4

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

RNI: 58231/94
REG No.KA/BG GPO/2532/2021-23

hosadigantha.com
epaper.hosadigantha.com
Hosadigantha Digital

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ : ದಶಮಿ, ನಕ್ಷತ್ರ: ಶ್ರವಣ

ದಿನದ ಮಾತು

ಕಷ್ಟವನ್ನು ಕಾಣದ, ಸೋಲನ್ನು ಅನುಭವಿಸದ ಮನುಷ್ಯನನ್ನು ನಂಬಬೇಡಿ.

▲ ಅರವಿಂದ

ಬಲ್ಲವನೇ ಬಲ್ಲ ಭಾಷೆಯ ಸವಿಯ

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

ರಾಜ್ಯದ ವಂದೇ ಭಾರತ್ ಸ್ಲೀಪರ್ ರೈಲಿಗೆ ಸಮ್ಮತಿ

• **ಬೆಂಗಳೂರು:** ಬೆಂಗಳೂರು-ಮುಂಬೈ ವಂದೇ ಭಾರತ್ ಸ್ಲೀಪರ್ ರೈಲು ಕಾರ್ಯಾಚರಣೆಗೆ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅನುಮತಿ ನೀಡಿದ್ದಾರೆ. ಕೆಎಸ್ಆರ್ ಬೆಂಗಳೂರು ಮತ್ತು ಛತ್ರಪತಿ ಶಿವಾಜಿ ಮಹಾರಾಜ್ ನಡುವೆ ಹೊಸ ವಂದೇ ಭಾರತ್ ಸ್ಲೀಪರ್ ರೈಲನ್ನು ಪರಿಚಯಿಸಲು ಅನುಮೋದನೆ ನೀಡಲಾಗಿದೆ ಎಂದು ಅಶ್ವಿನಿ ವೈಷ್ಣವ್ ತಿಳಿಸಿರುವ ಅಧಿಕೃತ ಅನುಮತಿ ಪತ್ರವನ್ನು ಸಂಸದ ಪಿ.ಸಿ.ಮೋಹನ್ ಅವರು ತಮ್ಮ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ➡ ಪುಟ ೭

ಊಹಾ ಪತ್ರಿಕೋದ್ಯಮ ಬಿಡಿ: ಸಿಎಂ ಸಿದ್ದರಾಮಯ್ಯ

• ಪುಟ ೨

ಕೇರಳದಲ್ಲಿ ಬಾಲಕಿ ಶ್ರೀನಂದಾ ಅಂತ್ಯಕ್ರಿಯೆ

• ಪುಟ ೨

ಎಂಜಿನಿಯರ್ ಮನೆಯಲ್ಲಿ 6 ಕೆಜಿ ಚಿನ್ನ, 5 ಕೆಜಿ ಬೆಳ್ಳಿ ಪತ್ತೆ

• ಪುಟ ೨

ಒಬಿಸಿಗೆ ಕೊಡವರ ಸೇರ್ಪಡೆ ಯದುವೀರ್ ಭರವಸೆ

• ಪುಟ ೨

ದೇಶದಲ್ಲಿ ಇಂಧನ ಕೊರತೆ ಇಲ್ಲ: ಸಚಿವ ಜೋಶಿ

• ಪುಟ ೨

ಆರೆಸ್ಸೆಸ್ ಕಚೇರಿಗೆ ನಟ ರಣವೀರ್ ಸಿಂಗ್ ಭೇಟಿ

• ಪುಟ ೫

ಕನ್ನಡ ಬಳಕೆ: ಕೇರಳ ಸರ್ಕಾರಕ್ಕೆ ಹೈ ಗಡುವು

• ಪುಟ ೫

ಪ್ರತ್ಯೇಕ ಉಗ್ರ ವಿರೋಧಿ ಕಾರ್ಯಾಚರಣೆ: ಇಬ್ಬರ ಸೆರೆ

• ಪುಟ ೫

ಆರ್ಟೆಮಿಸ್ 2 ಯಶಸ್ವಿ ಸ್ಪ್ಲ್ಯಾಶ್‌ಡೌನ್

• ಪುಟ ೫

ಫಲ ನೀಡೀತೇ ಶಾಂತಿ ಮಾತು? | ಸಂಘರ್ಷ ಅಂತ್ಯ ಯತ್ನ

ನಿರ್ಣಾಯಕ ಸಂಧಾನ

• **ಇಸ್ಲಾಮಾಬಾದ್:** ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ರಕ್ತಸಿಕ್ತ ಸಂಘರ್ಷಕ್ಕೆ ತೆರೆ ಎಳೆಯುವ ನಿಟ್ಟಿನಲ್ಲಿ ಅಮೆರಿಕ ಮತ್ತು ಇರಾನ್ ನಡುವಿನ ನಿರ್ಣಾಯಕ ಶಾಂತಿ ಮಾತುಕತೆ ಶನಿವಾರ ಪಾಕಿಸ್ತಾನದ ರಾಜಧಾನಿ ಇಸ್ಲಾಮಾಬಾದ್‌ನಲ್ಲಿ ಆರಂಭವಾಗಿದ್ದು, ಇದರ ನಡುವೆಯೇ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಎಚ್ಚರಿಕೆಯ ಮಾತುಗಳೂ ಹೊರಬಿದ್ದಿವೆ.

ಉಭಯ ಕಡೆಯವರು ಮುಖಾಮುಖಿಯಾಗಿ ಈ ಮಾತುಕತೆ ನಡೆಸುತ್ತಿದ್ದಾರೆ. ಈ ಮಾತುಕತೆ ಫಲಪ್ರದವಾಗುವ ಬಗ್ಗೆ ಅಮೆರಿಕ ಉಪಾಧ್ಯಕ್ಷ ವ್ಯಾನ್ಸ್ ಆಶಯ ವ್ಯಕ್ತಪಡಿಸಿದ್ದಾರೆ.



ಈ ಉನ್ನತ ಮಟ್ಟದ ಮಾತುಕತೆಗೆ ಮುನ್ನ, ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ನೇತೃತ್ವದ ಅಮೆರಿಕ ನಿಯೋಗ ಹಾಗೂ ಇರಾನ್ ಸಂಸತ್ ಅಧ್ಯಕ್ಷ ಮೊಹಮ್ಮದ್ ಬಾಗೇರ್ ಗಾಲಿಬಾಫ್ ನೇತೃತ್ವದ ಇರಾನಿ ನಿಯೋಗ ಪ್ರತ್ಯೇಕವಾಗಿ ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಅವರನ್ನು ಭೇಟಿ ಮಾಡಿದವು. ವ್ಯಾನ್ಸ್ ಜತೆ ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್ ಮತ್ತು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಳಿಯ ಜಾರೆಡ್ ಕುಶ್ನರ್ ಆಗಮಿಸಿದ್ದಾರೆ. ಇರಾನ್ ನಿಯೋಗದಲ್ಲಿ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ, ಸುಪ್ರೀಮ್ ರಾಷ್ಟ್ರೀಯ ರಕ್ಷಣಾ ಮಂಡಳಿ ಕಾರ್ಯದರ್ಶಿ ಅಲಿ ಅಕ್ಬರ್ ಅಹ್ಮದಿಯನ್ ಹಾಗೂ ಕೇಂದ್ರೀಯ ಬ್ಯಾಂಕ್ ಗವರ್ನರ್ ಅಬ್ದೊಲ್‌ನಾಸರ್ ಹೆಮ್ಮತಿ ಸೇರಿದ್ದಾರೆ. ➡ ಪುಟ ೭

ಕದಡಿದ ಕದನ ವಿರಾಮ

ನಾಲ್ಕು ದಿನಗಳ ಹಿಂದೆ ಇರಾನ್ ಮತ್ತು ಅಮೆರಿಕ ಎರಡು ವಾರಗಳ ಕದನ ವಿರಾಮ ಘೋಷಿಸಿದ್ದವು. ಆದರೆ, ಲೆಬನಾನ್ ಮೇಲೆ ಇಸ್ರೇಲ್ ನಡೆಸಿದ ಭಾರೀ ವಾಯು ದಾಳಿಯಲ್ಲಿ 300ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, ಈ ಕದನ ವಿರಾಮ ಛಿದ್ರವಾಗಿದೆ. ಟೆಹ್ರಾನ್ ಈ ದಾಳಿಯು ಕದನ ವಿರಾಮದ ಷರತ್ತುಗಳ ಉಲ್ಲಂಘನೆ ಎಂದು ಆರೋಪಿಸಿದರೆ, ಅಮೆರಿಕ ಮತ್ತು ಇಸ್ರೇಲ್ ಲೆಬನಾನ್ ಒಪ್ಪಂದದ ಭಾಗವಲ್ಲ ಎಂದು ಸಮರ್ಥಿಸಿಕೊಂಡಿವೆ. ಇರಾನ್ ಅಧ್ಯಕ್ಷ ಮಸೂದ್ ಪೆಝೆಶ್ಕಿಯಾನ್ ಲೆಬನಾನ್ ಮೇಲಿನ ಇಸ್ರೇಲಿ ದಾಳಿಯು ಕದನ ವಿರಾಮವನ್ನು ಬಹಿರಂಗವಾಗಿ ಉಲ್ಲಂಘಿಸಿದೆ ಎಂದೂ, ಇದು ಮಾತುಕತೆಯನ್ನೇ ಅರ್ಥಹೀನಗೊಳಿಸುತ್ತದೆ ಎಂದೂ ಹೇಳಿದ್ದಾರೆ.



ಇರಾನ್‌ನ 10 ಅಂಶಗಳ ಬೇಡಿಕೆ ಪಟ್ಟಿ

ಮಾತುಕತೆಗೆ ಮುನ್ನ ಇರಾನ್ 10 ಅಂಶಗಳ ಯೋಜನೆಯನ್ನು ಮಂಡಿಸಿದ್ದು, ಅದರಲ್ಲಿ ಪಶ್ಚಿಮ ಏಷ್ಯಾದಿಂದ ಅಮೆರಿಕ ಸೇನೆಯ ವಾಪಸಾತಿ, ಇರಾನ್ ವಿರುದ್ಧದ ನಿರ್ಬಂಧಗಳ ತೆರವು ಮತ್ತು ಹಾರ್ಮುಜ್ ಜಲಸಂಧಿಯ ಮೇಲೆ ಇರಾನ್‌ಗೆ ನಿಯಂತ್ರಣ ನೀಡುವ ಬೇಡಿಕೆಗಳು ಸೇರಿವೆ. ಇರಾನ್‌ನ ಅರೆ-ಅಧಿಕೃತ ತಸ್ನಿಮ್ ಸುದ್ದಿಸಂಸ್ಥೆ, ಇಸ್ರೇಲಿ ಆಕ್ರಮಣವನ್ನು ನಿಲ್ಲಿಸುವುದು ಮತ್ತು ಇರಾನ್‌ನ ಸ್ಥಗಿತ ಆಸ್ತಿಗಳನ್ನು ಮುಕ್ತಗೊಳಿಸುವುದು ಸೇರಿದಂತೆ ಟೆಹ್ರಾನ್‌ನ ಪೂರ್ವಷರತ್ತುಗಳು ಈಡೇರುವವರೆಗೆ ನೇರ ಮಾತುಕತೆ ಆರಂಭವಾಗುವುದಿಲ್ಲ ಎಂದು ಮೊದಲು ವರದಿ ಮಾಡಿತ್ತು. ಆದರೆ ನಂತರ, ಅಮೆರಿಕವು ಇರಾನ್‌ನ ಸ್ಥಗಿತ ಆಸ್ತಿಗಳನ್ನು ಬಿಡುಗಡೆ ಮಾಡಲು ಒಪ್ಪಿದೆ ಎಂದು ತಿಳಿದ ಮೂಲವನ್ನು ಉಲ್ಲೇಖಿಸಿ ಹೇಳಿದೆ. ಆದರೆ ಈ ವರದಿಗೆ ಅಧಿಕೃತ ದೃಢೀಕರಣ ದೊರೆತಿಲ್ಲ.

- ಇಸ್ಲಾಮಾಬಾದ್‌ನಲ್ಲಿ ಅಮೆರಿಕ-ಇರಾನ್ ಶಾಂತಿ ಮಾತುಕತೆ ಆರಂಭ
- ಪಾಕಿಸ್ತಾನ ಮಧ್ಯಸ್ಥಿಕೆ; ವಿಶ್ವದ ಕಣ್ಣು ಸೆರೆನಾ ಹೋಟೆಲ್‌ನತ್ತ
- ಜಾಗತಿಕ ಇಂಧನ ಮಾರುಕಟ್ಟೆ ಮೇಲೆ ನೇರ ಪರಿಣಾಮ

ಅಮೆರಿಕ-ಇರಾನ್ ಎಚ್ಚರಿಕೆ ನುಡಿಗಳು

ಅಧ್ಯಕ್ಷ ಟ್ರಂಪ್ ಈಗಾಗಲೇ ಮಾತುಕತೆ ಫಲ ನೀಡದಿದ್ದಲ್ಲಿ ಇರಾನ್ ವಿರುದ್ಧ ಸೇನಾ ಕಾರ್ಯಾಚರಣೆ ಪುನರಾರಂಭಿಸುವ ಎಚ್ಚರಿಕೆ ನೀಡಿದ್ದಾರೆ. ಜತೆಗೆ, ಹೋರ್ಮುಜ್ ಜಲಸಂಧಿಯಿಂದ ಅಮೆರಿಕದ ಎರಡು ಯುದ್ಧ ನೌಕೆಗಳು ತೆರಳಿರುವ ಬಗ್ಗೆಯೂ ಅವರು ಮಾಹಿತಿ ಹಂಚಿಕೊಂಡಿದ್ದಾರೆ. ಇತ್ತ ಪಾಕಿಸ್ತಾನಕ್ಕೆ ಹೊರಡುವ ಮುನ್ನ ವ್ಯಾನ್ಸ್ ಅವರು, ಅಮೆರಿಕ ಅಧ್ಯಕ್ಷರು ಹೇಳಿದಂತೆ, ಇರಾನಿಯರು ಸದ್ಭಾವನೆಯಿಂದ ಮಾತುಕತೆ ನಡೆಸಲು ಸಿದ್ಧರಿದ್ದರೆ, ನಾವು ಖಂಡಿತವಾಗಿ ಸ್ನೇಹಹಸ್ತ ಚಾಚುತ್ತೇವೆ. ಆದರೆ ನಮ್ಮನ್ನು ವಂಚಿಸಲು ಯತ್ನಿಸಿದರೆ, ನಮ್ಮ ಸಂಧಾನ ತಂಡ ಅಷ್ಟು ಸಹನಶೀಲವಾಗಿರದು ಎಂದು ಹೇಳಿದ್ದಾರೆ.

ರೈತರ ಪಾಲಿಗೆ ಕೈ ಕಂಟಕ: ದೇವೇಗೌಡ

ಜೆಡಿಎಸ್ ಸಮಾವೇಶ ಭಾರೀ ಶಕ್ತಿ ಪ್ರದರ್ಶನ



• **ಬೆಂಗಳೂರು:** ಮುಂಬರುವ ಜಿಬಿಎ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆ ಗಮನದಲ್ಲಿಟ್ಟುಕೊಂಡು ಜೆಡಿಎಸ್ ಪಕ್ಷವು ಜನತಾ ಸಮಾವೇಶ, ಪಕ್ಷದ ಬೆಳ್ಳಿಹಬ್ಬ ಆಚರಣೆ ಮಾಡುವ ಮೂಲಕ ಶಕ್ತಿ ಪ್ರದರ್ಶನ ಮಾಡಿತು.

ಕೆಂಗೇರಿಯ ಕೊಮ್ಮಘಟ್ಟ ರಸ್ತೆಯಲ್ಲಿರುವ ನೈಸ್ ಮೋದಿ ಗ್ರೌಂಡ್‌ನಲ್ಲಿ ಆಯೋಜಿಸಲಾಗಿದ್ದ ಜೆಡಿಎಸ್ ಪಕ್ಷದ ಜನತಾ ಸಮಾವೇಶ ಹಾಗೂ ಬೆಳ್ಳಿಹಬ್ಬ ಮಹೋತ್ಸವ ಜೆಡಿಎಸ್ ಅಸ್ತಿತ್ವ ಕಳೆದುಕೊಳ್ಳುತ್ತಿದೆ ಎಂದು ಟೀಕಿಸುವವರಿಗೆ ಸವಾಲಾಗಿ ಪರಿಣಮಿಸಿತು. ಬೆಂಗಳೂರಿನಲ್ಲೂ ಜೆಡಿಎಸ್ ನೆಲೆ ಭದ್ರವಾಗಿದೆ ಎಂಬುದನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ಈ ಬೃಹತ್ ಸಮಾವೇಶ ಸಾಕ್ಷಿಯಾಯಿತು.

ಸಮಾವೇಶದಲ್ಲಿ ಮಾತನಾಡಿದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು, ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಬೆಂಗಳೂರು ನಗರಕ್ಕೆ ನೀಡಿರುವ ಕೊಡುಗೆ ಅಪಾರ. ಆ ಕೊಡುಗೆ ಇಂದಿಗೂ ಮಾದರಿ ಎಂದು ಸ್ಮರಿಸಿದರು. ರೈತರು ಸಂಕಷ್ಟದಲ್ಲಿದ್ದಾಗ, ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡ ಸಂದರ್ಭದಲ್ಲಿ ಅವರ ನೆರವಿಗೆ ನಿಂತು ರೈತರ ಸಾಲ ಮನ್ನಾ ಮಾಡುವ ಮೂಲಕ ಅವರ ಕುಟುಂಬಕ್ಕೆ ಆರ್ಥಿಕ ನೆರವು ನೀಡುವ ಕೆಲಸ ಮಾಡಿದ್ದಾರೆ. ಆದರೆ ಈಗಿನ ಕಾಲಘಟ್ಟದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರ ರೈತರಿಗೆ ಅನುಕೂಲವಾಗುವ ಇಂತಹ ಒಂದೇ ಒಂದು ಕೆಲಸ ಮಾಡಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ➡ ಪುಟ ೭

ನಮ್ಮ ಮನೆಗೆ ಸೂಟ್‌ಕೇಸ್ ಹಿಡಿದು ಬರುವುದಿಲ್ಲ

ಮಿಸ್ಟರ್ ಸಿದ್ದರಾಮಯ್ಯನವರೇ ನಮ್ಮ ಮನೆಗೆ ಬರುವವರು ಸೂಟ್‌ಕೇಸ್ ಇರುವವರಲ್ಲ, ಸೂಟು ಬೂಟು ಹಾಕಿಕೊಂಡು ಬರುವವರಲ್ಲ, ರೋಗಿಗಳು, ಕಿಡ್ನಿ ವೈಫಲ್ಯದಿಂದ ಬಳಲುತ್ತಿರುವವರು, ಹೃದಯ ಸಂಬಂಧಿ ಕಾಯಿಲೆಗಳಿಂದ ಬಳಲುತ್ತಿರುವವರು ಸಹಾಯಹಸ್ತ ಕೇಳಲು ಬರುತ್ತಾರೆ. ನಿಮ್ಮ ಮನೆಗೆ ಇವರು ಬರುತ್ತಾರೆಯೇ ಎಂದು ಎಚ್‌ಡಿಕೆ ಪ್ರಶ್ನಿಸಿದರು.

> ಜಿಬಿಎ ಚುನಾವಣೆ 2028ಕ್ಕೆ ದಿಕ್ಸೂಚಿ ಆಗಿದೆ. ನಮ್ಮ ಸರ್ಕಾರದ ಅವಧಿಯಲ್ಲಿ ಏನೇನು ಯೋಜನೆಗಳನ್ನು ಕೈಗೆತ್ತಿಕೊಂಡು ಅಭಿವೃದ್ಧಿಪಡಿಸಲಾಗಿದೆಯೋ ಅವುಗಳನ್ನು ಕರಪತ್ರಗಳ ಮೂಲಕ ಮನೆ ಮನೆಗೆ ತಲುಪಿಸುವ ಕೆಲಸವನ್ನು ಕಾರ್ಯಕರ್ತರು ಮಾಡಬೇಕು.
>
> ■ ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಸೂಗೂರ ದೇಗುಲ ಲೋಕಾರ್ಪಣೆಗೊಳಿಸಿದ ಸಿದ್ದರಾಮಯ್ಯ

ವೈಚಾರಿಕತೆ ರೂಢಿಸಿಕೊಳ್ಳಿ: ಸಿಎಂ

• **ಕಲಬುರಗಿ:** ಜಾತಿ ರಹಿತ ಸಮ-ಸಮಾಜ ನಿರ್ಮಾಣವಾಗಬೇಕಾದರೆ ದ್ವೇಷ ಬಿಟ್ಟು ಎಲ್ಲರು ಪರಸ್ಪರ ಪ್ರೀತಿ ವಿಶ್ವಾಸದೊಂದಿಗೆ ಭಾವೈಕ್ಯತೆಯಿಂದ ಮನುಷ್ಯರಾಗಿ ಬಾಳಬೇಕಿದೆ. ಮೂಢನಂಬಿಕೆ ಬಿಟ್ಟು ವೈಚಾರಿಕತೆ ಬೆಳೆಸಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶನಿವಾರ ಜಿಲ್ಲೆಯ ಚಿತ್ತಾಪುರ ತಾಲೂಕಿನ ಸೂಗೂರ (ಎನ್) ಗ್ರಾಮದಲ್ಲಿ ಮಹಾತ್ಮ ಭೋಜಲಿಂಗೇಶ್ವರ ಸಿದ್ಧ ಸಂಸ್ಥಾನ ಮಠದಿಂದ ಆಯೋಜಿಸಿದ್ದ ಶ್ರೀ ಭೋಜಲಿಂಗೇಶ್ವರರ ನೂತನ ದೇವಸ್ಥಾನ ಲೋಕಾರ್ಪಣೆ ಮತ್ತು ಮೂರ್ತಿ ಪ್ರತಿಷ್ಠಾಪನೆ, ನೂತನ ಬೆಳ್ಳಿ ರಥೋತ್ಸವ ಚಾಲನೆ ಹಾಗೂ ಕಲ್ಯಾಣ ಮಂಟಪ ಉದ್ಘಾಟಿಸಿ ಮಾತನಾಡಿದರು. ಸಮಾಜದಲ್ಲಿ ಅನೇಕ ಜಾತಿ ಧರ್ಮಗಳಿವೆ, ಅನೇಕ ಭಾಷೆ ಸಂಸ್ಕೃತಿಗಳಿವೆ. ➡ ಪುಟ ೭



> ಜಾತಿ ವ್ಯವಸ್ಥೆ ಸ್ವಲ್ಪ ಕಡಿಮೆಯಾಗಿದೆಯಾದರೂ ಇನ್ನೂ ಪೂರ್ಣವಾಗಿ ಹೋಗಿಲ್ಲ, ಪ್ರತಿಯೊಬ್ಬರೂ ವೈಚಾರಿಕತೆ, ವೈಜ್ಞಾನಿಕ ಹಿನ್ನೆಲೆಯುಳ್ಳ ವಿದ್ಯೆ ಪಡೆದುಕೊಳ್ಳಬೇಕು. ಬಸವಣ್ಣನವರು ಆ ಕಾಲದಲ್ಲಿಯೇ ಕರ್ಮ ಸಿದ್ಧಾಂತ ತಿರಸ್ಕಾರ ಮಾಡಿದ್ದರು.
>
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

ದಾವಣಗೆರೆ ವಿದ್ಯಮಾನ | ಕೈನಲ್ಲಿ ಜೋರಾಯ್ತು ಅಸಮಾಧಾನ

ಕಾಂಗ್ರೆಸ್‌ನಲ್ಲಿ ರಾಜೀನಾಮೆ ಪರ್ವ

• **ಬೆಂಗಳೂರು:** ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಗೆ ಮತದಾನ ಮುಕ್ತಾಯಗೊಂಡ ಬೆನ್ನಲ್ಲೇ ಕಾಂಗ್ರೆಸ್ ಪಕ್ಷದಲ್ಲಿ ಅಲ್ಪಸಂಖ್ಯಾತರ ಅಸಮಾಧಾನ ಸ್ಫೋಟಗೊಂಡಿದ್ದು, ರಾಜೀನಾಮೆ ಪರ್ವ ಶುರುವಾಗಿದೆ.

ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರವಾಗಿ ಕೆಲವು ಅಲ್ಪಸಂಖ್ಯಾತ ನಾಯಕರುಗಳು ಸರಿಯಾಗಿ ಕೆಲಸ ಮಾಡಲಿಲ್ಲ, ಹೀಗಾಗಿ ಕಾಂಗ್ರೆಸ್ ಪಕ್ಷಕ್ಕೆ ಏನಾದರೂ ಹಿನ್ನಡೆಯಾದರೆ, ನಮ್ಮ ಪಕ್ಷದೊಳಗಿನ ಕೆಲವು ಅಲ್ಪಸಂಖ್ಯಾತ ನಾಯಕರುಗಳೇ ಕಾರಣ ಎಂದು ಶುಕ್ರವಾರವಷ್ಟೇ ಸ್ವಪಕ್ಷೀಯ ಶಾಸಕರುಗಳೇ ಆರೋಪಿಸಿದ್ದರು. ಇದರ ಬೆನ್ನಲ್ಲೇ, ಉಪ ಚುನಾವಣೆಯಲ್ಲಿ ಕೆಲವು ಅಲ್ಪಸಂಖ್ಯಾತ ನಾಯಕರುಗಳ ಭಾಗವಹಿಸುವಿಕೆ, ಹಾಗೂ ಪ್ರಚಾರದ ಕಾರ್ಯವೈಖರಿ ಕುರಿತು ಎಐಸಿಸಿಗೆ ವರದಿ ನೀಡಲಾಗಿತ್ತು. ಇದರ ಬೆನ್ನಲ್ಲೇ, ರಾಜೀನಾಮೆ ಪರ್ವ ಆರಂಭವಾಗಿದೆ. ➡ ಪುಟ ೭

ರಾಜೀನಾಮೆ ಪತ್ರದಲ್ಲಿ ಜಮೀರ್ ಹೆಸರು

ಅಬ್ದುಲ್ ಜಬ್ಬಾರ್ ತಮ್ಮ ರಾಜೀನಾಮೆ ಪತ್ರದಲ್ಲಿ ಗಂಭೀರ ಆರೋಪಗಳನ್ನು ಮಾಡಿದ್ದಾರೆ. ಸಚಿವ ಜಮೀರ್ ಅಹ್ಮದ್ ಖಾನ್ ಅವರನ್ನು ದಾವಣಗೆರೆ ಉಪಚುನಾವಣೆ ಪ್ರಚಾರಕ್ಕೆ ಬರಬೇಡಿ ಎಂದು ಬಹಿರಂಗವಾಗಿ ಹೇಳುವ ಮೂಲಕ ಅಗೌರವ ತೋರಲಾಗಿದೆ. ಇದು ರಾಜ್ಯಾದ್ಯಂತ ಇರುವ ಅಲ್ಪಸಂಖ್ಯಾತ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಮುಸ್ಲಿಂ ಸಮುದಾಯದ ಮನಸ್ಸಿಗೆ ನೋವುಂಟುಮಾಡಿದೆ ಎಂದು ಪತ್ರದಲ್ಲಿ ಹೇಳಿದ್ದಾರೆ.

ಮಹಿಳಾ ಮೀಸಲಾತಿ ಬೆಂಬಲಿಸಿ



- ರಾಜಕೀಯ ಪಕ್ಷಗಳಿಗೆ ಮನವಿ
- ಜಾಗೃತಿಗೆ ಮುಂದಾದ ಶೋಭಾ ಕರಂದ್ಲಾಜೆ

• **ಬೆಂಗಳೂರು:** ಲೋಕಸಭೆ ಮತ್ತು ವಿಧಾನಸಭೆಯಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ನಾರಿ ಶಕ್ತಿ ವಂದನ್ ಮಸೂದೆ ಹಿನ್ನೆಲೆಯಲ್ಲಿ ಮಹಿಳೆಯರಿಗೆ ತಮ್ಮ ಹಕ್ಕಿನ ಬಗ್ಗೆ ಮುಂದಿನ 10 ದಿನಗಳಲ್ಲಿ ಹೆಚ್ಚಿನ ಜಾಗೃತಿ ಮೂಡಿಸಲಾಗುವುದು ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜಕೀಯ ಪಕ್ಷಗಳು ಮಹಿಳಾ ಮೀಸಲಾತಿ ಮಸೂದೆ ಸ್ವೀಕರಿಸಬೇಕು. ವಿವಿಧ ಕ್ಷೇತ್ರಗಳಲ್ಲಿ ಮಹಿಳೆಗೆ ಟಿಕೆಟ್ ಸಿಗುವಂತಾಗಲಿ ಎಂದು ಆಶಿಸಿದರು. ➡ ಪುಟ ೭

ಟಿಎಂಸಿ ವಿರುದ್ಧ ಪ್ರಧಾನಿ ಮೋದಿ ತೀವ್ರ ವಾಗ್ದಾಳಿ

ಏನಾಸಂ ಜಾರಿ ಭರವಸೆ

• **ಜಂಗೀಪುರ/ಕುಶ್ಮಂಡಿ:** ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಟಿಎಂಸಿ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿ, ಚುನಾವಣೆಯನ್ನು 'ರಾಜ್ಯದ ಅಸ್ತಿತ್ವ ಮತ್ತು ಭವಿಷ್ಯ ಉಳಿಸುವ ಹೋರಾಟ' ಎಂದು ಚಿತ್ರಿಸಿದರು. ಬಿಜೆಪಿ ಅಧಿಕಾರಕ್ಕೆ ಬಂದರೆ ಏಕರೂಪ ನಾಗರಿಕ ಸಂಹಿತೆ (ಏನಾಸಂ) ಜಾರಿಗೆ ತಂದು ಓಲೈಕೆಯ ರಾಜಕೀಯ ಅಂತ್ಯ ಮಾಡುವುದಾಗಿ ಅವರು ಭರವಸೆ ನೀಡಿದರು.

ಮುರ್ಶಿದಾಬಾದ್ ಜಿಲ್ಲೆಯ ಜಂಗೀಪುರದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಜನಸಂಖ್ಯಾ ಸಮತೋಲನ ಬದಲಾಗುತ್ತಿದೆ ಎಂದು ಆರೋಪಿಸಿ, 'ಬಂಗಾಳದಲ್ಲಿ ಬೆಂಗಾಲಿಗಳು ಅಲ್ಪಸಂಖ್ಯಾತರಾಗಲು ಬಿಡುವುದಿಲ್ಲ' ಎಂದರು. ಟಿಎಂಸಿ ಮಾ-ಮಾಟಿ-ಮಾನುಷ್ ಘೋಷಣೆಯಿಂದ ದೂರ ಸರಿದು, ಮತ ಬ್ಯಾಂಕ್ ರಾಜಕೀಯ ಮತ್ತು ನುಸುಳುಕೋರರ ಬೆಂಬಲಕ್ಕೆ ನಿಂತಿದೆ ಎಂದು ಟೀಕಿಸಿದರು. ➡ ಪುಟ ೭



ಪ. ಬಂಗಾಳದಲ್ಲಿ ಕಟ್-ಮನಿ ಸಂಸ್ಕೃತಿ

ಪಶ್ಚಿಮ ಬಂಗಾಳ ರಾಜ್ಯದಲ್ಲಿ ಭ್ರಷ್ಟಾಚಾರ, ಅಕ್ರಮ ವ್ಯವಹಾರಗಳು ಮತ್ತು ಕಟ್-ಮನಿ ಸಂಸ್ಕೃತಿ ವ್ಯಾಪಕವಾಗಿದೆ ಎಂದು ಹೇಳಿದ ಮೋದಿ, 'ಟಿಎಂಸಿ ಆಡಳಿತವು ಭ್ರಷ್ಟಾಚಾರ ಮತ್ತು ಗೂಂಡಾಗಿರಿ ರಾಜಕಾರಣವನ್ನು ಸಂಸ್ಥಾಗತಗೊಳಿಸಿದೆ' ಎಂದು ಕಿಡಿಕಾರಿದರು.

ಮತದಾನ, ಸ್ಪರ್ಧಿಸುವ ಹಕ್ಕು ಮೂಲಭೂತವಲ್ಲ

• **ಹೊಸದಿಲ್ಲಿ:** ಮತದಾನ ಮಾಡುವ ಹಕ್ಕು ಹಾಗೂ ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕುಗಳು ಮೂಲಭೂತ ಹಕ್ಕುಗಳಲ್ಲ ಎಂದು ಸುಪ್ರೀಂ ಕೋರ್ಟ್ ಪುನರುಚ್ಚರಿಸಿದೆ. ಇವು ಕೇವಲ ಕಾನೂನುಬದ್ಧ ಹಕ್ಕುಗಳಾಗಿದ್ದು, ಕಾನೂನು ನಿಗದಿಪಡಿಸಿದ ಮಿತಿಯೊಳಗೆ ಮಾತ್ರ ಅನ್ವಯಿಸುತ್ತವೆ ಎಂದು ಸರ್ವೋಚ್ಚ ನ್ಯಾಯಾಲಯ ಸ್ಪಷ್ಟಪಡಿಸಿದೆ.



ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಆರ್. ಮಹಾದೇವನ್ ಅವರ ಪೀಠವು ರಾಜಸ್ಥಾನದ ಜಿಲ್ಲಾ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಚುನಾವಣೆಗೆ ಸಂಬಂಧಿಸಿದ ಪ್ರಕರಣವನ್ನು ವಿಚಾರಣೆ ಮಾಡುವ ವೇಳೆ ಈ ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿದೆ.

ಕೋರ್ಟ್ ಹೇಳಿದ್ದೇನು?: ಮತದಾನ ಹಕ್ಕು ಮತ್ತು ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕು ಎರಡೂ ಪರಸ್ಪರ ಭಿನ್ನ ಸ್ವರೂಪದವು. ಮತದಾನ ಹಕ್ಕು ನಾಗರಿಕರಿಗೆ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡುತ್ತದೆ. ಆದರೆ ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕು ಹೆಚ್ಚುವರಿ ಹಕ್ಕಾಗಿದ್ದು, ಅದನ್ನು ಅರ್ಹತೆ, ಅನರ್ಹತೆ ಹಾಗೂ ಇತರ ನಿಯಮಗಳ ಮೂಲಕ ನಿಯಂತ್ರಿಸಲು ಸಾಧ್ಯವಿದೆ. ➡ ಪುಟ ೭

ಒಬಿಸಿಗೆ ಕೊಡವರ ಸೇರ್ಪಡೆ ಸಂಸದ ಯದುವೀರ್ ಭರವಸೆ

• **ಬೆಂಗಳೂರು:** ಕೊಡವರು ಒಬಿಸಿಗೆ ಸೇರಲು ಸಂಪೂರ್ಣ ಅರ್ಹತೆ ಹೊಂದಿದ್ದಾರೆ. ಈ ಬಗ್ಗೆ ನಿಯಮಾನುಸಾರ ರಾಜ್ಯ ಸರ್ಕಾರದಿಂದಲೇ ಪ್ರಸ್ತಾವನೆ ಬರಬೇಕು. ಆ ನಂತರ ಚರ್ಚೆ ನಡೆಸಲಾಗುವುದು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭರವಸೆ ನೀಡಿದರು.



ಕೊಡವ ಸಮಾಜ ಬೆಂಗಳೂರು ವತಿಯಿಂದ ಶನಿವಾರ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕನ್ವೆನ್ಷನ್ ಸೆಂಟರ್‌ನಲ್ಲಿ ಹಮ್ಮಿಕೊಳ್ಳಲಾದ ಎಂ.ಸೋಮಯ್ಯ ವಿರಚಿತ ದಿವ್ಯ ಜೀವನ ಭವ್ಯ ಮಾನವ, ಕೂರ್ಗ್: ದ ಲ್ಯಾಂಡ್ ಆಫ್ ಜನರಲ್ಸ್ ಹಾಗೂ ಡಿವೈನ್ ಲೈಫ್ ಸಬ್‌ಲೈನ್ ಹ್ಯುಮಾನಿಟಿ ಕೃತಿ ಲೋಕಾರ್ಪಣೆ ಸಮಾರಂಭದಲ್ಲಿ ಅವರು ಮಾತನಾಡಿದರು. ಕೊಡಗಿನ ಅರಣ್ಯ, ಎಸ್ಟೇಟ್, ಜನರು ವಾಸಿಸುವ ಸ್ಥಳವನ್ನು ರಕ್ಷಣೆ ಮಾಡಬೇಕಾದರೆ 294 ಕಿ.ಮೀ ರೈಲ್ವೆ ಬ್ಯಾರಿಕೇಡ್ ಮಾಡಬೇಕಾಗುತ್ತದೆ. ಇದರೊಂದಿಗೆ ಕನಕಪುರ, ಸಕಲೇಶಪುರ ಮುಂತಾದ ಕಡೆಗಳಲ್ಲಿ ರೈಲ್ವೆ ಬ್ಯಾರಿಕೇಡ್‌ಮಾಡಬೇಕೆನ್ನುವ ಬೇಡಿಕೆಯಿದೆ. ಜತೆಗೆ ಕೊಡವ ಸಮಾಜದವರು ಒಬಿಸಿ ಪಟ್ಟಿಗೆ ಸೇರಿಸುವ ಬಗ್ಗೆ ಸಂಸತ್ತಿನಲ್ಲಿ ಮಾತನಾಡಿದ್ದೇನೆ, ಈ ಬಗ್ಗೆ ರಾಜ್ಯ ಸರ್ಕಾರದಿಂದಲೇ ಪ್ರಸ್ತಾವನೆ ಬರಬೇಕು. ಒಬಿಸಿ ಪಟ್ಟಿಗೆ ಸೇರಲು ಸಂಪೂರ್ಣ ಅರ್ಹತೆಯಿದ್ದರೂ, ಈ ಬಗ್ಗೆ ನಿಯಮಾನು ಸಾರ ರಾಜ್ಯ ಸರ್ಕಾರದಿಂದಲೇ ಪ್ರಸ್ತಾ ವನೆ ಬರಬೇಕು. ಆ ನಂತರ ಚರ್ಚೆ ನಡೆಸಲಾಗುವುದು ಎಂದರು.

ಸಂಸದ ತೇಜಸ್ವಿ ಸೂರ್ಯ ಮಾತನಾಡಿ, ಕೊಡವ ಸಮಾಜವು ಕೇವಲ ಕರ್ನಾಟಕ ಮಾತ್ರವಲ್ಲದೇ ಭಾರತಕ್ಕೆ ಅನೇಕ ಕೊಡುಗೆ ನೀಡಿದ ವೀರ ಸಮಾಜವಾಗಿದೆ. ಹಾಕಿ, ಸೈನ್ಯ, ಸರ್ವೋದ್ಯಮಕ್ಕೆ ಕೊಡವ ಯುವಕರು ದೇಶದ ಪ್ರಗತಿಗೆ ಕೆಲಸ ಮಾಡುತ್ತಿದ್ದಾರೆ. ಈಗ ನೀಡಲಾಗಿರುವ ಮನವಿ ಪತ್ರಕ್ಕೆ ಧ್ವನಿಗೂಡಿಸುವ ಕಾರ್ಯ ಮಾಡುತ್ತೇನೆ ಎಂದು ಭರವಸೆ ನೀಡಿದರು.



1ನೇ ತರಗತಿ ಪ್ರವೇಶಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಮಹತ್ವದ ಆದೇಶದಿಂದ ಮಕ್ಕಳ ಕನಿಷ್ಠ ವಯೋಮಿತಿಯನ್ನು 6 ವರ್ಷದ ಬದಲಾಗಿ 5 ವರ್ಷ 10 ತಿಂಗಳಿಗೆ ನಿಗದಿಪಡಿಸಿರುವ ಹಿನ್ನೆಲೆಯಲ್ಲಿ ಶನಿವಾರ ಸದಾಶಿವನಗರದ ನಿವಾಸದಲ್ಲಿ ಪೋಷಕರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು.

ನೀರಾನೆ ಹಂಸಿಣಿಗೆ ಆರೋಗ್ಯ ವ್ಯತ್ಯಯ: ತಜ್ಞರಿಂದ ತಪಾಸಣೆ

• **ಶಿವಮೊಗ್ಗ:** ತರಬೇತಿ ವೈದ್ಯೆ ಡಾ. ಸಮೀಕ್ಷಾ ರೆಡ್ಡಿ ಅವರನ್ನು ಬಲಿ ಪಡೆದಿದ್ದ ತ್ಯಾವರೆಕೊಪ್ಪದ ಹುಲಿ ಮತ್ತು ಸಿಂಹಧಾಮದ ಗರ್ಭಾವಸ್ಥೆಯಲ್ಲಿರುವ ನೀರಾನೆ ಹಂಸಿಣಿ ಆರೋಗ್ಯದಲ್ಲಿ ಏರುಪೇರಾಗಿದ್ದು, ಬನ್ನೇರುಘಟ್ಟ ಮತ್ತು ಮೈಸೂರು ಮೃಗಾಲಯದ ತಜ್ಞ ವೈದ್ಯರ ತಂಡ ಆಗಮಿಸಿ ಹಂಸಿಣಿಯ ಆರೋಗ್ಯ ತಪಾಸಣೆ ನಡೆಸಿ ರಕ್ತ ಸೇರಿದಂತೆ ಕೆಲ ಮಾದರಿಗಳನ್ನು ಸಂಗ್ರಹಿಸಿ ತೆರಳಿದೆ.



ನೀರಾನೆಗಳು ಗರ್ಭ ಧರಿಸಿದ 250 ದಿನಗಳೊಳಗೆ ಮರಿ ಹಾಕುತ್ತವೆ. ಎಂಟು ವರ್ಷದ ಈ ಹಂಸಿಣಿ ಗರ್ಭ ಧರಿಸಿ 265 ದಿನ ಕಳೆದರೂ ಮರಿ ಹಾಕದಿರುವುದು ವೈದ್ಯರ ಆತಂಕಕ್ಕೆ ಕಾರಣವಾಗಿದೆ. ತುಂಬು ಗರ್ಭಿಣಿಯಾಗಿರುವ ಹಂಸಿಣಿ ಹೆರಿಗೆ ಅವಧಿ ಮುಗಿದ್ದರೂ ಮರಿ ಹಾಕುವುದಕ್ಕೆ ವಿಳಂಬ ಮಾಡುತ್ತಿದೆ. ಶಸ್ತ್ರಚಿಕಿತ್ಸೆ ಮೂಲಕ ಹೆರಿಗೆ ಮಾಡಿಸುವುದು ಅಸಾಧ್ಯವಾಗಿದೆ. ಹಾಗಾಗಿ ತಜ್ಞ ವೈದ್ಯರ ತಂಡವನ್ನು ಕರೆಸಿ ತಪಾಸಣೆ ನಡೆಸಲಾಗಿದೆ. ವರದಿ ಬಂದ ಬಳಿಕವೇ ಹೊಟ್ಟೆಯೊಳಗೆ ಮರಿ ಯಾವ ಸ್ಥಿತಿಯಲ್ಲಿದೆ ಎಂದು ಖಚಿತವಾಗಬೇಕಿದೆ. ಈಗಾಗಲೇ ಎರಡು ಮರಿಗಳೂ ಕೂಡ ಗರ್ಭಾವಸ್ಥೆಯಲ್ಲಿಯೇ ಮೃತಪಟ್ಟಿದ್ದವು. ಹೀಗಾಗಿ 3ನೇ ಮರಿ ಉಳಿಸಿಕೊಳ್ಳಲು ಯತ್ನ ನಡೆಸಲಾಗುತ್ತಿದೆ.

> ನೀರಾನೆ ಆರೋಗ್ಯದಲ್ಲಿ ವ್ಯತ್ಯಯವಾಗಿದೆ. ಮರಿ ಹಾಕುವುದು ವಿಳಂಬವಾಗುತ್ತಿದೆ. ಹೀಗಾಗಿ ಬನ್ನೇರುಘಟ್ಟ ಮತ್ತು ಮೈಸೂರಿನಿಂದ ತಜ್ಞ ವೈದ್ಯರನ್ನು ಕರೆಯಿಸಲಾಗಿತ್ತು. ವೈದ್ಯರ ತಂಡ ಡಯಾಗ್ನಾಸಿಸ್ ಮಾಡುವ ನಿಟ್ಟಿನಲ್ಲಿ ಕೆಲವು ಮಾದರಿಗಳನ್ನು ತೆಗೆದುಕೊಂಡು ಹೋಗಿದೆ.
> ■ **ಅಮರಾಕ್ಷರ,** ಹುಲಿ ಮತ್ತು ಸಿಂಹಧಾಮದ ಸಿಇಒ

ಕಿರುಸುದ್ದಿ

ಐದು ವರ್ಷ ಸಿದ್ದರಾಮಯ್ಯ ಸಿಎಂ: ಸತೀಶ ಜಾರಕಿಹೊಳಿ

• **ಬೆಳಗಾವಿ:** ರಾಜ್ಯ ರಾಜಕೀಯದಲ್ಲಿ ಸಿಎಂ ಬದಲಾವಣೆ ಕುರಿತ ಚರ್ಚೆಗಳು ಮತ್ತೆ ಮುನ್ನೆಲೆಗೆ ಬಂದ ಬೆನ್ನಲ್ಲೇ, ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಪೂರ್ಣಾವಧಿ ಅಧಿಕಾರದಲ್ಲಿ ಮುಂದುವರಿಯಲಿದ್ದಾರೆ ಎಂದು ಹೇಳುವ ಮೂಲಕ ಸಚಿವ ಸತೀಶ ಜಾರಕಿಹೊಳಿ ಊಹಾಪೋಹಗಳಿಗೆ ತೆರೆ ಎಳೆದಿದ್ದಾರೆ. ಶನಿವಾರ ಹುಕ್ಕೇರಿಯಲ್ಲಿ ಬಿಜೆಪಿ ಮುಖಂಡ ರಮೇಶ್ ಕತ್ತಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಮುಖ್ಯಮಂತ್ರಿ ಸ್ಥಾನದ ಬದಲಾವಣೆ ಕುರಿತಾದ ಚರ್ಚೆಗಳಿಗೆ ಪೂರ್ಣವಿರಾಮ ಹಾಕಿದ್ದಾರೆ. ಹೈಕಮಾಂಡ್ ನಿರ್ಧಾರದಂತೆ ಸಿದ್ದರಾಮಯ್ಯನವರು ಪೂರ್ಣ ಐದು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ. ಇದರಲ್ಲಿ ಯಾವುದೇ ಗೊಂದಲಗಳಿಲ್ಲ ಎಂದು ಸ್ಪಷ್ಟಪಡಿಸಿದರು. ಸರ್ಕಾರದ ನಾಯಕತ್ವದ ಬಗ್ಗೆ ಅನಾವಶ್ಯಕವಾಗಿ ಹರಡುತ್ತಿರುವ ವದಂತಿಗಳಲ್ಲಿ ಯಾವುದೇ ಸತ್ಯಾಂಶವಿಲ್ಲ ಎಂದು ಜಾರಕಿಹೊಳಿ ವಿವರಿಸಿದರು. ಸರ್ಕಾರ ಕೇವಲ ಅಭಿವೃದ್ಧಿ ಕಾರ್ಯಗಳತ್ತ ತನ್ನ ಗಮನವನ್ನು ಕೇಂದ್ರೀಕರಿಸಿದೆ. ವಿರೋಧ ಪಕ್ಷದ ನಾಯಕರು ರಾಜಕೀಯ ಪ್ರೇರಿತ ಚರ್ಚೆಗಳನ್ನು ಹುಟ್ಟು ಹಾಕುತ್ತಿದ್ದಾರೆ. ಆದರೆ, ಸರ್ಕಾರ ತನ್ನ ಜನಪರ ಕಾರ್ಯಕ್ರಮಗಳ ಮೂಲಕ ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಅಂಬೇಡ್ಕರ್ ಪ್ರಶಸ್ತಿಗೆ ಘೋಷಣೆ

• **ಬೆಂಗಳೂರು:** 2026ನೇ ಸಾಲಿನ ಡಾ. ಬಿ.ಆರ್. ಅಂಬೇಡ್ಕರ್ ಪ್ರಶಸ್ತಿಗೆ ನಾಡಿನ ಐವರು ಸಾಧಕರನ್ನು ಆಯ್ಕೆ ಮಾಡಲಾಗಿದ್ದು, ಆಯ್ಕೆಯಾದ ಸಾಧಕರಿಗೆ ಏ.14ರಂದು ಆಚರಿಸಲಾಗುವ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆಯಂದು ಸಿಎಂ ಪ್ರದಾನ ಮಾಡಲಿದ್ದಾರೆ. ಹೋರಾಟ, ಸಾಹಿತ್ಯ ಸಾಧನೆಗೆ ಬೆಂಗಳೂರು ಕೇಂದ್ರ ವಿಭಾಗದಿಂದ ಮಂಗಳೂರು ವಿಜಯ್ ಅವರಿಗೆ, ಹೋರಾಟ ಮತ್ತು ಪತ್ರಿಕೋದ್ಯಮ ಸೇವೆಗೆ ಬೆಂಗಳೂರು ವಿಭಾಗದಿಂದ ಸಿ.ಎಂ ಮುನಿಯಪ್ಪ ಅವರಿಗೆ, ಹೋರಾಟದ ಕ್ಷೇತ್ರದಿಂದ ಮೈಸೂರು ವಿಭಾಗದಿಂದ ಎಚ್.ಎನ್. ಅಣ್ಣಯ್ಯ ಅವರಿಗೆ, ಸಾಹಿತ್ಯ ಸಂಘಟನೆ ಕ್ಷೇತ್ರದಿಂದ ಕಲಬುರಗಿ ವಿಭಾಗದಿಂದ ಹನುಮಂತರಾವ್ ಬಿ. ದೊಡ್ಡಮನಿ ಮತ್ತು ಬೆಳಗಾವಿ ವಿಭಾಗದಿಂದ ದೇವದಾಸಿ ವಿಮುಕ್ತಿಗೆ ಹೋರಾಡಿದ ಶೋಭಾ ಗಸ್ತಿ ಅವರ ಹೆಸರನ್ನು ಆಯ್ಕೆ ಮಾಡಲಾಗಿದೆ.

6 ಹಸುಗಳ ಸಜೀವ ದಹನ ಆರೋಪಿ ಇಮ್ರಾನ್ ಬಂಧನ

• **ಬೆಂಗಳೂರು:** ಆರು ಹಸುಗಳ ಸಜೀವ ದಹನಕ್ಕೆ ಕಾರಣವಾಗಿದ್ದ ಆರೋಪಿಯನ್ನು ಡಿ.ಜೆ ಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮೊಹಮ್ಮದ್ ಇಮ್ರಾನ್ (49) ಬಂಧಿತ. ಸಿಸಿಟಿವಿ ದೃಶ್ಯಗಳನ್ನು ಆಧಾರಿಸಿ ಆರೋಪಿ ಬಂಧಿಸಲಾಗಿದ್ದು, ಶಾಂಪುರ ರಸ್ತೆಯಲ್ಲಿನ ಪ್ಲೈವುಡ್ ಅಂಗಡಿಯಲ್ಲಿ ಕಳೆದ ಏ.7ರಂದು ಮುಂಜಾನೆ ಬೆಂಕಿ ಕಾಣಿಸಿಕೊಂಡಿತ್ತು. ಬೆಂಕಿಯ ಕೆನ್ನಾಲಿಗೆ ಕ್ಷಣಾರ್ಧದಲ್ಲಿ ಪಕ್ಕದಲ್ಲಿದ್ದ ಶ್ರೀನಿವಾಸ್ ಎಂಬುವರಿಗೆ ಸೇರಿದ ದನದ ಕೊಟ್ಟಿಗೆಗೆ ವ್ಯಾಪಿಸಿದ ಪರಿಣಾಮ ಆರು ಹಸುಗಳು ಹೊರಬರಲಾಗದೆ ಸ್ಥಳದಲ್ಲೇ ಸಜೀವ ದಹನವಾಗಿದ್ದವು ಎಂದು ಪೊಲೀಸರು ಹೇಳಿದರು. ಬೆಂಕಿ ಅವಘಡ ಆಕಸ್ಮಿಕವಲ್ಲ, ಬದಲಾಗಿ ಕಿಡಿಗೇಡಿಯೊಬ್ಬನ ಕೃತ್ಯ ಎಂಬುದು ಪೊಲೀಸರ ತನಿಖೆಯಲ್ಲಿ ತಿಳಿದುಬಂದಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಕೆ.ಜಿ ಹಳ್ಳಿ ನಿವಾಸಿಯಾದ ಆರೋಪಿ, ಮನೆ ಬಳಿ ರಾತ್ರಿ ವೇಳೆ ಓಡಾಡುತ್ತಿದ್ದ. ಹಾಗೆಯೇ, ಓಡಾಡುವಾಗ ನಾಯಿಗಳು ನನ್ನನ್ನು ಅಟ್ಟಾಡಿಸಿ ದ್ದವು. ಅವುಗಳನ್ನು ಹೆದರಿಸಲು ರಸ್ತೆಯ ಬದಿಯಲ್ಲಿದ್ದ ಕಸಕ್ಕೆ ಬೆಂಕಿ ಹಚ್ಚಿದೆ. ಹಸುಗಳನ್ನು ಕೊಲ್ಲುವ ಉದ್ದೇಶ ಇರಲಿಲ್ಲ ಎಂದು ಪೊಲೀಸರ ತನಿಖೆ ವೇಳೆ ಆರೋಪಿ ಹೇಳಿಕೊಂಡಿದ್ದಾನೆ. ಸದ್ಯ ತನಿಖೆ ಮುಂದುವರೆದಿದೆಂದು ಬೆಂ.ಪೂರ್ವ ವಿಭಾಗದ ಡಿಸಿಪಿ ವಿಕ್ರಮ್ ಅಮಟೆ ತಿಳಿಸಿದ್ದಾರೆ.

ಪತ್ರಕರ್ತರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿವಿಮಾತು
ಊಹಾ ಪತ್ರಿಕೋದ್ಯಮ ಬಿಡಿ

• **ಬೀದರ್:** ಪತ್ರಕರ್ತರು ಸಂವಿಧಾನದ ಆಶಯಗಳನ್ನು ಜಾರಿಗೊಳಿಸುವ ಕೆಲಸ ಮಾಡುತ್ತಿದ್ದೇವೆಯೇ ಎಂದು ಒಮ್ಮೆ ಆತ್ಮವಿಮರ್ಶೆ ಮಾಡಿಕೊಳ್ಳಬೇಕು ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ.



ಅವರು ಶನಿವಾರ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಮತ್ತು ಬೀದರ್ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಆಯೋಜಿಸಿದ್ದ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. ಊಹಾಪತ್ರಿಕೋದ್ಯಮ ಸಮಾಜಕ್ಕೆ ಅತ್ಯಂತ ಅಪಾಯಕಾರಿಯಾದದ್ದು. ಕ್ಷುಲ್ಲಕ ವಿಚಾರವನ್ನು ದಿನವಿಡೀ ತೋರಿಸುವವರು ಅದರ ಪರಿಣಾಮದ ಬಗ್ಗೆಯೂ ಯೋಚಿಸಬೇಕು. ಗಂಡ ಹೆಂಡತಿ ಜಗಳವನ್ನು ಇಡೀ ದಿನ ತೋರಿಸಿದರೆ ಅದರಿಂದ ಸಮಾಜಕ್ಕೆ ಏನು ಪ್ರಯೋಜನ ಎಂದು ಪ್ರಶ್ನಿಸಿದರು.

ಅಂಬೇಡ್ಕರ್ ಮತ್ತು ಮಹಾತ್ಮಗಾಂಧಿ ಇಬ್ಬರೂ ಪತ್ರಕರ್ತರಾಗಿ ಧ್ವನಿ ಇಲ್ಲದವರ ಧ್ವನಿಯಾಗಿದ್ದರು. ಸಮಾಜದಲ್ಲಿರುವ ನ್ಯೂನ್ಯತೆಗಳನ್ನು ಹೋಗಲಾಡಿಸಿ ಸಮಾಜವನ್ನು ಕಟ್ಟುವ ಕಾಯಕವನ್ನು ಬಸವಾದಿ ಶರಣರು ಮಾಡಿದ್ದರು. ಶರಣರ ಆಶಯದ ಸಮ ಸಮಾಜ ಆಗದಿದ್ದರೆ ಅಸಮಾನತೆ ಮುಂದುವರೆಯುತ್ತದೆ. ಮುಂದುವರೆಯಲಿ ಎನ್ನುವುದು ಪಟ್ಟಭದ್ರರ ಹಿತಾಸಕ್ತಿಯಾಗಿದೆ. ಬಸವಣ್ಣ ತಿರಸ್ಕರಿಸಿದ್ದ ಕರ್ಮಸಿದ್ಧಾಂತವನ್ನು ಪಾಲಿಸುವವರು ಈಗ ಹೆಚ್ಚಾಗಿದ್ದಾರೆ. ಈ ಮೌಢ್ಯ ಆಚರಿಸುವವರೆಲ್ಲಾ ವಿದ್ಯಾವಂತರೇ ಎನ್ನುವುದು ಬೇಸರದ ಸಂಗತಿ. ಪತ್ರಕರ್ತರು ಕೇವಲ ಮಾಹಿತಿ ಕೊಡುವವರಾಗದೆ, ಸಮಾಜ ಸುಧಾರಣೆಗೂ ಒತ್ತು ನೀಡಬೇಕು ಎಂದರು.

ಜಾತಿ ಸಮಾಜ ಚಲನೆ ಇಲ್ಲದ್ದು. ಸಮಾಜವನ್ನು ಚಲನಶೀಲಗೊಳಿಸಲು ವಸ್ತುನಿಷ್ಠವಾದ ವೃತ್ತಿಪರತೆಯನ್ನು ಪತ್ರಕರ್ತರು ಪಾಲಿಸಬೇಕು. ಪತ್ರಕರ್ತರು ಸತ್ಯ ಬರೆದರೂ ಕೆಲವೊಮ್ಮೆ ಸಂಪಾದಕರುಗಳು ಮಾಲೀಕರ ಒತ್ತಡಕ್ಕೆ ಮಣಿದು ಬದಲಾಯಿಸಿಬಿಡುತ್ತಾರೆ. ನಾನು ಮಂತ್ರಿಯಾಗಿ 40 ವರ್ಷ ಆಯ್ತು. ನಮ್ಮ ಸರ್ಕಾರದ ಪರವಾಗಿ ಬರೆಯಿರಿ ಎಂದು ಇವತ್ತಿನವರೆಗೂ ನಾನು ಯಾರನ್ನೂ ಕೇಳಿಲ್ಲ ಎಂದರು.

> ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ನೀಡುವ ಸವಲತ್ತನ್ನು ಜಾರಿ ಮಾಡಿದ್ದೇ ನಾನು. ಇದರಲ್ಲಿನ ನಿಯಮಗಳಲ್ಲಿ ತೊಂದರೆ ಇದ್ದರೆ, ಆ ಬಗ್ಗೆ ಚರ್ಚಿಸಿ ನಿವಾರಣೆಗೊಳಿಸಲಾಗುವುದು.
> ■ **ಸಿದ್ದರಾಮಯ್ಯ,** ಮುಖ್ಯಮಂತ್ರಿ

ರಾಜ್ಯ ಪತ್ರಕರ್ತರ ಸಂಘದ ಅಧ್ಯಕ್ಷರಾದ ಶಿವಾನಂದ ತಗಡೂರ್ ಮಾತನಾಡಿ, ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿ ಆರಂಭಿಸಿ ಕಳೆದ ಐದು ವರ್ಷಗಳಲ್ಲಿ 1.1 ಕೋಟಿ ರೂ. ಉಳಿಕೆ ಮಾಡಿ ಠೇವಣಿ ಇಡಲಾಗಿದೆ. ಪತ್ರಕರ್ತರು ಅಪಘಾತಕ್ಕೀಡಾದಾಗ, ತೊಂದರೆಯಲ್ಲಿದ್ದಾಗ ನೆರವಾಗಲು ಆಪತ್ಬಾಂಧವ ಯೋಜನೆ ಆರಂಭಿಸಲಾಗಿದೆ. ಮುಖ್ಯಮಂತ್ರಿಗಳ ಕಾಳಜಿಯಿಂದ ಆಯವ್ಯಯದಲ್ಲಿ ಮಾಧ್ಯಮ ಸಂಜೀವಿನಿ (ಮಾಧ್ಯಮ ಆರೋಗ್ಯ ಸಂಜೀವಿನಿ) ಯೋಜನೆ ಘೋಷಿಸಿದ್ದು, ಸಮರ್ಪಕ ಈ ಯೋಜನೆಯ ಅನುಷ್ಠಾನಕ್ಕೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಸೂಚಿಸುವಂತೆ ಮನವಿ ಮಾಡಿದರು.

ಸಮ್ಮೇಳನ ಸ್ವಾಗತ ಸಮಿತಿ ಅಧ್ಯಕ್ಷ, ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಸಮ್ಮೇಳನ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. ಸಚಿವರುಗಳಾದ ರಹೀಂ ಖಾನ್, ಶರಣ ಪ್ರಕಾಶ್ ಪಾಟೀಲ್, ಸಿಎಂ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್, ಜಿಲ್ಲಾಧ್ಯಕ್ಷರಾದ ಆನಂದ್ ದೇವಪ್ಪ, ಸಮ್ಮೇಳನದ ಪ್ರಧಾನ ಭಾಷಣಕಾರರಾಗಿರುವ ಹಿರಿಯ ಸಂಪಾದಕರಾದ ವಿಶ್ವೇಶ್ವರ ಭಟ್, ಸಂಸದರಾದ ಸಾಗರ್ ಖಂಡ್ರೆ, ಮಾಜಿ ಸಚಿವರಾದ ರಾಜಶೇಖರ್ ಪಾಟೀಲ್, ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ್ ಇದ್ದರು. ಹಾರಕೂಡ ಹಿರೇಮಠ ಸಂಸ್ಥಾನದ ಡಾ.ಚನ್ನವೀರ ಶಿವಾಚಾರ್ಯರು, ಬಸವಕಲ್ಯಾಣ ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ಡಾ.ಬಸವಲಿಂಗ ಪಟ್ಟದೇವರು ಇವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ, ಪತ್ರಕರ್ತರ ಸಂಘದ ರಾಜ್ಯ ಮತ್ತು ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅಲ್ಪಸಂಖ್ಯಾತ ಘಟಕಕ್ಕೆ ಜಬ್ಬಾರ್ ರಾಜೀನಾಮೆ

» ದಾವಣಗೆರೆ ದಕ್ಷಿಣ ಮತದಾನ ಮುಕ್ತಾಯ ಬೆನ್ನಲ್ಲೇ ಕಾಂಗ್ರೆಸ್ ಭಿನ್ನಮತ ಸ್ಫೋಟ

• **ದಾವಣಗೆರೆ:** ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಮತದಾನ ಮುಕ್ತಾಯಗೊಂಡ ಬೆನ್ನಲ್ಲೇ ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸ್ಥಾನಕ್ಕೆ ವಿಧಾನ ಪರಿಷತ್ ಸದಸ್ಯ ಕೆ.ಅಬ್ದುಲ್ ಜಬ್ಬಾರ್ ರಾಜೀನಾಮೆ ನೀಡಿದ್ದಾರೆ.



ದಾವಣಗೆರೆ ದಕ್ಷಿಣ ಕ್ಷೇತ್ರದ ಟಿಕೆಟ್ ಅಲ್ಪಸಂಖ್ಯಾತರಿಗೆ ಸಿಗಬೇಕೆಂದು ಪ್ರಯತ್ನಿಸಿದರೂ, ಕಾರಣಾಂತರಗಳಿಂದ ಟಿಕೆಟ್ ಕೈತಪ್ಪಿತ್ತು.

ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷರಾಗಿ ಸೇವೆ ಸಲ್ಲಿಸುವುದು ತಮಗೆ ದೊರೆತ ಗೌರವ ಎಂದು ಅಬ್ದುಲ್ ಜಬ್ಬಾರ್ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್‌ಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ. ಕಾಂಗ್ರೆಸ್‌ನ ಆಂತರಿಕ ತೀರ್ಮಾನ, ಸ್ಥಳೀಯ ನಾಯಕರ ನಡುವಿನ ಸಮನ್ವಯದ ಕೊರತೆಯಿಂದಾಗಿ ಅಬ್ದುಲ್ ಜಬ್ಬಾರ್ ಈ ನಿರ್ಧಾರ ಕೈಗೊಂಡಿದ್ದಾರೆ. ಜಿಲ್ಲಾ ನಾಯಕರ ನಿರ್ಲಕ್ಷ್ಯ ಮತ್ತು ಅಲ್ಪಸಂಖ್ಯಾತ ಸಮುದಾಯವನ್ನು ನಡೆಸಿಕೊಳ್ಳುತ್ತಿರುವ ರೀತಿಯ ಬಗ್ಗೆ ಅಸಮಾಧಾನಗೊಂಡು, ಪ್ರತಿಭಟನೆಯ ರೂಪದಲ್ಲಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಈ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಎಂಎಲ್‌ಸಿ ಕೆ.ಅಬ್ದುಲ್ ಜಬ್ಬಾರ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಮ್ ಅಹಮದ್, ಶಾಸಕ ರಿಜ್ವಾನ್ ಅರ್ಷದ್ ಅವರುಗಳೇ ಮೊದಲು ನನಗೆ ಚುನಾವಣೆಗೆ ನಿಲ್ಲುವಂತೆ ಹೇಳಿದ್ದರು. ಈಗ ಅವರೇ ಉಲ್ಟಾ ಹೊಡೆದಿದ್ದು, ಹೆಗಲೂ ನಮ್ಮದೇ ಗುಂಡು ನಮ್ಮದೇ ಎಂಬಂತಾಗಿದೆ. ಕಾಂಗ್ರೆಸ್ ಕಚೇರಿಯಲ್ಲಿ, ಪಕ್ಷದ ಮುಖಂಡರ ವಿರುದ್ಧವೇ ಸುದ್ದಿಗೋಷ್ಠಿ ಮಾಡಬಾರದಿತ್ತು. ಈ ವಿಚಾರದಲ್ಲಿ ನನಗೆ ದುಃಖವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾಂಗ್ರೆಸ್ ಪಕ್ಷಕ್ಕೆ ನಮ್ಮ ಕೈಲಾದಷ್ಟು ಕೆಲಸ ಮಾಡಿದ್ದೇವೆ. ನನಗೆ ಆರೋಗ್ಯ ಸರಿ ಇರಲಿಲ್ಲ, 20-30 ದಿನ ದಾವಣಗೆರೆಯಲ್ಲಿದ್ದ ಇವರ್‍ಯಾರೂ ಬಂದು ನನ್ನೊಂದಿಗೆ ಮಾತಾಡಲಿಲ್ಲ, ಅಭ್ಯರ್ಥಿ (ಸಮರ್ಥ್ ಶಾಮನೂರು), ಅವರ ತಂದೆ (ಸಚಿವ ಎಸ್.ಎಸ್.ಮಲ್ಲಿಕಾರ್ಜುನ್) ಅಥವಾ ತಾಯಿ(ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್) ಕೂಡ ನನ್ನನ್ನು ಪ್ರಚಾರಕ್ಕೆ ಕರೆದಿಲ್ಲ, ನಾನು ಮೂರು ಬಾರಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ, ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ, ಕೆಪಿಸಿಸಿ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ, ಮೂರು ಸಲ ವಿಧಾನ ಪರಿಷತ್ ಸದಸ್ಯನಾಗಿದ್ದೇನೆ. ಆದರೂ ನಮ್ಮನ್ನು ಬಳಸಿಕೊಂಡಿಲ್ಲ, ಅಂದ್ರೆ, ಜನಪ್ರಿಯತೆ ಬಗ್ಗೆ ಸಲೀಂ, ರಿಜ್ವಾನ್ ಬಳಿ ಕಲಿಯುವ ಅಗತ್ಯವಿದೆ ಅಂತಾ ಅನಿಸುತ್ತದೆ ಎಂದರು.

ಒಂದೇ ವರ್ಷದಲ್ಲಿ 55 ಗಿಗಾ ವ್ಯಾಟ್ ವಿದ್ಯುತ್ ಹೆಚ್ಚಳ
ದೇಶದಲ್ಲಿ ಇಂಧನ ಕೊರತೆ ಇಲ್ಲ

• **ಧಾರವಾಡ:** ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಒಂದೇ ವರ್ಷದಲ್ಲಿ ಗಿಗಾವ್ಯಾಟ್ ಲೆಕ್ಕದಲ್ಲಿ ವಿದ್ಯುತ್ ಹೆಚ್ಚಳ ಮಾಡುತ್ತಿದೆ. ಇದರಲ್ಲಿ 55 ಗಿಗಾ ವ್ಯಾಟ್ ಸೇರಿಸಿದ್ದು ದೇಶದ ಇತಿಹಾಸದಲ್ಲಿಯೇ ಪ್ರಥಮ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಹೇಳಿದರು.



ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, 2014ರಲ್ಲಿ 250 ಗಿಗಾವ್ಯಾಟದ್ದ ವಿದ್ಯುತ್ ಉತ್ಪಾದನೆಯು ಇಂದು 20ರಷ್ಟು ದ್ವಿಗುಣವಾಗಿದೆ. ಸರಿಯಾದ ಯೋಜನೆ ಮಾಡಿದರೆ, ದೇಶದಲ್ಲಿ ವಿದ್ಯುತ್ ಕಡಿತವೇ ಆಗದ ಸ್ಥಿತಿಗೆ ಬಂದಿದ್ದಾಗಿ ತಿಳಿಸಿದರು.

44 ಗಿಗಾ ವ್ಯಾಟ್ ಸೋಲಾರ್ ಮತ್ತು ಉಳಿದ ಬಯೋ ಎನರ್ಜಿ ಆಗಿ ಸಮಸ್ಯೆ ಇದ್ದಾಗಲೂ ನಾವು ಭದ್ರವಾಗಿದ್ದೇವೆ. 2014ರಲ್ಲಿ 22ರಷ್ಟು ವಿದ್ಯುತ್ ಲೈನ್ ಇತ್ತು. ಇಂದು 63 ಸಾವಿರ ಕಿಲೋ ಮೀಟರ್ ಉದ್ದದ ಲೈನ್, 1.5 ಲಕ್ಷ ಉದ್ದವಾಗಿದೆ ಎಂದರು.

ಇಂಧನಕೊರತೆಬಗ್ಗೆ ಕೆಲವು ವಿಪಕ್ಷದ ನಾಯಕರು ಬೊಬ್ಬೆ ಹಾಕುತ್ತಿದ್ದು, ನಾವು ಸುರಕ್ಷಿತವಾಗಿದ್ದೇವೆ. ಪೆಟ್ರೋಲ್, ಡೀಸೆಲ್ ಸಿಗುತ್ತಿದೆ ಅಲ್ಲವೇ? ಮನೆಗೂ ಕೂಡ ಎಲ್‌ಪಿಜಿ ಲಭಿಸುತ್ತಿದೆ ಅಲ್ಲವೇ? ತೈಲ ಸಮಸ್ಯೆ ಯಾರಿಗೆ ಆಗಿದೆ? ಎಂದು ಪ್ರಶ್ನೆ ಮಾಡಿದರು.

ಭೂಮಿ ಒಳಗಿರುವ ಎಲ್‌ಪಿಜಿ ತೆಗೆಯಬೇಕು. ನಮ್ಮಲ್ಲಿ ಎಲ್‌ಪಿಜಿ ಉತ್ಪಾದನೆಗೆ ಬೇಕಾದ ಭೂಮಿ ಇಲ್ಲ. ಅದು ನೈಸರ್ಗಿಕವಾಗಿ ಇರುವುದು. ಆದರೂ ಕಚ್ಚಾ ತೈಲ ಆಮದು ಮಾಡಿಕೊಂಡು, ನಮ್ಮಲ್ಲಿ ಎಲ್‌ಪಿಜಿ ಶೇ.20ರಷ್ಟು ಉತ್ಪಾದಿಸುತ್ತಿದೆ ಎಂದರು.

ದೇಶದಲ್ಲಿ ಏನೂ ಸಮಸ್ಯೆ ಆಗಿಲ್ಲ, 2014ರಲ್ಲಿ ಪವನ ವಿದ್ಯುತ್ ಕಡಿಮೆ ಇತ್ತು. ಈಗ ಗಿಗಾ ವ್ಯಾಟ್‌ನಲ್ಲಿ ವಿದ್ಯುತ್ ಹೆಚ್ಚಳ ಜತೆ ರಿಫೈನಿಂಗ್ ಸಾಮರ್ಥ್ಯ ಹೆಚ್ಚಿಸಿದೆ. ಆಟೋ ರಿಕ್ಷಾ ಎಲ್‌ಪಿಜಿ ಸಮಸ್ಯೆಗೆ 300 ಖಾಸಗಿ ಔಟ್‌ಲೆಟ್ ಕಾರಣ ಎಂದು ಹೇಳಿದರು.

70 ಸರ್ಕಾರಿ ಬಂಕ್‌ಗಳಿವೆ. ಸಾಕಷ್ಟು ಸಂಗ್ರಹ ಇದ್ದರೂ, ದರ ಹೆಚ್ಚಿಸಿಲ್ಲ, ಆದರೆ, 300 ಬಂಕ್‌ಗಳಲ್ಲಿ ದರದ ಸಮಸ್ಯೆ ಉಂಟಾಗಿದೆ. ದರವೂ ಹೆಚ್ಚಿಸಿದೆ. ಹೀಗಾಗಿ ಸಭೆ ನಡೆಸಿ, ದರಪಟ್ಟಿ ಪ್ರಚುರಪಡಿಸಲು ಸೂಚಿಸಿದ್ದಾಗಿ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದರು.

ಯುದ್ಧ ನಿಲ್ಲಿಸಲು ಪಾಕಿಸ್ತಾನ ಮಧ್ಯಸ್ಥಿಕೆ ಬಗ್ಗೆ ಪ್ರತಿಕ್ರಿಯಿಸಿದ ಜೋಶಿ, ಕಾಂಗ್ರೆಸ್ ಮೋದಿ ವಿರೋಧಿಸುವ ಬರದಲ್ಲಿ ದೇಶವನ್ನೇ ವಿರೋಧಿಸುತ್ತಿದೆ. ಪಾಕಿಸ್ತಾನದ ಪಾತ್ರದ ಬಗ್ಗೆ ಎಲ್ಲರಿಗೂ ಗೊತ್ತಿರುವ ವಿಚಾರ. ಯುದ್ಧ ಆಗದಂತೆ ತಡೆಯಬೇಕಿದೆ. ಭಾರತದ ದಿಕ್ಕು ದೆಸೆ ನೇತೃತ್ವ ಸರಿ ಇದೆ ಎಂದ ಜೋಶಿ, ರಾಜಕಾರಣದ ಹಿನ್ನೆಲೆ ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ಉತ್ತರಿಸಲಿದೆ ಎಂದರು.

ಕೇರಳದಲ್ಲಿ ಬಾಲಕಿ ಶ್ರೀನಂದಾ ಅಂತ್ಯಕ್ರಿಯೆ

• **ಚಿಕ್ಕಮಗಳೂರು:** ಇಡೀ ಜಿಲ್ಲೆಯಲ್ಲಿ ಸಂಚಲನ ಉಂಟು ಮಾಡಿದ್ದ ಕೇರಳ ಬಾಲಕಿ ಶ್ರೀನಂದಾ ನಾಪತ್ತೆ ಹಾಗೂ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸರಿಂದ ತನಿಖೆ ಮುಂದುವರಿದಿದೆ. ಶನಿವಾರ ಶ್ರೀನಂದಾ ಮೃತದೇಹವನ್ನು ಆಕೆಯ ಹುಟ್ಟೂರು ಕೇರಳದ ಪಾಲಕ್ಕಾಡ್‌ಗೆ ಕೊಂಡೊಯ್ಯಲಾಗಿದ್ದು, ಅಲ್ಲಿಯೇ ಅಂತ್ಯಕ್ರಿಯೆ ನಡೆಸಲಾಗಿದೆ.

ಚಂದ್ರದ್ರೋಣ ಪರ್ವತ ಸಾಲಿನ ಮಾಣಿಕ್ಯಧಾರದ ಬಳಿಯಿಂದ ಏ.7ರ ಸಂಜೆ 5.30ಕ್ಕೆ ಶ್ರೀನಂದಾ ನಾಪತ್ತೆಯಾಗಿ, ಏ.10ರಂದು ಶವವಾಗಿ ಪತ್ತೆಯಾಗಿದ್ದಳು. ಪ್ರವಾಸದ ಸಮಯದಲ್ಲಿ ಸದಾ ಮೊಬೈಲ್ ಫೋನ್ ಬಳಸುತ್ತಿದ್ದ ಮಗಳಿಗೆ ತಂದೆ ಬುದ್ಧಿ ಹೇಳಿ ಗದರಿಸಿದ್ದೇ ಆತ್ಮಹತ್ಯೆಗೆ ಪ್ರಚೋದನೆ ನೀಡಿರಬಹುದು ಎನ್ನುವ ಮಾತುಗಳು ಕೇಳಿಬರುತ್ತಿದೆ. ಆಕೆ ನಾಪತ್ತೆಯಾಗುವ ಮೊದಲು ತನ್ನ ಸ್ನೇಹಿತೆಯೊಂದಿಗೆ ಸುಮಾರು 15 ನಿಮಿಷಗಳ ಕಾಲ ದೂರವಾಣಿ ಕರೆಯಲ್ಲಿ ಮಾತನಾಡಿದ್ದಾಳೆ ಎನ್ನಲಾಗಿದ್ದು, ಪೊಲೀಸರು ಈ ಕುರಿತು ತಾಂತ್ರಿಕ ತನಿಖೆ ಕೈಗೊಂಡಿದ್ದಾರೆ.

ಆಕೆಯ ಸಾವಿನ ಬಗ್ಗೆ ಹಲವು ಅನುಮಾನ ವ್ಯಕ್ತವಾದ ಹಿನ್ನೆಲೆಯಲ್ಲಿ ಪ್ರಕರಣವನ್ನು ಪೊಲೀಸರು ಗಂಭೀರವಾಗಿ ಪರಿಗಣಿಸಿದ್ದಾರೆ. ಇದೇ ಕಾರಣಕ್ಕೆ ಇಬ್ಬರು ತಜ್ಞ ವೈದ್ಯರ ತಂಡದಿಂದ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಸಂಪೂರ್ಣ ಪ್ರಕ್ರಿಯೆಯನ್ನು ವಿಡಿಯೋ ಚಿತ್ರೀಕರಣ ಮಾಡಲಾಗಿದೆ.

ಎಂಜಿನಿಯರ್ ಮನೆಯಲ್ಲಿ 6 ಕೆಜಿ ಚಿನ್ನ, 5 ಕೆಜಿ ಬೆಳ್ಳಿ ಪತ್ತೆ

• **ಬೆಳಗಾವಿ:** ನಗರಾಭಿವೃದ್ಧಿ ಕೋಶದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅಜಯಸಿಂಗ್ ರಜಪೂತ್ ಮನೆ ಮೇಲೆ ನಡೆದಿದ್ದ ಲೋಕಾಯುಕ್ತ ಅಧಿಕಾರಿಗಳ ದಾಳಿ ಶನಿವಾರ ಅಂತ್ಯಗೊಂಡಿದೆ.



ದಾಳಿ ವೇಳೆ ಅಜಯ್ ಸಿಂಗ್ ರಜಪೂತ್ ನಿವಾಸ ಹಾಗೂ ಕಚೇರಿಗಳಲ್ಲಿ ಒಟ್ಟು 14 ಕೋಟಿ ರೂಪಾಯಿಗೂ ಅಧಿಕ ಮೊತ್ತದ ಅಕ್ರಮ ಆಸ್ತಿ ಪತ್ತೆಯಾಗಿದೆ.

ಇದು ಅವರ ಸಂಪಾದನೆಗಿಂತ ಎಷ್ಟೋ ಪಟ್ಟು ಹೆಚ್ಚಾಗಿದೆ ಎಂದು ಲೋಕಾ ಅಧಿಕಾರಿಗಳು ತಿಳಿಸಿದ್ದಾರೆ. ಬೆಳಗಾವಿಯ ಆಂಜನೇಯ ನಗರ ಸೇರಿದಂತೆ ಒಟ್ಟು ಏಳು ಕಡೆಗಳಲ್ಲಿ ಏಕಕಾಲಕ್ಕೆ ದಾಳಿ ನಡೆಸಲಾಗಿತ್ತು. ಈ ವೇಳೆ 6 ಕೆಜಿ ಚಿನ್ನ, 5 ಕೆಜಿ ಬೆಳ್ಳಿ ಆಭರಣಗಳು ಪತ್ತೆಯಾಗಿವೆ. ಅಲ್ಲದೇ 3.12 ಕೋಟಿ ರೂಪಾಯಿ ಬ್ಯಾಂಕ್ ಡೆಪಾಸಿಟ್ ಇಟ್ಟಿರುವುದು ಬೆಳಕಿಗೆ ಬಂದಿದೆ. 18 ಖಾಲಿ ನಿವೇಶನಗಳ ದಾಖಲೆ ವಶ: ಸವದತ್ತಿ, ಹುಕ್ಕೇರಿ ಹಾಗೂ ಹುಬ್ಬಳ್ಳಿಯ ವಿವಿಧೆಡೆ ಒಟ್ಟು 18 ನಿವೇಶನಗಳನ್ನು ಅಜಯಸಿಂಗ್ ಖರೀದಿಸಿರುವುದು ದಾಖಲೆಗಳಿಂದ ಸಾಬೀತಾಗಿದೆ. ಜೊತೆಗೆ ರಜಪೂತ ಐಷಾರಾಮಿ ಕಾರು ಮತ್ತು ಬೈಕ್‌ಗಳನ್ನು ಹೊಂದಿದ್ದರು ಎಂದು ದಾಳಿ ಮಾಡಿದ ಅಧಿಕಾರಿಗಳು ತಿಳಿಸಿದರು.

ತಲಾ ₹3 ಕೋಟಿ ಅನುದಾನ ಬಿಡುಗಡೆಯಾದರೂ ದಿನಾಂಕ ನಿಗದಿಯಾಗಿಲ್ಲ
ಆನೆಗೊಂದಿ, ಕನಕಗಿರಿ ಉತ್ಸವಕ್ಕೆ ನಿರಾಸಕ್ತಿ!

▸ **ಮಂಜುನಾಥ ಗಂಗಾವತಿ**

ದಿಗಂತ ವಿಶೇಷ

• **ಕೊಪ್ಪಳ:** ಜಿಲ್ಲೆಯಲ್ಲಿ ಆನೆಗೊಂದಿ, ಕನಕಗಿರಿ ಉತ್ಸವಕ್ಕೆ ಜಿಲ್ಲಾ ಜನಪ್ರತಿನಿಧಿಗಳು ನಿರುತ್ಸಾಹ ತೋರಿದ್ದು, ಇನ್ನು ದಿನಾಂಕ ನಿಗದಿಯಾಗಿಲ್ಲ.

ಬೇಸಿಗೆ ಆರಂಭವಾಗಿದ್ದು, ರಾಜ್ಯದಲ್ಲಿ ಈಗಾಗಲೇ ಎಲ್ಲ ಉತ್ಸವಗಳು ನಡೆದಿವೆ. ಆದರೆ, ಆನೆಗೊಂದಿ, ಕನಕಗಿರಿ ಉತ್ಸವಕ್ಕೆ ಮಾತ್ರ ಮುಹೂರ್ತ ಕೂಡಿ ಬಂದಿಲ್ಲ. 2024ರಲ್ಲಿ ಆದ ಉತ್ಸವಗಳು 2025ರಲ್ಲಿ ಆಗಲೇ ಇಲ್ಲ. ಈ ಹಿಂದೆ ಇದ್ದ ಬರ, ಚುನಾವಣೆ ಸೇರಿ ಇನ್ನಿತರ ಯಾವುದೇ ಬಲವಾದ ಕಾರಣಗಳಿರಲಿಲ್ಲ, ಉತ್ಸವ ಮಾಡುತ್ತೇವೆ ಎನ್ನುತ್ತಲೇ ಸರ್ಕಾರ, ಜಿಲ್ಲಾಡಳಿತ ದಿನಗಳನ್ನು ದೂಡಿದ್ದು ವಿಪರ್ಯಾಸವಾಗಿದೆ.

ಕನಕಗಿರಿ ಉತ್ಸವಕ್ಕೆ ಆಸಕ್ತಿ ತೋರಿದರೂ ಜಾತ್ರೆ ಮತ್ತು ಉತ್ಸವ ಆಯೋಜನೆ ಸಂಬಂಧ ಕೆಲವೇ ಜನರು ಆಡಿದ ಮಾತುಗಳಿಗೆ ಸಚಿವರು ಜಿಲ್ಲೆಯ ಜನರ ಆಶಯ ಬಲಿಕೊಟ್ಟಿದ್ದು ಖೇದಕರ. ಉತ್ಸವಗಳು ನಾಡು, ಜಿಲ್ಲೆ ರಾಜ್ಯಭಾರ ನಡೆಸಿದ ರಾಜಮನೆತನ, ಜನಸಾಮಾನ್ಯರ ಕಾರ್ಯಕ್ರಮ. ಅವುಗಳನ್ನು ಕೇವಲ ಒಂದು ಊರು, ತಾಲೂಕು, ಕ್ಷೇತ್ರಕ್ಕೆ ಸೀಮಿತಗೊಳಿಸುತ್ತಿರುವುದು ಸಂಕುಚಿತತೆಯ ಸಂಕೇತವಾಗಿದೆ.

3 ಕೋಟಿ ರೂ.ಅನುದಾನ

ಜಿಲ್ಲೆಯ ಸಾಂಸ್ಕೃತಿಕ, ಐತಿಹಾಸಿಕ ಪ್ರತಿಬಿಂಬವಾಗಿರುವ ಕನಕಗಿರಿ, ಆನೆಗೊಂದಿ ಉತ್ಸವ ಆಚರಣೆಗೆ ಸರ್ಕಾರ ಅಷ್ಟಾಗಿ ಉತ್ಸಾಹ ತೋರುತ್ತಿಲ್ಲ, ಎರಡೂ ಉತ್ಸವಕ್ಕೆ ತಲಾ ಮೂರು ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ. ಆದರೆ, ಇನ್ನು ದಿನಾಂಕ ನಿಗದಿ ಆಗಿಲ್ಲ, ಇನ್ನು ಅನುದಾನ ಕಡಿಮೆ ಬಂದಿದ್ದರಿಂದ ಉತ್ಸವ ವಿಜೃಂಭಣೆಯಾಗಿ ನಡೆಯುವುದು ಕಷ್ಟಸಾಧ್ಯವಾಗಿದೆ.



> ಮುಂದಿನ ವಾರ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ತಂಗಡಗಿ ಅವರು ಸಭೆ ನಡೆಸಲಿದ್ದಾರೆ. ಅಂದು ಉತ್ಸವದ ದಿನಾಂಕ ನಿಗದಿಯಾಗಲಿದೆ. ಸರ್ಕಾರದಿಂದ ತಲಾ 3 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಜಿಲ್ಲಾಡಳಿತ ದಿಂದ ಹೆಚ್ಚಿನ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.
> ■ **ಡಾ.ಸುರೇಶ್ ಇಟ್ನಾಳ್,** ಜಿಲ್ಲಾಧಿಕಾರಿ

ಬಿಸಿಲಿನ ಬೇಗೆಯ ಸವಾಲು

ಬಿಸಿಲ ನಾಡಿನಲ್ಲಿ ಕೊಪ್ಪಳವೂ ಒಂದು. ಈ ಬಾರಿ ಬಿಸಿಲು ಹೆಚ್ಚಾಗಿದ್ದು, ಮೇನಲ್ಲಿ ಉತ್ಸವಗಳು ನಡೆದರೆ, ಬಿಸಿಲಿನಲ್ಲಿ ಜನರನ್ನು ಕರೆ ತರುವುದು ಸವಾಲಿನ ಪ್ರಶ್ನೆಯಾಗಿದೆ. ಜಿಲ್ಲಾಡಳಿತ ಬೇಸಿಗೆ ಮೊದಲೇ ಮಾಡಬೇಕಾದ ಉತ್ಸವಗಳನ್ನು ಬೇಸಿಗೆಯಲ್ಲಿ ಆಚರಿಸುವುದಕ್ಕೆ ಜನರು ವಿರೋಧ ವ್ಯಕ್ತಪಡಿಸಿದ್ದಾರೆ.

ಫೈರೋಜ್ ಪಠಾಣ್ ಹತ್ಯೆ | ಪೊಲೀಸರ ಜತೆ ಮಾತಿನ ಚಕಮಕಿ
ಹಂತಕರ ಬಂಧನಕ್ಕೆ ಕುಟುಂಬಸ್ಥರ ಆಗ್ರಹ

• **ಧಾರವಾಡ:** ಯುವ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಮತ್ತು ಹಾಶ್ಮಿನಗರ ನಿವಾಸಿ ಫೈರೋಜ್ ಖಾನ್ ಪಠಾಣ್ ಹತ್ಯೆ ತೀವ್ರ ಸ್ವರೂಪ ಪಡೆದಿದ್ದು, ಶನಿವಾರ ಉಪನಗರ ಠಾಣೆ ಮುಂದೆ ಪ್ರತಿಭಟನೆಗೆ ಯತ್ನಿಸಿದ ವೇಳೆ ಪೊಲೀಸರು ಮತ್ತು ಕುಟುಂಬಸ್ಥರ ಮಧ್ಯೆ ಮಾತಿನ ಚಕಮಕಿ ನಡೆದಿದೆ.



ಶುಕ್ರವಾರ ತಡರಾತ್ರಿ ಫೈರೋಜ್ ಖಾನ್ ಪಠಾಣ್ (28) ಹತ್ಯೆ ಬಳಿಕ ಶವವನ್ನು ಮರಣೋತ್ತರ ಪರೀಕ್ಷೆಗೆ ಕಿಮ್ಸ್‌ಗೆ ರವಾನಿಸಿತ್ತು. ಶನಿವಾರ ಬೆಳಗ್ಗೆ ಮರಣೋತ್ತರ ಪರೀಕ್ಷೆ ಪ್ರಕ್ರಿಯೆ ಆರಂಭದ ವೇಳೆಗೆ ಕುಟುಂಬಸ್ಥರ ಮತ್ತು ಆತನ ಬೆಂಬಲಿಗರು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರು.

ಪೊಲೀಸರ ಜತೆ ವಾಗ್ವಾದ: ಮರಣೋತ್ತರ ಪರೀಕ್ಷೆ ನಂತರ ಶವವನ್ನು ಉಪನಗರ ಠಾಣೆಗೆ ತೆಗೆದುಕೊಂಡು ಹೋಗಿ ಪ್ರತಿಭಟನೆಗೆ ಯತ್ನಿಸಿದರು. ಈ ವೇಳೆ ಪೊಲೀಸರು ಮತ್ತು ಫೈರೋಜ್ ಖಾನ್ ಕುಟುಂಬಸ್ಥರು ಮಧ್ಯೆ ಮಾತಿನ ಚಕಮಕಿ ನಡೆಯಿತು. ಅಲ್ಲದೇ, ಸ್ಥಳದಲ್ಲಿ ಬಿಗುವಿನ ವಾತಾವರಣ ಕೂಡ ನಿರ್ಮಾಣವಾಗಿತ್ತು.

ರಾಜಕೀಯ ಸಂಚಿನ ಆರೋಪ: ಏ.24ಕ್ಕೆ ಫೈರೋಜ್ ಅವರ ಮದುವೆ ನಿಶ್ಚಯವಾಗಿತ್ತು. ಮದುವೆ ಸಂಭ್ರಮದ ಮನೆಯಲ್ಲಿ ಸೂತಕ ಆವರಿಸಿದೆ. ಹಿರಿಯ ಕಾಂಗ್ರೆಸ್ ಮುಖಂಡರೊಬ್ಬರ ಕುಮ್ಮಕ್ಕಿನಿಂದ ಫೈರೋಜ್ ಖಾನ್ ಅವರ ಹತ್ಯೆ ನಡೆದಿದೆ ಎಂದು ಕುಟುಂಬದ ಸದಸ್ಯರು ಗಂಭೀರವಾದ ಆರೋಪ ಮಾಡಿದರು.

> ಕಾಂಗ್ರೆಸ್ ಯುವ ಧುರೀಣ ಫೈರೋಜ್ ಖಾನ್ ಪಠಾಣ ಹತ್ಯೆ ಪ್ರಕರಣ ಕುರಿತು ಈಗಾಗಲೇ ಆರು ಜನರನ್ನು ವಿಚಾರಣೆ ಮಾಡಿದೆ. ಆದರೆ, ಯಾರನ್ನೂ ಕೂಡ ಬಂಧಿಸಿಲ್ಲ.
> ■ **ಎನ್.ಶಶಿಕುಮಾರ,** ಹು-ಧಾ ಪೊಲೀಸ್ ಆಯುಕ್ತರು

> ಯುವ ನಾಯಕನ ಬರ್ಬರ ಹತ್ಯೆ ಖಂಡನೀಯ. ಆರೋಪಿಗಳನ್ನು ಶೀಘ್ರವೇ ಬಂಧಿಸಿ, ಕಠಿಣ ಶಿಕ್ಷೆಗೆ ಗುರಿಪಡಿಸಬೇಕು.
> ■ **ಅಬ್ದುಲ್ ದೇಸಾಯಿ,** ಫೈರೋಜ್ ಆಪ್ತ

ಹತ್ಯೆಯ ಹಿನ್ನಲೆ: ಶುಕ್ರವಾರ ರಾತ್ರಿ ನಾಲ್ವರು ದುಷ್ಕರ್ಮಿಗಳು ದಾಳಿ ನಡೆಸಿದ್ದರು. ತಪ್ಪಿಸಿಕೊಳ್ಳಲು ಮನೆಯೊಳಗೆ ಓಡಿದರೂ, ಬಿಡದ ಹಂತಕರು ಒಳನುಗ್ಗಿ ಮಾರಕಾಸ್ತ್ರಗಳಿಂದ ಕೊಚ್ಚಿ ಹತ್ಯೆ ಮಾಡಿದ ದೃಶ್ಯ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಪೊಲೀಸ್ ಬಿಗಿ ಬಂದೋಬಸ್ತ್: ಘಟನೆಯ ನಂತರ ಧಾರವಾಡದ ಹಾಶ್ಮಿನಗರ ಮತ್ತು ಕಿಮ್ಸ್ ಆಸ್ಪತ್ರೆ ಸುತ್ತಮುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಹಂತಕರ ಪತ್ತೆಗಾಗಿ ಪೊಲೀಸರು ವಿಶೇಷ ತಂಡಗಳನ್ನು ರಚಿಸಿದ್ದು, ತನಿಖೆ ಚುರುಕುಗೊಳಿಸಿದ್ದಾರೆ.

ಕಿರುಸುದ್ದಿ

ಪರೀಕ್ಷೆ ಬಳಿಕ ಒಂದೇ ಗಂಟೆಯಲ್ಲಿ ಒಎಂಆರ್ ಶೀಟ್ ಅಪ್‌ಲೋಡ್

• **ಬೆಂಗಳೂರು:** ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿವಿಧ ಹುದ್ದೆಗಳ ನೇಮಕಾತಿಗೆ ಶುಕ್ರವಾರ ನಡೆದ ಲಿಖಿತ ಪರೀಕ್ಷೆ ಬಳಿಕ ಒಂದು ಗಂಟೆಯಲ್ಲೇ ಎಲ್ಲ ಒಎಂಆರ್ ಶೀಟ್‌ಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ನಗರದ ಎರಡು ಮತ್ತು ಧಾರವಾಡದ ಮೂರು ಕೇಂದ್ರಗಳಲ್ಲಿ ಪರೀಕ್ಷೆ ನಡೆದಿದ್ದು, ಮುಗಿದ ಕ್ಷಣದಿಂದಲೇ ಒಎಂಆರ್ ಶೀಟ್‌ಗಳನ್ನು ಸ್ಕ್ಯಾನ್ ಮಾಡಿ ವೆಬ್‌ಸೈಟ್‌ಗೆ ಅಪ್ ಲೋಡ್ ಮಾಡಲಾಗಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ. ಬೆಳಗ್ಗೆ ಮತ್ತು ಮಧ್ಯಾಹ್ನ ಎರಡು ಸೆಷನ್‌ನಲ್ಲಿ ಪರೀಕ್ಷೆ ನಡೆಯಿತು. ಪರೀಕ್ಷೆ ಮುಗಿದ ಕೂಡಲೇ ಒಎಂಆರ್ ಉತ್ತರ ಪತ್ರಿಕೆಗಳನ್ನು ತಂದು ಸ್ಕ್ಯಾನ್ ಮಾಡಲಾಯಿತು. ನಂತರ ಅವುಗಳನ್ನು ಪರಿಶೀಲಿಸಿ, ಪರೀಕ್ಷಾ ಕೇಂದ್ರವಾರು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿದ್ದು, ಇದು ಕೆಇಎ ಅಳವಡಿಸಿಕೊಂಡಿರುವ ಪಾರದರ್ಶಕವಾದ ಕ್ರಮ ಎಂದು ಹೇಳಿದ್ದಾರೆ.

ಜಾಗತಿಕ ತಾಪಮಾನ ಕುರಿತು ಕವಿತೆ ಆಹ್ವಾನ

• **ಶಿವಮೊಗ್ಗ:** ಜಾಗತಿಕ ತಾಪಮಾನದಲ್ಲಿ ಗಣನೀಯ ಹೆಚ್ಚಳ- ಇದು ಇಡೀ ಜಗತ್ತನ್ನೇ ಕಾಡುತ್ತಿರುವ ಅತೀ ದೊಡ್ಡ ಆತಂಕ. ಈ ತಾಪಮಾನದ ನಿರಂತರ ಹೆಚ್ಚಳದಿಂದಾಗಿ, ಸಮುದ್ರ ಮಟ್ಟದಲ್ಲಿ ಏರಿಕೆ, ಜೀವ ವೈವಿಧ್ಯತೆ ನಾಶ, ಪ್ರಕೃತಿ ವಿಕೋಪ, ಅಕಾಲಿಕ ಮಳೆ-ಹಾನಿ ಇತ್ಯಾದಿಗಳು ಸಂಭವಿಸುತ್ತಿವೆ. ಈ ಸಂದರ್ಭದಲ್ಲಿ ರೇಡಿಯೋ ಶಿವಮೊಗ್ಗ 90.8 ಎಫ್ .ಎಂ. ಬಾನುಲಿ ಕೇಂದ್ರವು, ಜಾಗತಿಕ ತಾಪಮಾನ ಕುರಿತು ಕವಿಗೋಷ್ಠಿ ಆಯೋಜನೆ ಮಾಡಿದೆ. ಶಿವಮೊಗ್ಗದ ಪ್ರಜ್ಞಾ ಬುಕ್ ಹೌಸ್ ಮತ್ತು ಪರಿಸರ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ನಡೆಯಲಿರುವ ಈ ಕವಿಗೋಷ್ಠಿಯಲ್ಲಿ ಯಾರು ಬೇಕಾದರೂ ಪಾಲ್ಗೊಳ್ಳಬಹುದು. ಕವಿತೆಗಳನ್ನು ಅಕ್ಷರ ರೂಪದಲ್ಲಿ ಅಥವಾ ಪಿಡಿಎಫ್ ರೂಪದಲ್ಲಿ ಏ. 20ರೊಳಗೆ radioshivamogga@gmail.com mailto:radioshivamogga@gmail.com> ಈ ಮೇಲ್ ವಿಳಾಸಕ್ಕೆ ಕಳಿಸಲು ಕೋರಲಾಗಿದೆ. ಆಯ್ಕೆಯಾದ ಕವಿತೆ ಗಳನ್ನು ರೇಡಿಯೋ ಶಿವಮೊಗ್ಗ 90.8 ಎಫ್ .ಎಂ ಬಾನುಲಿ ಕೇಂದ್ರ ದಲ್ಲಿ ವಾಚನ ಮಾಡಲು ಅವಕಾಶ ನೀಡಲಾಗುವುದು ಹಾಗೂ ಪ್ರಜ್ಞಾ ಬುಕ್ ಹೌಸ್ ವತಿಯಿಂದ ಬಹುಮಾನ ದೊರಕ ಲಿದೆ. ಮಾಹಿತಿಗೆ ಸಂಪರ್ಕಿಸಿ: 9448138183, 7259176279

ಆರಗ ಅಭಿನಂದನೆ

• **ತೀರ್ಥಹಳ್ಳಿ :** ತಾಲೂಕು ಪಿಯುಸಿ ಪರೀಕ್ಷೆ ಫಲಿತಾಂಶ ದಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆಯುವ ಮೂಲಕ ಮತ್ತೊಮ್ಮೆ ತೀರ್ಥಹಳ್ಳಿ ಶೈಕ್ಷಣಿಕ ರಂಗದಲ್ಲಿ ತನ್ನ ಗರಿಮೆಯನ್ನು ಉಳಿಸಿಕೊಂಡಿದೆ ಎಂದು ಶಾಸಕ ಆರಗ ಜ್ಞಾನೇಂದ್ರ ಹೇಳಿದ್ದಾರೆ. ಆಸಕ್ತಿ ಮತ್ತು ಶ್ರಮದ ಕಾರಣದಿಂದ ಈ ಫಲಿತಾಂಶ ಬಂದಿದೆ ಎಂದರು.

ಮೂರನೇ ಆವೃತ್ತಿ ಸರಣಿ ಡಿಬೇಟ್ಸ್ ಸಂವಾದದಲ್ಲಿ ನಗರದ ನಾಗರಿಕರು ಭಾಗಿ

ನಗರಾಭಿವೃದ್ಧಿ ಪಾರದರ್ಶಕವಾಗಿರಲಿ

• **ಬೆಂಗಳೂರು:** ನಗರದ ಅಭಿವೃದ್ಧಿಗಾಗಿ ವಿನಿಯೋಗವಾಗುತ್ತಿರುವ ಸಾವಿರಾರು ಕೋಟಿ ರೂಪಾಯಿಗಳ ಸಾರ್ವಜನಿಕ ಹಣದ ಬಳಕೆ ಮತ್ತು ಹೊಣೆಗಾರಿಕೆಯ ಕುರಿತು ಪಾರದರ್ಶಕತೆ ಅಗತ್ಯ ಎಂದು ಬೆಂಗಳೂರು ಡಿಬೇಟ್ಸ್ ಸಂವಾದ ಸರಣಿಯ ಮೂರನೇ ಆವೃತ್ತಿಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್ ಮತ್ತು ಜನಾಗ್ರಹ ಸಂಸ್ಥೆಯ ಸಹಯೋಗದಲ್ಲಿ ನಡೆದ ಈ ಸಂವಾದದಲ್ಲಿ, ನಗರದ ಸಾರ್ವಜನಿಕ ವೆಚ್ಚದಲ್ಲಿ ಆಮೂಲಾಗ್ರ ಪಾರದರ್ಶಕತೆಯ ಅಗತ್ಯತೆಯ ಬಗ್ಗೆ ಚರ್ಚೆ ನಡೆಯಿತು. ಇದೇ ವೇಳೆ ಜನಾಗ್ರಹ ಸಂಸ್ಥೆಯು ಬಿಡುಗಡೆ ಮಾಡಿದ ಬೆಂಗಳೂರಿನಲ್ಲಿ ಸಾರ್ವಜನಿಕ ವೆಚ್ಚ: ಆಮೂಲಾಗ್ರ ಪಾರದರ್ಶಕತೆಗಾಗಿ ವಾದ ಎಂಬ ಚರ್ಚಾ ಪುಸ್ತಕವು ಸಾರ್ವಜನಿಕ ವೆಚ್ಚದಲ್ಲಿ ಆಮೂಲಾಗ್ರ ಪಾರದರ್ಶಕತೆಯ ಬಗ್ಗೆ ಹಲವು ಅಂಶಗಳನ್ನು ಹೊರ ಹಾಕಿದೆ. 2021-22ನೇ ಸಾಲಿನಲ್ಲಿ ಬೆಂಗಳೂರಿಗಾಗಿ ಸುಮಾರು 38,000 ಕೋಟಿಗೂ ಅಧಿಕ ಹಣ ವ್ಯಯವಾಗಿದೆ. ಅಂದರೆ, ಪ್ರತಿದಿನ ಸರಾಸರಿ 100 ಕೋಟಿಗೂ ಹೆಚ್ಚು ಹಣ ಖರ್ಚಾಗುತ್ತಿದೆ. ಈ ಬೃಹತ್ ಮೊತ್ತದ ಖರ್ಚಿನ ವಿವರಗಳು ಯಾವುದೇ ಅಧಿಕೃತ ದಾಖಲೆಗಳಲ್ಲಿ ಒಟ್ಟಾಗಿ ಲಭ್ಯವಿಲ್ಲ, ಜನಾಗ್ರಹ ಸಂಸ್ಥೆಯು 12ಕ್ಕೂ ಹೆಚ್ಚು ಸಾರ್ವಜನಿಕ ಸಂಸ್ಥೆಗಳ 70ಕ್ಕೂ ಹೆಚ್ಚು ದಾಖಲೆಯನ್ನು ಪರಿಶೀಲಿಸಿ ಈ ಅಂಕಿ-ಅಂಶವನ್ನು ಸಿದ್ಧಪಡಿಸಿದೆ.

ಒಟ್ಟು ವೆಚ್ಚದಲ್ಲಿ ಕೇವಲ ಶೇ.20 ರಷ್ಟು ಮಾತ್ರ ಜನರಿಂದ ನೇರವಾಗಿ ಆಯ್ಕೆಯಾದ ನಗರ ಪಾಲಿಕೆಯಿಂದ ನಡೆಯುತ್ತಿದೆ. ಉಳಿದ ಶೇ. 80 ವೆಚ್ಚವನ್ನು ಬಿಎಂಟಿಸಿ, ಬಿಡಬ್ಲ್ಯುಎಸ್ಎಸ್‌ಬಿ, ಬೆಸ್ಕಾಂ ನಂತಹ ಸಂಸ್ಥೆಗಳು ಮಾಡುತ್ತಿವೆ. ಈ ಸಂಸ್ಥೆಗಳು ತಮ್ಮ ಹಣಕಾಸಿನ ಮಾಹಿತಿಯಲ್ಲಿ ಕೇವಲ ಶೇ.34 ರಷ್ಟನ್ನು ಮಾತ್ರ ಬಹಿರಂಗಪಡಿಸುತ್ತಿವೆ ಎಂದು ಪುಸ್ತಕ ತಿಳಿಸಿದೆ.



ಹವಾಮಾನ ಬದಲಾವಣೆ ಮತ್ತು ಮೂಲಸೌಕರ್ಯ ಸವಾಲುಗಳನ್ನು ಎದುರಿಸಲು ದತ್ತಾಂಶ ಆಧಾರಿತ ಪಾರದರ್ಶಕತೆ ಅನಿವಾರ್ಯ.
■ **ಮೀರಾ ಕೆ.,** ಊರ್ವಾಣಿ ಫೌಂಡೇಶನ್ ಸಹ-ಸಂಸ್ಥಾಪಕಿ

ಪಾರದರ್ಶಕತೆಯು ತಳಮಟ್ಟದಿಂದ ಆರಂಭವಾಗಬೇಕು. ಸ್ಥಳೀಯ ಸಂಸ್ಥೆಗಳು ಪಾರದರ್ಶಕವಾಗಿರದಿದ್ದರೆ ಆಡಳಿತ ದುರ್ಬಲಗೊಳ್ಳುತ್ತದೆ.
■ **ಪದ್ಮನಾಭ ರೆಡ್ಡಿ,** ಬಿಬಿಎಂಪಿ ಮಾಜಿ ವಿರೋಧ ಪಕ್ಷದ ನಾಯಕ

ನಾಗರಿಕರು ಮತ್ತು ಸರ್ಕಾರದ ನಡುವೆ ನಂಬಿಕೆಯನ್ನು ಮರುಸ್ಥಾಪಿಸಲು ಪಾರದರ್ಶಕತೆಯೇ ಏಕೈಕ ದಾರಿ.
■ **ಶ್ರೀಕಾಂತ್ ವಿಶ್ವನಾಥನ್,** ಜನಾಗ್ರಹ ಸಿಇಒ

ಪಾರದರ್ಶಕತೆಗೆ ಮೂರು ಸೂತ್ರ

ಸಾರ್ವಜನಿಕ ಹಣದ ದುರ್ಬಳಕೆ ತಡೆಯಲು ಮತ್ತು ಉತ್ತಮ ಆಡಳಿತಕ್ಕಾಗಿ ಎಲ್ಲಾ ಸಾರ್ವಜನಿಕ ಸಂಸ್ಥೆಗಳನ್ನು ಏಕರೂಪದ ಹಣಕಾಸು ಪಾರದರ್ಶಕತೆ ನಿಯಮದಡಿ ತರಬೇಕು. ನಗರ ಮಟ್ಟದ ಸಾರ್ವಜನಿಕ ವೆಚ್ಚದ ಡ್ಯಾಶ್‌ಬೋರ್ಡ್ ನಿರ್ಮಿಸಬೇಕು. ವಾರ್ಡ್ ಮಟ್ಟದ ವೆಚ್ಚ, ಯೋಜನಾ ವಿವರಗಳು ಮತ್ತು ಗುತ್ತಿಗೆದಾರರ ಮಾಹಿತಿಗಳನ್ನು ಸಾರ್ವಜನಿಕರಿಗೆ ಮುಕ್ತವಾಗಿ ಲಭ್ಯವಾಗುವಂತೆ ಮಾಡಬೇಕೆಂದು ಜನಾಗ್ರಹ ಶಿಫಾರಸು ಮಾಡಿದೆ.

ಗ್ಯಾಸ್ ಪೂರೈಕೆ ಖಚಿತಪಡಿಸಿಕೊಳ್ಳಲಿ

• **ಬೆಂಗಳೂರು:** ಕ್ಷಣ ಕ್ಷಣಕ್ಕೂ ಬದಲಾಗುತ್ತಿರುವ ಗ್ಯಾಸ್ ಪೂರೈಕೆ ಪರಿಸ್ಥಿತಿಗಳ ನಡುವೆಯೂ ಕೈಗಾರಿಕಾ ಬಳಕೆಗಾಗಿ ದ್ರವೀಕೃತ ಪೆಟ್ರೋಲಿಯಂ ಅನಿಲ ನಿರಂತರ ಮತ್ತು ಸ್ಥಿರ ಲಭ್ಯತೆ ಖಚಿತ ಪಡಿಸಿಕೊಳ್ಳಲು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಆದೇಶ ಹೊರಡಿಸಿದೆ.

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಕಾರ್ಯದರ್ಶಿ ಡಾ.ನೀರಜ್ ಮಿತ್ತಲ್ ಮಾತನಾಡಿ, ಫಾರ್ಮಾ, ಆಹಾರ ಸಂಸ್ಕರಣೆ, ಕೃಷಿ, ಪ್ಯಾಕೇಜಿಂಗ್, ಪೇಂಟ್, ಉಕ್ಕು, ಲೋಹ, ಸೆರಾಮಿಕ್, ಗಾಜು, ಏರೋಸಾಲ್, ಫೌಂಡ್ರಿ, ಹೆವಿ ವಾಟರ್, ಯುರೇನಿಯಂ ಮತ್ತು ಬೀಜ ವಲಯದಲ್ಲಿನ ಕೈಗಾರಿಕಾ ಘಟಕಗಳು ಮಾರ್ಚ್ ಪೂರ್ವದ ಬೃಹತ್ ಎಲ್‌ಪಿಜಿ ಬಳಕೆಯ ಶೇ.70ಅನ್ನು ಪಡೆಯುತ್ತವೆ. ಇದು ದಿನಕ್ಕೆ ಒಟ್ಟಾರೆ ವಲಯ ಮಿತಿ 0.2 ಟಿಎಂಟಿಗೆ ಒಳಪಟ್ಟಿದ್ದು, ಪೈಪ್ ನ್ಯಾಚುರಲ್ ಗ್ಯಾಸ್ ಸುಧಾರಣೆಯ ಮೈಲಿಗಲ್ಲುಗಳಿಗೆ ಹೆಚ್ಚುವರಿ ಶೇ. 10 ಸಂಬಂಧಿಸಿದೆ. ಈ ಬೆಳವಣಿಗೆ ಮಾ.16 ಮತ್ತು 27 ರ ನಡುವಿನ ಸಂವಹನ ಬಳಿಕ ಕಂಡುಬಂದಿದೆ ಎಂದರು.

ಪರ್ಯಾಯ ಇಂಧನ ಮೂಲಸೌಕರ್ಯದ ಕಡೆಗೆ ಪರಿವರ್ತನೆಯನ್ನು ಉತ್ತೇಜಿಸುವಾಗ ಈ ವಿಧಾನ ಎಲ್‌ಪಿಜಿಯ ಮಾಪನಾಂಕ ವಿತರಣೆಯನ್ನು ಖಚಿತ ಪಡಿಸುತ್ತದೆ. ಉತ್ಪಾದನಾ ಪ್ರಕ್ರಿಯೆಯಲ್ಲಿ ನಿರ್ಣಾಯಕ ಮತ್ತು ಬದಲಿಯಿಲ್ಲದ ಆಂತರಿಕ ಅಂಶವಾಗಿ ಎಲ್‌ಪಿಜಿ ಇನ್‌ಪುಟ್ ಆಗಿ, ಕಾರ್ಯನಿರ್ವಹಿಸುವ ಕಾರಣ ಕೈಗಾರಿಕೆಗಳಿಗೆ ಹಂಚಿಕೆ ಮಾಡುವಲ್ಲಿ ಆದ್ಯತೆ ನೀಡಲಾಗುವುದು. ಅಂತಹ ವಲಯಗಳಿಗೆ, ಕಡ್ಡಾಯವಾಗಿದ್ದ ಪಿಎನ್‌ಜಿ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸುವ ಅಗತ್ಯ ಇರುವುದಿಲ್ಲ, ನಿಗದಿತ ಷರತ್ತುಗಳ ಅನುಸರಿಸಿ ಕೈಗಾರಿಕಾ ಕೆಲಸಗಳ ಮೇಲೆ ಪರಿಣಾಮ ಬೀರದಂತೆ ನೋಡಿಕೊಳ್ಳಲಾಗುವುದು .

ಫುಟ್‌ಪಾತ್ ಅಂಗಡಿಗಳ ತೆರವಿಗೆ ಮನವಿ

• **ಶಿವಮೊಗ್ಗ :** ನಗರದ ಕೆ.ಆರ್.ಪುರಂ ರಸ್ತೆ ಮತ್ತು ಹಳೆ ತೀರ್ಥಹಳ್ಳಿ ರಸ್ತೆಯಲ್ಲಿ ಫುಟ್‌ಪಾತ್ ಹಾಗು ರಸ್ತೆಯಲ್ಲಿಯೇ ಸ್ಥಾಪಿತವಾಗಿರುವ ಅಂಗಡಿ ಮುಂಗಟ್ಟುಗಳು, ದುರಸ್ತಿ ಗ್ಯಾರೇಜ್‌ಗಳು, ರಸ್ತೆಯಲ್ಲಿ ಮಾರಾಟಕ್ಕೆ ಇಟ್ಟಿರುವ ಹೊಸ ಮತ್ತು ಹಳೇ ವಾಹನಗಳ ಅಂಗಡಿಗಳನ್ನು ತೆರವುಗೊಳಿಸುವಂತೆ ಆಗ್ರಹಿಸಿ ನಾಗರಿಕ ತರಕ್ಷಣಾ ವೇದಿಕೆಗಳ ಒಕ್ಕೂಟದಿಂದ ಶುಕ್ರವಾರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಈ ಅಂಗಡಿಗಳಿಂದ ಸಂಚಾರಕ್ಕೆ ತೀವ್ರ ಅಡಚಣೆಯಾತ್ತಿದೆ. ಅಮೀರ್ ಅಹ್ಮದ್ ವೃತ್ತದಿಂದ ಕೆ.ಆರ್.ಪುರಂ ರಸ್ತೆ ಹಾಗೂ ಓ.ಟಿ.ರಸ್ತೆ ಅತ್ಯಂತ ಕಿರಿದಾದ ರಸ್ತೆಗಳಾಗಿದ್ದು, ಸದಾ ಜನಸಂಚಾರ ದಟ್ಟಣೆ ಇರುತ್ತದೆ ಆದರೆ ಈ ಮಾರ್ಗಗಳಲ್ಲಿ ಲೆಕ್ಕವಿಲ್ಲದಷ್ಟು ಅನಧಿಕೃತ ಗ್ಯಾರೇಜ್‌ಗಳು, ಹಣ್ಣಿನ ಅಂಗಡಿಗಳು, ಟ್ರ್ಯಾಕ್ಟರ್ ರಿಪೇರಿ ಗ್ಯಾರೇಜ್‌ಗಳು, ಕ್ಯಾಂಟೀನ್‌ಗಳು, ಕಾರ್ಯಾಚರಿಸುತ್ತಿದೆಂದರು.

ಜೆಎನ್‌ಎನ್‌ಸಿಯಲ್ಲಿ ಉದ್ಯಮಶೀಲ ಕ್ಯಾಂಪ್

• **ಶಿವಮೊಗ್ಗ:** ನಗರದ ಜೆ.ಎನ್.ಎನ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಎಐಸಿಟಿಇ ನೇತೃತ್ವದಲ್ಲಿ ಭಾರತ ಶಿಕ್ಷಣ ಸಚಿವಾಲಯ, ವಾಧ್ವಾನಿ ಫೌಂಡೇಷನ್ ಹಾಗೂ ಎಸ್‌ಬಿಐ ಫೌಂಡೇಷನ್ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಐದು ದಿನಗಳ ನಾವೀನ್ಯತೆ ಮತ್ತು ಉದ್ಯಮಶೀಲತೆ ಬೂಟ್ ಕ್ಯಾಂಪ್ ವಿದ್ಯಾರ್ಥಿಗಳ ಆವಿಷ್ಕಾರಾತ್ಮಕ ಯೋಚನೆಗಳಿಗೆ ಪ್ರೇರಣಾದಾಯಕ ವೇದಿಕೆಯಾಗಿ ರೂಪಗೊಂಡಿತ್ತು.

ದೇಶದ ವಿವಿಧ ಕಾಲೇಜಿನ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದ ಈ ಕಾರ್ಯಕ್ರಮದಲ್ಲಿ, ಸುಮಾರು 50ಕ್ಕೂ ಹೆಚ್ಚು ಯೋಜನೆಗಳು ಪ್ರಸ್ತುತಗೊಂಡವು. ಎಐ ಮತ್ತು ಐಒಟಿಯಂತಹ ಆಧುನಿಕ ತಂತ್ರಜ್ಞಾನಗಳ ತಳಹದಿಯಲ್ಲಿ, ತಮ್ಮ ಸುತ್ತಲಿನ ಸಮಸ್ಯೆಗಳಿಗೆ ನವೀನತೆಯ ಪರಿಹಾರ ನೀಡುವಲ್ಲಿ ಉತ್ಸುಕರಾಗಿದ್ದರು.

ವಿಶೇಷವಾಗಿ ಆಂಧ್ರಪ್ರದೇಶದ ನರಸರಾವ ಪೇಟ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳ ತಂಡ ಪ್ರಸ್ತುತಪಡಿಸಿದ, ಬೆರಳುಗಳನ್ನು ಕಳೆದುಕೊಂಡವರಿಗೆ ಸಹಾಯಕವಾಗುವ ಪ್ರೋಸ್ತೇಟಿಕ್ ಲಿಂಬ್ ಹೆಸರಿನ ಕೃತಕ ಸಾಧನದ ಯೋಜನೆ, ಡೈ-ಕಟ್ ಮುದ್ರಣ ತಂತ್ರಜ್ಞಾನ ಬಳಸಿ ಮಕ್ಕಳಲ್ಲಿ ಡಿಜಿಟಲ್ ರಹಿತ ಶಿಕ್ಷಣಕ್ಕೆ ಉತ್ತೇಜಿಸುವ ಎಜುಕೇಷನಲ್ ಹೆಕ್ಸಾ ಕ್ಯೂಬ್ ಗಮನ ಸೆಳೆದವು. ಜೆಎನ್‌ಎನ್‌ಸಿ ಕಾಲೇಜು ವಿದ್ಯಾರ್ಥಿಗಳ ತಂಡ ಪ್ರಸ್ತುತಪಡಿಸಿದ ಕೃತಕ ಬುದ್ಧಿಮತ್ತೆ ಆಧಾರಿತ ಡಿಜಿಟಲ್ ವಂಚನೆಗಳನ್ನು ತಡೆಯುವ ಹಾಗೂ ಆನ್ ಲೈನ್ ವ್ಯವಸ್ಥೆಗಳ ನಂಬಿಕೆಯನ್ನು ಹೆಚ್ಚಿಸುವಂತಹ ಫ್ರಾಡ್ಲೆಸ್ ಟೆಕ್ನಾಲಜೀಸ್ ಯೋಜನೆ, ಅದೇ ಕಾಲೇಜಿನ ವಿದ್ಯಾರ್ಥಿಗಳು ಪ್ರಸ್ತುತಪಡಿಸಿದ, ತಮ್ಮದೆ ಪ್ರೊಫೈಲ್ ನಿರ್ಮಿಸಿ ಸೂಕ್ತವಾದ ವಿದ್ಯಾರ್ಥಿವೇತನವನ್ನು ಹುಡುಕಿ, ಅರ್ಜಿ ಸಲ್ಲಿಸುವಂತಹ ಕೇಂದ್ರಿಕೃತ ತಂತ್ರಜ್ಞಾನ ವೇದಿಕೆ, ತಮಿಳುನಾಡಿನ ಧೀರಜ್‌ಲಾಲ್ ಗಾಂಧಿ ಕಾಲೇಜ್ ಆಫ್ ಟೆಕ್ನಾಲಜಿ ತಂಡ ಪ್ರಸ್ತುತಪಡಿಸಿದ,

ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳಲ್ಲಿ ಉಳಿಯುವ ಆಹಾರವನ್ನು ಹತ್ತಿರದ ಗ್ರಾಹಕರು ಹಾಗೂ ಎನ್‌ಜಿಒಗಳೊಂದಿಗೆ ಸಂಪರ್ಕಿಸುವಂತಹ ಸಪ್ಲರ್‌ಸಿಂಕ್ ಯೋಚನೆಗಳು ತೀರ್ಪುಗಾರರ ಮೆಚ್ಚುಗೆಗೆ ಪಾತ್ರವಾದವು.

ಎಐಸಿಟಿಇ ಇನೋವೇಶನ್ ಕೇಂದ್ರದ ಪ್ರಾದೇಶಿಕ ಸಂಯೋಜಕರಾದ ಅಶೀಷ್ ತ್ರಿಪಾಠಿ, ವಾಧ್ವಾನಿ ಫೌಂಡೇಶನ್ ಸಂಪನ್ಮೂಲ ವ್ಯಕ್ತಿ ಡಾ.ಸುಪ್ರಭ, ಕಾಲೇಜಿನ ಸಂಶೋಧನಾ ಡೀನ್ ಡಾ.ಎಸ್.ವಿ.ಸತ್ಯನಾರಾಯಣ, ಎಐಸಿಟಿಇ ಜೆಎನ್‌ಎನ್‌ಸಿಇ ಐಡಿಯಾ ಲ್ಯಾಬ್ ಸಂಯೋಜಕ ಡಾ.ಎಂ.ಎಚ್.ಮೋಯಿನುದ್ದಿನ್ ಖಾನ್, ಬೂಟ್‌ಕ್ಯಾಂಪ್ ಸಂಯೋಜಕ ಕೆ.ಎಲ್.ಅರುಣ್ ಕುಮಾರ್ ಇದ್ದರು.

ಎಚ್‌ಡಿಕೆ ಆತ್ಮಾವಲೋಕನ ಮಾಡಿಕೊಳ್ಳಲಿ

• **ಬೆಂಗಳೂರು:** ಯತೀಂದ್ರ ಸಿದ್ದರಾಮಯ್ಯ ಅವರ ಬಗ್ಗೆ ಅಥವಾ ಕಾಂಗ್ರೆಸ್ ಪಕ್ಷದ ನಾಯಕರ ಬಗ್ಗೆ ಟೀಕೆ ಮಾಡುವ ಮೊದಲು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರು ಆತ್ಮಾವಲೋಕನ ಮಾಡಿಕೊಳ್ಳಬೇಕು ವಿಧಾನ ಪರಿಷತ್ ಸದಸ್ಯ ರಮೇಶ್ ಬಾಬು ತಿರುಗೇಟು ನೀಡಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷವನ್ನು ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರನ್ನು ಟೀಕೆ ಮಾಡಿ ಅವರ ರಾಜಕೀಯ ಅಸ್ತಿತ್ವ ಉಳಿಸಿಕೊಂಡಿದ್ದಾರೆ. ಒಂದೊಂದು ಚುನಾವಣೆಗೆ ಒಂದೊಂದು ಬಣ್ಣ ಹಾಕಿಕೊಂಡು ಬರುತ್ತಾರೆ ಎಂದು ಕಿಡಿಕಾರಿದರು.

ಜೆಡಿಎಸ್‌ನಲ್ಲಿ ಸೂಟ್ ಕೇಸ್ ಸಂಸ್ಕೃತಿ ಇದೆ ಎಂದು ಪ್ರಜ್ವಲ್ ರೇವಣ್ಣ ಅವರು ಹುಣಸೂರಿನ ಕಾರ್ಯಕ್ರಮದಲ್ಲಿ ಹೇಳಿದ್ದರು. ಇದರ ಬಗ್ಗೆ ಇದುವರೆಗೂ ಕುಮಾರಸ್ವಾಮಿ ಅವರಿಗೆ ಉತ್ತರ ಕೊಡಲು ಆಗಿಲ್ಲ, ಮುಖ್ಯಮಂತ್ರಿ ಖುರ್ಚಿಯ ಹಗಲ ಕನಸನ್ನು ಸಹ ಕಾಣುತ್ತಿದ್ದಾರೆ. ದೈವ ಅನುಗ್ರಹ ಇದ್ದರೆ, ಅವಕಾಶ ಸಿಕ್ಕರೆ ಎನ್ನುವ ಮಾತುಗಳನ್ನು ಆಡುತ್ತಿದ್ದಾರೆ. ಅವರ ಪಕ್ಷ ಹಾಗೂ ಬಿಜೆಪಿಯಲ್ಲಿ ಅವರ ಕಾಲನ್ನು ಎಳೆಯಲು ಸಿದ್ದರಾಗಿ ನಿಂತಿದ್ದಾರೆ ಎಂದು ಟೀಕಿಸಿದರು. ಯಾರನ್ನೇ ಆಗಲಿ ಟೀಕೆ ಮಾಡುವ ಮೊದಲು ಆತ್ಮವಾಲೋಕನ ಮಾಡಿಕೊಳ್ಳಲಿ. ಕರ್ನಾಟಕದಲ್ಲಿ ಮಕ್ಕಳನ್ನು ರಾಜಕೀಯಕ್ಕೆ ಎಳೆದು ತರುವ ಸಂಸ್ಕೃತಿ ಹುಟ್ಟು ಹಾಕಿದವರೇ ಕುಮಾರಸ್ವಾಮಿ. ಯತೀಂದ್ರ ಅವರ ಬಗ್ಗೆ ಟೀಕೆ ಮಾಡುವ ಮೊದಲು ನಿಮ್ಮ ಕುಟುಂಬದವರ ಮೇಲೆ ನಿಮ್ಮ ಮಗನ ಮೇಲೆ ಏನೇನು ಆರೋಪ ಬಂದಿತ್ತು ಎಂಬುದನ್ನು ಮೊದಲು ನೋಡಿಕೊಳ್ಳಿ ಅದಕ್ಕೆ ಉತ್ತರ ನೀಡಿ ಆಗ್ರಹಿಸಿದರು.

ಕರ್ನಾಟಕದ ಬಗ್ಗೆ ನಿಜಕ್ಕೂ ಕಾಳಜಿ ಇದ್ದರೆ ಇಲ್ಲಿ ಎಷ್ಟು ಕೈಗಾರಿಕಾ ಯೋಜನೆಗಳು ಬಾಕಿ ಉಳಿದಿವೆ ಅದನ್ನು ಕಾರ್ಯಗತಗೊಳಿಸುವ ಬಗ್ಗೆ ಆಲೋಚನೆ ಮಾಡಿ. ಅದನ್ನು ಬಿಟ್ಟು ಬೇಜವಾಬ್ದಾರಿ ಹೇಳಿಕೆ ಕೊಡುವುದು ನಿಲ್ಲಿಸಿ. ಅನಗತ್ಯ ಟೀಕೆಗಳು ನಿಮಗೆ ರಾಜಕೀಯ ಶಕ್ತಿ ನೀಡುವುದಿಲ್ಲ, ಪಲಾಯನವಾದ ನಿಮಗೆ ಬಲ ತುಂಬುವುದಿಲ್ಲ, ಎಂದಿದ್ದಾರೆ.

ಅಭಿವೃದ್ಧಿ ಕಡೆಗಣಿಸಿದ ಸರಕಾರ



• **ಬೆಂಗಳೂರು:** ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಭಿವೃದ್ಧಿ ಯನ್ನು ಕಡೆಗಣಿಸಿ ಕೇವಲ ಅಧಿಕಾರ ಹಂಚಿಕೆ ಮತ್ತು ಆಂತರಿಕ ಕಲಹದಲ್ಲಿ ಮುಳುಗಿದೆ ಎಂದು ಶಾಸಕ ಡಾ. ಸಿ.ಎನ್. ಅಶ್ವತ್ಥ್ ನಾರಾಯಣ್ ಆರೋಪಿಸಿದರು.

ಶನಿವಾರ ಮಲ್ಲೇಶ್ವರದಲ್ಲಿರುವ ತಮ್ಮ ಕಚೇರಿಯಲ್ಲಿ ಮಾತನಾಡಿ, ಮಹಿಳಾ ಮೀಸಲಾತಿ ಮತ್ತು ಕ್ಷೇತ್ರ ಪುನರ್ ವಿಂಗಡಣೆಯಂತಹ ರಾಷ್ಟ್ರೀಯ ಹಿತಾಸಕ್ತಿಯ ವಿಷಯಗಳಲ್ಲಿ ಕಾಂಗ್ರೆಸ್ ಅನಗತ್ಯ ಗೊಂದಲ ಸೃಷ್ಟಿಸುತ್ತಿದೆ. ಕೇಂದ್ರದ ಎನ್‌ಡಿಎ ಸರ್ಕಾರ ಐತಿಹಾಸಿಕ ಮಹಿಳಾ ಮೀಸಲಾತಿ ಮಸೂದೆಯನ್ನು ಜಾರಿಗೆ ತರಲು ಮುಂದಾಗಿರುವುದನ್ನು ಸಹಿಸಲಾಗದೆ, ಕಾಂಗ್ರೆಸ್ ಅಪ ಪ್ರಚಾರ ಮಾಡುತ್ತಿದೆ ಎಂದು ಟೀಕಿಸಿದರು. 2021ರ ಜನಗಣತಿ ಪ್ರಕ್ರಿಯೆಯು ಕೋವಿಡ್ ಕಾರಣದಿಂದ ವಿಳಂಬವಾಗಿದ್ದರೂ, 2029ರ ವೇಳೆಗೆ ಮೀಸಲಾತಿ ಜಾರಿಗೆ ತರುವ ಪ್ರಧಾನಿ ನರೇಂದ್ರ ಮೋದಿ ಅವರ ಭರವಸೆಯನ್ನು ಶಂಕಿಸುವುದು ಕಾಂಗ್ರೆಸ್‌ನ ಇಬ್ಬಂದಿ ನೀತಿಯನ್ನು ತೋರಿಸುತ್ತದೆ. ದಕ್ಷಿಣ ಭಾರತಕ್ಕೆ ಅನ್ಯಾಯವಾಗುತ್ತಿದೆ ಎಂಬ ಸುಳ್ಳು ನೆಪವನ್ನೊಡ್ಡಿ ಮಹಿಳೆಯರ ಹಕ್ಕನ್ನು ಕಸಿದುಕೊಳ್ಳುವ ಪ್ರಯತ್ನ ಎಂದು ಆರೋಪಿಸಿದರು. ಕಾಂಗ್ರೆಸ್ ಕೇವಲ ಮತಬ್ಯಾಂಕ್ ರಾಜಕಾರಣಕ್ಕಾಗಿ ಸಮುದಾಯ ಗಳನ್ನು ಬಳಸಿಕೊಳ್ಳುತ್ತಿದೆ ಹೊರತು, ಪ್ರಾಮಾಣಿಕ ಅಭಿವೃದ್ಧಿ ಮಾಡುತ್ತಿಲ್ಲ, ರಾಜ್ಯದಲ್ಲಿ ಪ್ರಸ್ತುತ ಭ್ರಷ್ಟಾಚಾರ ಮತ್ತು ಅಧಿಕಾರ ದುರುಪಯೋಗ ತಾಂಡವವಾಡುತ್ತಿದೆ. ಕಂಗ್ರೆಸ್ ಸರ್ಕಾರವು ಜನರ ಹಿತ ಮರೆತು ಸ್ವಾರ್ಥ ಸಾಧನೆಯಲ್ಲಿ ತೊಡಗಿದೆಂದರು. ಯಾವುದೇ ಇಲಾಖೆಯಲ್ಲೂ ಜನಪರ ಕೆಲಸಗಳು ನಡೆಯುತ್ತಿಲ್ಲ,ಬದಲಾಗಿ ಗುಂಪುಗಾರಿಕೆಗೆ ಆದ್ಯತೆ ನೀಡಲಾಗುತ್ತಿದೆಂದರು.

ಚಿಕ್ಕಮಗಳೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿದ ಬರಗೂರು

ಕನ್ನಡ ಸಮರ್ಪಕವಾಗಿ ಬಳಕೆಯಾಗಲಿ



• **ಕಡೂರು:** ನಾವು ಕನ್ನಡ ಪರಂಪರೆಯ ವಿವೇಕ ಅರಿಯಬೇಕಿದೆ. ನವಂಬರ್‌ನಲ್ಲಿ ಮಾತ್ರ ಕನ್ನಡ ದೊಡ್ಡ ಧ್ವನಿಯಾಗಬಾರದು, ಕನ್ನಡಕ್ಕೆ ಪರಂಪರೆ ಇದೆ ಪಂಪನಿಂದ ಮುದ್ದಣನವರೆಗೆ ಕನ್ನಡವನ್ನು ಬಳಸಿ ಉಳಿಸಿದರು, ಇಂಗ್ಲಿಷ್ ಹಿಂದಿ ಕರಿಮಣಿಯಲ್ಲಿ ಕೆಂಪು ಹವಳ ಜೋಡಿಸಿದಂತೆ ಇರಬೇಕೆ ವಿನಾ ತಾಳಿ ಸರವೇ ಆಗಬಾರದು. ಕನ್ನಡವನ್ನು ಸರಿಯಾಗಿ ಬಳಸಿದಾಗ ಮಾತ್ರ ಉಳಿಯುತ್ತದೆ ಎಂದು ಹಿರಿಯ ಸಾಹಿತಿ ಡಾ.ಬರಗೂರು ರಾಮಚಂದ್ರಪ್ಪ ತಿಳಿಸಿದರು.

ಕಡೂರು ಪಟ್ಟಣದ ಅಂಬೇಡ್ಕರ್ ಕ್ರೀಡಾಂಗಣದಲ್ಲಿ 21ನೇ ಚಿಕ್ಕಮಗಳೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಉಳಿದಿರುವುದು ಜನಸಾಮಾನ್ಯರಿಂದ. ಜನರಿಗೆ ಒಳ್ಳೆಯ ಶಿಕ್ಷಣ, ಉದ್ಯೋಗ, ಅನ್ನ ನೀಡಬೇಕಿದೆ. ಸಾಹಿತಿಗಳು ಚಿಂತಕರು ಜನಸಾಮಾನ್ಯರು ಕನ್ನಡವನ್ನು ಉಳಿಸುವ ಕಾರ್ಯ ಮಾಡುತ್ತಿದ್ದಾರೆ. ಕನ್ನಡಿಗರಿಗೆ ಉತ್ತಮ ಬದುಕನ್ನು ಕಲ್ಪಿಸಬೇಕಿದೆ, ಜಗತ್ತಿನಲ್ಲಿ ಸಾವಿರಾರು ಭಾಷೆಗಳವೆ ಪ್ರಪಂಚದಲ್ಲಿ ಅತ್ಯುತ್ತಮ 20 ಭಾಷೆಗಳಲ್ಲಿ ಕನ್ನಡ ಒಂದಾಗಿದೆ ಇಂಗ್ಲೀಷ್ ಹಿಂದಿ ಕನ್ನಡದ ಮೇಲೆ ಸವಾರಿ ಮಾಡಲು ಅವಕಾಶ ಮಾಡಿಕೊಡಬಾರದು ಎಂದರು. ಕನ್ನಡ ಜನರ ಭಾಷೆಯಾಗಿದೆ ಬಸ್ಸು, ರೈಲು, ಕಾರು, ಬಸ್ ಸ್ಟ್ಯಾಂಡ್ ಕನ್ನಡದ ಪದಗಳಲ್ಲ, ಇಂಗ್ಲೀಷ್ ಅನ್ನೇ ಕನ್ನಡೀಕರಿಸಲಾಗಿದೆ. ಕನ್ನಡಿಗರಿಗೆ ಕನ್ನಡದ ಬಗ್ಗೆ ಅಭಿಮಾನ ಮೂಡಬೇಕು. ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆ ಕನ್ನಡ, ಇದು ಜಾತ್ಯತೀತ ಭಾಷೆಯಾಗಿದೆ ಎಂದರು.

ಶಾಸಕ ಕೆ.ಎಸ್. ಆನಂದ್ ಮಾತನಾಡಿ ಕನ್ನಡ ಸಾಹಿತ್ಯ ಸಮ್ಮೇಳನವು 1915ರಿಂದ ನಡೆಯುತ್ತಿದೆ, ಜನರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯ ವನ್ನು ಸಮ್ಮೇಳನ ಮಾಡುತ್ತಿವೆ. ಚಿಕ್ಕಮಗಳೂರು ಜಿಲ್ಲೆ ಸಾಂಸ್ಕೃತಿಕವಾಗಿ ತನ್ನದೇ ಆದ ಕೊಡುಗೆ ನೀಡಿದೆಂದರು. ಸ್ವಾಗತ ಸಮಿತಿ ಅಧ್ಯಕ್ಷ ಭಂಡಾರಿ ಶ್ರೀನಿವಾಸ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಸೂರಿ ಶ್ರೀನಿವಾಸ, ನಿಕಟಪೂರ್ವ ಸಮ್ಮೇಳನ ಅಧ್ಯಕ್ಷ ಎಚ್.ಎಮ್. ಮರುಳಸಿದ್ದಯ್ಯ ಪಟೇಲ್, ವೆಂಕಟೇಶ, ಶಿವಾನಂದ ಸ್ವಾಮಿ, ಆಸಂದಿ ಕಲ್ಲೇಶ, ಎಮ್. ರಾಜಪ್ಪ, ನಿರ್ಮಲ ಮಂಜೇಗೌಡ, ಹಿರೇ ಗರ್ಜೆ ಲೋಕೇಶ, ಲತಾ ರಾಜಶೇಖರ, ಚಿಕ್ಕನಲ್ಲೂರು ಪರಮೇಶ, ರೂಪ ನಾಯ್ಕ್ ಇದ್ದರು.

ಕೆರೆಗಳ ಜೀರ್ಣೋದ್ಧಾರ ಮಾಡದ ಸರಕಾರ | ಒತ್ತುವರಿ ತೆರವುಗೊಳಿಸಿ ಕೆರೆ ಉಳಿಸಿ | ನೀರಿಲ್ಲದೆ ಪರದಾಟ

ತಾಪಮಾನ ಹೆಚ್ಚಳಕ್ಕೆ ಬರಿದಾದ ಕೆರೆಕುಂಟೆ

▸ ತಾವರೆಕೆರೆ ಟಿ.ನಾಗರಾಜ್



ದಿಗಂತ ವಿಶೇಷ

• **ತಾವರೆಕೆರೆ:** ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ತಾಪಮಾನ ದಿಂದಾಗಿ ಕೆರೆಕಟ್ಟೆಗಳಲ್ಲಿರುವ ನೀರು ಬತ್ತಿ ಹೋಗುತ್ತಿದೆ. ಇದರಿಂದಾಗಿ ಜನಜಾನುವಾರುಗಳು ಕುಡಿಯುವ ನೀರಿಲ್ಲದೆ ಪರದಾಡಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಬಿಸಿಲಿನ ತಾಪ ದಿನದಿಂದ ದಿನಕ್ಕೆ ಹೆಚ್ಚಾಗಿದೆ. ಕೆರೆಗಳಲ್ಲಿ ನೀರು ಖಾಲಿಯಾಗಿ ನಂದಗುಡಿ ಹೋಬಳಿಯಾದ್ಯಾಂತ ಬಹುತೇಕ ಗ್ರಾಮದಲ್ಲಿ ಕೆರೆಯ ನೀರನ್ನು ಅವಲಂಬಿಸಿ ಕೃಷಿ ನಡೆಸುತ್ತಿರುವುದು ವಾಡಿಕೆಯಲ್ಲಿದೆ.

ಆದರೆ, ದಿನದಿಂದ ದಿನಕ್ಕೆ ಅಂತರ್ಜಾಲ ಮಟ್ಟ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ನೀರಿನ ಕೊರತೆ ಇಲ್ಲಿದೆ..

ನಂದಗುಡಿ ಹೋಬಳಿಯ ಬೈಲನರಸಾಪುರ ಕೆರೆಯಲ್ಲಿ ಬೇಸಿಗೆ ಕಾಲ ಬಂದು ನೀರು ಬರಿದಾಗಿದೆ. ಈ ಕೆರೆಗೆ ಹೊಂದಿಕೊಂಡಂತೆ ಹೆದಕನಹಳ್ಳಿ ಸತ್ತಿಗಾನಹಳ್ಳಿ ಹಾಗೂ ಇತರೆ ಹಳ್ಳಿಗಳು ಈ ಕೆರೆಯ ವ್ಯಾಪ್ತಿಗೆ ಸೇರಿದ್ದುಇಲ್ಲಿ ಹೆಚ್ಚಾಗಿ ರೈತರು ಹೈನುಗಾರಿಕೆ ಕಸುಬನ್ನು ಜೀವನೋಪಾಯಕ್ಕೆ ನಂಬಿ ಜೀವನ ನಡೆಸುತ್ತಿದ್ದಾರೆ.

ಹಿಂಗಾರು ಮಳೆ ತುಂತುರು ಮಳೆಯಾಗಿದೆ. ಬೆಳೆ ಸಮೃದ್ಧಿಯಾಗಿ ಬೆಳೆದಿದೆ. ಆದರೆ , ಹೇಳುವ ರೀತಿಯಲ್ಲಿ ಕೆರೆ ಕುಂಟೆಗಳಿಗೆ ನೀರು ಬಂದಿಲ್ಲ, ನೀರು ಇಲ್ಲದೆ ಬರಿದಾಗಿದೆ. ಪ್ರತಿ ವರ್ಷ ಮಾರ್ಚ್ 22ರಂದು ವಿಶ್ವ ಜಲದಿನವಾಗಿ ಆಚರಿಸುತ್ತಿದೆ. ಸರ್ಕಾರಿಂದ ಕೆರೆಗಳ ಅಭಿವೃದ್ಧಿಗೆ ಅನೇಕ ಅನುದಾನ ನೀಡುತ್ತಿದ್ದರೂ ಸಹ ಬಹುತೇಕ ಜಿಲ್ಲೆಯಲ್ಲಿ ನೀರಿನ ಅಭಾವ ಕಾಣಿಸಿಕೊಂಡಿದೆ. ಈ ವರ್ಷದಲ್ಲಿ ಅತಿ ಹೆಚ್ಚಾದ ಬಿಸಿಲಿನ ತಾಪವಿದೆ. ಪ್ರಾರಂಭ ಅಂತದಲ್ಲಿಯೇ ಬಹುತೇಕ ಕೆರೆಗಳು ಬತ್ತಿ ಹೋಗಿವೆ. ದನ ಕರುಗಳಿಗೆ ಮೈ ತೊಳೆಯಲು ಹಾಗೂ ನೀರು ಕುಡಿಯಲು ನೀರಿಲ್ಲದೆ ಪರದಾಡುವಂತಾಗಿದೆ. ಹೀಗೆ ಆದರೆ ಮುಂದಿನ ದಿನದಲ್ಲಿ ಮತ್ತಷ್ಟು ಕಷ್ಟ ಪಡಬೇಕಾದ ಪರಿಸ್ಥಿತಿ ಎದುರಾಗಲಿದೆ. ನಮ್ಮ ದನ ಕರುವನ್ನು ಮಾರಾಟ ಮಾಡಬೇಕಾಗುತ್ತದೆ. ಕುಟುಂಬ ಪೋಷಣೆ ಮಾಡಲು ಆಗದೇ ಕಷ್ಟ ಎದುರುವಾಗುವ ಸಂಭವ ಇಲ್ಲಿದೆ. ಈಗ ಬೇಸಿಗೆ ಆರಂಭವಾದ ಹಿನ್ನೆಲೆಯಲ್ಲಿ ಕೆರೆಗಳಲ್ಲಿ ನೀರಿನ ಕೊರತೆ ಕಡಿಮೆಯಾಗುತ್ತ ಬಂದಿದೆ. ಜಾನುವಾರುಗಳಿಗೆ ಕಾಡಿನ ಪ್ರಾಣಿಗಳಿಗೆ ಪಕ್ಷಿಗಳಿಗೆ ನೀರಿಲ್ಲದೆ ಪರದಾಡುವಂತಾಗಿದೆ. ಈಗ ತೀರ ತಳಮಟ್ಟಕ್ಕೆತಲುಪಿದೆ. ಕೆರೆಯ ನೀರನ್ನು ನಂಬಿ ಜೀವನ ಸಾಗಿಸುತ್ತಿದ್ದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಈ ಭಾಗದ ಕೊಳವೆ ಬಾವಿಯಲ್ಲಿ ನೀರಿನಲ್ಲಿ ಫ್ಲೋರೈಡ್ ಈ ನೀರು ಕುಡಿಯಲು ಯೋಗ್ಯವಾಗಿರುವುದಿಲ್ಲ. ಇದರಿಂದ ಅನೇಕ ರೋಗಗಳಿಗೆ ತುತ್ತಾಗುವರು. ಕಿಡ್ನಿ ಸಮಸ್ಯೆ ಹಾಗು ಇತರೆ ಕಾಯಿಲೆಗೆ ಒಳಗಾಗುತ್ತಾರೆ. ವಿಷಯುಕ್ತ ದ್ರಾವಣವಾದ್ದರಿಂದ ಈ ಭಾಗದಲ್ಲಿ ಸುಮಾರು 1300 ಅಡಿ ಕೊಳವೆ ಬಾವಿ ಕೊರೆಸಿದರೂ ನೀರು ಸಿಗುವುದರಲ್ಲಿ ಗ್ಯಾರಂಟಿ ಇಲ್ಲ . ಪ್ರತಿ ಗ್ರಾಮದಲ್ಲಿ ಈಗ ಶುದ್ಧ ನೀರಿನ ಘಟಕದಿಂದ ಶುದ್ಧ ನೀರು ಕುಡಿಯುತ್ತಿದ್ದಾರೆ.

ಮಳೆ ನೀರು ಕೆರೆಗೆ ಸೇರುತ್ತಿಲ್ಲ

ಕೆರೆ ಕುಂಟೆಗಳು ಬತ್ತಿ ಹೋಗಿವೆ ಇನ್ನೂ ಗ್ರಾಮಗಳ ಹೊರ ವಲಯದಲ್ಲಿರುವ ಕೆರೆ-ಕುಂಟೆಗಳು ಬತ್ತಿ ಹೋಗಿ ದನಗಳ ರೋದನೆ ಅನುಭವಿಸುವಂತಾಗಿದೆ. ಒಟ್ಟಾರೆಯಾಗಿ ಪರಿಸ್ಥಿತಿ ಹೀಗೆಯೇ ಮುಂದುವರೆದರೆ ಕೆರೆ ಕುಂಟೆಗಳು ಹೆಸರಿಲ್ಲದಂತಾಗುತ್ತದೆ ಎಂದು ಹೆದಕನಹಳ್ಳಿ ರೈತ ನಾರಾಯಣಸ್ವಾಮಿ ಹೇಳಿದರು.

ಕೆರೆಗಳಿಗೆ ನೀರು ಸರಾಗವಾಗಿ ಹರಿಯಲಿ

ಕೆರೆಕುಂಟೆಗಳಿಗೆ ಮಳೆಯ ನೀರು ಸಾರಗವಾಗಿ ಹರಿದು ಸೇರುತ್ತಿಲ್ಲ. ಹಿಂದಿನ ಕಾಲದಲ್ಲಿ ಪೂರ್ವಿಕರು ಕೆರೆಗಳು ವರ್ಷ ಪೂರ್ತಿ ನೀರಿನಿಂದ ತುಂಬಿ ಸಮೃದ್ಧಿಯಾಗಿರಲೆಂದು ಮಳೆ ನೀರು ಹರಿದು ಬರುವ ರಾಜ ಕಾಲುವೆ ಸಣ್ಣ ತೊರೆ ಸೇರಿದಂತೆ ಗ್ರಾಮದಲ್ಲಿನ ಚರಂಡಿಯನ್ನು ಸ್ವಚ್ಛತೆ ಮಾಡುತ್ತಿದ್ದರು. ಈ ನೀರು ಕೆರೆಗೆ ಹರಿಯುವಂತೆ ಮಾಡುತ್ತಿದ್ದರು. ಆದರೆ, ಇಂದು ಪರಿಸ್ಥಿತಿ ಬದಲಾಗಿರಾಜ ಕಾಲುವೆಯನ್ನು ರಕ್ಷಿಸಬೇಕಾದವರೆ ಒತ್ತುವರಿ ಮಾಡಿಕೊಂಡಿದ್ದಾರೆ.

ಒತ್ತುವರಿ ತೆರವುಗೊಳಿಸಲಿ

ಸರ್ಕಾರದಿಂದ ಬರುವ ಅನುದಾನ ಸರಿಯಾಗಿ ಬಳಕೆಯಾಗಿ ಕೆರೆಗಳ ಅಭಿವೃದ್ಧಿಯಾದರೆ ನೀರು ಶೇಖರಣೆಯಾಗುತ್ತದೆ. ಆದರೆ ಕೆರೆಯನ್ನು ರಕ್ಷಿಸ ಬೇಕಾದರೆ ಅದನ್ನು ಕಾಪಾಡಲು ಯತ್ನಿಸಿದರೆ ಕೆರೆಗಳ ಅಭಿವೃದ್ಧಿಯಾಗುವುದು. ಇದು ಹೀಗೆ ಮುಂದುವರೆದರೆ ಪ್ರಾಣಿ ಪಕ್ಷಿಗಳ ಜತೆ ಮನುಷ್ಯನಿಗೂ ಒಂದು ಹನಿ ನೀರು ಸಿಗುವುದಿಲ್ಲ ಎಂದು ಸತ್ತಿಗಾನಹಳ್ಳಿ ಆನಂದ್ ಹೇಳಿದರು.

ಆದರೆ, ಕೆಲವೊಂದು ಗ್ರಾಮದಲ್ಲಿ ನೀರಿನ ಕೊರತೆ ಇರುವ ಕಾರಣ ಶುದ್ಧ ನೀರಿನ ಘಟಕಕ್ಕೆ ನೀರಿನ ಸಂಪರ್ಕ ಕಡಿಮೆಯಾಗಿ ನೀರಿನ ಕೊರತೆ ಹೆಚ್ಚಾಗುತ್ತಿದೆ.

ಕಿರುಸುದ್ದಿ

ಶ್ರೀ ಅಭಯ ಶನೈಶ್ಚರ ಸ್ವಾಮಿಗೆ ಅಲಂಕಾರ



ತಾವರೆಕೆರೆ: ನಂದಗುಡಿ ಹೋಬಳಿ ತಾವರೆಕೆರೆ ಗ್ರಾಮದ ಶ್ರೀ ರಾಮವಧೂತರ ಆಶ್ರಮದಲ್ಲಿ ಇರುವ ಶ್ರೀ ಅಭಯ ಶನೈಶ್ಚರಸ್ವಾಮಿಗೆ ವಿಶೇಷವಾಗಿ ಹೂವಿನ ಅಲಂಕಾರ ಮಾಡಲಾಗಿತ್ತು. ಅತ್ತಿಯ ಅಲಂಕಾರವನ್ನು ಅರ್ಚಕರಾದ ಸುನೀಲ್ ಶಾಸ್ತ್ರೀಗಳು ಮಾಡಿ ಬೆಳಗ್ಗೆಯಿಂದಲೇ ಅಭಿಷೇಕ ಮಹಾಮಂಗಳಾರತಿ ಮಾಡಿದ ನಂತರ ಬಂದ ಎಲ್ಲಾ ಭಕ್ತಾದಿಗಳಿಗೆ ತೀರ್ಥ ಪ್ರಸಾದ ವಿನಿಯೋಗ ಮಾಡಿದರು.

ಶ್ರೀ ವಾಣಿ ಪದವಿ ಕಾಲೇಜಿಗೆ ಉತ್ತಮ ಫಲಿತಾಂಶ

• **ಆನೇಕಲ್:** ಪಟ್ಟಣದ ಶ್ರೀ ವಾಣಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪಬ್ಲಿಕ್ ಪರೀಕ್ಷೆಯಲ್ಲಿ ಶೇ.99 ರಷ್ಟು ಸಾಧನೆ ಮಾಡಿದ್ದಾರೆ ಎಂದು ಸಂಸ್ಥೆಯ ಕಾರ್ಯದರ್ಶಿ ಜಿ.ಎನ್.ಸುರೇಶ್ ತಿಳಿಸಿದರು,

ಪಟ್ಟಣದ ಶ್ರೀವಾಣಿ ಪಿಯು ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿ ನಿಖಿಲ್.ಎನ್ ಅವರು 600ಕ್ಕೆ 594 ಅಂಕ ಪಡೆಯುವ ಮೂಲಕ ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದು ರಾಜ್ಯಕ್ಕೆ 4ನೇ ಸ್ಥಾನ ಪಡೆದಿದ್ದಾರೆ.



ನಿಖಿಲ್.ಎನ್ ಅವರು ಕನ್ನಡ 100, ಇಂಗ್ಲಿಷ್ 95, ಭೌತಶಾಸ್ತ್ರ100, ರಸಾಯನಶಾಸ್ತ್ರ 99, ಗಣಿತ,100, ಜೀವಶಾಸ್ತ್ರ 100, ಅಂಕ ಪಡೆಯುವ ಮೂಲಕ ಉತ್ತಮ ಸಾಧನೆ ಮಾಡಿ, ಕಾಲೇಜಿಗೆ ಹಾಗೂ ಪೋಷಕರಿಗೆ ಕೀರ್ತಿ ತಂದಿದ್ದಾನೆ ಎಂದು ಕಾಲೇಜು ಆಡಳಿತ ಮಂಡಳಿ ಕಾರ್ಯದರ್ಶಿ ಜಿ.ಸುರೇಶ್ ಮತ್ತು ನಿರ್ದೇಶಕರಾದ ಚಂದ್ರಶೇಖರ್.ಕೆ.ಪಿ. ಅವರು ಅಭಿನಂದಿಸಿದ್ದಾರೆ.

ಇನ್ನು ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಒಟ್ಟು 117 ಇದ್ದಾರೆ. ಅದರಲ್ಲಿ ಅತ್ಯುತ್ತಮ ಶ್ರೇಣಿ 33, ಹಾಗೂ ಪ್ರಥಮ ಶ್ರೇಣಿ 48 ಪಡೆಯುವ ಮೂಲಕ ವಾಣಿಜ್ಯ ಹಾಗೂ ವಿಜ್ಞಾನ ವಿಭಾಗದಲ್ಲಿ ಎಲ್ಲಾ ವಿದ್ಯಾರ್ಥಿಗಳು ಒಳ್ಳೆಯ ಅಂಕ ಗಳಿಸುವ ಮೂಲಕ ಉತ್ತಮ ಫಲಿತಾಂಶ ನೀಡಿದರೆ ಎಂದರು.

ಇಂದು ಅಂಚೆ ಸ್ಮರಣಿಕೆ ಹಾಳೆಗಳ ಬಿಡುಗಡೆ

• **ಬೆಂಗಳೂರು:** ಅಂಚೆ ಇಲಾಖೆಯು ಏ.12ರಂದು ನಗರದ ಜಿಪಿಒನ ಮೇಘದೂತ್ ಸಭಾಂಗಣದಲ್ಲಿ ಮಾನವ ಬಾಹ್ಯಾಕಾಶ ಕಾರ್ಯಕ್ರಮದ ಸ್ಮರಣಾರ್ಥ ಅಂಚೆ ಚೀಟಿ ಹಾಗೂ ಸ್ಮರಣಿಕೆ ಹಾಳೆಗಳ ಬಿಡುಗಡೆ ಕಾರ್ಯಕ್ರಮವನ್ನು ಆಯೋಜಿಸಿದೆ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ನೇತೃತ್ವದ ಭಾರತದ ಮಾನವ ಬಾಹ್ಯಾಕಾಶ ಕಾರ್ಯಕ್ರಮದ ಗಮನಾರ್ಹ ಪ್ರಗತಿಯನ್ನು ಆಚರಿಸುವ ಉದ್ದೇಶದಿಂದ ಭಾರತೀಯ ಅಂಚೆ ಇಲಾಖೆ ಹಾಗೂ ಕರ್ನಾಟಕ ಅಂಚೆ ವೃತ್ತವು ಎರಡು ಸ್ಮರಣಾರ್ಥ ಅಂಚೆ ಚೀಟಿಗಳು ಮತ್ತು ಸ್ಮರಣಿಕೆ ಹಾಳೆಗಳನ್ನು ಬಿಡುಗಡೆ ಮಾಡುತ್ತಿವೆ. ಕಾರ್ಯಕ್ರಮದಲ್ಲಿ ಕರ್ನಾಟಕ ಅಂಚೆ ವೃತ್ತದ ಮುಖ್ಯ ಪೋಸ್ಟ್‌ಮಾಸ್ಟರ್ ಜನರಲ್ ಕೆ.ಪ್ರಕಾಶ್, ಇಸ್ರೊ ಅಧ್ಯಕ್ಷ ಡಾ. ವಿ.ನಾರಾಯಣನ್ ಮತ್ತು ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ, ಬೆಂಗಳೂರು ಪ್ರಧಾನ ಕಚೇರಿ ಪ್ರದೇಶದ ಪೋಸ್ಟ್ ಮಾಸ್ಟರ್ ಜನರಲ್ ಸೇರಿದಂತೆ ಹಲವರು ಉಪಸ್ಥಿತರಿರಲಿದ್ದಾರೆ.

ಬಿಜೆಪಿ ದಕ್ಷಿಣ ಜಿಲ್ಲಾ ಮಹಿಳಾ ಮೋರ್ಚಾಗೆ ನೇಮಕ

• **ಬೆಂಗಳೂರು:** ಬಿಜೆಪಿಯ ಬೆಂಗಳೂರು ದಕ್ಷಿಣ ಜಿಲ್ಲೆಯ ಮಹಿಳಾ ಮೋರ್ಚಾ ಪದಾಧಿಕಾರಿಗಳನ್ನು ಶಾಸಕ ಸಿ.ಕೆ. ರಾಮಮೂರ್ತಿ ಘೋಷಿಸಿದ್ದಾರೆ. ಅಧ್ಯಕ್ಷರಾಗಿ ಶ್ವೇತ ರಾಘವೇಂದ್ರ, ಉಪಾಧ್ಯಕ್ಷರಾಗಿ ದೀಪಾರೆಡ್ಡಿ, ಮಂಜುಳಾ ನೀಲಕಂಠಯ್ಯ, ಅನಿತಾ ಭಾರಧ್ವಾಜ್, ಪಂಕಜಾ, ಶ್ಯಾಮಲಾ, ಪ್ರಧಾನ ಕಾರ್ಯದರ್ಶಿಯಾಗಿ ಮಮತಾ ಶ್ರೀನಿವಾಸ್, ಸೌಮ್ಯ ತಿಪ್ಪೇಸ್ವಾಮಿ , ಕಾರ್ಯದರ್ಶಿಗಳಾಗಿ ಶಶಿಮೋಹನ್, ಪ್ರಭಾಚಂದ್ರಶೇಖರ್, ಪದ್ಮಿನಿ ಪ್ರಿಯದರ್ಶಿನಿ, ವರಲಕ್ಷ್ಮಿ, ರುಕ್ಮಿಣಿಬೈರಪ್ಪ, ಫಣಿವೇಣಿ ಸೀತಾರಾಮ್, ಖಜಾಂಚಿಯಾಗಿ ಭಾರತಿ ರಾಮಚಂದ್ರ ಅವರು ಆಯ್ಕೆಯಾಗಿದ್ದಾರೆ.

ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲೆಯ ಎಸ್.ಸಿ. ಮೋರ್ಚಾಗೆ ಅಧ್ಯಕ್ಷರಾಗಿ ಗುರುಪ್ರಸಾದ್ ಕೆ, ಉಪಾಧ್ಯಕ್ಷರಾಗಿ ಹನುಮಂತರಾಯಪ್ಪ, ಸಿ.ಚಿನ್ನಪ್ಪ, ಕ್ರಾಂತಿರಾಜು, ಮುನಿರಾಜು, ನಾಗರಾಜ್, ಪ್ರಧಾನ ಕಾರ್ಯದರ್ಶಿಯಾಗಿ ಶೇಖರ್ ಕೆ, ಡಾ.ಗೋಪಾಲಕೃಷ್ಣ, ಕಾರ್ಯದರ್ಶಿಗಳಾಗಿ ನಾಗೇಶ್ ಎ, ನಾಗಮ್ಮ, ಪ್ರಕಾಶ್ ನಾಯಕ್, ಪಳನಿ, ಮಂಜುನಾಥ್, ಅಶೋಕ್ ಧನಪಾಲ್, ಖಜಾಂಚಿಯಾಗಿ ಸವಿತಾ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರತಿಭಾನ್ವಿತರು ಸಮಾಜದ ಆಸ್ತಿ



• **ಆನೇಕಲ್:** ಮಕ್ಕಳು ರಾಂಕ್ ಪಡೆಯುವುದಕ್ಕಾಗಿ ಓದಬಾರದು ಉತ್ತಮ ಸಮಾಜ ನಿರ್ಮಾಣಕ್ಕಾಗಿ ಶ್ರಮಿಸಲು ಮುಂದಾಗಬೇಕು ಎಂದು ವಕೀಲರಾದ ಸಿ.ವಿಜಯ್ ಕುಮಾರ್ ಹೇಳಿದರು.

ದ್ವಿತೀಯ ಪಿಯುಸಿ ಕನ್ನಡದಲ್ಲಿ ಅತಿ ಹೆಚ್ಚು ಅಂಕ ಪಡೆದ ಮಕ್ಕಳನ್ನು ಕನ್ನಡ ಸಾಹಿತ್ಯ ಪರಿಷತ್ತು ಆನೇಕಲ್ ವಿಧಾನಸಭಾ ಕ್ಷೇತ್ರದಿಂದ ಇಲ್ಲಿನ ಗ್ರಂಥಾಲಯದಲ್ಲಿ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿ, ಹಿಂದಿನ ಕಾಲದಲ್ಲಿ ಕೇವಲ 30-40 ಅಂಕ ಗಳಿಸಿದರೆ ಬಹುದೊಡ್ಡ ಸಾಧನೆ ಆಗುತ್ತಿತ್ತು. ಆದರೆ, ಇಂದು ಎಲ್ಲಾ ಮಕ್ಕಳು 90-100 ಅಂಕ ಗಳಿಸಿ ಸಾಧಕರಾಗಿ ಹೊರಹೊಮ್ಮುತ್ತಿರುವುದು ಬಹಳ ಆಶ್ಚರ್ಯ ಮತ್ತು ಸಂತೋಷವಾಗಿದೆ. ಇಂತಹ ಸಾಧನೆ ಮಾಡುವ ಮಕ್ಕಳು ಮುಂದಿನ ಸಮಾಜಕ್ಕೆ ಬಹುದೊಡ್ಡ ಆಸ್ತಿಯಾಗಲೆಂದು ಹಾರೈಸಿದರು.

ಬಸವನಪುರ ರಾಮಕೃಷ್ಣ ಮಾತನಾಡಿ, ವಿದ್ಯಾವಂತರಿಗೆ ಸಮಾಜದಲ್ಲಿ ಬಹುದೊಡ್ಡ ಸ್ಥಾನಮಾನವಿದೆ ಇದಕ್ಕೆಲ್ಲ ತಂದೆತಾಯಿ ಗುರು ಕಾರಣಕರ್ತರಾಗುತ್ತಾರೆ. ಸದಾ ಅವರ ಋಣವನ್ನು ತೀರಿಸುವ ಕೆಲಸವನ್ನು ಮಕ್ಕಳು ಮಾಡಿದಾಗ ಆಗ ದೇವರು ಮೆಚ್ಚುತ್ತಾನೆ ಎಂದು ತಿಳಿಸಿದರು.

ಜಾಗತಿಕ ಪ್ರಪಂಚದಲ್ಲಿ ವಿದ್ಯೆಯು ಬಹಳ ದುಬಾರಿಯಾಗಿದೆ. ಪೋಷಕರು ಇದಕ್ಕಾಗಿ ಕೋಟಿ ಕೋಟಿ ವೆಚ್ಚ ಮಾಡಿ ಕೊಡಿಸುವ ವಿದ್ಯಾಭ್ಯಾಸವು ಮೌಲ್ಯಾಧಾರಿತವಾಗಿಲ್ಲ, ವಿದ್ಯಾವಂತರಿಂದಲೇ ನಡೆಯಬಾರದ್ದು ನಡೆಯುತ್ತಿದೆ. ಪೋಷಕರು ಇದನ್ನೆಲ್ಲ ಗಮನಿಸಿ ಎಚ್ಚರದಿಂದ ಮಕ್ಕಳಿಗೆ ಮಾರ್ಗದರ್ಶನ ಮಾಡಬೇಕು. ವಿದ್ಯೆ ಜತೆಗೆ ಸಾಹಿತ್ಯ ಸಂಗೀತ ಕ್ರೀಡೆ ಕಡೆ ಗಮನಹರಿಸಬೇಕು ಎಂದು ಕಿವಿ ಮಾತು ಹೇಳಿದರು. ಇದೇ ಕಾರ್ಯಕ್ರಮದಲ್ಲಿ ಕುಮಾರಿ ಮೀನಾಕ್ಷಿ, ವೀವರ್ಸ್ ಕಾಲೊನಿ ಕುಮಾರಿ ಮಾನ್ಯಶ್ರೀ, ಬಸವಣ್ಣ ಬೀದಿ ಕುಮಾರಿ ಅನುಶ್ರೀ, ರಾಚಮಾನಹಳ್ಳಿ ಇವರನ್ನು ಸನ್ಮಾನಿಸಲಾಯಿತು

ಕಾರ್ಯಕ್ರಮದಲ್ಲಿ ಕ್ರೀಡಾಪಟು, ರೇಣುಕಾ ಶ್ರೀನಿವಾಸ್, ಬಿಎಸ್ಪಿ ತಾಲೂಕು ಅಧ್ಯಕ್ಷ ಯಲ್ಲಪ್ಪ, ನಿವೃತ್ತ ಎಂಜಿನಿಯರ್ ದೇವೇಂದ್ರಪ್ಪ, ಮಾಜಿ ಉಪಾಧ್ಯಕ್ಷ ಮರಿಯಪ್ಪ, ಅಥಾವುಲ್ಲಾ, ಇಲಿಯಾಸ್ ಖಾನ್,ಶ್ರೀನಿವಾಸ್, ಹೇಮಾವತಿ, ನಿವೃತ್ತ ಶಿಕ್ಷಕರಾದ ಚಂದ್ರಪ್ಪ ಆದೂರು ಪ್ರಕಾಶ್ ಚುಟುಕು ಶಂಕರ್ ಇದ್ದರು.

ರಂಗಭೂಮಿ ಕಲಾವಿದರ ಸಂಘದ ಪ್ರಶಸ್ತಿ ಪ್ರದಾನ | ಹಲವು ಗಣ್ಯರು ಭಾಗಿ

ವಿವಿಧ ರಂಗ ಪ್ರಯೋಗಕ್ಕೆ ಉತ್ತೇಜನ



• **ದೊಡ್ಡಬಳ್ಳಾಪುರ:** ಪೌರಾಣಿಕ ನಾಟಕವನ್ನು ಅಭಿನಯಿಸುವ ಜತೆಗೆ ಸಾಮಾಜಿಕ, ಐತಿಹಾಸಿಕ ನಾಟಕಗಳ ಪ್ರದರ್ಶನಕ್ಕೂ ಉತ್ತೇಜನ ಅಗತ್ಯವಾಗಿದೆ ಎಂದು ಬೆಂ.ಗ್ರಾ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಪ್ರೊ. ಕೆ.ಆರ್.ರವಿಕಿರಣ್ ಹೇಳಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲಾ ರಂಗಭೂಮಿ ಕಲಾವಿದರ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಇಲ್ಲಿನ ಮುದ್ದನಾಯಕನಪಾಳ್ಯ ಬಳಿ ಇರುವ ಜಿಲ್ಲಾ ಕಲಾ ಭವನದಲ್ಲಿ ಶನಿವಾರ ನಡೆದ 50ನೇ ಮಾಸಿಕ ರಂಗ ಕಲಾಜ್ಯೋತಿ, ರಂಗ ಗೀತೆ ಗಾಯನ, ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಮಕಾಲೀನ ಆಶೋತ್ತರಗಳಿಗೆ ತಕ್ಕಂತೆ ನಾಟಕಗಳ ವಸ್ತು, ಅಭಿವ್ಯಕ್ತಿ ಮತ್ತು ಆಶಯಗಳಲ್ಲಿ ಮಾರ್ಪಾಟು ಮಾಡಿಕೊಳ್ಳುವುದು ಅಗತ್ಯ ಎಂದರು.

ಸೃಜನಶೀಲ ಅಭಿವ್ಯಕ್ತಿಯ ಪ್ರಖರ ಮಾಧ್ಯಮವಾಗಿರುವ ರಂಗ ಕಲೆ ಸಾಂಸ್ಕೃತಿಕ ಅಸ್ಮಿತೆ ಜತೆಗೆ ಸಮಕಾಲೀನ ಸಾಮಾಜಿಕ ವಾತಾವರಣ ವಿಮರ್ಶಿಸುವ ವೇದಿಕೆಯೂ ಆಗಬೇಕು. ಯುವ ಕಲಾವಿದರನ್ನು ಪ್ರೋತ್ಸಾಹಿಸಲು, ಕಲಾ ಪರಂಪರೆಯ ಇತಿಹಾಸ, ವರ್ತಮಾನ ಮತ್ತು ಭವಿಷ್ಯದ ಚಿಂತನೆಯನ್ನು ಉತ್ತೇಜಿಸಲು ಮಾರ್ಗದರ್ಶಿ ಶಿಬಿರವನ್ನು ಹಮ್ಮಿಕೊಳ್ಳುವುದು ಅಗತ್ಯ ಎಂದು ತಿಳಿಸಿದರು. ಜಾಗತಿಕ ಸಂದಿಗ್ಧತೆ ಸಂದರ್ಭದಲ್ಲಿ ಲಲಿತ ಕಲೆಗಳು ಪ್ರಖರ ಅಭಿವ್ಯಕ್ತಿ ಮಾಧ್ಯಮವಾಗಿ ಗಮನ ಸೆಳೆದಿವೆ. ಇರಾನ್-ಅಮೆರಿಕಾ ಯುದ್ಧದ ವೇಳೆ ಇರಾನ್‌ನ ಪ್ರಜೆಯೊಬ್ಬ ಸಂಗೀತ ವಾದ್ಯ ನುಡಿಸುವ ಮೂಲಕ ಸಾಮ್ರಾಜ್ಯಶಾಹಿಯ ದಬ್ಬಾಳಿಕೆಯನ್ನು ಪ್ರಶ್ನಿಸಿದ ಮತ್ತು ಶಾಂತಿ ಸ್ಥಾಪನೆಯ ಸಂದೇಶವನ್ನು ಸಾರಿದ ಘಟನೆ ಅತ್ಯಂತ ಮಾರ್ಮಿಕವಾಗಿದೆ. ಸಂಗೀತ, ಕಲೆಗಳಿಗೆ ರೋಗ ನಿರೋಧಕ ಸಾಮರ್ಥ್ಯವಿದೆ. ಮನಸ್ಸು ಹಾಗೂ ದೇಹವನ್ನು ಪ್ರಫುಲ್ಲಗೊಳಿಸುವ ಸಂವೇದನೆ ಇದೆ ಎಂದರು. ಪ್ರಾಸ್ತಾವಿಕವಾಗಿ ಬೆಂ. ಗ್ರಾ ಜಿಲ್ಲಾ ರಂಗ ಭೂಮಿ ಕಲಾವಿದರ ಸಂಘದ ಗೌರವಾಧ್ಯಕ್ಷ ಕೆ.ಎಂ.ಕೃಷ್ಣಮೂರ್ತಿ ಮಾತನಾಡಿ, ರಂಗ ಕಲೆ ಸೃಜನಶೀಲ ಭಾವನೆಗಳ ಅಭಿವ್ಯಕ್ತಿಯ ಜತೆಗೆ ಸಾಂಸ್ಕೃತಿಕ ಹಾಗೂ ಪಾರಂಪರಿಕ ಮೌಲ್ಯಗಳ ಬಗ್ಗೆ ನಿರಂತರ ಜಾಗೃತಿಯನ್ನು ಮೂಡಿಸುತ್ತದೆ. ಸತತ 50ತಿಂಗಳಿಂದ ಪ್ರತಿ ತಿಂಗಳು ಒಬ್ಬೊಬ್ಬ ಕಲಾವಿದರನ್ನು ಗುರುತಿಸಿ ಗೌರವಿಸುವ ಪ್ರಕ್ರಿಯೆ ನಡೆಯುತ್ತಿದೆ. ಕಲಾ ಚೇತನಗಳ ಉತ್ತೇಜನಕ್ಕೆ ಇದೊಂದು ಉತ್ತಮ ಮಾರ್ಗವೂ ಆಗಿದೆ ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ರಂಗಭೂಮಿ ಕಲಾವಿದರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ಮಾತನಾಡಿ, ಇಡೀ ಜಿಲ್ಲೆಯ ಅಸಂಖ್ಯಾತ ಕಲಾವಿದರನ್ನು ಗುರುತಿಸಿ, ಪ್ರೋತ್ಸಾಹಿಸುವುದು ರಂಗ ಕಲಾ ಜ್ಯೋತಿ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ. ರಂಗ ಕಲಾಜ್ಯೋತಿ 50 ಮಾಸವನ್ನು ಯಶಸ್ವಿಯಾಗಿ ಪೂರೈಸಿದೆ ಎಂದರು.

ಕಲಾವಿದ ನಾರಾಯಣಸ್ವಾಮಿ ಅವರಿಗೆ ರಂಗ ಕಲಾ ಜ್ಯೋತಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಂಘದ ಉಪಾಧ್ಯಕ್ಷ ಎಸ್.ಎ.ಶ್ರೀಧರಗೌಡ, ಖಜಾಂಚಿ ಆರ್.ವಿ.ಮಂಜುನಾಥ್, ನಿರ್ದೇಶಕರಾದ ಮುನಿರಾಜು, ಕೆ.ನಾಗರತ್ನಮ್ಮ, ಆರ್. ಎ.ಸಂಜೀವ ರಾಯಪ್ಪ, ಮುನಿಕೃಷ್ಣಪ್ಪ, ಸುಬ್ರಹ್ಮಣ್ಯಾಚಾರ್, ಚಂದ್ರಣ್ಣ, ಸರ್ವೇಶ್ ಸೇರಿದಂತೆ ಸಂಘದ ಪದಾಧಿಕಾರಿಗಳಿದ್ದರು.

ಲೀಟರ್ ಹಾಲಿಗೆ ವಿಶೇಷ ಹೆಚ್ಚುವರಿ ದರ

• **ಹೊಸಕೋಟೆ:** ಹಾಲು ಉತ್ಪಾದಕರಿಗೆ ಬಮುಲ್ ನಿಂದ ಪ್ರತಿ ಲೀಟರ್‌ಗೆ ಒಂದು ರೂ.ನಂತೆ ವಿಶೇಷ ಹೆಚ್ಚುವರಿ ದರವನ್ನು ಬಿಡುಗಡೆ ಮಾಡಲಾಗಿದೆ. ಉತ್ಪಾದಕರ ಖಾತೆಗೆ ಜಮೆ ಮಾಡಲಾಗಿದೆ. ಹೆಚ್ಚುವರಿ ದರ ಬಿಡುಗಡೆಗೊಳಿಸಿದ ಬಮುಲ್ ಅಧ್ಯಕ್ಷರಿಗೆ ಧನ್ಯವಾದಗಳು ತಿಳಿಸುತ್ತೇನೆ ಎಂದು ಬಮುಲ್ ನಿರ್ದೇಶಕ ಬಿ.ವಿ.ಸತೀಶ್‌ಗೌಡ ಹೇಳಿದರು.



ಸುದ್ದಿಗಾರರೊಂದಿಗೆ ಮಾತನಾಡಿ, ಡಿ.ಕೆ. ಸುರೇಶ್ ಅವರ ಅಧ್ಯಕ್ಷತೆಯಲ್ಲಿ ಬಮುಲ್ ಮೂಲಕ ಹಾಲು ಉತ್ಪಾದಕರಿಗೆ ಅನುಕೂಲ ಕಲ್ಪಿಸುವ ಹಲವಾರು ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಾಗುತ್ತಿದೆಂದರು.

ಉತ್ಪಾದಕರೇ ಬಮುಲ್ ಶಕ್ತಿಯಾಗಿದ್ದಾರೆ. ಈ ನಿಟ್ಟಿನಲ್ಲಿ ಹಾಲು ಉತ್ಪಾದಕರಿಗೆ ಅನುಕೂಲವಾಗಲೆಂದು 2025 ಏಪ್ರಿಲ್ 1 ರಿಂದ 31 ಮಾರ್ಚ್ 2026 ಅವಧಿಯಲ್ಲಿ ಹಾಲು ಪೂರೈಕೆ ಮಾಡಿರುವ ಹಾಲು ಉತ್ಪಾದಕರಿಗೆ ಪ್ರತಿ ಲೀಟರಿಗೆ 1 ರೂ. ನಂತೆ ವಿಶೇಷ ಹೆಚ್ಚುವರಿ ಧರವನ್ನು ಬಮುಲ್ ನೀಡಿದೆಂದು ತಿಳಿಸಿದರು. ಬೆಂಗಳೂರು ಹಾಲು ಒಕ್ಕೂಟದ ಇತಿಹಾಸದಲ್ಲಿಯೇ ಮೊದಲ ಭಾರಿಗೆ ಇಂದೊಂದು ಕ್ರಾಂತಿಕಾರಿ ಯೋಜನೆಯನ್ನು ಬಮುಲ್ ನೀಡುವ ಮೂಲಕ ಉತ್ಪಾದಕರ ಹಿತ ಕಾಯುವಂತ ಕೆಲಸವನ್ನು ಡಿ.ಕೆ ಸುರೇಶ್ ನೇತೃತ್ವದ ಬಮುಲ್ ಆಡಳಿತ ಮಂಡಳಿ ಮಾಡುತ್ತಿದೆ ಎಂದರು. ರಾಜ್ಯಾದ್ಯಂತ ಒಕ್ಕೂಟಕ್ಕೆ ಹಾಲು ಪೂರೈಕೆ ಮಾಡುತ್ತಿರುವ ಉತ್ಪಾದಕರ ಖಾತೆಗೆ ಈಗಾಗಲೇ ಪ್ರತಿ ಲೀಟರಿಗೆ 1 ರೂ.ನಂತೆ ವಿಶೇಷ ಹೆಚ್ಚುವರಿ ದರದ ಹಣವನ್ನು ಉತ್ಪಾದಕರ ಖಾತೆಗೆ ಜಮೆ ಮಾಡಲಾಗಿದೆ. ಹೊಸಕೋಟೆ ತಾಲೂಕಿನಲ್ಲಿ ಹಾಲು ಉತ್ಪಾದಕರಿಗೆ ಈ ವಿಶೇಷ ಹೆಚ್ಚುವರಿ ದರ ಯೋಜನೆಯಲ್ಲಿ 3 ಕೋಟಿ 53 ಲಕ್ಷ ಉತ್ಪಾದಕರಿಗೆ ಖಾತೆಗೆ ಕಳುಹಿಸಲಾಗಿದೆಂದರು.

ರಾಜ್ಯದಲ್ಲಿಯೇ ಅತಿ ಹೆಚ್ಚಿನ ಹೆಚ್ಚುವರಿ 1 ರೂ.ದರವನ್ನು ನಮ್ಮ ಹೊಸಕೋಟೆ ತಾಲೂಕಿನ ಹಾಲು ಉತ್ಪಾದಕರಿಗೆ ಸಿಕ್ಕಿರುವುದು ಸಂತೋಷದಾಯಕವಾಗಿದೆ. ಬಮುಲ್ ಉತ್ಪಾದಕರ ರಕ್ಷಣೆ ಮತ್ತು ಹಿತವನ್ನು ಕಾಯಲು ಬದ್ಧವಾಗಿದೆ.ಡಿ.ಕೆ ಸುರೇಶ್ ಅವರ ನೇತೃತ್ವದ ಆಡಳಿತ ಮಂಡಳಿ ನುಡಿದಂತೆ ನಡೆದಿದೆ. ಹೊಸಕೋಟೆ ತಾಲೂಕಿನ ಹಾಲು ಉತ್ಪಾದಕರ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದರು. ಗೋಷ್ಠಿಯಲ್ಲಿ ಹೊಸಕೋಟೆ ಶಿಬಿರ ಉಪ ವ್ಯವಸ್ಥಾಪಕ ಶ್ರೀರಾಮ್ ಹಾಜರಿದ್ದರು.

ಏ.20ರಂದು ಯುವೋತ್ಸವ, ಉದ್ಯೋಗ ಮೇಳ



• **ಬೆಂಗಳೂರು:** ಬಸವ ಜಯಂತಿಯ ಅಂಗವಾಗಿ ಏಪ್ರಿಲ್ 20ಕ್ಕೆ ಯುವೋತ್ಸವ-ಉದ್ಯೋಗ ಮೇಳ 2026ರನ್ನು ಆಯೋಜನೆ ಮಾಡಲಾಗಿದೆ ಎಂದು ಶಾಸಕ ಡಾ. ಸಿ.ಎನ್. ಅಶ್ವತ್ಥ ನಾರಾಯಣ ತಿಳಿಸಿದರು.

ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿ, ಕಾಯಕವೇ ಕೈಲಾಸ ಎಂಬ ತತ್ವವನ್ನು ಜಗತ್ತಿಗೆ ನೀಡಿದ ಭಕ್ತಿ ಭಂಡಾರಿ ಬಸವಣ್ಣನವರನ್ನು ನಾವು ಪೂಜಿಸುತ್ತೇವೆ, ಆರಾಧಿಸುತ್ತೇವೆ. ಆದ್ದರಿಂದ ಅವರ ಜಯಂತಿಯ ಅಂಗವಾಗಿ ಉದ್ಯೋಗ ಮೇಳ ಆಯೋಜಿಸಲಾಗಿದೆ. ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಹಲವಾರು ವರ್ಷಗಳಿಂದ ಉದ್ಯೋಗ ಮೇಳವನ್ನು ಆಯೋಜಿಸುತ್ತಿದ್ದೇವೆ. ಇದರಿಂದ ಸಾಕಷ್ಟು ಉದ್ಯೋಗಾಕಾಂಕ್ಷಿಗಳಿಗೆ ಸಹಾಯವಾಗಿದೆ ಎಂದು ಹೇಳಿದರು. ಡಾ. ಸಿ.ಎನ್. ಅಶ್ವತ್ಥನಾರಾಯಣ ಫೌಂಡೇಶನ್ ಸಹಯೋಗದಲ್ಲಿ, ಮಲ್ಲೇಶ್ವರಂನ ಎಸ್‌ಎಚ್ ವಿಎಸ್‌ಎಂ ಸರ್ಕಾರಿ ಮಹಿಳಾ ಪದವಿಪೂರ್ವ ಕಾಲೇಜು ಆವರಣದಲ್ಲಿ ಈ ಬಾರಿ ಉದ್ಯೋಗ ಮೇಳ ಆಯೋಜನೆ ಮಾಡಲಾಗಿದ್ದು, ಏ.20 ರಂದು ಬೆಳಗ್ಗೆ 8.30 ರಿಂದ ಸಂಜೆ 4.30 ರ ವರೆಗೆ ನಡೆಯಲಿದೆ. ಭಾರತ್ ಕರಿಯರ್ ಕನೆಕ್ಟ್ ಈ ಮೇಳಕ್ಕೆ ಕೈ ಜೋಡಿಸಿದೆ ಎಂದರು. ಯುವ ಸಬಲೀಕರಣಕ್ಕೆ ಸಹಾಯವಾಗಬಲ್ಲ ವೃತ್ತಿ ಮಾರ್ಗದರ್ಶನ, ಕೌಶಲ್ಯ ಅಭಿವೃದ್ಧಿ ತರಬೇತಿ, ಉದ್ಯೋಗಮೇಳ, ಉದ್ಯಮಶೀಲತಾ ಅಭಿವೃದ್ಧಿ ಮತ್ತು ಆರ್ಥಿಕ ಸೇರ್ಪಡೆ ಇವುಗಳ ಕುರಿತು ಮಾಹಿತಿ ನೀಡಲಾಗುವುದು. ಉದ್ಯೋಗಾಕಾಂಕ್ಷಿಗಳಿಗೆ ಅಗತ್ಯವಾದ ನೇರಸಂವಾದ, ನೇಮಕಾತಿ, ವೃತ್ತಿ ಅನ್ವೇಷಣೆಗೆ ಸಾಮಾನ್ಯ ವೇದಿಕೆಯನ್ನು ಈ ಮೇಳ ಒದಗಿಸಲಿದೆ. ಐಟಿ, ಉತ್ಪಾದನೆ, ಬ್ಯಾಂಕಿಂಗ್, ಆರೋಗ್ಯ, ಚಿಲ್ಲರೆ ವ್ಯಾಪಾರ, ಲಾಜಿಸ್ಟಿಕ್ ಮತ್ತು ಸೇವಾ ಕ್ಷೇತ್ರಗಳ ಸುಮಾರು 100 ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿವೆ. ಈ ಮೇಳ ಸುಮಾರು 5000 ಕ್ಕೂ ಹೆಚ್ಚು ಉದ್ಯೋಗಾವಕಾಶಗಳಿಗೆ ವೇದಿಕೆ ಒದಗಿಸಲಿದೆ ಎಂದು ಹೇಳಿದರು. ಉದ್ಯೋಗ ಮೇಳದಂದು ಹ್ಯಾಕಥಾನ್ ಸಹ ಇದೆ. ಕೇವಲ ಓದಿದರೆ ಸಾಲದು. ಜ್ಞಾನ ಮತ್ತು ಬದುಕಿಗಾಗಿ ಓದಬೇಕು. ಅರಿವು ನೀಡಲಾಗುವುದೆಂದು ತಿಳಿಸಿದರು.

> ಕೇಂದ್ರ ಸರ್ಕಾರ ಪ್ರಧಾನಿ ಮೋದಿ ನೇತೃತ್ವದಲ್ಲಿ ಹಲವಾರು ಉದ್ಯೋಗಾವಕಾಶಗಳನ್ನು ಸೃಷ್ಟಿಸಿದೆ. ಪ್ರಧಾನಿಯವರು ಉದ್ಯೋಗದಾತರಾಗಿ ಅಂತ ಪ್ರೇರಣೆ ನೀಡುತ್ತಾರೆ. ಅದಕ್ಕೆ ಪೂರಕವಾಗಿ ನಾವು ಈ ಮೇಳ ಆಯೋಜನೆ ಮಾಡಿದ್ದೇವೆ.
>
> ■ ಡಾ. ಸಿ.ಎನ್. ಅಶ್ವತ್ಥ ನಾರಾಯಣ, ಶಾಸಕ

ಹೊಯ್ಸಳ ಕಾಲೇಜಿಗೆ ಉತ್ತಮ ಫಲಿತಾಂಶ | ಆಡಳಿತ ಮಂಡಳಿಯಿಂದ ಅಭಿನಂದನೆ

ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನ



• **ನೆಲಮಂಗಲ:** ಹೊಯ್ಸಳ ಪಿಯು ಕಾಲೇಜಿನ ದ್ವಿತೀಯ ಪಿಯುಸಿಯ ವಿಜ್ಞಾನ ವಿಭಾಗದಲ್ಲಿ ಬಿಂದು.ಎ ರಾಜ್ಯಕ್ಕೆ ತೃತೀಯ ಸ್ಥಾನ ಪಡೆದರೆ, ವಾಣಿಜ್ಯ ವಿಭಾಗದಲ್ಲಿ ಪ್ರಾರ್ಥನಾ 7ನೇ ಸ್ಥಾನ ಪಡೆದುಕೊಳ್ಳುವ ಮೂಲಕ ಅತ್ಯುತ್ತಮ ಸಾಧನೆ ಮಾಡಿದ್ದಾರೆ.

ನಗರದ ಶಿವನಗರದಲ್ಲಿನ ಹೊಯ್ಸಳ ಪಿಯು ಕಾಲೇಜಿನ ಆವರಣದಲ್ಲಿ ಅತ್ಯುತ್ತಮ ಶ್ರೇಣಿ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಲಾಯಿತು. ಕಾಲೇಜು ಮುಖ್ಯಸ್ಥರು, ಪ್ರಾಂಶುಪಾಲರು, ಶಿಕ್ಷಕರು ವಿದ್ಯಾರ್ಥಿಗಳಿಗೆ ಸಿಹಿ ನೀಡಿ ಅಭಿನಂದನೆ ಸಲ್ಲಿಸಿದ್ದು ಪಟಾಕಿ ಸಿಡಿಸಿ ಸಂಭ್ರಮಿಸಿದರು. ಎಲೆಕ್ಟ್ರೀಷಿಯನ್ ರವರ ಮಗಳು ಬಿಂದು.ಎ ರಾಜ್ಯಕ್ಕೆ ತೃತೀಯ ಸ್ಥಾನ ಪಡೆಯುವ ಮೂಲಕ ಬಹುದೊಡ್ಡ ಸಾಧನೆ ಮಾಡಿದ್ದಾರೆ. ಹೊಯ್ಸಳ ಪಿಯು ಕಾಲೇಜಿನ ವಿಜ್ಞಾನ ವಿಭಾಗದಲ್ಲಿ ಬಿಂದು.ಎ 597,ಗಾನಶ್ರೀ ಕೆ.ಎಸ್ 589,ಚಿತ್ರ ಶ್ರೀ 588, ನಂದಿತಾ.ಎಂ 586,ಮೃದುಲ ಎಂ.ಎಸ್ 585,ರಚನಾ 585,ಪ್ರಣವ್ 582,ಸ್ನೇಹ 581,ದರ್ಶನ್ ಮಂಜುನಾಥ್ 580,ಸೃಜನ್ 580,ಪೂಜಿತಾ 579 ಹಾಗೂ ವಾಣಿಜ್ಯ ವಿಭಾಗದಲ್ಲಿ ಪ್ರಾರ್ಥನಾ.ಜಿ 594,ರಕ್ಷಾ 593,ಪೃಥ್ವಿಕ್ ಜೈನ್ 592,ಭಾವನ.ಆರ್ 589,ವರ್ಷಿಣಿ 589, ಚಿತ್ರ.ಆರ್ 587,ಪ್ರೀತಿ.ಎಂ 587,ಡಿಂಪಲ್ 585,ಪಲ್ಲವಿ.ಜಿ 585,ಸುಲ್ತಾನ 585,ಜೀವಿತ 584,ನಂದಿತಾ 584 ಅಂಕ ಪಡೆದುಕೊಂಡಿದ್ದು, ಒಟ್ಟಾರೆ 374ವಿದ್ಯಾರ್ಥಿಗಳು ವಿಜ್ಞಾನ ಹಾಗೂ ವಾಣಿಜ್ಯ ವಿಭಾಗದಲ್ಲಿ ಶೇ.85ಕ್ಕೂ ಹೆಚ್ಚು ಅಂಕ ಪಡೆದುಕೊಂಡಿದ್ದರೇ, 356ವಿದ್ಯಾರ್ಥಿಗಳು ಪ್ರಥಮಸ್ಥಾನವನ್ನು ಪಡೆದು ಐತಿಹಾಸಿಕ ಸಾಧನೆ ಮಾಡಿದ್ದಾರೆ. ಪಿಯು ವಿದ್ಯಾರ್ಥಿಗಳ ಅತ್ಯುತ್ತಮ ಸಾಧನೆಗೆ ಕಾರಣವಾದ ವಿಜ್ಞಾನ ವಿಭಾಗದ ವಿಷಯ ಮುಖ್ಯಸ್ಥರಾದ ಪೂರ್ಣಿಮಾ,ಅನಿಲ್.ಜಿ, ಹರೀಶ್, ಮಹದೇವಪ್ಪಗೌಡ, ಗೀತಾ, ವಿಶ್ವಾಸ, ವಾಣಿಜ್ಯ ವಿಭಾಗದ ಅಭಿಷೇಕ್, ಮಧುಸೂಧನ್, ಜ್ಞಾನೇಶ್ವರ, ಉಪನ್ಯಾಸಕರಾದ ಶ್ರೀಧರ್,ಐಶ್ವರ್ಯ,ಸುಜಾತಾ, ಕರುಣಾಕರ್, ಹರ್ಷಿತಾ ಸೇರಿದಂತೆ ದ್ವಿತೀಯ ಪಿಯುಸಿ ಶಿಕ್ಷಕ ವರ್ಗದವರಿಗೆ ಪ್ರಾಂಶುಪಾಲ ಗೌರಿಶಂಕರ್ ಹಾಗೂ ಆಡಳಿತ ಮಂಡಳಿ ಗೋಪಾಲ್ ಸೇರಿದಂತೆ ಅನೇಕರು ಅಭಿನಂದನೆ ಸಲ್ಲಿಸಿದರು. ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಡಾ.ಟಿ.ರಾಮಕೃಷ್ಣಪ್ಪ, ಹೊಯ್ಸಳ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಗೋಪಾಲ್, ಉಪ ಪ್ರಾಂಶುಪಾಲರಾದ ಚಿದಾನಂದಗೌಡ ಸೇರಿ ಹಲವರಿದ್ದರು.

ಕಾಲೊನಿಯಲ್ಲಿ ಚರಂಡಿಯೇ ಇಲ್ಲ | ಕ್ರಮಕ್ಕಾಗಿ ಅಧಿಕಾರಿಗಳಿಗೆ ಆಗ್ರಹ

ರಸ್ತೆಯಲ್ಲೇ ಹರಿಯುವ ಚರಂಡಿ ನೀರು





• **ದೊಡ್ಡಬಳ್ಳಾಪುರ:** ತಾಲೂಕಿನ1300 ಜನಸಂಖ್ಯೆ ಹೊಂದಿರುವ ಕಾಡತಿಪ್ಪೂರು ಗ್ರಾಮದಲ್ಲಿ 280 ಕುಟುಂಬದವರು ವಾಸವಾಗಿದ್ದಾರೆ. ಇಲ್ಲಿನ ಜನರಿಗೆ ಮೂಲ ಸೌಲಭ್ಯದ ಜತೆಗೆ ರಸ್ತೆಗೆ ಚರಂಡಿ ಇಲ್ಲದೆ ಕೊಳಚೆ ನೀರು ರಸ್ತೆಯಲ್ಲೇ ಹರಿಯುತ್ತಿದೆ. ಇದರಿಂದಾಗಿ ಇಲ್ಲಿನ ಗ್ರಾಮಸ್ಥರು ಚರಂಡಿ ನಿರ್ಮಾಣಕ್ಕಾಗಿ ಆಗ್ರಹಿಸಿದ್ದಾರೆ.

ಈ ಕಾಲೊನಿಯಲ್ಲಿ ಬಹುತೇಕರು ದಲಿತ ಜನಾಂಗದವರಾಗಿದ್ದಾರೆ. ಕಾಲೊನಿಯಲ್ಲಿ ಚರಂಡಿ ವ್ಯವಸ್ಥೆ ಇಲ್ಲದಿರುವ ಕಾರಣ ಕೊಳಚೆ ನೀರು ರಸ್ತೆಯ ಮೇಲೆಯೇ ಹರಿಯುವುದು. ಈ ಕಾಲೊನಿಯಲ್ಲಿ ಇದುವರೆಗೂ ಚರಂಡಿ ಮಾಡಲು ಅಧಿಕಾರಿಗಳು ಮನಸ್ಸೇ ಮಾಡಿಲ್ಲ, ಬರೀ ಸುಂಕ ವಸೂಲಿಗೆ ಬಂದು ವಾಪಸ್ ಆಗುವ ಅಧಿಕಾರಿಗಳ ವಿರುದ್ಧ ಗ್ರಾಮಸ್ಥರು ಕಿಡಿಕಾರಿದ್ದಾರೆ.

ಚರಂಡಿ ಇಲ್ಲದೆ ನೀರು ನಿಂತಲ್ಲೇ ನಿಂತು ಕೊಳೆತು ವಾಸನೆ ಬಂದಿದೆ. ರಾತ್ರಿ ಆದರೆ ಸಾಕು ಮನೆ ಮುಂದೆ ಕುಳಿತು ಊಟ ಮಾಡಲು ಆಗಲ್ಲ, ಜತೆಗೆ ರಾತ್ರಿ ವೇಳೆ ವಯೋವೃದ್ಧರು ರಸ್ತೆಯಲ್ಲಿ ಓಡಾಡಲು ಸಾಧ್ಯವಾಗುತ್ತಿಲ್ಲ ಎಂದ ದೂರಿದರು. ಕೊಳಚೆ ನೀರಲ್ಲಿ ಕಾಲಿಟ್ಟರೆ ಬೀಳಬೇಕಾಗಿದೆ. ಇನ್ನು ಕೊಳಚೆ ನೀರಿನಿಂದ ಸೊಳ್ಳೆ ಹಾಗೂ ಹಾವು, ಚೇಳು ಕಾಟ ಹೆಚ್ಚಾಗಿದೆ. ಸಣ್ಣ ಸಣ್ಣ ಮಕ್ಕಳಿಗೆ ಸಾಂಕ್ರಾಮಿಕ ರೋಗ ಹರಡುವ ಭೀತಿ ಇದೆ. ಮಳೆಗಾಲದಲ್ಲಿ ಕೊಳಚೆ ನೀರು ನೇರವಾಗಿ ಮನೆಗೆ ನುಗ್ಗುತ್ತದೆ. ಹಾಗಾಗಿ ಪಂಚಾಯತಿ ಅಧಿಕಾರಿಗಳು ರಸ್ತೆ ಮಾಡಿಕೊಡಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಅಲ್ಲದೆ ಪಂಚಾಯತಿಯಲ್ಲಿ ಸಂಗ್ರಹ ಆಗುವ ತೆರಿಗೆ ಹಣದಲ್ಲಿ ದಲಿತ ಕಾಲೊನಿ ಅಭಿವೃದ್ಧಿಗೆ ಎಂದೆ ಇಂತಿಷ್ಟು ಹಣ ಎಂದು ತೆಗೆದು ಅಭಿವೃದ್ಧಿ ಮಾಡಬೇಕು. ಆದರೆ, ಇಲ್ಲಿನ ಅಧಿಕಾರಿಗಳು ಈ ಸಮಸ್ಯೆಗೆ ಕಿವಿ ಕೊಡದೆ ಇರುವುದು ನೋವು ತಂದಿದೆಂದಿದ್ದಾರೆ.

ಮೀನಾಬ್ ಶಾಲೆ ಮೇಲೆ ನಡೆದ ದಾಳಿಯಲ್ಲಿ ಹತ್ಯೆಯಾದ ಮಕ್ಕಳಿಗೆ ಗೌರವ ನೀಡಿದ ಇರಾನ್

ಸಂತ್ರಸ್ತರ ಚಿತ್ರಗಳನ್ನು ಹೊತ್ತ ಇರಾನ್ ನಿಯೋಗ



• **ಇಸ್ಲಾಮಾಬಾದ್:** ಅಮೆರಿಕದೊಂದಿಗೆ ಶಾಂತಿ ಮಾತುಕತೆ ನಡೆಸಲು ಪಾಕಿಸ್ತಾನಕ್ಕೆ ಪ್ರಯಾಣಿಸುತ್ತಿದ್ದ ಇರಾನ್ ನಿಯೋಗ ಶನಿವಾರ ತನ್ನ ವಿಮಾನದಲ್ಲಿ ಮೀನಾಬ್ ಶಾಲೆಯ ಮೇಲಿನ ದಾಳಿಗೆ ಬಲಿಯಾದವರ ಭಾವಚಿತ್ರಗಳು ಮತ್ತು ವೈಯಕ್ತಿಕ ವಸ್ತುಗಳನ್ನು ಪ್ರದರ್ಶಿಸಿತು. ಈ ಮೂಲಕ ಮಾತುಕತೆ ಆರಂಭಕ್ಕೂ ಮೊದಲೇ ಅಮೆರಿಕನ್ನರಿಗೆ ಪ್ರಬಲ ಸಂದೇಶ ರವಾನಿಸುವ ಪ್ರಯತ್ನ ಮಾಡಿದೆ.

ಸಾಂಕೇತಿಕ ಪ್ರಯಾಣ: ರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಗರ್ ಗಾಲಿಬಾಫ್ ವಿಮಾನದ ಒಳಗಿನ ಚಿತ್ರಗಳನ್ನು ಹಂಚಿಕೊಂಡಿದ್ದು, ನಿಯೋಗ ಆ ವಿಮಾನಕ್ಕೆ ''ಮೀನಾಬ್ 168'' ಎಂದು ಹೆಸರಿಸಿದೆ. ಫೆ.28 ರಂದು ಮೀನಾಬ್‌ನ ಶಜರೆ ತಯ್ಯೆಬೆ ಪ್ರಾಥಮಿಕ ಶಾಲೆಯ ಮೇಲೆ ನಡೆದ ದಾಳಿಯಲ್ಲಿ ಮೃತಪಟ್ಟ ಮಕ್ಕಳು ಮತ್ತು ಸಿಬ್ಬಂದಿಗೆ ಸೇರಿದ ಭಾವಚಿತ್ರಗಳು, ರಕ್ತಸಿಕ್ತ ಶಾಲಾ ಬ್ಯಾಗ್‌ಗಳು, ಬೂಟುಗಳು ಮತ್ತು ಬಿಳಿ ಹೂವುಗಳನ್ನು ವಿಮಾನದ ಸೀಟುಗಳಲ್ಲಿ ಇರಿಸಲಾಗಿತ್ತು. ಗಾಲಿಬಾಫ್ ಈ ಸಂತ್ರಸ್ತರನ್ನು ತಮ್ಮ ಈ ಪ್ರಯಾಣದ ''ಸಹ ಪ್ರಯಾಣಿಕರು'' ಎಂದು ಕರೆದಿದ್ದಾರೆ.

ರಾಜತಾಂತ್ರಿಕ ನಿಲುವು: ಪಾಕಿಸ್ತಾನಕ್ಕೆ ಆಗಮಿಸಿದ ನಂತರ ಮಾತನಾಡಿದ ಗಾಲಿಬಾಫ್, ಇರಾನ್ ಉತ್ತಮ ಉದ್ದೇಶಗಳೊಂದಿಗೆ ಮಾತುಕತೆಗೆ ಪ್ರವೇಶಿಸಿದೆ, ಆದರೆ ನಮಗೆ ಯಾರ ಮೇಲೂ ನಂಬಿಕೆಯಿಲ್ಲ ಎಂದು ತಿಳಿಸಿದರು. ಅಮೆರಿಕದೊಂದಿಗಿನ ಮಾತುಕತೆಗಳಲ್ಲಿನ ಹಿಂದಿನ ವೈಫಲ್ಯಗಳು ಮತ್ತು ಒಪ್ಪಂದದ ಉಲ್ಲಂಘನೆಗಳಿಂದ ತಾವು ಅವರ ಬಗ್ಗೆ ನಂಬಿಕೆ ಕಳೆದುಕೊಂಡಿರುವುದಾಗಿ ಹೇಳಿದ್ದಾರೆ. ಇರಾನ್ ನಿಯೋಗದಲ್ಲಿ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಮತ್ತು ಕೇಂದ್ರ ಬ್ಯಾಂಕ್ ಗವರ್ನರ್ ಅಬ್ದೊಲ್ನಾಸರ್ ಹೆಮ್ಮತಿ ಕೂಡ ಇದ್ದಾರೆ.

ಸಂಘರ್ಷದ ಹಿನ್ನೆಲೆ: ಕನಿಷ್ಠ 165 ಜನರನ್ನು ಬಲಿ ಪಡೆದ ಮತ್ತು 100 ಕ್ಕೂ ಹೆಚ್ಚು ಜನರನ್ನು ಗಾಯಗೊಳಿಸಿದ ಮೀನಾಬ್ ದಾಳಿ, ಇರಾನ್‌ನ ವಾದಕ್ಕೆ ಪ್ರಮುಖ ಕೇಂದ್ರಬಿಂದುವಾಗಿದೆ. ಈ ದಾಳಿಯನ್ನು ಅಮೆರಿಕ-ಇಸ್ರೇಲ್ ಪಡೆಗಳು ನಡೆಸಿವೆ ಎಂದು ಇರಾನ್ ಆರೋಪಿಸಿದರೆ, ಅಮೆರಿಕ ಈ ವಾದವನ್ನು ತಿರಸ್ಕರಿಸಿದೆ. ಇರಾನ್‌ನ ಯುದ್ಧಸಾಮಗ್ರಿಗಳೇ ಇದಕ್ಕೆ ಕಾರಣ, ಎಂದು ಯುಎಸ್ ಹೇಳಿಕೊಂಡಿದೆ. ಇಸ್ಲಾಮಾಬಾದ್ ಮಾತುಕತೆಗಳು ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಜಾರಿಗೆ ಬಂದಿರುವ ಎರಡು ವಾರಗಳ ಕದನ ವಿರಾಮದ ಸಮಯದಲ್ಲಿ ನಡೆಯುತ್ತಿವೆ.

ಚೇತರಿಸುತ್ತಿರುವ ಇರಾನ್ ಸರ್ವೋಚ್ಚ ನಾಯಕ ಮೊಜ್ತಬಾ?

• **ಟೆಹ್ರಾನ್:** ಯುದ್ಧದ ಆರಂಭದ ದಿನಗಳಲ್ಲೇ ಇರಾನ್‌ನ ಈಗಿನ ಸರ್ವೋಚ್ಚ ನಾಯಕ ಮತ್ತು ಆಯತೊಲ್ಲಾ ಅಲಿ ಖಮೇನಿ ಅವರ ಪುತ್ರ ಮೊಜ್ತಬಾ ಖಮೇನಿಯವರ ಮುಖ ಮತ್ತು ಕಾಲಿಗೆ ಗಂಭೀರ ಗಾಯಗಳಾಗಿದ್ದವು. ಆದರಿಂದ ಚೇತರಿಸಿಕೊಳ್ಳದ ಹಿನ್ನೆಲೆ ಮೊಜ್ತಬಾ ಅವರನ್ನು ನೂತನ ಸರ್ವೋಚ್ಚ ನಾಯಕನೆಂದು ಘೋಷಿಸಿದರೂ ಅವರು ಸಾರ್ವಜನಿಕವಾಗಿ ಕಾಣಿಸಿಕೊಂಡಿಲ್ಲ, ಮೊಜ್ತಬಾ ಅವರ ಆರೋಗ್ಯ ಸ್ಥಿತಿ ಹೇಗಿದೆ? ಮತ್ತು ಅವರು ಎಲ್ಲಿದ್ದಾರೆಂಬ ಪ್ರಶ್ನೆಗಳು ಹೆಚ್ಚಾಗುತ್ತಿವೆ. ತಂದೆಯನ್ನು ಬಲಿ ತೆಗೆದುಕೊಂಡಿದ್ದ ಅಮೆರಿಕದ ಬಾಂಬ್ ದಾಳಿಯಿಂದ ಪುತ್ರ ಮೊಜ್ತಬಾಗೂ ಗಂಭೀರ ಗಾಯವನ್ನು ಉಂಟುಮಾಡಿದೆ ಎನ್ನಲಾಗುತ್ತಿದೆ.



ಮೊಜ್ತಬಾರ ಆಂತರಿಕ ಮೂಲಗಳ ಪ್ರಕಾರ, ತಂದೆ ಅಲಿ ಖಮೇನಿ ಮೃತಪಟ್ಟಿದ್ದ ವೈಮಾನಿಕ ದಾಳಿಯಲ್ಲಾದ ಗಂಭೀರ ಗಾಯಗಳಿಂದ ಇನ್ನೂ ಚೇತರಿಸಿಕೊಳ್ಳುತ್ತಿದ್ದಾರೆ. ಟೆಹ್ರಾನ್‌ನಲ್ಲಿನ ಸರ್ವೋಚ್ಚ ನಾಯಕರ ನಿವಾಸದ ಮೇಲೆ ಅಮೆರಿಕ ಬಾಂಬ್ ದಾಳಿ ನಡೆಸಿದ್ದಾಗ, ಮೊಜ್ತಬಾ ಮುಖ ಹಾಗೂ ಒಂದು ಅಥವಾ ಎರಡೂ ಕಾಲುಗಳಿಗೆ ಗಂಭೀರ ಗಾಯಗಳಾಗಿವೆ. ದಾಳಿ ಪರಿಣಾಮ ಅವರ ಮುಖ ವಿಕೃತಗೊಂಡಿದೆ. ಆದಾಗ್ಯೂ, 56 ವರ್ಷದ ಮೊಜ್ತಬಾ ಮಾನಸಿಕವಾಗಿ ಚುರುಕಾಗಿದ್ದು, ಪ್ರಮುಖ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ ಎಂದು ತಿಳಿದುಬಂದಿದೆ.

ತಾತ್ಕಾಲಿಕ ಕದನ ವಿರಾಮ ಘೋಷಣೆ ಬಳಿಕ ಬಂದ ಮೊದಲ ಎಲ್‌ಪಿಜಿ ಹಡಗು

ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಮಧ್ಯೆ ಎಲ್‌ಪಿಜಿ ಹೊತ್ತ ಮತ್ತೊಂದು ಭಾರತದ ಹಡಗು, ಜಾಗ್ ವಿಕ್ರಮ್, ಹಾರ್ಮುಜ್ ಜಲಸಂಧಿಯನ್ನು ದಾಟಿದೆ. ಅಮೆರಿಕ ಮತ್ತು ಇರಾನ್ ನಡುವೆ 2 ವಾರಗಳ ತಾತ್ಕಾಲಿಕ ಕದನ ವಿರಾಮ ಘೋಷಿಸಿದ ಬಳಿಕ ಹಾರ್ಮುಜ್ ದಾಟಿದ ಮೊದಲ ಭಾರತೀಯ ಹಡಗು ಎಂದು ಹಡಗು ಇದಾಗಿದೆ. ಶುಕ್ರವಾರ ರಾತ್ರಿ ಮತ್ತು ಶನಿವಾರ ಬೆಳಗ್ಗೆ ನಡುವೆ ಎಲ್ ಪಿಜಿ ಹೊತ್ತ ಭಾರತದ ಕಾರ್ಯತಂತ್ರದ ಜಲಮಾರ್ಗದ ಮೂಲಕ ಚಲಿಸಿತು ಮತ್ತು ಶನಿವಾರ ಮಧ್ಯಾಹ್ನ ಜಲಸಂಧಿಯ ಪೂರ್ವಕ್ಕೆ ಒಮನ್ ಕೊಲ್ಲಿಯಲ್ಲಿದ್ದು, ಪೂರ್ವಕ್ಕೆ ಸಾಗುತ್ತಿದೆ.



ಹಾರ್ಮುಜ್ ದಾಟಿದ 2 ಅಮೆರಿಕ ಯುದ್ಧ ನೌಕೆ

ಯುದ್ಧ ಶಾಂತಿ ಮಾತುಕತೆ ಮಧ್ಯೆ, ಎರಡು ಅಮೆರಿಕ ಯುದ್ಧನೌಕೆಗಳು ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋಗಿವೆ ಎಂದು ವರದಿಯಾಗಿದೆ. ಇದು ಇರಾನ್‌ನೊಂದಿಗಿನ ಯುದ್ಧ ಪ್ರಾರಂಭವಾದ ನಂತರದ ಮೊದಲ ಸಾಗಣೆಯಾಗಿದೆ. ಅಮೆರಿಕದ ನೌಕಾಪಡೆಯ ಮಾರ್ಗದರ್ಶಿ ಕ್ಷಿಪಣಿ ವಿಧ್ವಂಸಕಗಳು ಜಲಸಂಧಿಯ ಮೂಲಕ ಹಾದು ಹೋದವು. ಯಾವುದೇ ಸಮಸ್ಯೆಗಳ ಬಗ್ಗೆ ವರದಿಯಾಗಿಲ್ಲ ಎಂದು ಅಮೆರಿಕದ ಮೂವರು ಅಧಿಕಾರಿಗಳನ್ನು ಉಲ್ಲೇಖಿಸಿ ದಿ ವಾಲ್ ಸ್ಟ್ರೀಟ್ ಜರ್ನಲ್ ವರದಿ ಮಾಡಿದೆ. ಈ ಕಾರ್ಯಾಚರಣೆಯನ್ನು ಟೆಹ್ರಾನ್ ಅಧಿಕಾರಿಗಳೊಂದಿಗೆ ಸಮನ್ವಯಗೊಳಿಸಲಾಗಿಲ್ಲ ಎಂದು ಅಮೆರಿಕದ ಮಾಧ್ಯಮ ಸಂಸ್ಥೆ ಆಕ್ಸಿಯೋಸ್ ಹೇಳಿದೆ.



ಹಾರ್ಮುಜ್ ಜಲಸಂಧಿ ಶೀಘ್ರವೇ ಮುಕ್ತ: ಟ್ರಂಪ್

• **ವಾಷಿಂಗ್ಟನ್:** ಪಶ್ಚಿಮ ಏಷ್ಯಾ ಯುದ್ಧವನ್ನು ಕೊನೆಗಾಣಿಸುವ ನಿಟ್ಟಿನಲ್ಲಿ, ಇರಾನ್ ಜೊತೆಗಿನ ಶಾಂತಿ ಮಾತುಕತೆಗಳು ಪಾಕಿಸ್ತಾನದಲ್ಲಿ ಆರಂಭವಾಗಿವೆ, ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಇದೇ ವೇಳೆ ಹಾರ್ಮುಜ್ ಜಲಸಂಧಿಯಲ್ಲಿ ಶೀಘ್ರದಲ್ಲೇ ಸಂಚಾರ ಸಹಜವಾಗಲಿದೆ, ಎಂದು ಅವರು ಪ್ರತಿಪಾದಿಸಿದ್ದಾರೆ.

ಹಾರ್ಮುಜ್ ಜಲಸಂಧಿ ಮತ್ತು ಇಂಧನ ಪ್ರಭಾವ: ಇರಾನ್‌ನಿಂದ ನಿರ್ಬಂಧಿಸಲ್ಪಟ್ಟಿರುವ ಹಾರ್ಮುಜ್ ಜಲಸಂಧಿಗೆ ಪರ್ಯಾಯ ಮಾರ್ಗಗಳನ್ನು ಜಾಗತಿಕ ತೈಲ ಸಾಗಣೆ ಸಂಸ್ಥೆಗಳು ಈಗಾಗಲೇ ಕಂಡು ಕೊಳ್ಳುತ್ತಿವೆ ಎಂದು ಅಧ್ಯಕ್ಷ ಟ್ರಂಪ್ ತಿಳಿಸಿದ್ದಾರೆ. ವಿಶ್ವದ ಕಚ್ಚಾ ತೈಲದ ಐದನೇ ಒಂದು ಭಾಗವು ಈ ಕಾರಿಡಾರ್ ಮೂಲಕ ಹಾದುಹೋಗುತ್ತದೆಯಾದರೂ, ಹಲವು ರಾಷ್ಟ್ರಗಳು ಇತರ ಇಂಧನ ಆಯ್ಕೆಗಳನ್ನು ಅನ್ವೇಷಿಸುತ್ತಿವೆ. ಅಮೆರಿಕದ ಬಳಿ ಸಾಕಷ್ಟು ತೈಲ ದಾಸ್ತಾನು ಇದ್ದು, ಅನೇಕ ಖಾಲಿ ಟ್ಯಾಂಕರ್‌ಗಳು ತೈಲವನ್ನು ತುಂಬಿಸಿಕೊಳ್ಳಲು ಅಮೆರಿಕದತ್ತ ಬರುತ್ತಿವೆ ಎಂದಿದ್ದಾರೆ.



ರಾಜತಾಂತ್ರಿಕ ಎಚ್ಚರಿಕೆ

ಇಸ್ಲಾಮಾಬಾದ್ ಮಾತುಕತೆಗಳು ಫಲ ನೀಡದಿದ್ದರೆ ಅಮೆರಿಕ ತನ್ನ ಹಾದಿ ಬದಲಿಸಲು ಸಿದ್ಧವಾಗಿದೆ, ಎಂದು ಟ್ರಂಪ್ ಎಚ್ಚರಿಸಿದ್ದಾರೆ. ಇರಾನ್ ಅನ್ನು ವಿಫಲ ರಾಷ್ಟ್ರ ಎಂದು ಕರೆದ ಅವರು, ಜಲಸಂಧಿಯ ಮುಕ್ತ ಸಂಚಾರದ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಉಭಯ ದೇಶಗಳು ರಚನಾತ್ಮಕವಾಗಿ ತೊಡಗಿಸಿಕೊಳ್ಳಬೇಕೆಂದು ಪಾಕಿಸ್ತಾನದ ವಿದೇಶಾಂಗ ಸಚಿವರು ಆಗ್ರಹಿಸಿದ್ದಾರೆ. ಅಂತರಾಷ್ಟ್ರೀಯ ಇಂಧನ ಮಾರುಕಟ್ಟೆಗಳು ಮತ್ತು ಜಾಗತಿಕ ಹಡಗು ಸಾಗಣೆ ಮಾರ್ಗಗಳ ಮೇಲೆ ಯುದ್ಧ ಪ್ರಭಾವ ಬೀರಿದ ಹಿನ್ನೆಲೆಯಲ್ಲಿ ಈ ಚರ್ಚೆಗಳು ಮಹತ್ವ ಪಡೆದಿವೆ.

ಇರಾನ್‌ಗೆ ಶಸ್ತ್ರಾಸ್ತ್ರ ಕಳುಹಿಸಲು ಚೀನಾ ಸಿದ್ಧತೆ

» ಅಮೆರಿಕ ಗುಪ್ತಚರ ಸಂಸ್ಥೆಯಿಂದ ವರದಿ
» ಯುದ್ಧ ಸ್ಥಗಿತ ಅನಿಶ್ಚಿತ; ಮಧ್ಯಪ್ರಾಚ್ಯ ಉದ್ವಿಗ್ನತೆ ತೀವ್ರಗೊಳ್ಳುವ ಭೀತಿ
» ಶತ್ರು ವಿಮಾನ ನಿರೋಧಕ ಕ್ಷಿಪಣಿ

• **ವಾಷಿಂಗ್ಟನ್:** ಅಮೆರಿಕ ಮತ್ತು ಇರಾನ್ ನಡುವಿನ ಎರಡು ವಾರಗಳ ಕದನ ವಿರಾಮ ಒಪ್ಪಂದ ಅತ್ಯಂತ ದುರ್ಬಲ ಸ್ಥಿತಿಯಲ್ಲಿದ್ದು, ಸಂಘರ್ಷ ಮತ್ತಷ್ಟು ಉಲ್ಬಣಗೊಳ್ಳುವ ಸಾಧ್ಯತೆ ತಳ್ಳಿಹಾಕುವಂತಿಲ್ಲ, ಈ ಮಧ್ಯೆ, ಚೀನಾ ಶೀಘ್ರದಲ್ಲೇ ಇರಾನ್‌ಗೆ ಹೊಸ ವಾಯು ರಕ್ಷಣಾ ವ್ಯವಸ್ಥೆಗಳನ್ನು ಕಳುಹಿಸಲಿದೆ ಎಂದು ಅಮೆರಿಕದ ಗುಪ್ತಚರ ಇಲಾಖೆ ತಿಳಿಸಿದ್ದು, ಸಿಎನ್‌ಎನ್ ವರದಿ ಮಾಡಿದೆ.

ಚೀನಾ ಇರಾನ್‌ಗೆ ಮ್ಯಾನ್‌ಪ್ಯಾಡ್ ಎಂದು ಕರೆಯಲ್ಪಡುವ ಭುಜದ ಮೇಲೆ ಇರಿಸಿ ಹಾರಿಸಬಹುದಾದ ಶತ್ರು ವಿಮಾನ ನಿರೋಧಕ ಕ್ಷಿಪಣಿ ವ್ಯವಸ್ಥೆಗಳನ್ನು ಕಳಿಸಲು ಸಿದ್ಧತೆ ನಡೆಸಿದೆ ಎಂದು ಹೇಳಲಾಗಿದೆ. ಇದು ಮುಂಬರುವ ಕೆಲವು ವಾರಗಳಲ್ಲಿ ನಡೆಯಬಹುದೆಂದು ಅಂದಾಜಿಸಲಾಗಿದೆ.

ಚೀನಾ ನಿರಾಕರಣೆ

ಈ ಗುಪ್ತಚರ ವರದಿಯನ್ನು ಚೀನಾ ಸ್ಪಷ್ಟವಾಗಿ ನಿರಾಕರಿಸಿದೆ. ವಾಷಿಂಗ್ಟನ್‌ನಲ್ಲಿರುವ ಚೀನಾ ರಾಯಭಾರ ಕಚೇರಿ, ಚೀನಾ ಯಾವತ್ತೂ ಯಾವ ಸಂಘರ್ಷ ಪಕ್ಷಕ್ಕೂ ಶಸ್ತ್ರಾಸ್ತ್ರಗಳನ್ನು ಒದಗಿಸಿಲ್ಲ. ಅಮೆರಿಕ ನಿರಾಧಾರ ಆರೋಪಗಳನ್ನು ಮಾಡುವುದನ್ನು ನಿಲ್ಲಿಸಬೇಕು. ಉದ್ವಿಗ್ನತೆ ತಗ್ಗಿಸಲು ಎಲ್ಲ ಪಕ್ಷಗಳೂ ಪ್ರಯತ್ನಿಸಬೇಕು ಎಂದು ಹೇಳಿಕೆ ನೀಡಿದೆ.

ಕಿರುಸುದ್ದಿ

ಧುರಂಧರ್ 2 ಗೆಲುವು: ಆರೆಸ್ಸೆಸ್ ಕಚೇರಿಗೆ ರಣವೀರ್ ಸಿಂಗ್ ಭೇಟಿ

• **ನಾಗ್ಪುರ:** ಬಾಲಿವುಡ್ ನಟ ರಣವೀರ್ ಸಿಂಗ್ ನಟಿಸಿರುವ ಆದಿತ್ಯ ಧರ್ ನಿರ್ದೇಶನ ಮಾಡಿದ ಧುರಂಧರ್ 2 ಸಿನಿಮಾ ಕಳೆದ ತಿಂಗಳು ಬಿಡುಗಡೆ ಆಗಿದ್ದು ಎಲ್ಲೆಡೆ ಭಾರೀ ಪ್ರಶಂಸೆಗೆ ಪಾತ್ರವಾಗುತ್ತಿದೆ. ಈ ಬೆನ್ನಲ್ಲೆ ನಟ ರಣವೀರ್ ಸಿಂಗ್ ಆರ್‌ಎಸ್‌ಎಸ್ ಕಚೇರಿಗೆ ಭೇಟಿ ನೀಡಿ, ಆರ್‌ಎಸ್‌ಎಸ್ ಸರಸಂಘಚಾಲಕ್ ಮೋಹನ್ ಭಾಗವತ್ ಅವರನ್ನು ಭೇಟಿ ಮಾಡಿದ್ದಾರೆ. ಇದೇವೇಳೆ ನಾಗ್ಪುರದ ರೇಶಿಮ್‌ಬಾಗ್‌ನಲ್ಲಿರುವ ಡಾ.ಹೆಡ್ಗೆವಾರ್ ಸ್ಮೃತಿ ಮಂದಿರಕ್ಕೆ ಭೇಟಿ ನೀಡಿದ ಸಿಂಗ್, ಆರ್‌ಎಸ್‌ಎಸ್ ಸಂಸ್ಥಾಪಕ ಕೆ.ಬಿ ಹೆಡ್ಗೆವಾರ್ ಮತ್ತು ಎಂಎಸ್ ಗೋಲ್ವಾಲ್ಕರ್ ಅವರ ಸ್ಮಾರಕಗಳಿಗೆ ಪುಷ್ಪ ನಮನ ಸಲ್ಲಿಸಿದ್ದಾರೆ.ಈ ವೇಳೆ ಆರ್‌ಎಸ್‌ಎಸ್ ಪ್ರತಿನಿಧಿಗಳು ಅವರಿಗೆ ಸ್ಮೃತಿ ಮಂದಿರದ ಇತಿಹಾಸ ತಿಳಿಸಿಕೊಟ್ಟಿದ್ದಾರೆ. ಅವರು ಸುಮಾರು 1.5 ಗಂಟೆಗಳ ಕಾಲ ಕಳೆದಿದ್ದು, ರಣವೀರ್ ಮೋಹನ್ ಭಾಗವತ್ ಅವರನ್ನು ಭೇಟಿ ಮಾಡಿ ತಮ್ಮ ಚಿತ್ರದ ಬಗ್ಗೆ ಚರ್ಚಿಸಿದ್ದಾರೆ ಎಂದು ವರದಿಯಾಗಿದೆ.

ಕೇರಳ ಸರ್ಕಾರಕ್ಕೆ ಗಡುವು ನೀಡಿದ ಹೈ

» ಕಾಸರಗೋಡು ತಾಲ್ಲೂಕಿನಲ್ಲಿ ಕನ್ನಡ ಬಳಕೆ ಅರ್ಜಿ
» ಎರಡು ತಿಂಗಳಲ್ಲಿ ತೀರ್ಮಾನಿಸಿ

• **ಕೊಚ್ಚಿ:** ಕಾಸರಗೋಡು ತಾಲ್ಲೂಕಿನಲ್ಲಿ ಅಧಿಕೃತ ವ್ಯವಹಾರಗಳಲ್ಲಿ ಕನ್ನಡ ಭಾಷೆಯ ಬಳಕೆಗೆ ಸಂಬಂಧಿಸಿದ ಮನವಿಯನ್ನು ಎರಡು ತಿಂಗಳೊಳಗೆ ಪರಿಶೀಲಿಸಿ ತೀರ್ಮಾನಕ್ಕೆ ಗೊಳ್ಳುವಂತೆ ಕೇರಳ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಸೂಚಿಸಿದೆ. ಮುಖ್ಯ ನ್ಯಾ.ಸೌಮೆನ್ ಸೇನ್ ಹಾಗೂ ನ್ಯಾ.ಶ್ಯಾಮ್ ಕುಮಾರ್ ವಿ.ಎಂ. ಅವರನ್ನೊಳಗೊಂಡ ಪೀಠವು ಕಾಸರಗೋಡು ಮೂಲದ ವಕೀಲರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಿಚಾರಣೆ ನಡೆಸಿ ಈ ಆದೇಶ ನೀಡಿದೆ. ಅರ್ಜಿದಾರರ ವಾದದ ಪ್ರಕಾರ, ಕಾಸರಗೋಡು ಮತ್ತು ಮಂಜೇಶ್ವರ ತಾಲ್ಲೂಕುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಲವು ಸರ್ಕಾರಿ ಕಚೇರಿಗಳು ಕನ್ನಡದಲ್ಲಿ ಸಲ್ಲಿಸಲಾದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ ಹಾಗೂ ಅವುಗಳನ್ನು ಪ್ರಕ್ರಿಯೆಗೊಳಿಸುವುದಿಲ್ಲ ಎಂಬುದು ಬೆಳಕಿಗೆ ಬಂದಿದೆ.

1982ರ ಮಾ.5ರಂದು ಕಣ್ಣೂರು ಜಿಲ್ಲೆಯ ಜಿಲ್ಲಾಧಿಕಾರಿ ಹೊರಡಿಸಿದ್ದ ಸುತ್ತೋಲೆಯಲ್ಲಿ ಆಗಿನ ಕಾಸರಗೋಡು ತಾಲ್ಲೂಕನ್ನು ಕನ್ನಡ ಭಾಷಾಭಿಮಾನಿಗಳ ಪ್ರದೇಶವೆಂದು ಘೋಷಿಸಿ, ಅಧಿಕೃತ ಪತ್ರ ವ್ಯವಹಾರಗಳಲ್ಲಿ ಕನ್ನಡ ಬಳಕೆಗೆ ಅನುಮತಿ ನೀಡಲಾಗಿತ್ತು. ಆದರೆ, ಈ ನಿರ್ದೇಶನಗಳು ಜಾರಿಗೆ ಬರದೆ ಉಳಿದಿವೆ ಎಂದು ಅರ್ಜಿದಾರರು ದೂರಿದ್ದಾರೆ. ಈ ಸಂಬಂಧ ಅರ್ಜಿದಾರರು ಜನವರಿಯಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸಿ, ಸಂಬಂಧಿತ ಎಲ್ಲಾ ಇಲಾಖೆಗಳಿಗೆ ಅಗತ್ಯ ಸೂಚನೆ ನೀಡುವಂತೆ ಕೋರಿದ್ದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲವೆಂದು ತಿಳಿಸಿದ್ದಾರೆ.

ಸಂಸತ್ ಆವರಣದಲ್ಲಿ ಮೋದಿ-ರಾಗಾ ಅಪರೂಪದ ಸಂಭಾಷಣೆ



• **ಹೊಸದಿಲ್ಲಿ:** ಪ್ರಧಾನಮಂತ್ರಿ ನರೇಂದ್ರ ಮೋದಿ ಶನಿವಾರ ಸಂಸತ್ತಿನ ಆವರಣದಲ್ಲಿ ತಮ್ಮ ಕಾರನ್ನು ನಿಲ್ಲಿಸಿ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಕೆಲಕಾಲ ಮಾತುಕತೆ ನಡೆಸಿದ್ದು ಗಮನ ಸೆಳೆಯಿತು.

ಇಬ್ಬರೂ ನಾಯಕರು ತಮ್ಮ ಮುಂದಿನ ಕಾರ್ಯಕ್ರಮಗಳಿಗೆ ತೆರಳುವ ಮುನ್ನ ಸೌಜನ್ಯಯುತವಾಗಿ ಮಾತನಾಡುತ್ತಿರುವ ದೃಶ್ಯಗಳು ಕಂಡುಬಂದವು. ಪ್ರಧಾನಮಂತ್ರಿ ಸಂಸತ್ ಸಂಕೀರ್ಣಕ್ಕೆ ಆಗಮಿಸುತ್ತಿದ್ದಾಗ ಈ ಅನೌಪಚಾರಿಕ ಸಂವಹನ ನಡೆದಿದೆ. ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷ ಕಾಂಗ್ರೆಸ್‌ನ ಉನ್ನತ ನಾಯಕರ ನಡುವಿನ ಅಪರೂಪದ ನೇರ ಮಾತುಕತೆ, ಎಂದು ಅನೇಕರು ಬಣ್ಣಿಸಿದ್ದಾರೆ. ಯಾವ ವಿಚಾರದ ಕುರಿತು ಈ ಇಬ್ಬರೂ ಮಾತನಾಡಿದ್ದಾರೆ ಎಂಬುದು ಬಹಿರಂಗವಾಗಿಲ್ಲ, ಸಮಾಜ ಸುಧಾರಕ ಮಹಾತ್ಮ ಜ್ಯೋತಿಬಾ ಫುಲೆ ಅವರ 200ನೇ ಜನ್ಮದಿನದ ಅಂಗವಾಗಿ ಪಾರ್ಲಿಮೆಂಟ್ ಆವರಣದಲ್ಲಿರುವ ಪ್ರೇರಣಾ ಸ್ಥಳಕ್ಕೆ ಆಗಮಿಸಿದ ಪ್ರಧಾನಿ ಮೋದಿ ಪುಷ್ಪ ನಮನ ಸಲ್ಲಿಸಿದರು. ಶಿಕ್ಷಣ ಮತ್ತು ಸಾಮಾಜಿಕ ನ್ಯಾಯಕ್ಕೆ ಫುಲೆ ಅವರು ನೀಡಿದ ಕೊಡುಗೆಗಳನ್ನು ಗೌರವಿಸಲು ಈ ಕಾರ್ಯಕ್ರಮದಲ್ಲಿ ಹಲವಾರು ಗಣ್ಯರು ಭಾಗವಹಿಸಿದ್ದರು.

ಪ್ರತ್ಯೇಕ ಉಗ್ರ ವಿರೋಧಿ ಕಾರ್ಯಾಚರಣೆ: ಇಬ್ಬರ ಸೆರೆ

• **ಡೆಹ್ರಾಡೂನ್:** ಭಯೋತ್ಪಾದನಾ ಚಟುವಟಿಕೆಗಳು ಮತ್ತು ದೇಶವಿರೋಧಿ ಗುಂಪುಗಳೊಂದಿಗೆ ಸಂಪರ್ಕ ಹೊಂದಿದ್ದ ಆರೋಪದ ಮೇಲೆ ಡೆಹ್ರಾಡೂನ್ ಮತ್ತು ಭುವನೇಶ್ವರದಲ್ಲಿ ಕಾನೂನು ಜಾರಿ ಸಂಸ್ಥೆಗಳು ನಡೆಸಿದ ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ ಇಬ್ಬರನ್ನು ಬಂಧಿಸಿವೆ.

ಡೆಹ್ರಾಡೂನ್‌ನಲ್ಲಿ ಗೂಢಚರ್ಯೆ: ಸರ್ಕಾರಿ ಮತ್ತು ರಕ್ಷಣಾ ಸಂಸ್ಥೆಗಳ ಛಾಯಾಚಿತ್ರಗಳನ್ನು ಪಾಕಿಸ್ತಾನದ ಹ್ಯಾಂಡ್ಲರ್‌ಗಳಿಗೆ ಕಳುಹಿಸುತ್ತಿದ್ದ ಆರೋಪದ ಮೇಲೆ ಉತ್ತರಾಖಂಡ್ ವಿಶೇಷ ಕಾರ್ಯ ಪಡೆ (ಎಸ್‌ಟಿಎಫ್) ವಿಕ್ರಾಂತ್ ಕಶ್ಯಪ್ ಎಂಬಾತನನ್ನು ಬಂಧಿಸಿದೆ. ಪಾಕಿಸ್ತಾನಿ ಭಯೋತ್ಪಾದಕ ಶಹಜಾದ್ ಭಟ್ಟಿ ಸೂಚನೆಯಂತೆ ಕಶ್ಯಪ್ ಕಾರ್ಯನಿರ್ವಹಿಸುತ್ತಿದ್ದ ಎಂದು ಹಿರಿಯ ಪೊಲೀಸ್ ಅಧೀಕ್ಷಕ ಅಜಯ್ ಸಿಂಗ್ ತಿಳಿಸಿದ್ದಾರೆ. ಆರೋಪಿ, ಇನ್‌ಸ್ಟಾಗ್ರಾಮ್ ಮತ್ತು ವಾಟ್ಸಾಪ್ ಮೂಲಕ ಪೊಲೀಸ್ ಪ್ರಧಾನ ಕಚೇರಿ ಮತ್ತು ಬಸ್ ನಿಲ್ದಾಣದ ವಿವರಗಳನ್ನು ಹಂಚಿಕೊಂಡಿದ್ದ ಎನ್ನಲಾಗಿದೆ. ಬಂಧನದ ವೇಳೆ ಆತನಿಂದ ಪಿಸ್ತೂಲ್, ಗುಂಡುಗಳು ಮತ್ತು ಸ್ಪ್ರೇ ಪೇಂಟ್ ವಶಪಡಿಸಿಕೊಳ್ಳಲಾಗಿದೆ.

ಭುವನೇಶ್ವರದಲ್ಲಿ ಉಗ್ರಗಾಮಿ ಚಟುವಟಿಕೆ: ಮತ್ತೊಂದು ಕಾರ್ಯಾಚರಣೆಯಲ್ಲಿ, ದೆಹಲಿ ಮತ್ತು ಒಡಿಶಾ ಪೊಲೀಸರು ಭುವನೇಶ್ವರದಲ್ಲಿ 22 ವರ್ಷದ ಶೇಖ್ ಇಮ್ರಾನ್ ಎಂಬಾತನನ್ನು ಬಂಧಿಸಿದ್ದಾರೆ. ರಾಷ್ಟ್ರೀಯ ಭದ್ರತೆಗೆ ಹಾನಿಕಾರಕವಾದ ವಿಷಯಗಳನ್ನು ಹಂಚಿಕೊಳ್ಳುತ್ತಿದ್ದ ಆರೋಪಿ ಭಯೋತ್ಪಾದಕರ ಸಾಮಾಜಿಕ ಮಾಧ್ಯಮ ಗ್ರೂಪ್‌ನ ಸಕ್ರಿಯ ಸದಸ್ಯ, ಎಂದು ಅಧಿಕಾರಿಗಳು ಹೇಳಿದ್ದಾರೆ. ದಿಲ್ಲಿಯಲ್ಲಿ ಈ ಹಿಂದೆ ವಶಕ್ಕೆ ಪಡೆಯಲಾಗಿದ್ದ ಯುವಕರ ವಿಚಾರಣೆಯ ನಂತರ ಈ ಬಂಧನ ನಡೆದಿದೆ. ಅಧಿಕಾರಿಗಳು ಆತನಿಂದ ಮೊಬೈಲ್ ಫೋನ್ ಮತ್ತು ಲ್ಯಾಪ್‌ಟಾಪ್ ವಶಪಡಿಸಿಕೊಂಡಿದ್ದಾರೆ.

ಸಶಸ್ತ್ರ ಪಡೆಗಳಲಿ ಸಿರಿಧಾನ್ಯ ಬಳಕೆಗೆ ಕೇಂದ್ರ ಉತ್ತೇಜನ

• **ರಾಯ್ಸೆನ್:** ಸಶಸ್ತ್ರ ಪಡೆಗಳಲ್ಲಿ ಸಿರಿಧಾನ್ಯಗಳ ಬಳಕೆಯನ್ನು ಉತ್ತೇಜಿಸುವ ಮೂಲಕ ಜೈ ಜವಾನ್ ಜೈ ಕಿಸಾನ್ ಘೋಷವಾಕ್ಯದಂತೆ ರೈತರ ಆರ್ಥಿಕ ಬಲವರ್ಧನೆಗಾಗಿ ಕೇಂದ್ರ ಸರ್ಕಾರ ಕೆಲಸ ಮಾಡುತ್ತಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಶನಿವಾರ ಹೇಳಿದ್ದಾರೆ. 1965ರಲ್ಲಿ ಇಂಡೋ-ಪಾಕ್ ಯುದ್ಧ ಸಂದರ್ಭದಲ್ಲಿ ಆಹಾರ ಕೊರತೆ ಉಂಟಾಗಿದ್ದ ಸಂದರ್ಭ ಮಾಜಿ ಪ್ರಧಾನಿ ಲಾಲ್ ಬಹದೂರ್ ಶಾಸ್ತ್ರಿಯವರು ಜೈ ಜವಾನ್ ಜೈ ಕಿಸಾನ್ ಘೋಷವಾಕ್ಯದೊಂದಿಗೆ ಸೈನಿಕರ ಆತ್ಮಸ್ಥೈರ್ಯ ಮತ್ತು ಉತ್ಪಾದನೆ ಹೆಚ್ಚಿಸಲು ರೈತರಿಗೆ ಸ್ಫೂರ್ತಿ ತುಂಬಿದ್ದರು. ತಕ್ಷಣವೇ ಈ ಘೋಷವಾಕ್ಯವು ಆತ್ಮನಿರ್ಭರ (ಸ್ವಾವಲಂಬಿ) ಭಾರತದ ಚಿಹ್ನೆಯಾಗಿ ಬದಲಾಯಿತು. 3 ದಿನಗಳ ಉನ್ನತ ಕೃಷಿ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಸಿಂಗ್, ಜೋಳ, ಸಜ್ಜೆ ಮತ್ತು ರಾಗಿ ಹಿಟ್ಟಿನಿಂದ ತಯಾರಿಸಲಾದ ಆಹಾರಗಳನ್ನು ಸಶಸ್ತ್ರ ಪಡೆಗಳಲ್ಲಿ ಪರಿಚಯಿಸಲಾಗಿದೆ.

ಚಂದ್ರನ ಕಕ್ಷೆಯಿಂದ ಹಿಂತಿರುಗಿದ ನಾಲ್ವರು ಗಗನಯಾತ್ರಿಗಳು

ಆರ್ಟೆಮಿಸ್ 2 ಯಶಸ್ವಿ ಸ್ಪ್ಲ್ಯಾಶ್‌ಡೌನ್

• **ವಾಷಿಂಗ್ಟನ್:** ಆರ್ಟೆಮಿಸ್-2 ಗಗನಯಾನ ಯೋಜನೆಯ ನಾಲ್ವರು ಗಗನಯಾತ್ರಿಗಳು ಐತಿಹಾಸಿಕ ಚಂದ್ರ ಪರಿಭ್ರಮಣ ಮಿಷನ್ ಅನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, ಶುಕ್ರವಾರ ಪೆಸಿಫಿಕ್ ಮಹಾಸಾಗರದಲ್ಲಿ ರೋಮಾಂಚಕ ಸ್ಪ್ಲ್ಯಾಶ್‌ಡೌನ್ ನಡೆಸಿ ಇಳಿದರು. ಐದು ದಶಕಗಳ ನಂತರ ಮಾನವಕುಲ ಮತ್ತೆ ಚಂದ್ರನ ಮಡಿಲಿಗೆ ತೆರಳಿ ಸುರಕ್ಷಿತವಾಗಿ ಮರಳಿದ ಈ ಕ್ಷಣ ಇತಿಹಾಸದ ಪುಟಗಳಲ್ಲಿ ಚಿರಸ್ಥಾಯಿಯಾಯಿತು.

ಈ ಯಾನದಲ್ಲಿ ಕೇವಲ ಗಗನಯಾನ ದಾಖಲೆಗಳಷ್ಟೇ ಅಲ್ಲ, ಚಂದ್ರನ ದೂರದ ಭಾಗದ ಅಪರೂಪದ ದೃಶ್ಯಗಳು, ಸಂಪೂರ್ಣ ಸೂರ್ಯಗ್ರಹಣ, ಮತ್ತು ಕಪ್ಪು ಆಕಾಶದ ಹಿನ್ನೆಲೆಯಲ್ಲಿ ಹೊಳೆಯುತ್ತಿದ್ದ ನಮ್ಮ ನೀಲಿ ಭೂಮಿಯ ದೃಶ್ಯ ಇವೆಲ್ಲ ಜಗತ್ತಿನ ಮನಸ್ಸನ್ನು ಆವರಿಸಿದವು.

ಇತಿಹಾಸ ಬರೆದ ನಾಲ್ವರು: ಕಮಾಂಡರ್ ರೀಡ್ ವೈಸ್‌ಮನ್, ಪೈಲಟ್ ವಿಕ್ಟರ್ ಗ್ಲೋವರ್, ಕ್ರಿಸ್ಟಿನಾ ಕೋಚ್ ಮತ್ತು ಕೆನಡಾದ ಜೆರೆಮಿ ಹ್ಯಾನ್ಸನ್ ಈ ನಾಲ್ವರು ಸ್ಯಾನ್‌ಡಿಯೆಗೋ ಕರಾವಳಿಯ ಬಳಿ ಸಮುದ್ರಕ್ಕಿಳಿದ ಕ್ಯಾಪ್ಸೂಲ್‌ನಿಂದ ಹೊರಬಂದರು. ಮಿಲಿಟರಿ ಹೆಲಿಕಾಪ್ಟರ್‌ಗಳ ಮೂಲಕ ಒಬ್ಬೊಬ್ಬರನ್ನಾಗಿ ಮೇಲೆತ್ತಿ ಯುಎಸ್‌ಎಸ್ ಜಾನ್ ಪಿ. ಮುರ್ಥಾ ಎಂಬ ನೌಕಾ ಹಡಗಿಗೆ ಕರೆದೊಯ್ಯಲಾಯಿತು. ಇದಾದ ಮೇಲೆ ನಾಸಾ ಮಿಷನ್ ಕಂಟ್ರೋಲ್‌ನಲ್ಲಿ ಸಂಭ್ರಮ ಉಕ್ಕಿ ಹರಿಯಿತು.



ಚಂದ್ರನ ದಾಖಲೆ ಮತ್ತು ಅಪರೂಪದ ದೃಶ್ಯ

ಏ.1ರಂದು ಫ್ಲೋರಿಡಾದಿಂದ ಉಡಾವಣೆಗೊಂಡ ಈ ತಂಡ ಭೂಮಿಯಿಂದ 4,06,771 ಕಿ.ಮೀ. ದೂರ ತಲುಪಿ ಅಪೊಲೊ-13ರ ಅಂತರದ ದಾಖಲೆ ಮುರಿಯಿತು ಇದು ಮನುಷ್ಯರು ಇದುವರೆಗೆ ಭೂಮಿಯಿಂದ ಅತ್ಯಂತ ದೂರ ತೆರಳಿದ ಕ್ಷಣ. ಸೋಮವಾರ ನಡೆದ ದಾಖಲೆ ಫ್ಲೈಬೈ ವೇಳೆ ಚಂದ್ರನ ದೂರದ ಭಾಗದ ಕಣಿವೆಗಳನ್ನು ಮನುಷ್ಯ ಕಣ್ಣಿಗೆ ಮೊದಲ ಬಾರಿ ತೋರಿದರು.

ದಾಖಲೆ ವೇಗದ ಮರುಪ್ರವೇಶ

ಇಂಟೆಗ್ರಿಟಿ ಎಂದು ನಾಮಕರಣಗೊಂಡ ಓರಿಯನ್ ಕ್ಯಾಪ್ಸೂಲ್ ಭೂಮಿಯ ವಾತಾವರಣವನ್ನು ಮ್ಯಾಕ್ 33 ವೇಗದಲ್ಲಿ (ಶಬ್ದದ ವೇಗಕ್ಕಿಂತ 33 ಪಟ್ಟು) ಪ್ರವೇಶಿಸಿತು. ಅಂದರೆ ಸೆಕೆಂಡಿಗೆ ಸುಮಾರು 11,026 ಮೀಟರ್ ವೇಗ. 1960-70ರ ಅಪೊಲೊ ಯುಗದ ನಂತರ ಇಷ್ಟು ವೇಗದಲ್ಲಿ ಬಂದ ಮೊದಲ ಕ್ಯಾಪ್ಸೂಲ್ ಇದೇ. ಕ್ಯಾಪ್ಸೂಲ್ ಕೆಂಪು-ಕೆಂಡದ ಪ್ಲಾಸ್ಮಾ ಮಳೆಯಲ್ಲಿ ಮುಳುಗಿ ಆರು ನಿಮಿಷ ಸಂಪರ್ಕ ಕಡಿದುಕೊಂಡಾಗ ಮಿಷನ್ ಕಂಟ್ರೋಲ್‌ನಲ್ಲಿ ಉಸಿರು ಬಿಗಿಹಿಡಿದ ನಿಶ್ಶಬ್ದ ತುಂಬಿತ್ತು. ಸ್ಪ್ಲ್ಯಾಶ್‌ಡೌನ್ ಕ್ಷಣ ಕ್ಯಾಪ್ಸೂಲ್ ಗಂಟೆಗೆ 30 ಕಿಮೀ ವೇಗಕ್ಕೆ ಇಳಿದು ಸಮುದ್ರ ತಲುಪಿತು.

ಮತದಾರರ ಪಟ್ಟಿಗೆ ತೀವ್ರ ಶುದ್ಧೀಕರಣ ಪೂರ್ಣ

ಎಸ್‌ಐಆರ್: ಶೇ.10 ಮತದಾರರ ಕಡಿತ

• **ಹೊಸದಿಲ್ಲಿ:** ಚುನಾವಣಾ ಆಯೋಗ ನಡೆಸಿದ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ದ್ವಿತೀಯ ಹಂತದ ಬಳಿಕ ಒಂಬತ್ತು ರಾಜ್ಯಗಳು ಹಾಗೂ ಮೂರು ಕೇಂದ್ರಾಡಳಿತ ಪ್ರದೇಶಗಳ ಒಟ್ಟು ಮತದಾರರ ಪಟ್ಟಿಯಲ್ಲಿ ಶೇ.10.2 ಇಳಿಕೆ ಕಂಡುಬಂದಿದೆ. ಈ ಪ್ರಕ್ರಿಯೆಯಲ್ಲಿ 60 ಲಕ್ಷಕ್ಕೂ ಹೆಚ್ಚು ಮೃತ ಮತದಾರರ ಹೆಸರುಗಳನ್ನು ತೆಗೆಯಲಾಗಿದೆ ಎಂದು ಆಯೋಗ ಮತ್ತು ರಾಜ್ಯಾಧಿಕಾರಿಗಳ ಮಾಹಿತಿ ತಿಳಿಸಿದೆ.

ಅಕ್ಟೋಬರ್ 27ರಂದು ದ್ವಿತೀಯ ಹಂತದ ಎಸ್‌ಐಆರ್ ಘೋಷಣೆಯ ವೇಳೆಗೆ, ಈ 12 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಟ್ಟು ಮತದಾರರ ಸಂಖ್ಯೆ 50.99 ಕೋಟಿಗೂ ಹೆಚ್ಚು ಇತ್ತು. ಪರಿಷ್ಕರಣೆ ಬಳಿಕ ಇದು 45.81 ಕೋಟಿಗೆ ಇಳಿದು, ಒಟ್ಟು 5.18 ಕೋಟಿ ಮತದಾರರ ಕಡಿತ ದಾಖಲಾಗಿದೆ.

ಈ ಅವಧಿಯಲ್ಲಿ ಒಟ್ಟು 66,88,636 ಮೃತ ಮತದಾರರ ಹೆಸರುಗಳು ತೆಗೆದುಹಾಕಲ್ಪಟ್ಟಿವೆ. ಇದರಲ್ಲಿ ಉತ್ತರ ಪ್ರದೇಶದಲ್ಲಿ ಗರಿಷ್ಠ 25.47 ಲಕ್ಷ, ಬಳಿಕ ಚುನಾವಣೆಗೆ ಸಜ್ಜಾಗಿರುವ ಪಶ್ಚಿಮ ಬಂಗಾಳದಲ್ಲಿ 24.16 ಲಕ್ಷ ಹೆಸರುಗಳು ಸೇರಿವೆ. ಇದಷ್ಟೇ ಅಲ್ಲದೆ, ಎಸ್‌ಐಆರ್ ಪ್ರಕ್ರಿಯೆಯಲ್ಲಿ ಸಲ್ಲಿಸಲಾದ ಆಕ್ಷೇಪಣೆಗಳು ಹಾಗೂ ಪರಿಶೀಲನೆಯ ನಂತರ ಇನ್ನೂ 63.16 ಲಕ್ಷ ಹೆಸರುಗಳನ್ನು ತೆಗೆದುಹಾಕಲಾಗಿದೆ. ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ತಮಿಳುನಾಡು, ರಾಜಸ್ಥಾನ, ಛತ್ತೀಸ್‌ಗಢ, ಕೇರಳ, ಪುದುಚೇರಿ, ಅಂಡಮಾನ್- ನಿಕೋಬಾರ್ ದ್ವೀಪಗಳು, ಲಕ್ಷದ್ವೀಪ, ಗುಜರಾತ್, ಮಧ್ಯಪ್ರದೇಶ ಮತ್ತು ಗೋವಾ ರಾಜ್ಯಗಳ ಅಂತಿಮ ಮತದಾರರ ಪಟ್ಟಿಗಳನ್ನು ವಿವಿಧ ದಿನಗಳಲ್ಲಿ ಪ್ರಕಟಿಸಲಾಗಿದೆ. ಇವುಗಳಲ್ಲಿ ಉತ್ತರ ಪ್ರದೇಶವೇ ಕೊನೆಯದಾಗಿ ಶುಕ್ರವಾರ ತನ್ನ ಅಂತಿಮ ಪಟ್ಟಿಯನ್ನು ಬಿಡುಗಡೆ ಮಾಡಿದೆ.

ಈಗಾಗಲೇ ಬಿಹಾರದಲ್ಲಿ ಪೂರ್ಣಗೊಂಡಿದ್ದ ಎಸ್‌ಐಆರ್ ಪ್ರಕ್ರಿಯೆಯ ನಂತರ, ಸುಮಾರು 51 ಕೋಟಿ ಮತದಾರರನ್ನು ಒಳಗೊಂಡ ದ್ವಿತೀಯ ಹಂತವೂ ಮುಕ್ತಾಯಗೊಂಡಿದೆ. ಇನ್ನೂ ಉಳಿದಿರುವ ಸುಮಾರು 40 ಕೋಟಿ ಮತದಾರರನ್ನು 17 ರಾಜ್ಯಗಳು ಹಾಗೂ ಐದು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮುಂದಿನ ಹಂತದಲ್ಲಿ ಒಳಪಡಿಸಲಾಗುವುದು. ಈ ಪ್ರಕ್ರಿಯೆ ಈ ತಿಂಗಳ ಐದು ವಿಧಾನಸಭಾ ಚುನಾವಣೆಗಳ ನಂತರ ಆರಂಭವಾಗುವ ಸಾಧ್ಯತೆ ಇದೆ.

ಆಂಧ್ರ ಪ್ರದೇಶ, ಅರುಣಾಚಲ ಪ್ರದೇಶ, ಚಂಡೀಗಢ, ದಾದ್ರಾ ಮತ್ತು ನಗರ ಹವೇಲಿ-ದಮನ ದಿಯು, ಹರಿಯಾಣ, ಹಿಮಾಚಲ ಪ್ರದೇಶ, ಜಮ್ಮು-ಕಾಶ್ಮೀರ, ಜಾರ್ಖಂಡ್, ಕರ್ನಾಟಕ, ಲಡಾಖ್, ಮಹಾರಾಷ್ಟ್ರ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ದೆಹಲಿ, ಒಡಿಶಾ, ಪಂಜಾಬ್, ಸಿಕ್ಕಿಂ, ತ್ರಿಪುರಾ, ತೆಲಂಗಾಣ ಮತ್ತು ಉತ್ತರಾಖಂಡ ರಾಜ್ಯಗಳು ಮುಂದಿನ ಹಂತದಲ್ಲಿ ಒಳಗೊಳ್ಳಲಿವೆ. ಇದಲ್ಲದೆ, ಅಸ್ಸಾಂನಲ್ಲಿ ಎಸ್‌ಐಆರ್ ಬದಲಿಗೆ ವಿಶೇಷ ಪರಿಷ್ಕರಣೆ ಪ್ರಕ್ರಿಯೆ ಫೆಬ್ರವರಿ 10ರಂದು ಪೂರ್ಣಗೊಂಡಿದೆ.



ಪ್ರಶ್ನೋತ್ತರ ರತ್ನಮಾಲಿಕೆ

• ವಿದ್ವಾನ್ ನರಸಿಂಹ ಭಟ್

ವಿದ್ವಾಂಸರನ್ನು ಪೂಜಿಸಲು ಯೋಗ್ಯರಾದವರು ಯಾರು?

▸ ಉ. ಸ್ವಭಾವದಿಂದ ಯಾವಾಗಲೂ ವಿನಯವುಳ್ಳವನು.

ವಿದ್ವಾನ್ ಸರ್ವತ್ರ ಪೂಜ್ಯತೇ – ವಿದ್ವಾಂಸನಿಗೆ ಎಲ್ಲ ಕಡೆ, ಯಾವಾಗಲೂ ಗೌರವ ಇದೆ ಎಂದರ್ಥ. ವಿದ್ವಾಂಸನಿಗೆ ಗೌರವ ಬರಲು ಕಾರಣ, ಅವನು ಸಂಪಾದಿಸಿದ ವಿದ್ಯೆಯೇ ಆಗಿದೆ. ಈ ವಿದ್ಯೆ ಇರುವುದರಿಂದ ಅವನಿಗೆ ವಿದ್ವಾನ್ ಎಂಬುದಾಗಿ ಕರೆಯಲಾಗುತ್ತದೆ. ವಸ್ತುತಃ ವಿದ್ಯೆ ಯಾವುದು? ಎಂಬುದರ ಬಗ್ಗೆ ಇಂದು ಸ್ಪಷ್ಟವಾದ ಅರಿವು ಇಲ್ಲವಾಗಿದೆ. ಈ ವಿಷಯದಲ್ಲಿ ಶ್ರೀರಂಗ ಮಹಾಗುರುಗಳ ವಿದ್ಯೆಗೆ ಸಂಬಂಧಿಸಿದ ಮಾತು ನಿಜವಾದ ವಿದ್ಯೆ ಯಾವುದು? ಎಂಬುದನ್ನು ತಿಳಿಸುತ್ತದೆ. ವಿದ್ಯೆ ಎಂದರೆ ವಿದ್- ಜ್ಞಾನ, ಯಾ - ಪ್ರಾಪಣ. ಯಾವುದು ಜ್ಞಾನದ ಕಡೆ ನಮ್ಮನ್ನು ಕರೆದುಕೊಂಡು ಹೋಗುತ್ತದೆಯೋ ಅದಕ್ಕೆ ವಿದ್ಯೆ ಎಂಬುದಾಗಿ ಕರೆಯಬೇಕು ಎಂದು. ಇಂತಹ ವಿದ್ಯೆ ಉಳ್ಳವನು ವಿದ್ವಾಂಸ ಎಂಬುದಾಗಿ ಕರೆಸಿಕೊಳ್ಳುತ್ತಾನೆ. ಪ್ರಣವದಿಂದ ವಿಕಾಸವಾದ ಗಾಯತ್ರೀ, ವೇದಗಳು, ಶಾಸ್ತ್ರಗಳು, ಇತಿಹಾಸ ಪುರಾಣಗಳು ಮೊದಲಾದವುಗಳನ್ನು ಈ ನೇರದಲ್ಲಿ ವಿದ್ಯೆ ಎಂಬುದಾಗಿ ಕರೆಯಲಾಗುತ್ತದೆ. ಇವುಗಳ ತಾತ್ತ್ವಿಕಜ್ಞಾನ ಉಳ್ಳವನನ್ನು ವಿದ್ವಾನ್ ಎಂಬುದಾಗಿ ಕರೆಯಬಹುದು. ಇಂತಹ ವಿದ್ವಾಂಸನಿಗೆ ಮನ್ನಣೆ ಎಲ್ಲ ಕಾಲದಲ್ಲೂ, ಎಲ್ಲ ದೇಶದಲ್ಲೂ ಸಿಗುವುದು ಅತ್ಯಂತ ಸಹಜ. ಈ ಬಗೆಯ ವಿದ್ವಾಂಸನಿಗೆ ಮನ್ನಣೆ ಬರಬೇಕು ಎಂಬುದಾದರೆ ಏನು ಬೇಕು? ಎಂಬ ಪ್ರಶ್ನೆ ಇಲ್ಲಿದೆ. ಅಂದರೆ ಇಂತಹ ಗುಣವಿಶಿಷ್ಟನಾದ ಒಬ್ಬ ವ್ಯಕ್ತಿಗೆ ಶೋಭಿಸುವಂತೆ ಮಾಡುವ ಇನ್ನೊಂದು ಗುಣ ಬೇಕೆ? ಎಂಬುದಾಗಿ ಸಂಶಯ ಬರಬಹುದು. ಅದಕ್ಕೆ ಪರಿಹಾರವನ್ನು ಈ ಉತ್ತರದಲ್ಲಿ ಕಾಣಬಹುದು. ಇದನ್ನೇ ಸಾರುವ ಸುಭಾಷಿತ ಹೀಗಿದೆ – ''ವಿದ್ಯಾ ವಿನಯೇನ ಶೋಭತೇ'', ''ವಿದ್ಯಾ ದದಾತಿ ವಿನಯಂ'' ಎಂದು. ಅಂದರೆ ವಿದ್ಯೆ ಮತ್ತು ವಿನಯ ಈ ಎರಡು ಅನ್ಯೋನ್ಯವಾಗಿ ಇರುವಂಥವುಗಳು. ಒಂದನ್ನು ಬಿಟ್ಟು ಇನ್ನೊಂದಕ್ಕೆ ಅಸ್ತಿತ್ವವಿಲ್ಲ, ಮೌಲ್ಯವಿಲ್ಲ ಎಂಬುದು ಇದರ ತಾತ್ಪರ್ಯ. ಎಲ್ಲಿ ವಿದ್ಯೆ ಇದೆಯೋ ಅಲ್ಲಿ ವಿನಯ ಇರಬೇಕು ಎಂಬುದೇ ಅರ್ಥ. ಹಾಗಿಲ್ಲದಿದ್ದರೆ ಆ ವಿದ್ಯೆಯು ಅಪರಿಪೂರ್ಣ ಎಂದರ್ಥ. ಆಗ ಕೇವಲ ವಿದ್ಯೆ ಉಳ್ಳವನಿಗೆ ಗೌರವವೂ ಸಿಗದು. ಸಿಕ್ಕಿದ ಗೌರವವೂ ಉಳಿಯದು. ಹಾಗಾಗಿ ವಿದ್ಯೆಯಿಂದ ಬರುವ ಗೌರವವು ಉಳಿಯಬೇಕಾದರೆ ವಿನಯ ಅತ್ಯಂತ ಮುಖ್ಯ ಎಂಬುದು ಸಾರಾಂಶ.

ಹಾಗಾದರೆ ವಿದ್ಯೆಯಿದ್ದವನಿಗೆ ವಿನಯ ಅಷ್ಟು ಮುಖ್ಯ ಏಕೆ? ಎಂದರೆ, ಸಾಮಾನ್ಯವಾಗಿ ವಿದ್ಯೆ ಇರುವವನು ಗರ್ವಕ್ಕೆ ಅಥವಾ ಮದಕ್ಕೆ ಈಡಾಗುತ್ತಾನೆ. ವಿದ್ಯೆಯು ಸರಿಯಾದ ಮಾರ್ಗದಲ್ಲಿ ಬರದಿದ್ದರೆ ಅದು ಅಹಂಕಾರಕ್ಕೆ ಕಾರಣವಾಗುತ್ತದೆ. ಹಾಗಾಗಿ ವಿದ್ಯೆಯ ಜೊತೆ ಎಲ್ಲಿ ವಿನಯ ಬಂದಿರುತ್ತದೆಯೋ, ಅಲ್ಲಿ ಬಂದ ವಿದ್ಯೆಯು ಸನ್ಮಾರ್ಗದಲ್ಲಿ ಬಂದಿದೆ ಎಂದರ್ಥ. ಆದ್ದರಿಂದ ವಿದ್ಯೆ ಮತ್ತು ವಿನಯಗಳಿಗೆ ಪರಸ್ಪರ ಸಂಬಂಧವಿರುವುದನ್ನು ಕಾಣಬಹುದು. ವಿದ್ಯೆಯಿಂದ ಬರುವ ವಿನಯವು ಪಾತ್ರತ್ವವನ್ನು ಅಂದರೆ ಮನ್ನಣೆಯನ್ನು ಕೊಡುತ್ತದೆ; ಆ ಮನ್ನಣೆಯು ಅವನಿಗೆ ಭದ್ರತೆಯನ್ನು ಉಂಟುಮಾಡುತ್ತದೆ. ಈ ಭದ್ರತೆಯು ಅವನಿಗೆ ಧರ್ಮ ಮತ್ತು ಶಾಶ್ವತವಾದ ಸುಖವನ್ನು ಕೊಡುತ್ತದೆ ಎಂಬುದಾಗಿ ಒಂದು ಸುಭಾಷಿತ ಸಾರುತ್ತದೆ. ಇವೆಲ್ಲವನ್ನು ಗಮನಿಸಿದಾಗ ವಿದ್ಯೆ ಮತ್ತು ವಿನಯಗಳಿಗೆ ಇರುವ ಸಂಬಂಧ ತಿಳಿಯುತ್ತದೆ. ಹಾಗಾಗಿ ವಿದ್ಯಾವಂತನಿಗೆ ಗೌರವ ಸಿಗಬೇಕಾದರೆ ಅವನು ವಿನಯ ಸ್ವಭಾವ ಉಳ್ಳವನಾಗಿರಬೇಕು ಎಂಬುದು ಪರಮ ಸತ್ಯವಾದ ವಿಷಯ.



ವ್ಯಾಸ ವೀಕ್ಷಿತ

• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ



ಭೀಮ-ಜರಾಸಂಧ-ದ್ವಂದ್ವ-ಯುದ್ಧಾರಂಭ

ಸೈನ್ಯಸಮೇತನಾಗಿಯಾಗಲಿ, ಒಬ್ಬನೊಂದಿಗಾಗಲಿ, ಇಬ್ಬರೊಂದಿಗಾಗಲಿ, ಮೂವ ರೊಂದಿಗೂ ಆಗಲಿ-ಯುದ್ಧ ಮಾಡಲು ತಾನು ಸಿದ್ಧನೆಂದು ಜರಾಸಂಧನು ಕೃಷ್ಣಭೀಮಾರ್ಜುನರ ಮುಂದೆ ಘೋಷಿಸಿಕೊಂಡನಷ್ಟೆ?

ಹಾಗೆ ಹೇಳಿದ್ದೇ ಅಲ್ಲದೆ, ಭಯಂಕರವಾದ ಕಾರ್ಯವನ್ನು ಮಾಡಹೊರಟಿದ್ದ ಈ ಮೂವರೊಂದಿಗೆ ಸೆಣಸಲು ಸಿದ್ಧನೂ ಆದನು. ತನ್ನ ಪುತ್ರನಾದ ಸಹದೇವನಿಗೆ ಪಟ್ಟಾಭಿಷೇಕವನ್ನು ನೆರವೇರಿಸಿ ಎಂಬುದಾಗಿ ತನ್ನ ಕಡೆಯವರಿಗೆ ಆಜ್ಞೆಯಿತ್ತನು. ಹಾಗೆ ಹೇಳಿದವನೇ ತನ್ನ ಹಿಂದಿನ ಸೇನಾಪತಿಗಳಾದ ಕೌಶಿಕ ಹಾಗೂ ಚಿತ್ರಸೇನ - ಇವರಿಬ್ಬರನ್ನೂ ಸ್ಮರಿಸಿಕೊಂಡನು. ಅವರಿಬ್ಬರೇ ಹಿಂದೆ ಹಂಸ-ಡಿಂಭಕ ಎಂದು ಹೆಸರಾಗಿದ್ದವರು. ಅವರಿಬ್ಬರೂ ಬದುಕಿದ್ದಾಗ ಪುರುಷರೆಲ್ಲರೂ ಅವರನ್ನು ಆದರಿಸುತ್ತಿದ್ದರು, ಕೊಂಡಾಡುತ್ತಿದ್ದರು.

ಜರಾಸಂಧನು ಬಲಶಾಲಿಗಳಲ್ಲಿ ಶ್ರೇಷ್ಠನಾದ ರಾಜನು. ಆತನ ಪರಾಕ್ರಮ ಭೀಕರವಾದದ್ದು. ಯದುವಂಶದವರಾರಿಂದಲೂ ಆತನು ನಾಶಹೊಂದಬಾರದು - ಎಂಬುದು ಬ್ರಹ್ಮನ ಆಜ್ಞೆಯಾಗಿತ್ತು. ಶ್ರೀಕೃಷ್ಣನಾದರೂ ಪುರುಷಶಾರ್ದೂಲ, ಎಂದರೆ ನರಶ್ರೇಷ್ಠ ಹಾಗೂ ಸತ್ಯಸಂಧ. ಎಂದೇ ತಾನೇ ಕೊಲ್ಲಲು ಸಮರ್ಥನಾಗಿದ್ದರೂ ಹಾಗೆ ಮಾಡಲಿಲ್ಲ, ಜರಾಸಂಧನಂತೂ ಯುದ್ಧ ಮಾಡುವುದೆಂದು ನಿಶ್ಚಯಿಸಿಕೊಂಡಿದ್ದನಷ್ಟೆ, ಆತನನ್ನು ಕುರಿತು ಯದುನಂದನನಾದ ಶ್ರೀಕೃಷ್ಣನು ಹೀಗೆ ಹೇಳಿದನು: ರಾಜನೇ, ನಮ್ಮೀ ಮೂವರಲ್ಲಿ ಯಾರೊಂದಿಗೆ ಯುದ್ಧಮಾಡಲು ನಿನಗೆ ಮನಸ್ಸಿದೆ? ನಮ್ಮಲ್ಲಿ ಯಾರು ನಿನ್ನೊಡನೆ ಯುದ್ಧ ಮಾಡಲು ಸಿದ್ಧರಾಗಬೇಕು? ಕೃಷ್ಣನು ಹೀಗೆ ಹೇಳಲಾಗಿ, ಆ ಮಹಾತೇಜಸ್ವಿಯಾದ ಜರಾಸಂಧನು ಭೀಮಸೇನನೊಡನೆ ಸೆಣಸಲು ಬಯಸಿದನು.

ಒಡನೆಯೇ ಜರಾಸಂಧನ ಪುರೋಹಿತನು ಹಲವು ಮಂಗಲಕಾರ್ಯಗಳನ್ನು ನೆರವೇರಿಸಿದನು: ಗೋರೋಚನ-ಮಾಲೆಗಳು, ಇನ್ನಿತರ ಮಂಗಲದ್ರವ್ಯಗಳು, ಹಾಗೂ ಕೆಲವು ಔಷಧಿಗಳು - ತುಂಬ ನೋವಾದಾಗ ಅದನ್ನು ನಿವಾರಿಸತಕ್ಕವು, ಹಾಗೂ ಮೂರ್ಛಿತನಾದಾಗ ಎಚ್ಚರವಾಗಿಸುವಂತಹವು - ಇವುಗಳನ್ನೂ ತಂದನು. ಯುಯುತ್ಸುರಾಜನ ಮುಂದೆ, ಎಂದರೆ ಯುದ್ಧ ಮಾಡಲು ಬಯಸಿರುವ ಜರಾಸಂಧನ ಮುಂದೆ, ಇವುಗಳೊಡನೆ ಉಪಸ್ಥಿತನಾದನು.

ಹೀಗೆ ಬ್ರಾಹ್ಮಣನಿಂದ ಸ್ವಸ್ತಿವಾಚನವಾದ ಬಳಿಕ, ಕ್ಷತ್ರಧರ್ಮವನ್ನು ಸ್ಮರಿಸಿದ ಜರಾಸಂಧನು ಯುದ್ಧಕ್ಕೆ ಸನ್ನದ್ಧನಾದನು. ಕಿರೀಟವನ್ನು ತೆಗೆದನು. ಕೇಶಗಳನ್ನು ಕಟ್ಟಿದನು. ಹಾಗೆ ಸಿದ್ಧನಾದ ಜರಾಸಂಧನು, ತನ್ನ ದಡವನ್ನೇ ಮೀರಿ ಬರುವ ಸಮುದ್ರದ ಹಾಗೆ ತೋರಿದನು! ಭಯಂಕರವಾದ ಪರಾಕ್ರಮವುಳ್ಳ ಆ ಧೀಮಂತ ಜರಾಸಂಧನು ಭೀಮನನ್ನು ಕುರಿತು, ಭೀಮನೇ, ನಿನ್ನೊಡನೆ ನಾನು ಯುದ್ಧಮಾಡುವೆ. ಏಕೆಂದರೆ ಶ್ರೇಷ್ಠರೊಡನೆ ಹೋರಾಡಿ ಸೋಲುವುದು ಸಹ ಶ್ರೇಷ್ಠವಾದದ್ದೇ! ಎಂದನು.

ಹೀಗೆ ಹೇಳಿ ಅವನು ಭೀಮಸೇನನನ್ನು ಎದುರ್ಗೊಂಡನು. ಬಲ ಎಂಬ ಅಸುರನು ಇಂದ್ರನನ್ನು ಹೇಗೆ ಎದುರ್ಗೊಂಡನೋ ಹಾಗೆಯೇ ಇದಿತ್ತು.

ಅಷ್ಟರಲ್ಲಿ ಶ್ರೀಕೃಷ್ಣನಿಂದ ಸ್ವಸ್ತ್ಯಯನವನ್ನು ಪಡೆದು, ಭೀಮಸೇನನೂ ಸಹ ಇತ್ತ ಸಿದ್ಧನಾದನು, ಜರಾಸಂಧನನ್ನು ಸಮೀಪಿಸಿದನು. ಆಗ ಇಬ್ಬರೂ ವೀರರು ಮಹಾ-ಹರ್ಷದಿಂದ ಕೂಡಿದವರಾಗಿ ಪರಸ್ಪರ-ಜಯಾಕಾಂಕ್ಷಿಗಳಾಗಿ, ತಮ್ಮ ಬಾಹುಗಳನ್ನೇ ಶಸ್ತ್ರಗಳನ್ನಾಗಿಸಿಕೊಂಡು ಸೆಣಸಿದರು. ಮೊದಲು ಕೈಕೈ ಹಿಡಿದರು. ಪರಸ್ಪರ ಪಾದಾಭಿವಂದನ ಮಾಡಿದರು. ಕಂಕುಳನಿಂದ ಕಂಕುಳನ್ನು ತಳ್ಳಿದರು. ಮಹಾಶಬ್ದಸಹಿತವಾಗಿ ತಮ್ಮ ತೋಳುಗಳನ್ನು ತಟ್ಟಿಕೊಂಡರು. ಒಬ್ಬರು ಮತ್ತೊಬ್ಬರ ಕತ್ತಿಗೆ ಇಕ್ಕಿದರು, ಮತ್ತೆ ಮತ್ತೆ ಹೊಡೆತವಿತ್ತರು. ಒಬ್ಬರ ಅಂಗವನ್ನು ಮತ್ತೊಬ್ಬರು ಅದುಮಿ ಹಿಡಿದರು. ಪರಸ್ಪರ ಆಸ್ಫಾಲನ ಮಾಡಿದರು, ಎಂದರೆ ಅಪ್ಪಳಿಸಿದರು. ಚಿತ್ರಹಸ್ತ, ಕಕ್ಷಾಬಂಧ ಮುಂತಾದ ಪಟ್ಟುಗಳನ್ನು ಹಾಕಿದರು. ಒಬ್ಬರ ಕತ್ತು-ತಲೆಗಳಿಗೊಬ್ಬರು ಇಡಿದರು: ಆ ಏಟುಗಳು ಎಷ್ಟು ತೀವ್ರವಾಗಿದ್ದವೆಂದರೆ ಕಿಡಿಗಳು ಬಂದಂತಾಯಿತು; ಸಿಡಿಲು ಬಡಿದಂತಾಯಿತು!

ಕದನವಿರಾಮದ ಮರ್ಮ

ಪಾಕಿಸ್ತಾನವು ಕೊಲ್ಲಿಯಲ್ಲಿ ಕದನವಿರಾಮ ಏರ್ಪಡಿಸಲು ಶಕ್ತವಾಯಿತು ಎಂಬುದೇ ಭಾರತದಲ್ಲಿನ 'ರಾಷ್ಟ್ರವಿರೋಧಿ'ಗಳಿಗೆ ಬಹುದೊಡ್ಡ ಸಂಭ್ರಮದ ಸುದ್ದಿಯಾಗಿದೆ. ಅದೇ ವಿಷಯವನ್ನು ಮೋದಿ ಸರಕಾರ ಹಳಿಯಲೂ ಅವರು ಬಳಸಿಕೊಳ್ಳುತ್ತಿದ್ದಾರೆ. ವಿಶ್ವಗುರು ಭಾರತವು ಕದನ ವಿರಾಮ ಏರ್ಪಡಿಸಲು ಶಕ್ತವಾಗಲಿಲ್ಲ ಎಂಬುದಾಗಿ ಕಾಂಗ್ರೆಸ್ ವ್ಯಂಗ್ಯವಾಡಿದೆ. ಭಾರತವಷ್ಟೇ ಅಲ್ಲ, ರಷ್ಯಾ, ಬ್ರಿಟನ್, ಜಪಾನ್, ಫ್ರಾನ್ಸ್, ಕೆನಡಾ ಮುಂತಾಗಿ ಯಾವುದೇ ಸಂಪನ್ನ ರಾಷ್ಟ್ರವೂ ಇರಾನ್ ಮತ್ತು ಅಮೆರಿಕ ನಡುವೆ ಸಂಧಾನ ಏರ್ಪಡಿಸಲು ಮುಂದಾಗಲಿಲ್ಲ, ಅದಕ್ಕೂ ಕಾರಣವಿದೆ. ರಾಷ್ಟ್ರನಾಯಕರನ್ನು ಬಹಿರಂಗವಾಗಿ ಹಳಿಯುವ, ಲೇವಡಿ ಮಾಡುವ ಟ್ರಂಪ್, ಕದನ ವಿರಾಮಕ್ಕೆ ಮುಂದಾದವರನ್ನು ಕೂಡಾ ಹೀಯಾಳಿಸದೆ ಬಿಡುವವರಲ್ಲ, ಹಾಗಾಗಿ ಟ್ರಂಪ್‌ರ ವಿಷಯದಲ್ಲಿ ಕದನವಿರಾಮಕ್ಕೆ ಮುಂದಾಗುವುದಕ್ಕಿಂತ ಸುಮ್ಮಗೆ ಉಳಿಯುವುದೇ ಲೇಸು ಎಂಬುದು ಎಲ್ಲರ ಅಭಿಪ್ರಾಯವಾಗಿದೆ. ಇನ್ನು ಕದನವಿರಾಮದಲ್ಲಿ 'ನಿಜವಾಗಿ' ಪಾಕಿಸ್ತಾನದ ಪಾತ್ರವೇನು ಎಂಬುದು ಅದರ ಹಿಂದಿನ ಮರ್ಮ ಅರಿತವರಿಗೆ ಅರ್ಥವಾದೀತು. ಈ ಕದನವಿರಾಮವನ್ನು ಪಾಕಿಸ್ತಾನ ಏರ್ಪಡಿಸಿದ್ದು ಎನ್ನುವುದಕ್ಕಿಂತಲೂ ಟ್ರಂಪ್ ಅವರೇ ತಮ್ಮ ಮುಖ ಉಳಿಸಿಕೊಳ್ಳಲು ನಡೆಸಿದ್ದು ಹಾಗೂ ಅದಕ್ಕೆ ಪಾಕ್ ಮೇಲೆ ಒತ್ತಡ ಹಾಕಿದರು ಎನ್ನುವುದು ತೆರೆಯ ಹಿಂದಿನ ಸತ್ಯಕತೆ.

ಪತ್ರ ಮಿತ್ರ

-ಚಿದಂಬರ ರಾವ್, ಕುಂದಾಪುರ

ಬಲ್ಲವನೇ ಬಲ್ಲ ಭಾಷೆಯ ಸವಿಯ



ವಕ್ರದೃಷ್ಟಿ

• ಎನ್.ರಾಮನಾಥ್
anakuramanath@gmail.com

'ಮಹಾಪ್ರಾಣವನ್ನು ಕಿತ್ತೊಗೆಯಿರಿ ಎಂದೊಬ್ಬ ಫೇಸ್ಬುಕ್ ಪಂಡಿತ ಹೇಳಿದ್ದಾನೆ ಸೀನು' ಎಂದೆ.

''ಇಂಷೂರೆನ್ಸ್ ಮುಗಿಯುವವರೆಗೆ ಎಲ್ಲರ ಪ್ರಾಣವೂ ಮಹಾಪ್ರಾಣವೇ. ಇಂಷುರೆನ್ಸ್ ಲಿಮಿಟ್ ಮೀರಿದ ದಿನ ಅದು ಅಲ್ಪಪ್ರಾಣ'' ಎಂದನೊಬ್ಬ 'ಪಲ್ಪಿ ಸ್ಪೆಷಾಲಿಟಿ' ವೈದ್ಯ. 'ಇಂಷುರೆನ್ಸ್ ಇದ್ರೆ ವಾರ್ಡ್ ಕಡೆ, ಇಲ್ಲವಾದ್ರೆ ಹೊರಗಡೆ' ಎನ್ನುವುದೇ ಆ ವೈದ್ಯನ ಪಾಲಿಸಿಯಂತೆ'' ಎಂದ ಸೀನು.

''ಉಸಿರಾಟದ ಪ್ರಾಣದ ಬಗ್ಗೆ ಅಲ್ಲ, ಉಚ್ಚಾರದ ಪ್ರಾಣದ ಬಗ್ಗೆ'' ಎಂದೆ.

''ನನ್ನ ಹೆಸರಿಗೇನೂ ಧಕ್ಕೆ ಆಗದು ಸದ್ಯ!'' ಎಂದ ಸೀನು.

''ವೈಡ್ ಆಂಗಲ್ ಲೆನ್ಸ್ ಹಾಕಿಕೊಂಡು ವಿಷಯವನ್ನು ನೋಡೋ'' ಎಂದು ಗೋಗರೆದೆ. ಸೀನು ತಲೆ ಕೆರೆದುಕೊಂಡ. ಕೆರೆದುಕೊಂಡ ಬೆರಳುಗಳನ್ನು ಸೂಕ್ಷ್ಮದರ್ಶಕಯಂತ್ರದಿಂದ ವೀಕ್ಷಿಸುವಂತೆ ಕೂಲಂಕಷವಾಗಿ ನೋಡಿಕೊಂಡ. ಆಗಷ್ಟೇ ಎಣ್ಣೆನೀರು ಹಾಕಿಕೊಂಡು ಬಂದಿದ್ದರಿಂದ ನೆತ್ತಿಯಲ್ಲಿ ಉಳಿದಿದ್ದ ಕೊಂಚ ಎಣ್ಣೆಯ ಹೊರತು ಇನ್ನಾವ ಕಲುಷಗಳೂ ಕಾಣದೆ 'ಸ್ವಚ್ಛ ಉಗುರು ಅಭಿಯಾನ್' ಯಶಸ್ವಿಯಾಗಿತ್ತು.

''ಗಂಗೆಮೇಲಿಂದ ಬಂದದ್ದು, ಕೆಳಗಿನಿಂದಲ್ಲ'' ಸೀನು ನಖವೀಕ್ಷಣೆ ಮುಗಿಸಿ ತಲೆಯೆತ್ತಿ ನುಡಿದ. ''ಮಹಾಪ್ರಾಣಕ್ಕೂ, ಗಂಗೆಗೂ...'' ಮೂಗೆಳೆದೆ.

''ಗಂಗೆಯನ್ನು ಭೂಮಿಗೆ ತಂದವನು ಭಗೀರಥ. ಭ ಎಂದರೆ ಗಗನ, ಗ ಎಂದರೆ ಗಮನ; ಗಗನದಿಂದ ಗಮಿಸಲಿಕ್ಕೆ ತನ್ನ ತಪವನ್ನೇ ರಥವಾಗಿ ಬಳಸಿದವನೇ ಭಗೀರಥ. 'ಬಗೀರಥ' ಎಂದರೆ ಬಗಿ ಅಥವಾ ಬಗೆ ಅರ್ಥಾತ್ ತೋಡುವುದರಲ್ಲಿ ನಿರತನಾದವನು ಎಂದು ಅರ್ಥವಾಗುತ್ತದೆ. ಬೋರ್‌ವೆಲ್ ಕೊರೆಯುವವನು 'ಬಗೀರಥ' ಆದಾನು. ಗಗನದಿಂದ ಗಂಗೆಯನ್ನು ತಂದವನ ತಪೋನಿಷ್ಠೆಗಾದರೂ ಅವನು ಭಗೀರಥನೇ ಆಗಬೇಕು. ಆದ್ದರಿಂದ ಭ ಅಕ್ಷರವನ್ನು, ಥ ಅಕ್ಷರವನ್ನು ಬಿಡುವಂತಿಲ್ಲ'' ಘೋಷಿಸಿದ ಸೀನು.

''ಭಘೀರಥ ಎನ್ನಬಹುದಲ್ಲ!'' ಛೇಡಿಸಿದೆ.

''ಘೀಂಕೃತಿಘಂಟಾನಾದದಸದ್ದು, ಭಗೀರಥನ ದೇವಾಲಯವೊಂದಿದೆ. ಅಲ್ಲಿ ಘೀಕಾರ ಸರಿ ಹೊಂದುತ್ತದೆ. ಮಿಕ್ಕೆಡೆ ಅವನ ಹೆಸರಲ್ಲಿ ಗೀಗೀ ಪದ ಹಾಡುವುದು ಸರಿಯಾದೀತು.''

ನನಗಂತೂ ಇನ್ನಾವುದೇ ಮಹಾಪ್ರಾಣವನ್ನು ಕಳೆದುಕೊಂಡಾಗ ಆಗಬಹುದಾದ ನೋವಿಗಿಂತ ಭಕಾರವನ್ನು ಕಳೆದುಕೊಂಡರೆ ಹೆಚ್ಚು ನೋವಾಗುತ್ತದೆ. ಭಕಾರವೇ ಇಲ್ಲದಿದ್ದರೆ ಭಕ್ಷ್ಯಗಳೂ ಇಲ್ಲ, ಭೋಜನವೂ ಇಲ್ಲವಾಗುವುದಲ್ಲ!

ಭಕಾರದ ಸೊಬಗು ಸಂಸ್ಕೃತದಲ್ಲಿ ಜನಿಸಿ ಕನ್ನಡದಲ್ಲಿ ಹರಿದು ಬಂದಿದೆ. ಇದೋ ಭಕಾರವನ್ನೊಳಗೊಂಡ ಒಂದು ಸುಂದರ ಪ್ರಸಂಗ:

ಬಿಲ್ಹಣನೆಂಬ ಕವಿಯು ರಾಜಕುವರಿಗೆ ಸಂಸ್ಕೃತವನ್ನು ಕಲಿಸುತ್ತಿದ್ದ. ರಾಜನಿಗೆ ತನ್ನ ಮಗಳನ್ನು ಕವಿಯು ಹಾರಿಸಿಕೊಂಡು ಹೋಗುವನೆಂಬ ಸುದ್ದಿ ತಲುಪಿತು. ತಾನೆಲ್ಲಿ, ಕವಿಯೆಲ್ಲಿ! ಆ ಕಾಲದ ರಾಜರಿಗೆ ತಿಳಿದ ಏಕೈಕ ಉಗ್ರಶಿಕ್ಷೆಯಾದ 'ತಲೆದಂಡ'ವನ್ನು ಕವಿಗೂ ವಿಧಿಸಲು ತೀರ್ಮಾನಿಸಿದ. ಇದನ್ನು ಅರಿತ ಕವಿಯು ರಾಜನಿಗೆ ಶ್ಲೋಕಸಂದೇಶವೊಂದನ್ನು ಕಳುಹಿಸಿದ:

ಭಟ್ಟಿರ್ನಷ್ಟೋ ಭಾರವಿಶ್ಚಾಪಿ ನಷ್ಟೋ
ಭಿಕ್ಷುರ್ನಷ್ಟೋ ಭೀಮಸೇನಾಪಿ ನಷ್ಟಃ।
ಭುಕ್ಕುಂಡಃ ಅಹಂ ಭೂಪತಿಃ ತ್ವಂ ಚ ರಾಜನ್
ಭಭ್ಬಾವಲ್ಯಾಂ ಅಂತಕಃ ಸನ್ನಿವಿಷ್ಟಃ ॥

ಇದನ್ನೇ ಕನ್ನಡದಲ್ಲಿ ಬರೆದಾಗ:

ಭಟ್ಟಿಯು ಹೋದನು ಭಾರವಿಯೂ ಸಹ
ಭಿಕ್ಷುವೂ ಗತಿಸಿದ ಭೀಮಸೇನನೂ
ಭುಕ್ಕುಂಡನಾದ ನನ್ನ ಸರದಿಯಿಂದು
ಭೂಪತಿಯೇ ಸರದಿ ನಿನ್ನದು ಮುಂದು
ಭಭಾಭಭಿಯ ಹಿಂದೆ ಬದ್ದಿಹನು ಅಂತಕನೀಗ ॥

(ಅರಸಕೇಳ್, ಭಟ್ಟಿಯೆಂಬ ಕವಿಯನ್ನು ಯಮನು ಸೆಳೆದ; ಭಾರವಿಯೆಂಬ ಕವಿಯನ್ನೂ ತದನಂತರ. ಮುನ್ನಡೆದು ಅವನು ಭಿಕ್ಷುವೆಂಬ ಶ್ರೇಷ್ಠನನ್ನೂ, ಭೀಮಸೇನನನ್ನೂ ಸೆಳೆದೊಯ್ದ. ಈಗ ಭುಕ್ಕುಂಡನಾದ (ಬಿಲ್ಹಣನ ಮತ್ತೊಂದು ಹೆಸರು. ಕವಿಯಾದ್ದರಿಂದ ಈಗಿನ ಕಾಲದವರು ಬುಕ್ ಉಂಡ ಎಂದು ಕರೆದು ಅಲ್ಪಪ್ರಾಣಿಗೆ ಪ್ರಿಯವಾದಾರು!) ನನ್ನ ಸರದಿ. ಮುಂದೆ ಭೂಪತಿಯಾದ ನಿನ್ನ ಸರದಿ. ಯಮನು ಈಗ ಭಭಾಭಿಭೀ ಅಕ್ಷರಮಾಲೆಯನ್ನು ಅನುಸರಿಸಿ ಒಬ್ಬೊಬ್ಬರನ್ನೇ ಒಯ್ಯುತ್ತಿದ್ದಾನೆ.)

ಕವಿಯ ಚಮತ್ಕಾರಕ್ಕೆ ಮೊದಲು ಮಗಳು ಆಕರ್ಷಿತಳಾಗಿದ್ದಳು. ಈಗ ಅಪ್ಪನೂ ಆದ. ತಲೆ ಉಳಿಯಿತು. ಇಂತಹ ಭಕಾರಭರಿತ ಕವನಗಳು ಭಾಷೆಯ ಸಮೃದ್ಧಿಯನ್ನು ತೋರುತ್ತವೆ. ಹಾಸ್ಯೋತ್ಪಾದಕ ಎಮ್ಮೆಸ್ಸೆನ್ ಅಲ್ಲಲ್ಲಿ ಹೇಳುವ ವಿನೋದದ ಪ್ರಸಂಗವೊಂದು ಇಂತಿದೆ:

ಬರೆಹಗಾರನೊಬ್ಬನಿಗೆ ''ಭಾಗೀರಥಿ'' ಯಲ್ಲಿನ ಕೊನೆಯ ಅಕ್ಷರ 'ತಿ'ಯೋ, 'ಥಿ'ಯೋ ಎಂಬ ಸಂದೇಹ ಮೂಡಿ ಎಮ್ಮೆಸ್ಸೆನ್‌ಗೆ ಕರೆ ಮಾಡಿದ. ಇವರು ನಡೆದಾಡುವ ನಿಘಂಟೆಂದೇ ಖ್ಯಾತರಾದ ಜಿ. ವೆಂಕಟಸುಬ್ಬಯ್ಯನವರಿಗೆ ಫೋನಾಯಿಸಿ, ''ಭಾಗೀರಥಿ ಎನ್ನಬೇಕೋ, ಭಾಗೀರತಿಯೋ'' ಎಂದು ಕೇಳಿದರು. ಪ್ರೊಫೆಸರ್ ಜಿವಿಯವರು, ''ಭಾಷೆಯ ದೃಷ್ಟಿಯಿಂದಾದರೆ ರಥಿ ಎನ್ನಿ, ಪ್ರೀತಿಯ ದೃಷ್ಟಿಯಿಂದಾದರೆ ರತಿ ಎನ್ನಿ. ನಿಮ್ಮ ಹೆಂಡತಿಯ ಹೆಸರು ಭಾಗೀರಥಿಯೇನು?'' ಎಂದು ಕೇಳಿದರು.

''ಅಲ್ಲ.''

''ಯಾರ್ಯಾರದೋ ಹೆಂಡತಿಯನ್ನು ರತಿ ಎಂದು ಕರೆದು ತೊಂದರೆಗೆ ಸಿಲುಕಬೇಡಿ. ಭಾಗೀರಥಿ ಎಂದೇ ಕೂಗಿ!''

ಸಂಸ್ಕೃತದಂತೆಯೇ ಕನ್ನಡದ ಸೊಬಗೂ ಇರುವುದು ಅದರ ಮಹಾಪ್ರಾಣ, ಒತ್ತಕ್ಷರಗಳಲ್ಲಿ. 'ತತ್ತ್ವಮಸಿ' ಪದವನ್ನು ಅಂತೆಯೇ ಬರೆದರೆ 'ಅದು ನೀನೇ ಆಗಿದ್ದೀಯೇ' ಎಂದಾಯಿತು. ಅದನ್ನೇ 'ತತ್ವಮಸಿ' ಎಂದು ಬರೆದರೆ ತತ್ವಕ್ಕೆ ಮಸಿ ಬಳಿದಂತೆ ಮರ್ಮಜ್ಞ!

ಕನ್ನಡದ ಪ್ರತಿ ಅಕ್ಷರಕ್ಕೂ ತನ್ನದೇ ಆದ ಉಚ್ಚಾರಚೆಲುವಿದೆ. 'ದನ'ವು ಹಾಲನ್ನು ನೀಡಿದರೆ 'ಧನ'ವು ನಮ್ಮ ಹಾಲತ್ತನ್ನು ನಿರ್ಧರಿಸುತ್ತದೆ. 'ಕರ'ವು ಹಿಡಿಯಲು ಅನುಕೂಲವಾದುದಾದರೆ 'ಖರ'ವು ಒದೆಯಲು ಅನುವಾದ ಪ್ರಾಣಿಯೆಂದಾಗುತ್ತದೆ. 'ತರ' ಎಂದರೆ ವಿಧ; 'ಥರ' ನಡುಗುವಿಕೆಯ ವಿಧ. 'ತಳ' ಕೆಳಭಾಗವನ್ನು ಸೂಚಿಸಿದರೆ 'ಥಳ' ಮೆರುಗನ್ನು ಸೂಚಿಸುತ್ತದೆ. ಬಾರಕ್ಕೂ ಭಾರಕ್ಕೂ ವ್ಯತ್ಯಾಸವನ್ನು ಹೆಣ್ಣಲ್ಲೇ ಕಾಣುವ ಗಂಡಸರೂ ಇದ್ದಾರೆ. ಪ್ರೀತಿಸುವ ಸಮಯದಲ್ಲಿ 'ಬಾ ಬಾರೆ ಚೆಲುವೆ, ಬಾರೇ ಒಲವೆ, ಬಾರಾ...' ಎನ್ನುವವರು, ಮದುವೆಯಾಗಿ ಲತೆಯು ವೃಕ್ಷವಾದಾಗ ಕಡೆಯ ಪದವನ್ನು 'ಭಾರಾ' ಎಂದೇ ನುಡಿಯುವರಂತೆ. 'ಮಟ'ವು ಮಟಮಟ ಮಧ್ಯಾಹ್ನದ ಬಿರುಬಿಸಿಲನ್ನು ನೆನಪಿಸಿದರೆ 'ಮಠ'ವು ಧರ್ಮ, ಭೋಜನಗಳ ತಂಪನ್ನು ಚಿತ್ರಿಸಿಕೊಡುತ್ತದೆ. 'ಮಠ'ದ ಊಟದ ನೆನಪಾದಾಗ ನನಗೆ ಆ ಪದದಲ್ಲಿನ 'ಠ' ಅಕ್ಷರದ 'ಠ' ಆಕಾರವು ತಟ್ಟೆಯಂತೆಯೂ, ಮಧ್ಯದಲ್ಲಿನ ಚುಕ್ಕಿಯು ಬರಬರುತ್ತಾ ಬೆಳೆಯುವ ಅನ್ನದ ರಾಶಿಯ ಮೊದಲ ಅಗುಳಿನಂತೆಯೂ ಕಾಣುತ್ತದೆ. ಕನ್ನಡ ವರ್ಣಮಾಲೆಯಲ್ಲಿ 'ಠ' ಮೊದಲು ಬಂದು ನಂತರ 'ರ' ಬರುವುದರಿಂದ 'ಠ' ಹಿರಿಯಳೆಂದು, 'ರ' ಕಿರಿಯಳೆಂದು ಕವಿಗಳೊಬ್ಬರ ಅಂಬೋಣ. ಹಿರಿಯಳಾದ 'ಠ' ಅಕ್ಷರವು ರ ಅಕ್ಷರದ ಬಗ್ಗೆ ದೂರುತ್ತಾ, 'ಈಗಿನ ಹೆಣ್ಣುಮಕ್ಕಳಿಗೆ ಸಂಸ್ಕಾರವೇ ಇಲ್ಲ, ನನ್ನ ಹಾಗೆಯೇ ಅವಳೂ ಲಕ್ಷಣವಾಗಿ ಕುಂಕುಮ ಇಟ್ಟುಕೊಳ್ಳಬಾರದೇ?'' ಎಂದು ಗೊಣಗಿದಳಂತೆ!

ಮಹಾಪ್ರಾಣಕ್ಕೆ ಒತ್ತುಕೊಡುವುದು ನಾಟಕಕಾರರ ಸತ್ಸಂಪ್ರದಾಯವಾಗಿತ್ತು. ಈಗ ಅದು ಸತ್ತ ಸಂಪ್ರದಾಯವಾಗಿದೆ. ಅಂದಿನ ಒಂದು ಸನ್ನಿವೇಶ. ಪ್ರಸಿದ್ಧ ನಾಟಕಕಾರರೊಬ್ಬರು ನಾಟಕವೊಂದರ ತಾಲೀಮು ನಡೆಸುತ್ತಿದ್ದರು. ಭೀಮನ ಪಾತ್ರಧಾರಿಯೊಬ್ಬನು ''ನಿನ್ನ ಊರು ಭಂಗ ಮಾಡದಿದ್ದರೆ ನನ್ನ ಹೆಸರು ಭೀಮನೆ ಅಲ್ಲ'' ಎಂದು ನುಡಿಯಬೇಕಾಗಿತ್ತು. ಎಷ್ಟೇ ಯತ್ನಿಸಿದರೂ ಅವನ ಬಾಯಲ್ಲಿ 'ಭೀ' ಹೊರಡುತ್ತಿರಲಿಲ್ಲ.

''ಸರಿ. ಇದು ನಿನ್ನ ಕೈಯಲ್ಲಾಗಲ್ಲ, ಸ್ಕ್ರಿಪ್ಟ್ ಚೇಂಜ್ ಮಾಡ್ತೀನಿ ಇರು'' ಎನ್ನುತ್ತಾ 'ನಿನ್ನ ತೊಡೆಯನ್ನು ಮುರಿಯದಿದ್ದರೆ ನನ್ನ ಹೆಸರು ಭೀಮನೆ ಅಲ್ಲ' ಎಂದು ಬರೆದುಕೊಟ್ಟರು. 'ಊರುಭಂಗ'ದ ಭ ಹೇಳುವುದು ತಪ್ಪಿತಲ್ಲ!

'ಬೀಮನೆ ಅಲ್ಲ'' ಎಂದನವ.

''ಅದಲ್ಲವೋ, ದೊಡ್ಡ ಬಿ ಹೇಳೋ'' ಎಂದರು ನಿರ್ದೇಶಕರು.

ಮತ್ತೆ ಅವನು ''ಬೀೀೀೀಮನೆ ಅಲ್ಲ'' ಎಂದ.

''ಆ ಬೀ ಅಲ್ಲ ಕಣೋ. ಊರುಬಂಗದ ಬದಲು ಬೇರೆ ಬರೆದುಕೊಟ್ಟೆ, ಪಾಂಡವನನ್ನು ಹೇಗಪ್ಪಾ ಬದಲಿಸುವುದು! ಇಲ್ಲಿ ಯಾರಾದರೂ ಸರಿಯಾದ ಬೀಮನನ್ನು ಹೇಳುವವರು ಇದ್ದೀರೇನಪ್ಪಾ?'' ಎಂದು ಕೇಳಿದರು.

ಇವನ್ನೆಲ್ಲ ವೀಕ್ಷಿಸುತ್ತಾ ಅಲ್ಲೇ ಕುಳಿತಿದ್ದ ಮಾಸ್ಟರ್ ಹಿರಣ್ಣಯ್ಯನವರು ''ಭೀಮ'' ಎಂದರು. ''ಕರೆಕ್ಟ್, ಲೋ, ಹಿರಣ್ಣಯ್ಯನ ಬಾಯಲ್ಲಿ ಬಂದ ಬೀಮನನ್ನು ಹೇಳೋ, ನನ್ನ ಬಾಯಲ್ಲಿ ಬಂದದ್ದನ್ನಲ್ಲ ಕಣೋ'' ಎಂದ ನಿರ್ದೇಶಕರು ಹಿರಣ್ಣಯ್ಯನವರತ್ತ ತಿರುಗಿ, 'ಹಿರಣ್ಣೇ, ನನ್ನ ಮನಸ್ಸಲ್ಲೂ ನಿನ್ನ ಬೀಮನೇ ಇದ್ದಾನೆ. ನನ್ನ ಬರವಣಿಗೆಯಲ್ಲಿಯೂ ನಿನ್ನ ಬೀಮನೇ ಇದ್ದಾನೆ. ಆದರೆ ಈ ನಾಲಿಗೆಗೆ ಮೊದಲಿನಿಂದಲು ಸಂಸ್ಕಾರ ನೀಡದೆ ಆ ಬೀಮ ಮಾತಿನಲ್ಲಿ ಕಳೆದುಹೋಗ್ತಾನೆ ಕಣೋ'' ಎಂದು ಅಲವತ್ತಿಕೊಂಡರು.

ಕಂಠ್ಯ, ತಾಲವ್ಯ, ಮೂರ್ಧನ್ಯ, ದಂತ್ಯ, ಓಷ್ಠ್ಯ ಉಚ್ಚಾರಗಳನ್ನು ಕಲಿಸುವ ಗುರುಗಳು ಇದ್ದರು. ಇಂದು ಅನೇಕ ಗುರುಗಳು 'ಕಂಠ್ಯ' ಎಂದರೆ 'can't ya' ಎನ್ನುವರು, 'ತಾಲವ್ಯ'ಕ್ಕೆ ತಾಳ ಸಿಗದು, ಮೂರ್ಧನ್ಯ ಎಂದರೆ ಮೂರು ಧ್ವನಿಗಳು ಎನ್ನುವರು, ದಂತ್ಯ ಎಂದರೆ ಕಾಡುಗಳ್ಳ ವೀರಪ್ಪನ್ ಭಾಷೆಯೆಂದೋ, ಡೆಂಟಿಸ್ಟ್ ಭಾಷೆಯೆಂದೋ ತಿಳಿಯುವರು, ಓಷ್ಠ್ಯವನ್ನು ಓಷ್ಟು (ರವಷ್ಟು-ರವೆಯಷ್ಟು ಎನ್ನುವುದರ ಅಪಭ್ರಂಶ) ಅರಿಯರು. ಇಂತಿರುವಾಗ ಮಹಾಪ್ರಾಣಕ್ಕೆ ಗೇಟ್ ಪಾಸ್ ಸಿಕ್ಕರೂ ಅಚ್ಚರಿಯಿಲ್ಲ. ◈

ತಂತ್ರಜ್ಞಾನ ಮತ್ತು ಭವಿಷ್ಯದ ಯುದ್ಧಗಳು!

ಯುದ್ಧದ ಸ್ವರೂಪವೇ ಈಗ ಬದಲಾಗಿದೆ. ಯುದ್ಧವೆಂದ ಕೂಡಲೇ ಟ್ಯಾಂಕ್‌ಗಳು, ಸೈನಿಕರು ಬಂದೂಕು ಹಿಡಿದು ಕಾದಾಡುವ ದೃಶ್ಯ ಮರೆಯಾಗುತ್ತಿದೆ. ಯುದ್ಧ ವಿಮಾನಗಳ 'ಡಾಗ್‌ಫೈಟ್' ಕೂಡಾ ಕಣ್ಮರೆಯಾಗುತ್ತಿದೆ. ಈಗೇನಿದ್ದರೂ ತಂತ್ರಜ್ಞಾನಾಧಾರಿತ ಸಮರ. ವಿವಿಧ ತಾಂತ್ರಿಕ ಉಪಕರಣಗಳೇ ಈಗ ದೇಶವೊಂದರ ಮೇಲುಗೈಯನ್ನು ನಿರ್ಧರಿಸುತ್ತವೆ. ಕತೆ, ಸಿನಿಮಾಗಳಲ್ಲಿದ್ದ 'ಭವಿಷ್ಯದ ಯುದ್ಧ'ದ ಪರಿಕಲ್ಪನೆಗಳು ಈಗ ನಿಜವಾಗುತ್ತಿವೆ....

▸ ದಿನಕರ

ಇರಾನ್- ಇಸ್ರೇಲ್ -ಅಮೆರಿಕವನ್ನೊಳಗೊಂಡು ನಡೆಯುತ್ತಿದ್ದ ಸಮರಕ್ಕೆ ತಾತ್ಕಾಲಿಕ ವಿರಾಮ ಬಿದ್ದಿದೆ. ಆದರೆ ಒಂದೂವರೆ ತಿಂಗಳ ಕಾಲದ ಯುದ್ಧದ ನಡೆದ ಬೆಳವಣಿಗೆಗಳನ್ನು ಗಮನಿಸಿದರೆ ಯುದ್ಧದ ಸ್ವರೂಪ ಬದಲಾಗುತ್ತಿರುವುದು ನಿಚ್ಚಳವಾಗಿದೆ. ತಂತ್ರಜ್ಞಾನದ ಪ್ರಗತಿಯು ಯುದ್ಧದ ಗತಿಯನ್ನೇ ಬದಲಿಸಿದೆ.

ಇರಾನ್ ಕಳೆದ ನಾಲ್ಕು ದಶಕಗಳಿಂದ ಅತೀ ಹೆಚ್ಚು ನಿರ್ಬಂಧಗಳನ್ನು ಎದುರಿಸಿದ್ದರೂ ಅತೀ ಹೆಚ್ಚು ಸಾಕ್ಷರತೆ ಹೊಂದಿರುವ ಗಲ್ಫ್ ದೇಶವದು. ಅಲ್ಲಿ ಶೇ. 95ರಷ್ಟು ಸಾಕ್ಷರತೆ ಇದೆ. ಮಹಿಳಾ ಸಾಕ್ಷರತೆಯಂತೂ ಶೇ. 99ರಷ್ಟಿದೆ. ಹಾಗಾಗಿ ತಂತ್ರಜ್ಞಾನದಲ್ಲೂ ಇರಾನ್ ಹಿಂದೆ ಬಿದ್ದಿಲ್ಲ, ವೈಮಾನಿಕ ಕ್ಷೇತ್ರ, ರಕ್ಷಣೆ ಮತ್ತು ಪರಮಾಣು ತಂತ್ರಜ್ಞಾನದಲ್ಲಿ ಇರಾನ್‌ನ ಪ್ರಗತಿ ಗಮನಾರ್ಹವಾಗಿದೆ. ಅದುವೇ ಅದರ ವೈರಿ ರಾಷ್ಟ್ರಗಳಿಗೆ ಆತಂಕ ಸೃಷ್ಟಿಸಿದ್ದು.

ಇರಾನಿನ ಕ್ಷಿಪಣಿ ಮತ್ತು ಪರಮಾಣು ತಂತ್ರಜ್ಞಾನಕ್ಕೆ ಉ.ಕೊರಿಯಾ, ರಷ್ಯಾ ಮತ್ತು ಚೀನಾಗಳು ನೆರವು ನೀಡಿವೆಯೆಂದು ಹೇಳಲಾಗುತ್ತದೆ. ಅದೆಷ್ಟು ನಿಜವೋ ಗೊತ್ತಿಲ್ಲ, ಆದರೆ ಇರಾನಿನ ಪರಮಾಣು ತಂತ್ರಜ್ಞಾನವು ಇಸ್ರೇಲ್, ಅಮೆರಿಕಗಳಿಗೆ ಆಂತಕ ಸೃಷ್ಟಿಸಿದ್ದು ಸುಳ್ಳಲ್ಲ. ಈ ಬಗ್ಗೆ ಇಸ್ರೇಲ್ ಎಷ್ಟು ಕಳವಳಗೊಂಡಿತ್ತೆಂದರೆ ಕಳೆದ ಕೆಲವು ವರ್ಷಗಳಲ್ಲಿ ಇರಾನಿನ ಪರಮಾಣು ವಿಜ್ಞಾನಿಗಳನ್ನೇ ಗುರಿಯಾಗಿಸಿ ದಾಳಿ ನಡೆಸಿ ಅವರನ್ನು ಹತ್ಯೆಗೈಯಲಾರಂಭಿಸಿತ್ತು. 2025ರ ಜೂನ್‌ನಲ್ಲಿ ನಡೆಸಿದ ವೈಮಾನಿಕ ದಾಳಿಯಲ್ಲಿ 11 ವಿಜ್ಞಾನಿಗಳು ಸಾವಿಗೀಡಾಗಿದ್ದರು. ಒಟ್ಟಾರೆಯಾಗಿ 20 ವಿಜ್ಞಾನಿಗಳನ್ನು ಇಸ್ರೇಲ್ ಹತ್ಯೆಗೈದಿದೆ. ಇದಕ್ಕೆ ಸಡ್ಡು ಹೊಡೆದ ಇರಾನ್ ''ಹುತಾತ್ಮರಾದ ವಿಜ್ಞಾನಿಗಳ ಜಾಗವನ್ನು ನೂರಾರು ಪರಮಾಣು ವಿಜ್ಞಾನಿಗಳು ತುಂಬುತ್ತಾರೆ'' ಎಂದು ಹೇಳಿತ್ತು.

ಯುದ್ಧದಲ್ಲಿ ಎಐ ಪಾತ್ರ

ಈ ಬಾರಿಯ ಸಮರದ ಗಮನಾರ್ಹ ವಿಷಯವೆಂದರೆ ಕೃತಕ ಬುದ್ಧಿಮತ್ತೆ (ಎಐ) ವಹಿಸುತ್ತಿರುವ ಪಾತ್ರ. ಯುದ್ಧನಿರತ ಎಲ್ಲಾ ದೇಶಗಳೂ ಎಐ ತಂತ್ರಜ್ಞಾನ ಬಳಸಿದ್ದು ಕಂಡುಬರುತ್ತದೆ. ಅಮೆರಿಕವು 2017ರಲ್ಲಿ ಅನುಷ್ಠಾನಿಸಿದ 'ಸ್ಮಾರ್ಟ್ ಸಿಸ್ಟಮ್ ಯೋಜನೆ'ಯ ಮೂಲಕ ವೈಮಾನಿಕ ದಾಳಿ ನಡೆಸಿತು. ಎಐ ಅತ್ಯಂತ ಕ್ಷಿಪ್ರವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವುದರಿಂದ ದಾಳಿಯ ಪ್ರಮಾಣ ಮತ್ತು ನಿಖರತೆಯು ಹೆಚ್ಚಿದೆ. ಇರಾನ್‌ನಲ್ಲಿ ಹುಡುಗಿಯರ ಶಾಲೆಯ ಮೇಲೆ ನಡೆದ ಅಮೆರಿಕದಿಂದ ನಡೆದ ದಾಳಿಗೂ ಎಐ ಆಧಾರಿತ ತಂತ್ರಜ್ಞಾನ ಕಾರಣವೇ ಅಥವಾ ಅಮೆರಿಕದ ಉನ್ನತಾಧಿಕಾರಿಗಳು ತೆಗೆದುಕೊಂಡ ತಪ್ಪು ನಿರ್ಧಾರ ಕಾರಣವೇ ಎಂಬುದು ಸ್ಪಷ್ಟವಾಗಿಲ್ಲ.

ಇಸ್ರೇಲ್ 2021ರಲ್ಲಿ ಹಮಾಸ್ ವಿರುದ್ಧದ ಸಮರದ ಕಾಲದಿಂದಲೇ ಎಐಯನ್ನು ಬಳಸಿಕೊಳ್ಳುತ್ತಿದೆ. ತನ್ನ ದಾಳಿಯ ಗುರಿಯನ್ನು ಪಟ್ಟಿ ಮಾಡಲು ಹಾಗೂ ಯಾವ ವ್ಯಕ್ತಿಗಳನ್ನು ಹತ್ಯೆಗೈಯ್ಯಬೇಕು ಎಂದು ನಿರ್ಧರಿಸಲು ಎಐ ನೆರವು ಪಡೆಯುತ್ತಿದೆ. ಹತ್ಯೆಯ ಪ್ರಮಾಣ ಹೆಚ್ಚಿಸಲು ಎಐ ತಂತ್ರಜ್ಞಾನವನ್ನು ಶಸ್ತ್ರಾಸ್ತ್ರ ವ್ಯವಸ್ಥೆಯೊಂದಿಗೆ ಜೋಡಿಸಿಕೊಂಡಿದೆ. 'ಲ್ಯಾವೆಂಡರ್' ಎಂಬ ವ್ಯವಸ್ಥೆಯು ಎಐಯನ್ನು ಆಧರಿಸಿ ಕ್ಷಿಪ್ರ ನಿರ್ಧಾರ ತಾಳುತ್ತದೆ. 'ಗೋಸ್ಪೆಲ್' ಎಂಬ ಎಐ ತಂತ್ರಜ್ಞಾನವು ಹತ್ಯೆ ಮಾಡಬೇಕಾದವರ ಪಟ್ಟಿ ತಯಾರಿಸುತ್ತದೆ. ಮತ್ತೊಂದು ತಂತ್ರಜ್ಞಾನವು ದಾಳಿಗೆ ಆಯ್ದುಕೊಂಡ ವ್ಯಕ್ತಿಯ ಚಲನವಲನಗಳ ಮೇಲೆ ನಿರಂತರ ನಿಗಾ ಇಡುತ್ತದೆ.

ಮಾಹಿತಿ ಸಮರ ಮತ್ತು ಸೈಬರ್ ಕಾರ್ಯಾಚರಣೆಯಲ್ಲಿ ಇರಾನ್ ಕೂಡ ಎಐ ಬಳಸಿಕೊಳ್ಳುತ್ತಿದೆ. ಅದರ ಶಹೀದ್ ಡ್ರೋನ್‌ಗಳು ನಿಖರ ಗುರಿ ಸಾಧಿಸುವಲ್ಲಿ ಸಫಲತೆ ಕಾಣಲು ಎಐ ತಂತ್ರಜ್ಞಾನ ಬಳಸಿದ್ದೂ ಕಾರಣವಾಗಿದೆ.

ಈ ಶಹೀದ್ ಡ್ರೋನ್‌ಗಳನ್ನು ಈ ಮೊದಲು ರಷ್ಯಾವು ಉಕ್ರೇನ್ ಸಮರದಲ್ಲೂ ಬಳಸಿತ್ತು. ಈಗ ಇರಾನ್ ಅದೇ ಡ್ರೋನ್‌ಗಳನ್ನು ಇಸ್ರೇಲ್ ಮತ್ತು ಅಮೆರಿಕದ ವಿರುದ್ಧ ಬಳಸಿದೆ. ಇವೆರಡು ದೇಶಗಳ ರಕ್ಷಣಾ ವ್ಯವಸ್ಥೆಯನ್ನು ಭೇದಿಸಿ ದಾಳಿ ಮಾಡಲೂ ಈ ಕ್ಷಿಪಣಿಗಳು ಸಫಲವಾಗಿವೆ. ಬಹುತೇಕವಾಗಿ ಈ ಡ್ರೋನ್‌ಗಳನ್ನು ಕ್ಷಿಪಣಿಯ ಜತೆಗೇ ಹಾರಿಸಲಾಗುತ್ತದೆ. ಆ ಮೂಲಕ ಅಮೆರಿಕ ಮತ್ತು ಇಸ್ರೇಲ್‌ನ ಕ್ಷಿಪಣಿ ನಿರೋಧಕ ವ್ಯವಸ್ಥೆಯನ್ನು ಭೇದಿಸಲು ಸಫಲವಾಗುತ್ತದೆಯಲ್ಲದೆ ಅವನ್ನು ಹೊಡೆದುರುಳಿಸಲು ಇವೆರಡು ದೇಶಗಳು ದುಬಾರಿ ಕ್ಷಿಪಣಿಗಳನ್ನು ಬಳಸಬೇಕಾಗುತ್ತದೆ.

ಇಸ್ರೇಲ್‌ನ ಬಳಿ ಉನ್ನತ ಶಕ್ತಿಯ ಲೇಸರ್ ಆಧಾರಿತ ಡ್ರೋನ್ ನಾಶಕ ವ್ಯವಸ್ಥೆ ಇದೆ. ಅದನ್ನು ಕಳೆದ ವರ್ಷ ಯಶಸ್ವಿಯಾಗಿ ಪರೀಕ್ಷೆಗೊಳಪಡಿಸಲಾಗಿತ್ತು. ಆದರೆ ಪ್ರಸಕ್ತ ಸಮರದಲ್ಲಿ ಇಸ್ರೇಲ್ ಅದನ್ನು ಉಪಯೋಗಿಸುತ್ತಿಲ್ಲ, ಕಾರಣವೇನೆಂದು ತಿಳಿದಿಲ್ಲ.

ರಷ್ಯಾ ಉಕ್ರೇನ್‌ನ ಮೇಲೆ ಶಹೀದ್ ಡ್ರೋನ್‌ಗಳ ಹಿಂದಷ್ಟೇ ಪ್ರಯೋಗಿಸಿದ್ದಲ್ಲದೇ ತನ್ನದೇ ಆದ ಗೇರನ್ ಡ್ರೋನ್‌ಗಳನ್ನೂ ಪ್ರಯೋಗಿಸಿತ್ತು. ಇವು ಶತ್ರು ರಾಷ್ಟ್ರದ ಜಾಮಿಂಗ್ ವ್ಯವಸ್ಥೆಯನ್ನು ವಿಫಲಗೊಳಿಸುವ ಸಾಮರ್ಥ್ಯವನ್ನು ಹೊಂದಿವೆ. ಕ್ಷಿಪಣಿಗಳ ಜತೆಗೇ ಹಲವಾರು ಡ್ರೋನ್‌ಗಳನ್ನೂ ಪ್ರಯೋಗಿಸುವುದರಿಂದ ಶತ್ರು ರಾಷ್ಟ್ರಕ್ಕೆ ಹೆಚ್ಚು ನಷ್ಟವಾಗುವುದು. ಏಕೆಂದರೆ ಇಂತಹ ಡ್ರೋನ್‌ಗಳನ್ನು ಹೊಡೆದು ಹಾಕಲು ಮಿಸೈಲ್ ನಾಶಕ ದುಬಾರಿ ಕ್ಷಿಪಣಿಗಳನ್ನೇ ಬಳಸಬೇಕಾಗುತ್ತದೆ. ಇರಾನ್‌ನ ಅಲ್ಪಮೊತ್ತದ ಶಹೀದ್ ಡ್ರೋನ್‌ಗಳನ್ನು ಹೊಡೆದುರುಳಿಸಲು ಅಮೆರಿಕ ಮತ್ತು ಇಸ್ರೇಲ್ ದುಬಾರಿ ಮೊತ್ತದ ಕ್ಷಿಪಣಿಗಳನ್ನು ಬಳಸಬೇಕಾಗಿತ್ತು. ಇದೇವೇಳೆ ಅಮೆರಿಕ ಕೂಡಾ ಶಹೀದ್ ಮಾದರಿಯ ಲೂಕಾಸ್ ಡ್ರೋನ್‌ಗಳನ್ನು ಇರಾನ್‌ನ ರೆವೆಲ್ಯೂಷನರಿ ಗಾರ್ಡ್‌ಗಳ ಮೇಲೆ ಪ್ರಯೋಗಿಸಿತ್ತು. ಸಣ್ಣ ಗಾತ್ರದ ಡ್ರೋನ್‌ಗಳನ್ನು ಪತ್ತೆ ಹಚ್ಚುವುದು ಕಷ್ಟ. ಇದಕ್ಕಾಗಿ ಉಕ್ರೇನ್ ಶಬ್ದಾಸ್ತ್ರ ವ್ಯವಸ್ಥೆಯೊಂದನ್ನು ಕಂಡುಹಿಡಿದಿತ್ತು. ಇದನ್ನು ಕ್ಷಿಪಣಿ ರಕ್ಷಣಾ ವ್ಯವಸ್ಥೆಯೊಂದಿಗೆ ಜೋಡಿಸಲಾಗಿದೆ. ಇದೀಗ ಕೊಲ್ಲಿ ರಾಷ್ಟ್ರಗಳೂ ತಮ್ಮ ಪ್ರಮುಖ ನೆಲೆಗಳ ಸುತ್ತ ಇದನ್ನು ಅಳವಡಿಸಿವೆ. ಇಸ್ರೇಲ್ ಕೂಡಾ ಉಕ್ರೇನ್‌ನಿಂದ ಇದನ್ನು ಪಡೆಯುವ ಕುರಿತಂತೆ ಮಾತುಕತೆ ನಡೆಸುತ್ತಿದೆ. ಇವು ಭವಿಷ್ಯದ ಡ್ರೋನ್ ವಿರೋಧಿ ವ್ಯವಸ್ಥೆಯಾಗಿ ರೂಪುಗೊಳ್ಳಬಹುದು. ಅಗ್ಗದ ಡ್ರೋನ್‌ಗಳನ್ನು ದುಬಾರಿ ಕ್ಷಿಪಣಿಗಳಿಂದ ಹೊಡೆದುರುಳಿಸಬೇಕಾದ ಅನಿವಾರ್ಯತೆಯನ್ನು ಇದು ತಪ್ಪಿಸಿ ಖರ್ಚು ನಿಯಂತ್ರಣಕ್ಕೆ ನೆರವಾಗಬಲ್ಲದು.

ಡ್ರೋನ್, ಕ್ಷಿಪಣಿಗಳ ಪಾತ್ರ

ಇನ್ನು ಮುಂದೆ ಯುದ್ಧದಲ್ಲಿ ಕ್ಷಿಪಣಿ ಮತ್ತು ಡ್ರೋನ್‌ಗಳ ಬಳಕೆಯ ಸಾಧ್ಯತೆ ಹೆಚ್ಚಲಿದೆ. ಇರಾನ್‌ನ ಕ್ಲಸ್ಟರ್ ಕ್ಷಿಪಣಿಗಳು ಮತ್ತು ಹೌತಿಗಳು ಪ್ರಯೋಗಿಸಿದ ಕ್ಷಿಪಣಿಗಳು ಇಸ್ರೇಲ್‌ನ ಆಯರ್ನ್ ಡೋಮ್ ಕವಚವನ್ನು ಭೇದಿಸಲು ಸಫಲವಾಗಿದ್ದವು. ಭವಿಷ್ಯದ ಸಮರಗಳಲ್ಲಿ ಡ್ರೋನ್‌ಗಳು ಮತ್ತು ಕ್ಷಿಪಣಿಗಳ ಪಾತ್ರ ಇನ್ನಷ್ಟು ವಿಸ್ತರಣೆಯಾಗಬಹುದು. ಹೌತಿಯಂತೆ ಇನ್ನಿತರ ಭಯೋತ್ಪಾದಕ ಸಂಘಟನೆಗಳೂ ಇಂತಹ ಡ್ರೋನ್‌ಗಳನ್ನು ಹೊಂದಲಾರಂಭಿಸಿದರೆ ಅದು ಸೃಷ್ಟಿಸುವ ಅಪಾಯ ಅನೂಹ್ಯವಾದೀತು.

ಈಗಿನ ಸಮರ ಬಾಹ್ಯಾಕಾಶಕ್ಕೂ ವ್ಯಾಪಿಸಿದೆ. ಅಮೆರಿಕದ ಬಾಹ್ಯಾಕಾಶದ ಉಪಗ್ರಹಗಳು ಮತ್ತು ಸೈಬರ್ ಕಮಾಂಡ್‌ಗಳು ಇರಾನಿನ ಉಪಗ್ರಹ ಜಾಲವನ್ನು ನಾಶಪಡಿಸಲು ಸಫಲವಾಗಿದ್ದವು. ಇರಾನ್‌ನ ಕ್ಷಿಪಣಿ ಲಾಂಚರ್‌ಗಳನ್ನು ಪತ್ತೆ ಹಚ್ಚುವಲ್ಲಿ ಅಮೆರಿಕದ ಉಪಗ್ರಹಗಳು ನೆರವು ನೀಡಿದ್ದವು. ವಾಣಿಜ್ಯಕ ಉಪಗ್ರಹಗಳ ಮಾಹಿತಿಗಳನ್ನು ಕೂಡಾ ಈ ಯುದ್ಧದಲ್ಲಿ ಬಳಸಲಾಗಿದೆ. ಇರಾನ್ ಮಾತ್ರ ಈ ವಿಷಯದಲ್ಲಿ ರಷ್ಯಾ ಮತ್ತು ಚೀನಾದ ಉಪಗ್ರಹ ಚಿತ್ರಗಳನ್ನು ಅವಲಂಬಿಸಬೇಕಾಗಿ ಬಂದಿತು. ಅಮೆರಿಕದ ನಿರ್ದಿಷ್ಟ ನೆಲೆಗಳ ಮೇಲೆ ದಾಳಿ ನಡೆಸಲು ಅದಕ್ಕೆ ಈ ಉಪಗ್ರಹ ಚಿತ್ರಗಳು ನೆರವಿಗೆ ಬಂತು. ಮುಂಬರುವ ಯುದ್ಧಗಳಲ್ಲಿ ಬಾಹ್ಯಾಕಾಶ ಕೂಡಾ ರಣಾಂಗಣವಾಗಿ ಪರಿವರ್ತಿಸಲ್ಪಡುವುದು ಸ್ಪಷ್ಟವಾಗಿದೆ.

ನರೇಟಿವ್ ಸಮರ

ಯುದ್ಧದ ಸಮಯದಲ್ಲಿ ಸರಿಯಾದ ಸಂಕಥನ(ನರೇಟಿವ್)ವನ್ನು ಪ್ರಸಾರಿಸುವುದು ಕೂಡಾ ಮುಖ್ಯವಾಗಿದೆ. ಇಂತಹ ಸಂಕಥನಗಳು ಜಾಗತಿಕ ಅಭಿಪ್ರಾಯವನ್ನು ರೂಪಿಸುತ್ತವೆ. ಬಹಳಷ್ಟು ಮಾಧ್ಯಮಗಳು ಪಾಶ್ಚಿಮಾತ್ಯರಿಂದ ನಿಯಂತ್ರಿಸಲ್ಪಡುತ್ತಿವೆ. ಆದರೆ ಸಾಮಾಜಿಕ ಮಾಧ್ಯಮ ಮುಕ್ತವಾಗಿದೆ. ಇರಾನ್‌ನಿಂದ ತಮಗಾದ ಹಾನಿಯು ಜಗತ್ತಿಗೆ ತಿಳಿಯದಂತೆ ಅಮೆರಿಕ ಮತ್ತು ಗಲ್ಫ್ ರಾಷ್ಟ್ರಗಳು ಮಾಧ್ಯಮಗಳ ಮೇಲೆ ನಿರ್ಬಂಧ ಹಾಕಿದರೂ ಇರಾನ್ ಸಾಮಾಜಿಕ ಮಾಧ್ಯಮಗಳ ಮೂಲಕ ಇದನ್ನು ಹರಡುವಲ್ಲಿ ಸಫಲವಾಯಿತು. ಸಾಮಾನ್ಯ ಜನರು ಯಾವಾಗಲೂ ದುರ್ಬಲರ ಪರವಾಗಿ ಅನುಕಂಪ ಹೊಂದಿರುತ್ತಾರೆ. ಉಕ್ರೇನ್ ಸಮರದಲ್ಲಿ ಜನರು ಉಕ್ರೇನ್‌ನ್ನು ಬೆಂಬಲಿಸುತ್ತಿದ್ದರು. ಇದೀಗ ಜನರ ಅನುಕಂಪ ಇರಾನ್‌ನ ಪರವಾಗಿದೆ. ಹಾಗಾಗಿ ನರೇಟಿವ್‌ಗಳ ಸಮರದಲ್ಲಿ ಅಮೆರಿಕಕ್ಕೆ ಹಿನ್ನಡೆಯಾಗಿರುವುದು ಸ್ಪಷ್ಟವಾಗಿದೆ. ಅದಕ್ಕೆ ಟ್ರಂಪ್‌ರ ಎಡಬಿಡಂಗಿ ವರ್ತನೆ ಮತ್ತು ಬಡಾಯಿ ಕೊಚ್ಚಿಕೊಳ್ಳುವಿಕೆ ಕೂಡಾ ಕಾರಣವಾಗಿದೆ. ಸ್ವತಹ ಅಮೆರಿಕದಲ್ಲೇ ಟ್ರಂಪ್‌ಗೆ ಬೆಂಬಲ ಕ್ಷೀಣಿಸುತ್ತಿದೆ.

ಈಗ ಏರ್ಪಟ್ಟಿರುವ ಕದನ ವಿರಾಮ ಮುರಿಯುವುದೇ ಮುಂದುವರಿಯುವುದೇ ಸ್ಪಷ್ಟವಾಗಿಲ್ಲ, ತಮ್ಮಲ್ಲಿ ಇನ್ನೂ ರಹಸ್ಯ ಹಾಗೂ ಮಾರಕ ಅಸ್ತ್ರಗಳಿವೆಯೆಂದು ಅತ್ತ ಅಮೆರಿಕವೂ ಇತ್ತ ಇರಾನ್ ಕೂಡಾ ಹೇಳಿಕೊಂಡಿವೆ. ಅವು ಎಂತಹ ಪರಿಣಾಮ ಬೀರಬಹುದೆಂಬುದು ನಮಗಂತೂ ತಿಳಿದಿಲ್ಲ, ಪರಮಾಣು ಬಾಂಬುಗಳನ್ನು ಪ್ರಯೋಗಿಸುವ ಬೆದರಿಕೆಯನ್ನು ಇನ್ನೂ ಯಾವುದೇ ದೇಶ ಒಡ್ಡಿಲ್ಲ, ಅದು ಸಮಾಧಾನಕರವಾದರೂ ಈಗಿನ ಸಾಂಪ್ರದಾಯಿಕ ಅಸ್ತ್ರಗಳೇ ತಂತ್ರಜ್ಞಾನವನ್ನು ಮೇಳೈಸಿಕೊಂಡು ಹೆಚ್ಚು ವಿನಾಶ ಸೃಷ್ಟಿಸುತ್ತಿರುವುದಂತೂ ಹೌದು.

ಭವಿಷ್ಯದಲ್ಲಿ ಯುದ್ಧವೆದುರಿಸಲು ಯಾವ ರೀತಿ ಸಿದ್ಧತೆ ನಡೆಸಬೇಕಾಗುತ್ತದೆ ಎಂಬುದನ್ನು ಈಗ ನಡೆಯುತ್ತಿರುವ ಸಮರ ತೋರಿಸಿ ಕೊಟ್ಟಿದೆ. ಭಾರತವು ಇದನ್ನೆಲ್ಲ ಸೂಕ್ಷ್ಮವಾಗಿ ಗಮನಿಸುತ್ತಿರುವುದು, ಭವಿಷ್ಯದ ಯುದ್ಧವೆದುರಿಸಲು ಸೂಕ್ತ ಸಿದ್ಧತೆ ನಡೆಸಿಕೊಳ್ಳುವುದು ಸಹಜವೇ ಆಗಿದೆ.



ಸೈನಿಕನನ್ನು ಪತ್ತೆ ಹಚ್ಚಿದ 'ಘೋಸ್ಟ್ ಮರ್ಮರ್'

ಇತ್ತೀಚೆಗೆ ಅಮೆರಿಕದ ಯುದ್ಧವಿಮಾನವೊಂದು ಇರಾನಿನ ದಾಳಿಗೀಡಾಗಿ ಪತನಗೊಂಡಿತು. ಪೈಲಟ್‌ಗಳು ಸೀಟಿನ ಸಮೇತ ಎಜೆಕ್ಟ್ ಆದರು. ಒಬ್ಬ ಪೈಲಟ್ ಸುರಕ್ಷಿತವಾಗಿ ಅಮೆರಿಕದ ಕೈಗೆ ಸಿಕ್ಕಿದನಾದರೂ ಇನ್ನೊಬ್ಬ ಮಾತ್ರ ಶತ್ರುದೇಶದಲ್ಲಿ ಬಿದ್ದ. ಆತನನ್ನು ಪತ್ತೆ ಹಚ್ಚಿ ಕರೆತರಲು ಅಮೆರಿಕವು ಹರಸಾಹಸವನ್ನೆ ನಡೆಸಿತು. ಕೋಟ್ಯಂತರ ಡಾಲರ್ ವ್ಯಯಿಸಿತು. ದೊಡ್ಡ ಸೈನ್ಯದ ತಂಡವನ್ನು, ವಾಯುಪಡೆಯನ್ನು ಬಳಸಿಕೊಂಡಿತು.

ಆದರೆ ಇರಾನಿನ ಗುಡ್ಡ ಪ್ರದೇಶಗಳಲ್ಲಿ ಇರುವ ಅಮೆರಿಕನ್ ಸೈನಿಕನ ಇರವನ್ನು ನಿಖರವಾಗಿ ಪತ್ತೆ ಹಚ್ಚಲು ನೆರವಾದುದು ಅಮೆರಿಕದ ಗುಪ್ತಚರ ಸಂಸ್ಥೆ ಸಿಐಎ ಅಭಿವೃದ್ಧಿಪಡಿಸಿದ 'ಘೋಸ್ಟ್ ಮರ್ಮರ್' ಎಂಬ ತಂತ್ರಜ್ಞಾನ. ಇದು ಅಮೆರಿಕನ್ ಸೈನಿಕನ ಎದೆಬಡಿತವನ್ನು ಪತ್ತೆ ಹಚ್ಚಿ ಆತ ಇಂತಹುದೇ ಜಾಗದಲ್ಲಿ ಇದ್ದಾನೆಂದು ನಿಖರವಾಗಿ ಕಂಡುಹಿಡಿಯಿತು. ಮೈಲು ದೂರದಿಂದಲೇ ಮಾನವನ ಹೃದಯ ಬಡಿತವನ್ನು ಪತ್ತೆ ಹಚ್ಚಬಲ್ಲ ಅತ್ಯಾಧುನಿಕ ಸಾಧನವದು. ಮನುಷ್ಯನ ಎದೆಬಡಿತದ ಎಲೆಕ್ಟ್ರೋ ಮ್ಯಾಗ್ನೆಟಿಕ್ ಸಂದೇಶವನ್ನು ಪತ್ತೆ ಹಚ್ಚುತ್ತದೆ ಇದು.

ಈ ಸಾಧನವು ವಾತಾವರಣದ ಇತರ ಸದ್ದುಗಳನ್ನೆಲ್ಲ ಸ್ತಬ್ಧಗೊಳಿಸಿ, ಕೇವಲ ಮನುಷ್ಯನ ಎದೆಬಡಿತವನ್ನು ಮಾತ್ರ ಆಲಿಸುವ ಸಾಮರ್ಥ್ಯ ಪಡೆದಿದೆ. ಈ ಸಾಧನವನ್ನು ಅಮೆರಿಕದ ಲಾಕ್‌ಹೀಡ್ ಮಾರ್ಟಿನ್ ಕಂಪೆನಿಯ ಅತ್ಯಂತ ರಹಸ್ಯ ಸಂಶೋಧನಾ ಘಟಕವಾದ 'ಸ್ಕಂಕ್ ವರ್ಕ್ಸ್' ಆವಿಷ್ಕರಿಸಿದ್ದು, ಅದರ ಬಳಕೆ ಇದೇ ಮೊದಲನೆಯದು.

ಎದೆಬಡಿತವನ್ನು 'ಮರ್ಮರ' (ಗುನುಗು) ಎಂದು ಕರೆಯುತ್ತಾರೆ. ಘೋಸ್ಟ್ ಅಂದರೆ ಒಂದರ್ಥದಲ್ಲಿ ಎಲ್ಲರ ಕಣ್ಣಲ್ಲಿ ಮಾಯವಾದವನು ಎಂದರ್ಥ. ಅದಕ್ಕಾಗಿಯೇ ಇದಕ್ಕೆ ಈ ಹೆಸರನ್ನು ಇಡಲಾಗಿದೆಯಂತೆ.

'ಡ್ರೋನ್ ಹಿಂಡು'ಗಳೇ ದಾಳಿಗೆ ಬಂದರೆ...

ಕ್ಷಿಪಣಿಗಳು, ರಾಕೆಟ್‌ಗಳಿಗಿಂತಲೂ ಹೆಚ್ಚು ಈಗ ಡ್ರೋನ್‌ಗಳನ್ನು ವೈಮಾನಿಕ ದಾಳಿಗೆ ಬಳಸಲಾಗುತ್ತಿರುವುದು ಇತ್ತೀಚಿನ ಬೆಳವಣಿಗೆ. ಡ್ರೋನ್‌ಗಳನ್ನು ಹಿಂಡು ಹಿಂಡಾಗಿ (drone swarms) ದಾಳಿಗೆ ಬಳಸುವುದು ಈಗಿನ ಹೊಸ ತಂತ್ರ. ಕ್ಷಿಪಣಿ ದಾಳಿ ತಡೆಯಬಲ್ಲ ವಾಯು ರಕ್ಷಣಾ ಕವಚವನ್ನು ಭೇದಿಸಲು ಈ ತಂತ್ರ ಈಗ ಬಳಸಲಾಗುತ್ತಿದೆ.

ಸುಮಾರು 1000 ಡ್ರೋನ್‌ಗಳು ಅಥವಾ 10,000 ಡ್ರೋನ್‌ಗಳು ಏಕಕಾಲದಲ್ಲಿ ದಾಳಿಯೆಸಗಲು ಬಂದರೆ ಹೇಗಿರಬಹುದು ಯೋಚಿಸಿ.



ವಾಯು ರಕ್ಷಣಾ ಕವಚವು ಶೇ.90ರಷ್ಟು ಡ್ರೋನ್‌ಗಳನ್ನು ಹೊಡೆದು ಹಾಕಿದರೂ ಉಳಿದ ಶೇ.10ರಷ್ಟು ಡ್ರೋನ್‌ಗಳೇ ಸಾಕಷ್ಟು ಹಾನಿ ಮಾಡಬಲ್ಲವು. ಅದರಲ್ಲೂ, ತಾವಾಗಿ ಸ್ಫೋಟಿಸಬಲ್ಲ ಕ್ಯಾಮಿಕಾಸಿ ಡ್ರೋನ್‌ಗಳಾದರೆ ಇನ್ನಷ್ಟು ಹೆಚ್ಚಿನ ಹಾನಿಯೆಸಗಬಲ್ಲವು.

ಈ ಡ್ರೋನ್ ನಿರ್ಮಾಣ ಕ್ಕಾಗುವ ವೆಚ್ಚವೂ ಕಡಿಮೆಯೆ. ಕಳೆದ ವರ್ಷ ಉಕ್ರೇನ್ ಇಂತಹ ಕಡಿಮೆ ವೆಚ್ಚದ 117 ಡ್ರೋನ್‌ಗಳನ್ನು ಕಳಿಸಿ ರಷ್ಯಾದ ಕೆಲವಾರು ವಾಯುನೆಲೆಗಳನ್ನು ನಾಶಪಡಿಸಿತ್ತು.

ಜಾಮಿಂಗ್ ವ್ಯವಸ್ಥೆಯ ಮೂಲಕ ಡ್ರೋನ್‌ಗಳು ಕಾರ್ಯವೆಸಗದಂತೆ ಮಾಡುವ ತಂತ್ರಜ್ಞಾನ ಅಭಿವೃದ್ಧಿ ಪಡಿಸಲಾಗುತ್ತಿದೆಯಾದರೂ ಇದೇವೇಳೆ, ಇಂತಹ ಸಂದರ್ಭದಲ್ಲಿ ಡ್ರೋನ್‌ಗಳು ಸ್ವಯಂ ದುರಸ್ತಿ ಮಾಡಿಕೊಂಡು ತಾವೇ ಕಾರ್ಯವೆಸಗುವಂತೆ ಮಾಡುವ ರೀತಿಯಲ್ಲಿ ಡ್ರೋನ್‌ಗಳಲ್ಲೂ ಸುಧಾರಣೆ ಮಾಡಲಾಗುತ್ತಿದೆ.

ಮಹಿಳಾ ಮೀಸಲಾತಿ ಬೆಂಬಲಿಸಿ

ಪುಟ 1➡ ಮಹಿಳಾ ಮೀಸಲಾತಿ ಎಂಬುದು ಬಹಳ ವರ್ಷಗಳ ಬೇಡಿಕೆಯಾಗಿತ್ತು. ಅದು ಈಡೇರುವ ವಿಚಾರದಲ್ಲಿ ಸಂಶಯವಿತ್ತು. ಮೋದಿ ಅವರು ದೇಶದ ಪ್ರಧಾನಿಯಾದ ಮೇಲೆ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಸೇರಿ ಎಲ್ಲ ಕ್ಷೇತ್ರಗಳಲ್ಲಿ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿದ್ದಾರೆ ಎಂದರು. ಸುಮಾರು 15 ವರ್ಷಗಳ ಹಿಂದೆ ಇದು ಸಂಸತ್ತಿನಲ್ಲಿ ಚರ್ಚೆಗೆ ಬಂದಾಗ ಕೆಲವು ರಾಜಕೀಯ ಪಕ್ಷದವರು ಮಸೂದೆಯ ಹಾಳೆಯನ್ನು ಹರಿದು ಪ್ರಬಲ ವಿರೋಧ ವ್ಯಕ್ತಪಡಿಸಿದ್ದರು. ಕಾಂಗ್ರೆಸ್ ಹಳದಿ ಗ್ಲಾಸ್ ಹಾಕಿಕೊಂಡಿದೆ. ಅದರಿಂದ ಯಾವುದನ್ನು ನೋಡಿದರೂ ಹಳದಿ, ಚುನಾವಣೆಯೇ ಅವರಿಗೆ ಗೋಚರಿಸುತ್ತಿದೆ. ಮಹಿಳಾ ಮೀಸಲಾತಿ ಮಸೂದೆಯು ರಾಜ್ಯಗಳ ಚುನಾವಣೆ ಮೇಲೆ ಪ್ರಭಾವ ಬೀರುವುದೆಂದು ನನಗೆ ಅನಿಸುತ್ತಿಲ್ಲ ಎಂದರು.

ಇಂದಿನಿಂದ ಸಹಿ ಸಂಗ್ರಹ: ಮಹಿಳಾ ಮೋರ್ಚಾ ರಾಜ್ಯ ಅಧ್ಯಕ್ಷೆ ಸಿ.ಮಂಜುಳಾ ಅವರು ಮಾತನಾಡಿ, ನಾರಿ ಶಕ್ತಿ ವಂದನ್ ಎಂಬ ಕಾಯ್ದೆ ಬಗ್ಗೆ ಎಲ್ಲ ಜಿಲ್ಲೆಗಳಲ್ಲಿ ಮಹಿಳಾ ಮೋರ್ಚಾದಿಂದ ಮಹಿಳಾ ಸಮಾವೇಶ ಆಯೋಜಿಸಲಾಗುವುದು. ಭಾನುವಾರ(ಏ.12) ಕೆ.ಆರ್. ಪುರದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರ ನೇತೃತ್ವದಲ್ಲಿ ಸಹಿ ಸಂಗ್ರಹ ಆರಂಭವಾಗುತ್ತದೆ. ಇದು ರಾಜ್ಯದಾದ್ಯಂತ ನಡೆಯಲಿದೆ. ಮಸೂದೆ ಬೆಂಬಲಿಸಲು ಮಿಸ್ಡ್ ಕಾಲ್ ಅಭಿಯಾನ ಮಾಡುತ್ತಿದ್ದೇವೆ ಎಂದು ತಿಳಿಸಿದರು.



ಇಂದಿರಾ ಗಾಂಧಿ, ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ ಹೊರತುಪಡಿಸಿ ಸಾಮಾನ್ಯ ಮಹಿಳೆಯರು ಸಂಸತ್ತಿಗೆ ಬರುವುದು ಕಾಂಗ್ರೆಸ್‌ನವರಿಗೆ ಬೇಕಾಗಿಲ್ಲ. ಈ ಮಾನಸಿಕತೆಯನ್ನು ಕಾಂಗ್ರೆಸ್ಸಿಗರು ಬದಲಿಸಿಕೊಳ್ಳಲಿ.

■ ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ

ರಾಮ ಬಾಣ



ಉದ್ಯಮಿಗೆ ₹15 ಕೋಟಿ ವಂಚನೆ

• **ಬೆಂಗಳೂರು:** ಇತ್ತೀಚೆಗೆ ಡಿಜಿಟಲ್ ಅರೆಸ್ಟ್ ಎಂಬ ಹೆಸರಿನಲ್ಲಿ ನಡೆಯುತ್ತಿರುವ ಸೈಬರ್ ವಂಚನೆ ಪ್ರಕರಣಗಳು ಹೆಚ್ಚುತ್ತಿದ್ದು, ಸಿಬಿಐ ಅಧಿಕಾರಿಗಳ ಸೋಗಿನಲ್ಲಿ ಉದ್ಯಮಿಯೊಬ್ಬರನ್ನು ಡಿಜಿಟಲ್ ಅರೆಸ್ಟ್ ಮಾಡುವ ಮೂಲಕ ಬರೋಬ್ಬರಿ 15.45 ಕೋಟಿ ರೂ.ಗಳನ್ನು ವಂಚಿಸಿದ್ದ ಇಬ್ಬರು ಸೈಬರ್ ವಂಚಕರನ್ನು ಸಿಐಡಿ ಪೊಲೀಸರು ಬಂಧಿಸಿದ್ದಾರೆ.

ಸೈಬರ್ ಕಮಾಂಡ್ ವಿಭಾಗದ ಡಿಜಿಪಿ ಡಾ.ಪ್ರಣವ್ ಮೊಹಾಂತಿ ಮಾಹಿತಿ ನೀಡಿದ್ದು, ಹೈದರಾಬಾದ್ ಮೂಲದ ವೆಂಕಟೇಶ್ ನಾಯಕ, ಮತ್ತು ದೇವಾವತ್ ಶ್ರೀಪಾದ್ ನಾಯಕ ಬಂಧಿತ ಆರೋಪಿಗಳು. ಪ್ರಕರಣದ ರುವಾರಿ ತಲೆಮರೆಸಿಕೊಂಡಿದ್ದು, ಶೋಧ ನಡೆಸಲಾಗುತ್ತಿದೆ. ಬೆಳಗಾವಿ ಮೂಲದ ಉದ್ಯಮಿ ಅಜಿತ್ ಗೋಪಾಲಕೃಷ್ಣ ಅವರಿಗೆ ಕಳೆದ ಫೆ.7 ರಂದು ಅಪರಿಚಿತ ಕರೆ ಬಂದಿತ್ತು. ಕರೆ ಮಾಡಿದ ವ್ಯಕ್ತಿ ತನ್ನನ್ನು ಸಿಬಿಐ ನಿರ್ದೇಶಕ ಕೆ. ಸುಬ್ರಹ್ಮಣ್ಯಂ ಎಂದು ಪರಿಚಯಿಸಿಕೊಂಡಿದ್ದ. ನಿಮ್ಮ ಹೆಸರಿನಲ್ಲಿರುವ ಸಿಮ್ ಕಾರ್ಡ್‌ಗಳು ಮನಿ ಲಾಂಡರಿಂಗ್ ಪ್ರಕರಣದಲ್ಲಿ ಸಿಲುಕಿಕೊಂಡಿರುವ ನರೇಶ್ ಗೋಯಲ್ ಅವರಿಗೆ ಸಂಬಂಧಿಸಿವೆ. ನಿಮ್ಮ ಖಾತೆಯಿಂದ 25 ಲಕ್ಷ ರೂ. ವರ್ಗಾವಣೆ ಆಗಿದ್ದು, ನಿಮಗೆ 5 ಲಕ್ಷ ರೂ. ಕಮಿಷನ್ ಸಂದಾಯವಾಗಿದೆ ಎಂದು ಹೆದರಿಸಿದ್ದ ಎಂದು ತಿಳಿಸಿದರು.

2 ಕೋಟಿ ರೂ. ಹಣ ಫ್ರೀಜ್: ಬಂಧನದ ಭೀತಿ ಹುಟ್ಟಿಸಿದ ವಂಚಕರು, ಉದ್ಯಮಿಯನ್ನು ವಿಡಿಯೋ ಕಾಲ್ ಮೂಲಕ ಸುಮಾರು 1 ತಿಂಗಳು ನಿರಂತರವಾಗಿ ಕಣ್ಗಾವಲಿನಲ್ಲಿಟ್ಟಿದ್ದರು. ತನಿಖೆಗೆ ಸಹಕರಿಸದಿದ್ದರೆ ಜೈಲಿಗೆ ಹಾಕುವುದಾಗಿ ಬೆದರಿಸಿ, ಫೆ.9ರಂದು ಅಜಿತ್ ಗೋಪಾಲಕೃಷ್ಣ ಅವರಿಂದ ವಿವಿಧ ಬ್ಯಾಂಕ್ ಖಾತೆಗಳಿಗೆ 15.45 ಕೋಟಿ ರೂ.ಗಳನ್ನು ಆರ್‌ಟಿಜಿಎಸ್ ಮೂಲಕ ವರ್ಗಾಯಿಸಿಕೊಂಡಿದ್ದರು. ವಂಚನೆಗೊಳಗಾದ ಉದ್ಯಮಿ ಬೆಳಗಾವಿ ಸೈಬರ್ ಕ್ರೈಂ ಪೊಲೀಸರಿಗೆ ದೂರು ನೀಡಿದ್ದರು. ಸೈಬರ್ ಕಮಾಂಡ್ ಡಿಜಿಪಿ ಪ್ರಣವ್ ಮೋಹಂತಿ ಅವರ ಮಾರ್ಗದರ್ಶನದಲ್ಲಿ ತನಿಖೆ ನಡೆಸಿದ ಸಿಐಡಿಯ ಸೈಬರ್ ವಿಭಾಗದ ತಂಡ, ಆರೋಪಿಗಳು ಬಳಸಿದ್ದ 10ಕ್ಕೂ ಹೆಚ್ಚು ಬ್ಯಾಂಕ್ ಖಾತೆಗಳನ್ನು ಪತ್ತೆಹಚ್ಚಿದೆ. ಹೈದರಾಬಾದ್‌ನ ಗಚ್ಚಿಬೌಲಿ ಹಾಸ್ಟೆಲ್‌ನಲ್ಲಿ ಅಡಗಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಸದ್ಯ 2 ಕೋಟಿ ರೂ. ಹಣವನ್ನು ಫ್ರೀಜ್ ಮಾಡಲಾಗಿದೆ. ಈ ಪ್ರಕರಣದಲ್ಲಿ ಮುಖ್ಯ ಆರೋಪಿ ತಲೆಮರೆಸಿಕೊಂಡಿದ್ದು, ಆತನಿಗಾಗಿ ಬಲೆ ಬೀಸಲಾಗಿದೆ ಎಂದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ನಾನು ವಿದ್ವಾಂಸನಲ್ಲ, ಯಕ್ಷಗಾನ ಕ್ಷೇತ್ರದಲ್ಲಿ ದುಡಿಯುವ ಒಬ್ಬ ಕೆಲಸಗಾರ ಅಷ್ಟೆ
- ಡಾ. ಎಂ. ಪ್ರಭಾಕರ ಜೋಷಿ
- ವಿದ್ಯಾ ದದಾತಿ ವಿನಯಂ, ತುಂಬಿದ ಕೊಡ ತುಳುಕುವುದಿಲ್ಲ, ಫಲಭರಿತ ವೃಕ್ಷವು ಬಾಗುತ್ತದೆ ಎಂಬ ನುಡಿಗಳ ನೆನಪಾಗುತ್ತೆ, ಅಲ್ವಾ?

ದಿನ ಭವಿಷ್ಯ

ಮೇಷ
ನಿರ್ಧಾರ ಸೂಕ್ತ ಫಲ ನೀಡಲಿದೆ. ಹಿರಿಯರ ಜತೆ ವಾಗ್ವಾದ ತಪ್ಪಿಸಿ. ದಿನದ ಅಂತ್ಯಕ್ಕೆ ವಿಶ್ರಾಂತಿಯ ಅಗತ್ಯ ಬೀಳಬಹುದು. ಮಕ್ಕಳ ಸಾಧನೆ ತೃಪ್ತಿಕರ.

ವೃಷಭ
ನಿಮ್ಮ ಸುತ್ತಲಿನ ಜನರ ಜತೆ ಗೊಂದಲಕ್ಕೆ ಆಸ್ಪದವಾಗದಂತೆ ವರ್ತಿಸಿರಿ. ಆರ್ಥಿಕ ಗುರಿ ಸಾಧನೆ. ಇನ್ನಿತರ ಕಾರ್ಯದಲ್ಲಿ ಸಫಲತೆ.

ಮಿಥುನ
ದಂಪತಿ ಮಧ್ಯೆ ತಪ್ಪಭಿಪ್ರಾಯ ಸಂಭವ. ಉದ್ಯೋಗದಲ್ಲಿ ಬಡ್ತಿ ಸಿಗಬಹುದು. ಉದ್ಯಮದಲ್ಲಿ ಹೂಡಿದ ಹಣ ಲಾಭ ತರಲಿದೆ.

ಕಟಕ
ಧಾರ್ಮಿಕ ಕಾರ್ಯದಲ್ಲಿ ಹೆಚ್ಚು ತೊಡಗುವಿರಿ. ಸಮಸ್ಯೆಯಿಂದ ಬೆಂದ ಮನಸ್ಸಿಗೆ ಸಮಾಧಾನ. ಆತ್ಮೀಯರ ಜತೆಗಿನ ಸಂಬಂಧ ಸುಧಾರಣೆ.

ಸಿಂಹ
ಹದಗೆಟ್ಟಿದ್ದ ಸಂಬಂಧ ಸುಧಾರಿಸಲಿದೆ. ನೀವೂ ಹೊಂದಿಕೊಂಡು ನಡೆಯಿರಿ. ತಾಳ್ಮೆ ಕಳೆಕೊಂಡರೆ ಆರೋಗ್ಯ ಹದಗೆಡಬಹುದು.

ಕನ್ಯಾ
ಮನೆಯ ವ್ಯವಹಾರ ಹೆಚ್ಚು ಸಮಯ ಕೋರುವುದು. ಇತರ ವಿಷಯಗಳಿಗೆ ಸಮಯ ಸಾಲದು. ವೃತ್ತಿ ಒತ್ತಡ ಇಂದು ಕಡಿಮೆ.

ತುಲಾ
ನಿಮ್ಮ ಸಜ್ಜನಿಕೆ ಎಲ್ಲರ ಮೆಚ್ಚುಗೆಗೆ ಪಾತ್ರ. ಸಮಾನ ಮನಸ್ಕ ವ್ಯಕ್ತಿಗಳ ಜತೆ ಸಂವಾದದಿಂದ ನೆಮ್ಮದಿ. ಸಾಮಾಜಿಕ ಕಾರ್ಯದ ಹೊಣೆ ಬೀಳಲಿದೆ.

ವೃಶ್ಚಿಕ
ಅನಿರೀಕ್ಷಿತ ಧನಲಾಭ. ಸಣ್ಣಪುಟ್ಟ ಅವಘಡ ಆಗದಂತೆ ಎಚ್ಚರ ವಹಿಸಿ. ಕೆಲಸವನ್ನು ಬಾಕಿ ಇಡಬೇಡಿ. ಬಳಿಕ ಹೆಚ್ಚು ಒತ್ತಡ ಅನುಭವಿಸುವಿರಿ.

ಧನು
ಸೌಹಾರ್ದಕರ ಮನೆಯ ವಾತಾವರಣ. ಎಲ್ಲರ ಜತೆ ಕೂಡಿ ಕಳೆಯುವ ಅವಕಾಶ. ದುಬಾರಿ ವಸ್ತು ಖರೀದಿ ಅಸಂತೃಪ್ತಿ ತರಬಹುದು.

ಮಕರ
ಇತರರ ಕೆಲಸದ ಬಗ್ಗೆ ಅತಿಯಾದ ಟೀಕೆ ಮಾಡಬೇಡಿ. ನಿಮ್ಮ ಕೆಲಸದ ಫಲಿತಾಂಶದ ಬಗ್ಗೆ ಅಂಜಿಕೆಯೂ ಬೇಡ. ಸಮಾಧಾನದಿಂದಿರಿ.

ಕುಂಭ
ಹೊಂದಾಣಿಕೆ ಇಲ್ಲದ ನಿಮ್ಮ ಮನಸ್ಥಿತಿಯಿಂದ ಪ್ರತಿಕೂಲ ಪರಿಸ್ಥಿತಿ ಸೃಷ್ಟಿಯಾದೀತು. ಇತರರ ಮಾತು ಕೇಳುವ ವ್ಯವದಾನ ಪ್ರದರ್ಶಿಸಿ.

ಮೀನ
ಮನಸ್ಸಿನ ಒತ್ತಡ ಇಂದು ನಿವಾರಣೆ. ಆತಂಕಗೊಂಡಿದ್ದ ವಿಚಾರ ಸಮಾಧಾನಕರ ಇತ್ಯರ್ಥ. ಹೆಚ್ಚುತ್ತಿರುವ ಖರ್ಚು ನಿಯಂತ್ರಣ ಅವಶ್ಯ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ : 7,4,0,6

ನಿರ್ಣಾಯಕ ಸಂಧಾನ

ಪುಟ 1➡ **ಬಿಗಿ ಭದ್ರತಾ ವ್ಯವಸ್ಥೆ:** ಮಾತುಕತೆ ಸೆರೆನಾ ಹೋಟೆಲ್‌ನಲ್ಲಿ ನಡೆಯುತ್ತಿದ್ದು, ಇಸ್ಲಾಮಾಬಾದ್‌ಗೆ 'ರೆಡ್ ಅಲರ್ಟ್' ಘೋಷಿಸಲಾಗಿದೆ. 10,000ಕ್ಕೂ ಹೆಚ್ಚು ಪೊಲೀಸ್ ಮತ್ತು ಭದ್ರತಾ ಸಿಬ್ಬಂದಿಯನ್ನು ಬಹು-ಹಂತದ ಭದ್ರತೆಗಾಗಿ ನಿಯೋಜಿಸಲಾಗಿದೆ. ಪ್ರಮುಖ ಕಟ್ಟಡಗಳಿರುವ 'ರೆಡ್ ಝೋನ್'ನ್ನು ಸೇನೆ ಮತ್ತು ರೇಂಜರ್ಸ್ ರಕ್ಷಣೆಯಲ್ಲಿ ಇರಿಸಲಾಗಿದ್ದು, ಅಧಿಕೃತ ವ್ಯಕ್ತಿಗಳು ಮತ್ತು ನಿವಾಸಿಗಳಿಗೆ ಮಾತ್ರ ಪ್ರವೇಶ ನೀಡಲಾಗುತ್ತಿದೆ. ಉಭಯ ನಿಯೋಗಗಳನ್ನು ನೂರ್ ಖಾನ್ ವಾಯುನೆಲೆಯಲ್ಲಿ ಉಪ ಪ್ರಧಾನಿ ಇಶಾಕ್ ದಾರ್, ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಅಸಿಮ್ ಮುನೀರ್ ಹಾಗೂ ಗೃಹ ಸಚಿವ ಸೈಯದ್ ಮೊಹ್ಸಿನ್ ರಝಾ ನಖ್ವಿ ಅವರು ಸ್ವಾಗತಿಸಿದರು.

ಇಸ್ರೇಲ್ ಫಸ್ಟ್ ಬೇಡ: ಇರಾನ್ ಎಚ್ಚರಿಕೆ

ಇರಾನ್‌ನ ಮೊದಲ ಉಪಾಧ್ಯಕ್ಷ ಮೊಹಮ್ಮದ್ ರೆಝಾ ಆರೆಫ್, ಅಮೆರಿಕ ಅಧ್ಯಕ್ಷ ಟ್ರಂಪ್ ಅವರ 'ಅಮೆರಿಕ ಫಸ್ಟ್' ನೀತಿಗೆ ಅನುಗುಣವಾಗಿ ಕಾರ್ಯನಿರ್ವಹಿಸಿದರೆ ಒಪ್ಪಂದ ಸಾಧ್ಯ ಎಂದಿದ್ದಾರೆ. ಆದರೆ, ನಮ್ಮ ಎದುರಿಗೆ 'ಇಸ್ರೇಲ್ ಫಸ್ಟ್' ಪ್ರತಿನಿಧಿಗಳು ಬಂದರೆ ಯಾವುದೇ ಒಪ್ಪಂದ ಆಗದು ಎಂದು ಸಾಮಾಜಿಕ ಜಾಲತಾಣದಲ್ಲಿ ಎಚ್ಚರಿಕೆ ನೀಡಿದ್ದಾರೆ. ಶಾಂತಿ ಒಪ್ಪಂದವಾಗದಿದ್ದರೆ ಇಡೀ ವಿಶ್ವ ಹೆಚ್ಚಿನ ಬೆಲೆ ತೆರಬೇಕಾಗುತ್ತದೆ ಎಂದೂ ಅವರು ಹೇಳಿದ್ದಾರೆ.

ಗಾಲಿಬಾಫ್ ಭಾವುಕ ಸಂದೇಶ

ಸಂಸತ್ ಅಧ್ಯಕ್ಷ ಗಾಲಿಬಾಫ್ ಪಾಕಿಸ್ತಾನಕ್ಕೆ ಹೊರಡುವ ಮುನ್ನ ವಿಮಾನದೊಳಗಿನ ಚಿತ್ರವನ್ನು ಹಂಚಿಕೊಂಡಿದ್ದಾರೆ. ಆ ಚಿತ್ರದಲ್ಲಿ, ದಾಳಿಯಲ್ಲಿ ಹತರಾದ ಮಿನಾಬ್ ಶಾಲಾ ವಿದ್ಯಾರ್ಥಿಗಳ ಭಾವಚಿತ್ರಗಳನ್ನು ವಿಮಾನದ ಆಸನಗಳ ಮೇಲೆ ಇರಿಸಲಾಗಿತ್ತು. ಈ ಪ್ರಯಾಣದಲ್ಲಿ ನನ್ನ ಸಂಗಾತಿಗಳು - ಮಿನಾಬ್ 168 ಎಂದು ಅವರು ಸಾಮಾಜಿಕ ಜಾಲತಾಣದಲ್ಲಿ ಬರೆದಿದ್ದಾರೆ. ಇಸ್ಲಾಮಾಬಾದ್‌ಗೆ ಬಂದ ನಂತರ ಗಾಲಿಬಾಫ್ ಸುದ್ದಿಗಾರರೊಂದಿಗೆ ಮಾತನಾಡಿ, ಒಂದು ವರ್ಷದೊಳಗೆ ಎರಡು ಬಾರಿ, ಮಾತುಕತೆ ನಡೆಯುತ್ತಿರುವಾಗಲೇ, ಇರಾನ್‌ನ ಸದ್ಭಾವನೆಯ ನಡುವೆಯೂ ಅವರು ನಮ್ಮ ಮೇಲೆ ದಾಳಿ ಮಾಡಿದರು ಎಂದು ಅಮೆರಿಕದ ಮೇಲಿನ ಅಪನಂಬಿಕೆಯನ್ನು ವ್ಯಕ್ತಪಡಿಸಿದರು. ನಮ್ಮಲ್ಲಿ ಸದ್ಭಾವನೆ ಇದೆ, ಆದರೆ ನಂಬಿಕೆ ಇಲ್ಲ ಎಂದು ಅವರು ಖಡಾಖಂಡಿತವಾಗಿ ಹೇಳಿದರು.

ವಿನಾಶಂ ಜಾರಿ ಭರವಸೆ

ಪುಟ 1➡ ರಾಮನವಮಿ ಮೆರವಣಿಗೆಗಳ ವೇಳೆ ನಡೆದ ಹಿಂಸಾಚಾರಕ್ಕೂ ಟಿಎಂಸಿ ಕಾರಣ ಎಂದು ದೂರಿದರು. ಕುಶ್ಮಂಡಿಯಲ್ಲಿ ನಡೆದ ಮತ್ತೊಂದು ಸಭೆಯಲ್ಲಿ ಮಾತನಾಡಿದ ಮೋದಿ, 'ಪಶ್ಚಿಮ ಬಂಗಾಳದಲ್ಲಿ ಸರ್ಕಾರವೇ ಸಿಂಡಿಕೇಟ್, ಸಿಂಡಿಕೇಟೇ ಸರ್ಕಾರ' ಎಂದು ಆರೋಪಿಸಿದರು. ಆರ್ಥಿಕ ಕ್ಷೇತ್ರದಲ್ಲಿಯೂ ರಾಜ್ಯ ಹಿನ್ನಡೆಯಲ್ಲಿದ್ದು, 8 ಲಕ್ಷ ಕೋಟಿ ರೂ. ಸಾಲದ ಬಾಧೆ ಇದೆ ಎಂದು ಮೋದಿ ಹೇಳಿದರು. ಕೈಗಾರಿಕೆಗಳು ರಾಜ್ಯವನ್ನು ತೊರೆಯುತ್ತಿರುವುದರಿಂದ ಉದ್ಯೋಗಾವಕಾಶಗಳು ಕಡಿಮೆಯಾಗಿದ್ದು, ಯುವಕರು ವಲಸೆ ಹೋಗುವ ಸ್ಥಿತಿ ಉಂಟಾಗಿದೆ ಎಂದು ಅವರು ಆರೋಪಿಸಿದರು. ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ಉಲ್ಲೇಖಿಸಿದ ಪ್ರಧಾನಿ, ಬಿಜೆಪಿ ಸರ್ಕಾರ ಬಂದರೆ ಇಂತಹ ಎಲ್ಲಾ ಪ್ರಕರಣಗಳನ್ನು ಮರುತೆರೆಯಲಾಗುವುದು ಮತ್ತು ಪ್ರತಿಯೊಬ್ಬ ಅಪರಾಧಿಗೂ ಶಿಕ್ಷೆ ಖಚಿತಪಡಿಸಲಾಗುವುದು ಎಂದು ಎಚ್ಚರಿಸಿದರು. ಆರ್‌ಜಿ ಕರ್ ಆಸ್ಪತ್ರೆ ಪ್ರಕರಣವನ್ನು ಉಲ್ಲೇಖಿಸಿ, ಟಿಎಂಸಿ ಸರ್ಕಾರ ಆರೋಪಿಗಳಿಗೆ ಬೆಂಬಲ ನೀಡಿದೆಯೆಂದು ಆರೋಪಿಸಿದರು. ಇದೇ ವೇಳೆ, ಟಿಎಂಸಿ ಸೋಲಿನ ಭಯದಿಂದ ಕೃತಕ ಬುದ್ಧಿಮತ್ತೆ (ಎಐ) ಬಳಸಿ ನಕಲಿ ವಿಡಿಯೋಗಳನ್ನು ಹರಡುತ್ತಿದೆ ಎಂದು ಆರೋಪಿಸಿದ ಮೋದಿ, ಮತದಾರರು ಇಂತಹ ಸುಳ್ಳು ಪ್ರಚಾರಕ್ಕೆ ಒಳಗಾಗಬಾರದು ಎಂದು ಮನವಿ ಮಾಡಿದರು. 'ಈ ಚುನಾವಣೆ ಟಿಎಂಸಿಯ ಭಯ ಮತ್ತು ಬಿಜೆಪಿಯ ವಿಶ್ವಾಸದ ನಡುವಿನ ಹೋರಾಟ' ಎಂದು ಹೇಳಿದ ಮೋದಿ, ಬದಲಾವಣೆಗಾಗಿ ಜನರು ಒಗ್ಗೂಡಿ ಮತ ಚಲಾಯಿಸಬೇಕು ಎಂದು ಕರೆ ನೀಡಿದರು.

ಜೆಡಿಎಸ್ ಸಮಾವೇಶ ಭಾರೀ ಶಕ್ತಿ ಪ್ರದರ್ಶನ

ಪುಟ 1➡ ನಗರ, ಸ್ಥಳೀಯ ಸಂಸ್ಥೆಗಳಾದ ಜಿ.ಪಂ., ತಾ.ಪಂ.ಗಳಿಗೆ ರಾಜ್ಯ ಸರ್ಕಾರ ಅನಿವಾರ್ಯವಾಗಿ ಚುನಾವಣೆ ನಡೆಸಬೇಕಿದೆ ನ್ಯಾಯಾಲಯದ ಆದೇಶದಿಂದಾಗಿ ಸರ್ಕಾರ ಅನಿವಾರ್ಯವಾಗಿ ಚುನಾವಣೆ ನಡೆಸಬೇಕಿದೆ ಎಂದು ಹೇಳಿದರು. ದೇಶದಲ್ಲಿ ಮಹಿಳಾ ಮೀಸಲಾತಿ ಕೊಟ್ಟಿದ್ದು ಕರ್ನಾಟಕ ಸರ್ಕಾರ. ಲೀಲಾದೇವಿ ಆರ್.ಪ್ರಸಾದ್ ಅವರು ಸಚಿವರಾಗಿದ್ದಾಗ ದೆಹಲಿಯಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ನಾಯಕರಿಗೂ ನಿಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಮಹಿಳಾ ಮೀಸಲಾತಿ ಅಳವಡಿಸಿಕೊಳ್ಳಬೇಕು ಎಂದು ಮನವಿ ಸಲ್ಲಿಸಿದ್ದರು. ಅವರ ಪ್ರಯತ್ನದ ಕೆಲವು ಸಾಕಾರಗೊಳ್ಳುತ್ತಿವೆ ಎಂದರು.

ನನ್ನ ರಾಜಕೀಯ ಜೀವನದಲ್ಲಿ ಇಂತಹ ಕೆಟ್ಟ ಸರ್ಕಾರ ನೋಡಿಲ್ಲ, 65 ವರ್ಷದ ರಾಜಕೀಯ ಜೀವನದಲ್ಲಿ ನಾನು ಕಂಡ ಅತ್ಯಂತ ಕೆಟ್ಟ ಸರ್ಕಾರ ಎಂದು ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಗೌಡರು ಟೀಕಿಸಿದರು. ಮುಂದೆ ನಾವೇ ಅಧಿಕಾರಕ್ಕೆ ಬರುತ್ತೇವೆ ಎಂದು ಹೇಳುತ್ತಿದ್ದಾರೆ. ತಮ್ಮ ಪಕ್ಷದ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿ ಪಕ್ಷವನ್ನು ಬಲಪಡಿಸಬೇಕು. ನಮ್ಮದು ಪ್ರಾದೇಶಿಕ ಪಕ್ಷ. ರಾಷ್ಟ್ರೀಯ ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡಿದ್ದೇವೆ. ಇತಿಮಿತಿಯಲ್ಲಿ ಕೆಲಸ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಸರ್ಕಾರದಿಂದ ದುಸ್ಥಿತಿ: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮಾತನಾಡಿ, ಕಾಂಗ್ರೆಸ್ ಸರ್ಕಾರ ಬಿಬಿಎಂಪಿ ಇದ್ದುದನ್ನು ಜಿಬಿಎ ಎಂದು ಬದಲಾಯಿಸಿ



ಜಿಬಿಎ ವ್ಯಾಪ್ತಿಯಲ್ಲಿ ಇ-ಖಾತಾ ವಿಚಾರದಲ್ಲೂ ನಾಗರಿಕರಿಗೆ ತೊಂದರೆಯಾಗುತ್ತಿದೆ. ಆಸ್ತಿತೆರಿಗೆ ಶೇ.25ರಷ್ಟು ಹೆಚ್ಚಳ ಮಾಡಿದ್ದಾರೆ. ಸ್ಕೈಡೆಕ್ ನಿರ್ಮಾಣ ಮಾಡಲು ಹೊರಟಿದ್ದಾರೆ. ಆಕಾಶದಲ್ಲಿ ನಿಂತು ರಸ್ತೆ ಗುಂಡಿ, ಕಸದ ರಾಶಿ ನೋಡಬೇಕಾ.

■ ನಿಖಿಲ್ ಕುಮಾರಸ್ವಾಮಿ, ಯುವ ಘಟಕದ ಅಧ್ಯಕ್ಷ

ಬೆಂಗಳೂರು ನಗರದ ಜನರ ದುಸ್ಥಿತಿಗೆ ಮುಂದಾಗಿದೆ ಎಂದು ಕಿಡಿಕಾರಿದರು. ಜೆಡಿಎಸ್ ಪಕ್ಷ ಅಧಿಕಾರದಲ್ಲಿದ್ದಾಗ ಬೇರೆಯವರ ಹಂಗಿನಲ್ಲಿತ್ತು, ಸ್ವತಂತ್ರವಾಗಿ ಸರ್ಕಾರ ನಡೆಸಲು ಸಾಧ್ಯವಾಗಲಿಲ್ಲ, ನಗರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದ್ದ ಸರ್ಕಾರವನ್ನು ಬೀಳಿಸುವಲ್ಲಿ ಕಾಣದ ಕೈಗಳು ಕೆಲಸ ಮಾಡಿದವು, ಆದರೂ ಎದೆಗುಂದದೆ ಬೆಂಗಳೂರು ನಗರದ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಬೆಂಗಳೂರಿಗೆ ಮೆಟ್ರೋ ರೈಲು ತರಲು ಬಹಳಷ್ಟು ಶ್ರಮಿಸಿದ್ದೇನೆ ಎಂದು ತಿಳಿಸಿದರು. ಮಾಜಿ ಸಚಿವ ಎಚ್.ಡಿ.ರೇವಣ್ಣ, ವಿಧಾನಪರಿಷತ್ ಸದಸ್ಯ ಜವರಾಯಿಗೌಡ, ಬಂಡೆಪ್ಪ ಕಾಶೆಂಪೂರ್, ವೈ.ಎಸ್.ವಿ. ದತ್ತಾ, ಡಾ. ಕೆ. ಅನ್ನದಾನಿ, ಸಾ.ರಾ. ಮಹೇಶ, ಎನ್.ಆರ್. ಸಂತೋಷ್, ಚೇತನ್ ಗೌಡ. ಎಸ್, ಕೇಶವಮೂರ್ತಿ ಉಪಸ್ಥಿತರಿದ್ದರು.

ರಾಜ್ಯದ ವಂದೇ ಭಾರತ್ ಸ್ಲೀಪರ್ ರೈಲಿಗೆ ಸಮ್ಮತಿ

ಪುಟ 1➡ ಇತ್ತೀಚೆಗಷ್ಟೇ ದೇಶದಲ್ಲಿ ಮೊದಲ ವಂದೇ ಭಾರತ್ ಸ್ಲೀಪರ್ ರೈಲು ಸಂಚಾರ ಆರಂಭಿಸಲಾಗಿದೆ. ಸುದೀರ್ಘ ಹಾಗೂ ಆರಾಮದಾಯಕ ರಾತ್ರಿ ಪ್ರಯಾಣದ ಉದ್ದೇಶದಿಂದ ಈ ರೈಲನ್ನು ಪರಿಚಯಿಸಲಾಗಿದ್ದು, ಐಷಾರಾಮಿ ಮತ್ತು ಉತ್ತಮ ಪ್ರಯಾಣದ ಅನುಭವ ನೀಡುತ್ತದೆ. ಏಕೆಂದರೆ, ಪ್ರಯಾಣಿಕ ಸ್ನೇಹಿ ವ್ಯವಸ್ಥೆ, ವಿನ್ಯಾಸ, ಆಧುನಿಕ ರೈಲ್ವೆ ಮೂಲಸೌಕರ್ಯಗಳನ್ನು ಈ ರೈಲು ಒಳಗೊಂಡಿದೆ.

ರಾಜ್ಯದ ಮೊದಲ ಸ್ಲೀಪರ್ ರೈಲು: ಕರ್ನಾಟಕಕ್ಕೆ ಮೊದಲ ವಂದೇ ಭಾರತ್ ಸ್ಲೀಪರ್ ರೈಲು ಇದಾಗಿದ್ದು, ಮುಂಬೈನಿಂದ ಬೆಂಗಳೂರು ಮಧ್ಯೆ ಸುಮಾರು 1,211 ಕಿ.ಮೀ. ದೂರವಿದೆ.

ಇಷ್ಟು ದೂರವನ್ನು ಕ್ರಮಿಸಲು ಸುಮಾರು 23.30 ಗಂಟೆ ಬೇಕಾಗುತ್ತದೆ. ಈ ರೈಲಿನ ಆಗಮನ, ನಿರ್ಗಮನ, ಸಮಯದ ಮಿತಿ, ವೇಳಾಪಟ್ಟಿಯನ್ನು ರೈಲ್ವೆ ಇಲಾಖೆ ಕೆಲವೇ ದಿನಗಳಲ್ಲಿ ಪ್ರಕಟಿಸಲಿದೆ.

ಕಾಂಗ್ರೆಸ್‌ನಲ್ಲಿ ರಾಜೀನಾಮೆ ಪರ್ವ

ಪುಟ 1➡ **ನಸೀರ್ ಅಹ್ಮದ್‌ಗೂ ರಾಜೀನಾಮೆ ಸೂಚನೆ:** ಉಪ ಚುನಾವಣೆಗೆ ಟಿಕೆಟ್ ಆಕಾಂಕ್ಷಿಯಾಗಿದ್ದ ವಿಧಾನಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಇನ್ನೊಂದೆಡೆ ಸಿಎಂ ರಾಜಕೀಯ ಕಾರ್ಯದರ್ಶಿಯಾಗಿರುವ ನಸೀರ್ ಅಹ್ಮದ್ ಅವರಿಗೂ ರಾಜೀನಾಮೆ ನೀಡುವಂತೆ ಹೈಕಮಾಂಡ್ ಸೂಚಿಸಿದೆ ಎನ್ನಲಾಗಿದೆ.

ಈ ಕುರಿತು ಕೆಪಿಸಿಸಿ ಅಧ್ಯಕ್ಷರಿಗೆ ಪತ್ರ ಬರೆದಿರುವ ಅಬ್ದುಲ್ ಜಬ್ಬಾರ್, ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಅಲ್ಪಸಂಖ್ಯಾತರಿಗೆ ಸಿಗಬೇಕೆಂದು ಪ್ರಯತ್ನಿಸಿದರೂ, ಕಾರಣಾಂತರಗಳಿಂದ ಟಿಕೆಟ್ ಕೈತಪ್ಪಿತ್ತು. ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷರಾಗಿ ಸೇವೆ ಸಲ್ಲಿಸುವುದು ತಮಗೆ ದೊರೆತ ಗೌರವ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್‌ಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ. ಈ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಕೆ.ಅಬ್ದುಲ್ ಜಬ್ಬಾರ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಮ್ ಅಹಮದ್, ಶಾಸಕ ರಿಜ್ವಾನ್ ಅರ್ಷದ್ ಅವರುಗಳೇ ಮೊದಲು ನನಗೆ ಚುನಾವಣೆಗೆ ನಿಲ್ಲುವಂತೆ ಹೇಳಿದ್ದರು.

ಈಗ ಅವರೇ ಉಲ್ಟಾ ಹೊಡೆದಿದ್ದಾರೆ. ಹೆಗಲೂ ನಮ್ಮದೇ, ಗುಂಡು ನಮ್ಮದೇ ಎಂಬಂತಾಗಿದೆ. ಕಾಂಗ್ರೆಸ್ ಕಚೇರಿಯಲ್ಲಿ ಪಕ್ಷದ ಮುಖಂಡರ ವಿರುದ್ಧವೇ ಸುದ್ದಿಗೋಷ್ಠಿ ಮಾಡಬಾರದಿತ್ತು. ಈ ವಿಚಾರದಲ್ಲಿ ನನಗೆ ದುಃಖವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹೈಕಮಾಂಡ್‌ಗೆ ವರದಿ ಬೆನ್ನಲ್ಲೇ ರಾಜೀನಾಮೆ ಪರ್ವ: ದಾವಣಗೆರೆ ಉಪಚುನಾವಣೆಯಲ್ಲಿ ನಡೆದ ಆಂತರಿಕ ಚಟುವಟಿಕೆಗಳ ಬಗ್ಗೆ ಎಐಸಿಸಿ ಉಸ್ತುವಾರಿ ಕಾರ್ಯದರ್ಶಿ ಅಭಿಷೇಕ್ ದತ್ ಹೈಕಮಾಂಡ್‌ಗೆ ವರದಿ ಸಲ್ಲಿಸಿದ್ದರು. ಈ ವರದಿಯಲ್ಲಿ ಅಲ್ಪಸಂಖ್ಯಾತ ನಾಯಕರ ನಡವಳಿಕೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಲಾಗಿತ್ತು ಎನ್ನಲಾಗಿದೆ.

ಸಿಎಂ ರಾಜಕೀಯ ಕಾರ್ಯದರ್ಶಿಯಿಂದಲೂ ರಾಜೀನಾಮೆ?: ಅಬ್ದುಲ್ ಜಬ್ಬಾರ್ ರಾಜೀನಾಮೆ ಬೆನ್ನಲ್ಲೇ, ಹೈಕಮಾಂಡ್ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಜೀರ್ ಅಹ್ಮದ್ ಖಾನ್ ಅವರಿಗೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಸೂಚನೆ ನೀಡಿದೆ ಎನ್ನಲಾಗಿದೆ. ಹೈಕಮಾಂಡ್ ಸೂಚನೆ ಮೇರೆಗೆ ಶೀಘ್ರದಲ್ಲೇ ನಜೀರ್ ಅಹ್ಮದ್ ಅವರು ಸಿಎಂ ಸಿದ್ದರಾಮಯ್ಯಗೆ ರಾಜೀನಾಮೆ ಸಲ್ಲಿಸಲಿದ್ದಾರೆ ಎಂದು ತಿಳಿದುಬಂದಿದೆ.

ಅಲ್ಪಸಂಖ್ಯಾತ ಘಟಕದ ಪ್ರಮುಖ ನಾಯಕರ ರಾಜೀನಾಮೆ ಪರ್ವ ಈಗ ಸಚಿವ ಜಮೀರ್ ಅಹ್ಮದ್ ಖಾನ್ ಅವರತ್ತ ತಿರುಗಿದೆ. ದಾವಣಗೆರೆ ಉಪಚುನಾವಣೆಯ ಗೊಂದಲಗಳಿಗೆ ತಲೆದಂಡವಾಗಿ ಜಮೀರ್ ಅವರ ಸಚಿವ ಸ್ಥಾನಕ್ಕೂ ಕುತ್ತು ಬರಲಿದೆಯೇ? ಅಥವಾ ಹೈಕಮಾಂಡ್ ಅವರನ್ನು ರಕ್ಷಿಸಲಿದೆಯೇ ಎಂಬ ಪ್ರಶ್ನೆ ಈಗ ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿದೆ.

ಮತದಾನ, ಸ್ಪರ್ಧಿಸುವ ಹಕ್ಕು ಮೂಲಭೂತವಲ್ಲ

ಪುಟ 1➡ 'ಮತದಾನ ಹಾಗೂ ಸ್ಪರ್ಧಿಸುವ ಹಕ್ಕುಗಳು ಮೂಲಭೂತ ಹಕ್ಕುಗಳಲ್ಲ; ಅವು ಕಾನೂನು ನೀಡಿದ ಮಟ್ಟಿಗೆ ಮಾತ್ರ ಅಸ್ತಿತ್ವದಲ್ಲಿವೆ' ಎಂದು ನ್ಯಾಯಾಲಯ ಹಿಂದಿನ ತೀರ್ಪುಗಳನ್ನು ಉಲ್ಲೇಖಿಸಿ ಹೇಳಿದೆ. ಈ ಪ್ರಕರಣದಲ್ಲಿ ಸಹಕಾರಿ ಸಂಘಗಳ ಚುನಾವಣೆಗೆ ಸಂಬಂಧಿಸಿದ ಕೆಲವು ನಿಯಮಗಳನ್ನು ರಾಜಸ್ಥಾನ ಹೈಕೋರ್ಟ್ ರದ್ದುಪಡಿಸಿದ್ದನ್ನು ಸುಪ್ರೀಂ ಕೋರ್ಟ್ ತಳ್ಳಿಹಾಕಿದೆ. ಆ ನಿಯಮಗಳು ಕೇವಲ ಅಭ್ಯರ್ಥಿಗಳ ಅರ್ಹತೆಯನ್ನು ನಿರ್ಧರಿಸುವುದಷ್ಟೇ ಆಗಿದ್ದು, ಮತದಾನ ಹಕ್ಕಿಗೆ ಯಾವುದೇ ಧಕ್ಕೆ ಉಂಟುಮಾಡುವುದಿಲ್ಲ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ. ಇದೇ ವೇಳೆ, ಸ್ಪರ್ಧಿಸುವ ಹಕ್ಕು ಕಟ್ಟುನಿಟ್ಟಿನ ನಿಯಮಗಳಿಗೆ ಒಳಪಟ್ಟಿರಬಹುದು ಎಂದು ಕೋರ್ಟ್ ಸ್ಪಷ್ಟಪಡಿಸಿದೆ. ಅರ್ಹತೆ, ಅನರ್ಹತೆ ಹಾಗೂ ಸಂಸ್ಥಾತ್ಮಕ ನಿಯಮಗಳನ್ನು ವಿಧಿಸುವುದು ಕಾನೂನುಸಮ್ಮತವಾಗಿದೆ ಎಂದು ನ್ಯಾಯಾಲಯ ತಿಳಿಸಿದೆ.

ವೈಚಾರಿಕತೆ ರೂಢಿಸಿಕೊಳ್ಳಿ: ಸಿಎಂ

ಪುಟ 1➡ ವೈವಿಧ್ಯತೆ ಇರುವ ಸಮಾಜದಲ್ಲಿ ಏಕತೆ ಪ್ರದರ್ಶನ ಮಾಡುವುದು ಅತ್ಯವಶ್ಯ. ಯಾವುದೇ ಧರ್ಮ ದ್ವೇಷ ಮಾಡಲು ಹೇಳುವುದಿಲ್ಲ, ಎಲ್ಲರನ್ನೂ ಪ್ರೀತಿಸಿದಾಗಲೇ ಮಾನವ ಸಮಾಜ ನಿರ್ಮಾಣ ಸಾಧ್ಯ ಎಂದರು.



ಸ್ವಚ್ಛ ಮನಸಿನಿಂದ ದೇವಸ್ಥಾನಕ್ಕೆ ಹೋಗಿ ನಮಗಷ್ಟೇ ಅಲ್ಲದೇ ಎಲ್ಲರಿಗೂ ಒಳ್ಳೆಯದು ಮಾಡು ಎಂದು ಪ್ರಾರ್ಥಿಸಿದಾಗ ಮಾತ್ರ ಫಲ ಸಿಗುತ್ತದೆ.

ಬಸವಣ್ಣ, ಸೂಫಿ ಸೇರಿ ಹಲವು ಸಂತರು ಇದನ್ನೇ ಪ್ರತಿಪಾದಿಸಿದ್ದಾರೆ. ಬಸವಣ್ಣ ಕಾಯಕ ಹಾಗೂ ದಾಸೋಹ ಎರಡಕ್ಕೂ ಆದ್ಯತೆ ನೀಡಿದ್ದಾರೆ. ಎಲ್ಲರೂ ಕಷ್ಟಪಟ್ಟು ದುಡಿಯಬೇಕು. ಹಾಗೆ ಬಂದುದನ್ನು ಎಲ್ಲರೂ ಸಮಾನವಾಗಿ ಹಂಚಿಕೊಳ್ಳಬೇಕು.

ಕಾಯಕ ಹಾಗೂ ದಾಸೋಹಗಳನ್ನು ಎಲ್ಲರೂ ಮಾಡಬೇಕು. ಕೆಲವರೇ ಮಾಡಿದರೆ ಅಸಮಾನತೆ ಸಮಾಜ ನಿರ್ಮಾಣವಾಗುತ್ತದೆ. ಪ್ರತಿಯೊಬ್ಬರಿಗೆ ಸಮಾನತೆ ಹಾಗೂ ಆರ್ಥಿಕ ಶಕ್ತಿ ಬಂದಾಗ ಮಾತ್ರ ಸಮಾನತೆ ಬರಲು ಸಾಧ್ಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಯಾತ್ರಿ ನಿವಾಸಕ್ಕೆ 1 ಕೋಟಿ ಹಣ ಸಹಾಯ ಮಾಡುವುದಾಗಿ ತಿಳಿಸಿದರು. ಸಂಸ್ಥಾನದ ಹಿರಗಪ್ಪ ತಾತನವರ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ, ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಶಾಸಕರಾದ ಎಂ.ವೈ.ಪಾಟೀಲ, ಅಲ್ಲಮಪ್ರಭು ಪಾಟೀಲ, ಚೆನ್ನಾರೆಡ್ಡಿ ತುನ್ನೂರು, ಎಂಎಲ್ಸಿ ಚಂದ್ರಶೇಖರ ಪಾಟೀಲ ಹುಮನಾಬಾದ, ತಿಪ್ಪಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ, ಮಜಹರ್ ಆಲಂ ಖಾನ್, ಸೈಯದ್ ಮಹೆಬೂಬ್ ಚಿಸ್ತಿ ಸಾಹೇಬ್, ದೇವೇಂದ್ರಪ್ಪ ಮರತೂರು, ಮಾಲಾ ನಾರಾಯಣರಾವ, ಬಾಬು ಹೊನ್ನಾನಾಯಕ್, ರೇವುನಾಯಕ ಬೆಳಮಗಿ, ಶರಣಪ್ಪ ಮಾನೆಗಾರ, ಲಿಂಗಾರೆಡ್ಡಿ ಭಾಸರೆಡ್ಡಿ, ಭೀಮಣ್ಣ ಸಾಲಿ, ಭಾಗಣ್ಣಗೌಡ ಸಂಕನೂರ, ಶಿವಾನಂದ ಪಾಟೀಲ ಮರತೂರು, ಮಹೇಶ ರೆಡ್ಡಿ ಮುದ್ನಾಳ ಸೇರಿದಂತೆ ಹಲವರು ಉಪಸ್ಥಿತರಿದ್ದರು. ವಿಟಿಯು ಸಿಂಡಿಕೇಟ್ ಸದಸ್ಯ ಮಹಾಂತೇಶ ಬೀಳಗಿ ನಿರೂಪಿಸಿದರು. ಶಂಕರಗೌಡ ಲಿಂಗಸುಗೂರು ಸ್ವಾಗತಿಸಿದರು.

ವಸತಿನಿಲಯ, ಯಾತ್ರಿ ನಿವಾಸಕ್ಕೆ ಅನುದಾನ

ಪೂಜ್ಯ ಹಿರಗಪ್ಪ ತಾತನವರ ಬೇಡಿಕೆಯಂತೆ ಸುಕ್ಷೇತ್ರದಲ್ಲಿ ವಸತಿ ನಿಲಯ ನಿರ್ಮಾಣ ಹಾಗೂ ಭಕ್ತಾದಿಗಳಿಗೆ ಯಾತ್ರಿ ನಿವಾಸ ಸ್ಥಾಪಿಸಲು ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಲಿದೆ. ಯಾತ್ರಿ ನಿವಾಸಕ್ಕೆ ಸಚಿವ ಪ್ರಿಯಾಂಕ್ ಖರ್ಗೆ ಅವರು 1 ಕೋಟಿ ರೂ. ಹಣ ನೀಡುವ ಭರವಸೆ ನೀಡಿದ್ದಾರೆ. ವಸತಿ ನಿಲಯ ಪ್ರಾರಂಭಕ್ಕೆ ಸರ್ಕಾರ ಸಹಾಯ ಮಾಡಲಿದೆ ಎಂದು ಭರವಸೆ ನೀಡಿದರು.

ಗಾಯಕಿ ಆಶಾ ಭೋಸ್ಲೆ ಆಸ್ಪತ್ರೆಗೆ ದಾಖಲು

• **ಮುಂಬೈ:** ಪ್ರಸಿದ್ಧ ಬಾಲಿವುಡ್‌ನ ಹಿರಿಯ ಹಿನ್ನೆಲೆ ಗಾಯಕಿ ಆಶಾ ಭೋಸ್ಲೆ ಅವರು ಅನಾರೋಗ್ಯದಿಂದ ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.



92 ವರ್ಷದ ಆಶಾ ಭೋಸ್ಲೆ ಅವರನ್ನು ಶನಿವಾರ ಸಂಜೆ ಆಸ್ಪತ್ರೆಗೆ ದಾಖಲಿಸಲಾಗಿದೆ. ಪ್ರಾಥಮಿಕ ವರದಿಗಳ ಪ್ರಕಾರ, ಹೃದಯ ಸಂಬಂಧಿತ ತೊಂದರೆ (ಕಾರ್ಡಿಯಾಕ್ ಅರೆಸ್ಟ್) ಹಾಗೂ ಉಸಿರಾಟ ಸಂಬಂಧಿತ ಸಮಸ್ಯೆಗಳ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಇದಕ್ಕೆ ಪೂರಕವಾಗಿ, ಕೆಲವು ವರದಿಗಳು ಅವರು ಸೌಮ್ಯ ಹೃದಯಾಘಾತ ಅನುಭವಿಸಿದ್ದಾರೆಯೆಂದು ತಿಳಿಸಿವೆ. ಪ್ರಸ್ತುತ ವೈದ್ಯರ ನಿಗಾದಲ್ಲಿ ಚಿಕಿತ್ಸೆ ಮುಂದುವರಿದಿದ್ದು, ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಎಂದು ಹೇಳಲಾಗಿದೆ. ಎಂಟು ದಶಕಗಳಿಗೂ ಅಧಿಕ ಕಾಲ ಸಂಗೀತ ಕ್ಷೇತ್ರದಲ್ಲಿ ಸಕ್ರಿಯವಾಗಿರುವ ಆಶಾ ಭೋಸ್ಲೆ, ಹಿಂದಿ ಸಿನೆಮಾ ಸೇರಿದಂತೆ ಅನೇಕ ಭಾಷೆಗಳ ಹಾಡುಗಳ ಮೂಲಕ ಭಾರತೀಯ ಸಂಗೀತ ಲೋಕದಲ್ಲಿ ಅಜರಾಮರ ಗುರುತು ಮೂಡಿಸಿದ್ದಾರೆ.

ಯುಡಿಎಫ್‌ನ ಅತ್ಯುತ್ಸಾಹಕ್ಕೆ ಬಿಜೆಪಿ ತಡೆ ಹಾಕಿದೆಯೇ?

ರಾಜಕೀಯ ವಿಶ್ಲೇಷಣೆ

• **ತಿರುವನಂತಪುರಂ:** ಕೇರಳ ವಿಧಾನಸಭೆ ಚುನಾವಣೆಯ ಭಾಗವಾಗಿ ಗುರುವಾರ ಎಲ್ಲ 140 ವಿಧಾನಸಭಾ ಕ್ಷೇತ್ರಗಳಿಗೆ ಮತದಾನ ನಡೆದಿದೆ. ಕೇರಳದ ಮತದಾರರು ಉತ್ಸಾಹದಿಂದ ಮತದಾನ ಮಾಡಿದ್ದು, ಕಳೆದ ಬಾರಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಮತದಾನಗೈದಿರುವುದು ಹಲವು ರೀತಿಯ ರಾಜಕೀಯ ಲೆಕ್ಕಾಚಾರಗಳಿಗೆ ಕಾರಣವಾಗಿದೆ. ಆಳುವ ಎಲ್‌ಡಿಎಫ್ ಮತ್ತು ವಿಪಕ್ಷ ಯುಡಿಎಫ್‌ಗಳ ನಡುವೆ ಈ ಬಾರಿ ಬಿಜೆಪಿ ಬಲವಾದ ಸ್ಪರ್ಧೆ ಒಡ್ಡಿರುವುದು ರಾಜಕೀಯ ಪಂಡಿತರ ಲೆಕ್ಕಾಚಾರಗಳನ್ನು ಬುಡಮೇಲುಗೊಳಿಸೀತೇ ಎಂಬ ಚರ್ಚೆ ರಾಜಕೀಯವಲಯದಲ್ಲಿ ನಡೆದಿದೆ.

ಕೇರಳದಲ್ಲಿ ಸಾಮಾನ್ಯವಾಗಿ ಒಂದು ಬಾರಿ ಎಲ್‌ಡಿಎಫ್ ಅಧಿಕಾರಕ್ಕೆ ಬಂದರೆ ಮತ್ತಿನ ಬಾರಿ ಯುಡಿಎಫ್ ಅಧಿಕಾರಕ್ಕೆ ಬರುವುದು ನಡೆಯುತ್ತಾ ಬಂದ ವಿದ್ಯಮಾನ. ಆದರೆ 2021ರ ವಿಧಾನಸಭಾ ಚುನಾವಣೆಯಲ್ಲಿ ಈ ಪರಂಪರೆ ವ್ಯತ್ಯಾಸವಾಗಿ ಎಲ್‌ಡಿಎಫ್ ಎರಡನೇ ಬಾರಿ ಅಧಿಕಾರಕ್ಕೆ ಬಂದು ಅಚ್ಚರಿ ನಿರ್ಮಿಸಿತ್ತು. ಎಡರಂಗ 99 ಸ್ಥಾನಗಳನ್ನು ಹೊಂದಿದ್ದರೆ ಯುಡಿಎಫ್ ಕೇವಲ 41 ಸ್ಥಾನಗಳನ್ನಷ್ಟೇ ಪಡೆಯಲು ಶಕ್ತವಾಗಿ ಹೀನಾಯ ಸೋಲುಣ್ಣುವಂತಾಗಿತ್ತು.

2021ರಲ್ಲಿ ಸಿಪಿಎಂ ನೇತೃತ್ವದ ಎಲ್‌ಡಿಎಫ್ ಶೇ.25.38ರಷ್ಟು ಮತಗಳನ್ನು ಪಡೆದಿದ್ದರೆ, ಸೋಲುಂಡ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಶೇ.25.12ರಷ್ಟು ಮತಗಳನ್ನು ಗಳಿಸಿತ್ತು. ಇನ್ನು ಬಿಜೆಪಿ ಯಾವುದೇ ಸ್ಥಾನ ಪಡೆಯದಿದ್ದರೂ ಶೇ.11.3ರಷ್ಟು ಮತ ಗಳಿಸಿ ಗಮನ ಸೆಳೆದಿತ್ತು.

ಈ ಬಾರಿಯ ಚುನಾವಣೆಯಲ್ಲಿ ಎಡರಂಗದ ವಿರುದ್ಧ ಆಡಳಿತ ವಿರೋಧಿ ಅಲೆ ಇದ್ದು, ತಾನೇ ಅಧಿಕಾರಕ್ಕೆ ಬರುವುದಾಗಿ ಯುಡಿಎಫ್ ಅತ್ಯುತ್ಸಾಹದಿಂದ ಹೇಳಿಕೊಂಡಿದೆ. ಆದಾಗ್ಯೂ ಬಿಜೆಪಿ ಈ ಬಾರಿ ಪ್ರಬಲವಾಗಿ ಬೆಳೆದುನಿಂತಿರುವುದು ಯುಡಿಎಫ್ ಪಾಳಯದಲ್ಲಿ ಆತಂಕಕ್ಕೂ ಕಾರಣವಾಗಿದೆ. ಇತ್ತೀಚಿನ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿ ರಾಜಧಾನಿ ತಿರುವನಂತಪುರಂ ಮಹಾನಗರ ಪಾಲಿಕೆಯಲ್ಲಿ ಎಲ್‌ಡಿಎಫ್ ಮತ್ತು ಯುಡಿಎಫ್‌ಗಳ ಸವಾಲನ್ನು ಎದುರಿಸಿ ಗೆದ್ದು ಅಧಿಕಾರಕ್ಕೆ ಬಂದಿತ್ತು. ಬಿಜೆಪಿಯ ಮತಹಂಚಿಕೆಯ ಪ್ರಮಾಣ ಕೂಡ ತೀವ್ರವಾಗಿ ಏರಿಕೆಯಾಗಿತ್ತು. ಅದ್ದರಿಂದ ಈ ಬಾರಿ ಬಿಜೆಪಿಯ ಪ್ರಬಲ ಸ್ಪರ್ಧೆ ತನ್ನ ಗೆಲುವಿನ ನಾಗಾಲೋಟಕ್ಕೆ ತಡೆ ಒಡ್ಡಬಹುದೆಂಬ ಆತಂಕ ಯುಡಿಎಫ್‌ನ್ನು ಆಂತರಿಕವಾಗಿ ಕಾಡುತ್ತಿದೆ. ಈ ಬಾರಿ ಕಾಂಗ್ರೆಸ್ ಪಕ್ಷದೊಳಗಿನ ತೀವ್ರ ಅಂತಃಕಲಹವನ್ನು ತೇಪೆಹಚ್ಚಿ ಸ್ಪರ್ಧೆಗಿಳಿದಿದ್ದ ಯುಡಿಎಫ್ ಎಡರಂಗ ಬಿಜೆಪಿಯ ಬಿ ಟೀಮ್ ಎಂದು ಚುನಾವಣಾ ಪ್ರಚಾರದುದ್ದಕ್ಕೂ ಆರೋಪಿಸುತ್ತಾ ಬಂದಿರುವುದು ಇದೇ ಹಿನ್ನೆಲೆಯಲ್ಲಿ, ಅಲ್ಪಸಂಖ್ಯಾತರಲ್ಲಿ 'ಬಿಜೆಪಿ ಗುಮ್ಮ'ನನ್ನು ತೋರಿಸಿ ಮತಗಳಿಸುವುದು ಯುಡಿಎಫ್‌ನ ತಂತ್ರವಾಗಿತ್ತು.

ಅಲ್ಲದೆ ಈ ಬಾರಿ ಕೇರಳದಲ್ಲಿ ಮತೀಯ ಕಟ್ಟರ್‌ವಾದಿಗಳನ್ನು ಹೊರತುಪಡಿಸಿದರೆ , ಅಲ್ಪಸಂಖ್ಯಾತರಲ್ಲಿ ಬಿಜೆಪಿಯ ಬಗ್ಗೆ ತೀವ್ರತರವಾದ ಅಸಹನೆಯೇನೂ ಇಲ್ಲದಿದ್ದುದು ಕೂಡ ಯುಡಿಎಫ್ ಪಾಳಯದಲ್ಲಿ ಆತಂಕಕ್ಕೆ ಕಾರಣವಾಗಿತ್ತು. ಕಾಂಗ್ರೆಸ್ ಸತತವಾಗಿ ಬಿಜೆಪಿ ವಿರುದ್ಧ ಮುಸ್ಲಿಮರು ಮತ್ತು ಕ್ರೈಸ್ತ ಸಮುದಾಯಗಳಲ್ಲಿ ಅಪನಂಬಿಕೆಯನ್ನು ಬಿತ್ತುವ ಕೆಲಸವನ್ನು ಮಾಡುತ್ತಾ ಬಂದಿದ್ದರೂ, ವಿದೇಶಗಳಲ್ಲಿ ಸಿಲುಕಿಕೊಂಡ ಭಾರತೀಯರನ್ನು ಜೋಪಾನವಾಗಿ ರಕ್ಷಿಸಿ ತಾಯ್ನಾಡಿಗೆ ಕರೆತರುವಲ್ಲಿ ಮೋದಿ ಸರಕಾರದ ಪ್ರಾಮಾಣಿಕ ಕ್ರಮಗಳು ಅಲ್ಪಸಂಖ್ಯಾತರಲ್ಲಿ ಬಿಜೆಪಿ ಬಗ್ಗೆ ಇದ್ದ ಭಾವನೆಯನ್ನು ಬದಲಿಸುವಂತೆ ಮಾಡಿದೆ. ಹಾಗೆಯೇ ಮೋದಿ ಸರಕಾರದ ಅಭಿವೃದ್ಧಿ ಯೋಜನೆಗಳು ಯಾವುದೇ ತಾರತಮ್ಯ ಇಲ್ಲದೆ ದೇಶದ ಎಲ್ಲ ನಾಗರಿಕರಿಗೂ ತಲುಪುತ್ತಿರುವುದು ಕೂಡ ಅಲ್ಪಸಂಖ್ಯಾತ ಸಮುದಾಯದ ಪ್ರಜ್ಞಾವಂತರು ಮತ್ತು ಜನಸಾಮಾನ್ಯರನ್ನು ಭಿನ್ನವಾಗಿ ಯೋಚಿಸುವಂತೆ ಮಾಡಿತ್ತು. ವಿಶೇಷವಾಗಿ ಮಹಿಳೆಯರಲ್ಲಿ ಮೋದಿ ಸರಕಾರದ ಬಗ್ಗೆ ಸದಭಿಪ್ರಾಯ ಮೂಡುವಂತೆ ಮಾಡಿದ್ದ ಅಂಶ ಕಾಂಗ್ರೆಸ್ ಪಾಳಯದಲ್ಲಿ ಆತಂಕ ಉಂಟು ಮಾಡಿರುವುದನ್ನು ಆ ಪಕ್ಷದ ನಾಯಕರ ಹೇಳಿಕೆಗಳು ವ್ಯಕ್ತಗೊಳಿಸಿದ್ದವು.

ಈ ವರೆಗಿನ ಪ್ರತಿ ಚುನಾವಣೆಯಲ್ಲಿ ಬಿಜೆಪಿ ಪ್ರಬಲ ಸ್ಪರ್ಧೆ ಒಡ್ಡಿದ ಕ್ಷೇತ್ರಗಳಲ್ಲಿ, ಯುಡಿಎಫ್ ಮತ್ತು ಎಲ್‌ಡಿಎಫ್‌ಗಳು ಅಡ್ಡ ಮತದಾನದ ಮೂಲಕ ಬಿಜೆಪಿಯನ್ನು ಸೋಲಿಸುತ್ತಿದ್ದವು. ಈ ಬಾರಿ ಇದೇ ತಂತ್ರ ಮುಂದುವರಿದಿದೆಯೇ ಅಥವಾ ವ್ಯತ್ಯಾಸವಾಗಿದೆಯೇ ಎಂಬುದನ್ನು ಮೇ 4ರ ಫಲಿತಾಂಶ ತೋರಿಸಿಕೊಡಲಿದೆ.

ಕೇರಳದಲ್ಲಿ ಬಿಜೆಪಿ ಒಂದು ಶಕ್ತಿಯೇ ಅಲ್ಲ, ಅದು ಗೆಲುವಿನ ಹಂತಕ್ಕೆ ಹೋಗಲು ಸಾಧ್ಯವೇ ಇಲ್ಲ ಎಂಬಂತೆ ಮಾಧ್ಯಮ ವರ್ಗವೂ ಬಿಂಬಿಸುತ್ತಾ ಬಂದಿದ್ದರೂ, ಈ ಬಾರಿ ಬಿಜೆಪಿ ಅನೇಕ ಕ್ಷೇತ್ರಗಳಲ್ಲಿ ಪ್ರಬಲ ಶಕ್ತಿಯಾಗಿ ಹೊರಹೊಮ್ಮಿರುವುದು ಎದ್ದು ಕಾಣುತ್ತಿರುವ ಅಂಶ. ಎಲ್‌ಡಿಎಫ್ ಮತ್ತು ಯುಡಿಎಫ್‌ಗಳ ಅದಲುಬದಲಾಗಿ ಆಡಳಿತ ನಡೆಸಿದರೂ ಕೇರಳದ ಅಭಿವೃದ್ಧಿ, ಶಿಕ್ಷಣ, ಆರೋಗ್ಯ, ಯುವಜನತೆಗೆ ಉದ್ಯೋಗ ಸೇರಿದಂತೆ ಮೂಲಸೌಕರ್ಯಗಳ ಅಭಿವೃದ್ಧಿ ವಿಷಯದಲ್ಲಿ ಸಾಕ್ಷರ ಕೇರಳ ಹಿಂದೆ ಬಿದ್ದಿರುವುದು ಕೇರಳದ ಪ್ರಜ್ಞಾವಂತರಲ್ಲಿ ಈ ಬಾರಿ ಚರ್ಚೆಗೆ ಕಾರಣವಾಗಿರುವ ಒಂದು ಪ್ರಮುಖ ಅಂಶವಾಗಿತ್ತು.

ಈ ಎಲ್ಲ ಹಿನ್ನೆಲೆಯಲ್ಲಿ ಕೇರಳದಲ್ಲಿ ಈ ಬಾರಿ ಅಂಡರ್ ಕರೆಂಟ್ ಯಾವ ರೀತಿ ಕೆಲಸ ಮಾಡಿದೆ ?ಯುಡಿಎಫ್‌ನ ಆಂತರಿಕ ಗೊಂದಲದ ಪರಿಣಾಮ ಏನಾಗಿದೆ?ಆಡಳಿತ ವಿರೋಧಿ ಅಲೆ ಎಡರಂಗಕ್ಕೆ ಎಷ್ಟು ತೀವ್ರವಾಗಿ ಹೊಡೆತ ನೀಡಿದೆ ?ಬಿಜೆಪಿಯ ಸ್ಪರ್ಧೆ ಮತ್ತು ಅದರ ಮತಗಳು ಗೆಲುವಿನ ಮತಗಳಾಗಿ ಪರಿವರ್ತನೆಗೊಳ್ಳಲಿದೆಯೇ? ಬಿಜೆಪಿ ಎಷ್ಟು ಸ್ಥಾನಗಳನ್ನು ಗೆಲ್ಲಲಿದೆ ?ಅದು ಎಷ್ಟು ಪ್ರಬಲ ಸ್ಪರ್ಧೆ ಒಡ್ಡಲಿದೆ ಎಂಬಿತ್ಯಾದಿ ಅಂಶಗಳು ಕೇರಳದ ಈ ಬಾರಿಯ ಚುನಾವಣಾ ಫಲಿತಾಂಶದ ಲೆಕ್ಕಾಚಾರಗಳನ್ನೇ ಬದಲಿಸಬಹುದು ಎಂಬ ಮಾತೂ ರಾಜಕೀಯ ವಿಮರ್ಶಕರಿಂದ ಕೇಳಿಬರುತ್ತಿದೆ.

ಕಿರು ಸುದ್ದಿ

ಅಲೈಯನ್ಸ್ ಕಾಲೇಜಿಗೆ ನೂರು ಫಲಿತಾಂಶ

ಆನೇಕಲ್: ಅಲೈಯನ್ಸ್ ಪಿಯು ಕಾಲೇಜಿನ ವಿದ್ಯಾರ್ಥಿಗಳಾದ ಶಿವಂ ಪಿ., ನೀರಜಾ ಪಿ.ಆರ್. ಮತ್ತು ವಿಶಾಲಾಕ್ಷಿ ಎಸ್. ಅವರು ವ್ಯವಹಾರ ಅಧ್ಯಯನ ವಿಷಯದಲ್ಲಿ 100ಕ್ಕೆ 100 ಅಂಕವನ್ನು ಗಳಿಸಿದ್ದಾರೆ. ಕಾಲೇಜಿನ 18 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಹಾಗೂ 32 ವಿದ್ಯಾರ್ಥಿಗಳು ಫಸ್ಟ್ ಕ್ಲಾಸ್‌ನಲ್ಲಿ ಉತ್ತೀರ್ಣರಾಗಿದ್ದಾರೆ. ಪ್ರಮುಖವಾಗಿ ರಸಾಯನಶಾಸ್ತ್ರ, ಗಣಿತ, ಜೀವಶಾಸ್ತ್ರ, ಸಂಖ್ಯಾಶಾಸ್ತ್ರ, ವ್ಯವಹಾರ ಅಧ್ಯಯನ, ಅರ್ಥಶಾಸ್ತ್ರ, ಇಂಗ್ಲಿಷ್ ಮತ್ತು ಹಿಂದಿ ಸೇರಿದಂತೆ ಎಲ್ಲಾ ಪ್ರಮುಖ ವಿಷಯಗಳಲ್ಲಿ ಶೇ.100 ಉತ್ತೀರ್ಣತೆ ಸಾಧಿಸಲಾಗಿದೆ. ಅಲೈಯನ್ಸ್ ಪಿಯು ಕಾಲೇಜಿನ ಪ್ರಾಂಶುಪಾಲರು ಹಾಗೂ ಆಡಳಿತ ಮಂಡಳಿ ವಿದ್ಯಾರ್ಥಿಗಳ ಈ ವಿಶಿಷ್ಟ ಸಾಧನೆಗೆ ಹೃತ್ಪೂರ್ವಕ ಅಭಿನಂದನೆ ಸಲ್ಲಿಸಿದ್ದಾರೆ. ಜತೆಗೆ, ವಿದ್ಯಾರ್ಥಿಗಳನ್ನು ಯಶಸ್ಸಿನ ದಾರಿಯಲ್ಲಿ ಮುನ್ನಡೆಸಿದ ಶಿಕ್ಷಕ ವೃಂದ ಹಾಗೂ ಸಿಬ್ಬಂದಿ ಅಹೋರಾತ್ರಿ ಪರಿಶ್ರಮವನ್ನು ಪ್ರಶಂಸಿಸಿದ್ದಾರೆ.

ಎಂಪಿಸಿಎಸ್‌ಗೆ ಅವಿರೋಧ ಆಯ್ಕೆ

ಕೋಲಾರ: ತಾಲೂಕಿನ ದಿಂಬಚಾಮನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಐದು ವರ್ಷದ ಆಡಳಿತ ಮಂಡಳಿಗೆ ನೂತನ ಅಧ್ಯಕ್ಷರಾಗಿ ವಿ.ಆನಂದ್ ಕುಮಾರ್, ಉಪಾಧ್ಯಕ್ಷರಾಗಿ ಎಂ.ಶ್ರೀನಿವಾಸ್ ಅವಿರೋಧವಾಗಿ ಆಯ್ಕೆಯಾದರು. ಸಂಘದ ಕಚೇರಿಯಲ್ಲಿ ಶನಿವಾರ ನಡೆದ ಚುನಾವಣೆಯಲ್ಲಿ ಎರಡು ಸ್ಥಾನಕ್ಕೆ ಒಂದೊಂದು ನಾಮಪತ್ರ ಸಲ್ಲಿಕೆಯಾದ ಕಾರಣ ಅವಿರೋಧ ಆಯ್ಕೆ ನಡೆಯಿತು. ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆಯ ವೆಂಕಟೇಶ್ ಬಾಬು ಕಾರ್ಯನಿರ್ವಹಿಸಿದರು. ಇದಕ್ಕೂ ಮೊದಲು ಮಾರ್ಚ್ 23 ರಂದು ನಡೆದ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ನೂತನ ನಿರ್ದೇಶಕರಾಗಿ ಎಂ.ಸುಧಾಕರ್, ಕೆ.ಸುರೇಶ್, ಕೆ.ನಂಜೇಗೌಡ, ಹೋಟ್ಟಪ್ಪ, ಮುನಿಶಾಮಪ್ಪ, ಬಾಲಪ್ಪ, ಎಂ ವೆಂಕಟೇಶಪ್ಪ, ರಾಧಮ್ಮ, ಅಕ್ಕಮ್ಮ, ಅನಿತಮ್ಮ ಆಯ್ಕೆಯಾಗಿದ್ದರು ಈ ಸಂದರ್ಭದಲ್ಲಿ ಆಡಳಿತ ಮಂಡಳಿಯ ನಿರ್ದೇಶಕರು ನೂತನ ಅಧ್ಯಕ್ಷ ಉಪಾಧ್ಯಕ್ಷರನ್ನು ಅಭಿನಂದನೆ ಸಲ್ಲಿಸಿದರು ಕಾರ್ಯದರ್ಶಿ ಎನ್ ಅಶೋಕ್ ಇದ್ದರು.

ಕ್ಯಾಬ್ ಬುಕ್ ಮಾಡಿ ಕಾಯಿಸಿದ ಮಹಿಳೆ: ವಾಗ್ವಾದ

ಬೆಂಗಳೂರು: ವೈಟ್‌ಫೀಲ್ಡ್ ಬಳಿ ಕ್ಯಾಬ್ ಚಾಲಕ ಮತ್ತು ಮಹಿಳೆ ನಡುವೆ ತೀವ್ರ ವಾಗ್ವಾದ ನಡೆದಿದ್ದು, ಕ್ಯಾಬ್ ಬುಕ್ ಮಾಡಿದ ಬಳಿಕ ಮಹಿಳೆ, ಚಾಲಕನನ್ನು ಸುಮಾರು ಅರ್ಧಗಂಟೆ ಕಾಯಿಸಿರುವ ಆರೋಪ ಕೇಳಿಬಂದಿದೆ. ಚಾಲಕ ಹೇಳುವ ಪ್ರಕಾರ, ಮಹಿಳೆಗೆ ಮೂರು ಬಾರಿ ಕರೆ ಮಾಡಿದ್ದರೂ ಬರುತ್ತಿದ್ದೇನೆ ಎಂದು ಹೇಳಿ ಸುಮಾರು ಅರ್ಧಗಂಟೆ ಕಾಯಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ಮಹಿಳೆ ಕೂಡ ಚಾಲಕನ ಮೇಲೆ ಆರೋಪ ಮಾಡಿದ್ದು, ಅರ್ಧಗಂಟೆ ಲೇಟ್ ಎಂದ ಕಾರಣಕ್ಕೆ ನಿಮ್ಮ ಜತೆ ಪ್ರಯಾಣ ಮಾಡುವುದು ಸೇಫ್ ಅಲ್ಲ ಎಂದು ಹೇಳಿದ್ದಾರೆ. ಇಬ್ಬರೂ ಪರಸ್ಪರ ಆರೋಪ-ಪ್ರತ್ಯಾರೋಪ ಮಾಡಿರುವುದು ನಡೆದಿದೆ. ಕ್ಯಾಬ್ ಕ್ಯಾನ್ಸಲ್ ಮಾಡದೇ ಅನಗತ್ಯವಾಗಿ ಕಾಯಿಸಿ ಕಿರಿಕ್ ಮಾಡಿದರೆಂದು ಚಾಲಕ ಆರೋಪಿಸಿದ್ದಾರೆ.

ಎಐಸಿಸಿಯಿಂದ ಟ್ಯಾಲೆಂಟ್ ಹಂಟ್

ಬೆಂಗಳೂರು: ಯುವ ಜನತೆಯ ಪ್ರತಿಭೆ ಅನಾವರಣಕ್ಕೆ ರಾಷ್ಟ್ರೀಯ ಟ್ಯಾಲೆಂಟ್ ಹಂಟ್ ಕಾರ್ಯಕ್ರಮವನ್ನು ರಾಹುಲ್ ಗಾಂಧಿ ಅವರ ಮಾರ್ಗದರ್ಶನದ ಮೇರೆಗೆ ಪ್ರಾರಂಭಿಸಲಾಗಿದೆ. ಇದರಲ್ಲಿ ಭಾಗವಹಿಸಲು ಇಚ್ಛಿಸುವ ಪ್ರತಿಯೊಬ್ಬರೂ ಎಐಸಿಸಿ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳಬೇಕು ಎಂದು ಪ್ರತಿಭಾನ್ವೇಷಣೆ ರಾಷ್ಟ್ರೀಯ ಸಂಯೋಜಕ ಹರಿಶೇಖರ್ ಗುಪ್ತ ತಿಳಿಸಿದರು. ಕೆಪಿಸಿಸಿ ಕಚೇರಿಯಲ್ಲಿ ಶನಿವಾರ ಕಾರ್ಯಕ್ರಮದ ಕುರಿತು ಮಾಹಿತಿ ಹಂಚಿಕೊಂಡ ಅವರು, ವಕ್ತಾರರು, ಮಾಧ್ಯಮ ಚರ್ಚೆಯಲ್ಲಿ ಭಾಗವಹಿಸುವವರು, ಸಂಶೋಧಕರು ಹಾಗೂ ಅದನ್ನು ವಿಶ್ಲೇಷಣೆ ಮಾಡುವವರು ಜೊತೆಗೆ ಪ್ರಚಾರ ಸಂಯೋಜಕರನ್ನು ಹೊರ ತೆಗೆಯುವುದೇ ಈ ಕಾರ್ಯಕ್ರಮದ ಉದ್ದೇಶ ಎಂದು ತಿಳಿಸಿದರು.

ಈ ಕಾರ್ಯಕ್ರಮ ಇಡೀ ದೇಶದಾದ್ಯಂತ ಎಲ್ಲಾ ರಾಜ್ಯಗಳಲ್ಲಿ ನಡೆಯಲಿದೆ. ಉಪಚುನಾವಣೆ ಇದ್ದ ಕಾರಣಕ್ಕೆ ಕರ್ನಾಟಕದಲ್ಲಿ ತಡವಾಗಿ ಇದನ್ನು ಆರಂಭಿಸಲಾಗಿದೆ. ಒಟ್ಟು ಎರಡು ಹಂತದಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಮೊದಲಿಗೆ ಸ್ಥಳೀಯವಾಗಿ ಆಯ್ಕೆ ನಡೆಸಲಾಗುವುದು. ನಂತರ ರಾಜ್ಯ ಮಟ್ಟದಲ್ಲಿ ಆಯ್ಕೆ ನಡೆಸಲಾಗುವುದು ಎಂದರು.

ಅರ್ಜಿಯಲ್ಲಿ ಕೇಳಿದ ಮಾಹಿತಿ ಹಾಗೂ ಮಾಧ್ಯಮ ಅನುಭವವನ್ನು ಭರ್ತಿ ಮಾಡಬೇಕು. ಅತ್ಯಂತ ಸಮರ್ಥರು ಇರುವ ತಂಡವು ಅಭ್ಯರ್ಥಿಗಳನ್ನು ಆಯ್ಕೆ ಮಾಡಲಿದೆ. ಅಂತಿಮ ಪಟ್ಟಿಗೆ ಆಯ್ಕೆಯಾದ ಅಭ್ಯರ್ಥಿಗಳನ್ನು ಸ್ವತಃ ರಾಹುಲ್ ಗಾಂಧಿ ಅವರು ಸಂದರ್ಶನ ಮಾಡಲಿದ್ದಾರೆ ಎಂದು ಹೇಳಿದರು.

ಹೊಸದಾಗಿ ಎರಡು ಕ್ಷೇತ್ರ ರಚನೆಯಾದಲ್ಲಿ ಮೀಸಲು ಕಡ್ಡಾಯ। ಪ್ರತ್ಯೇಕ ಕ್ಷೇತ್ರದ ಬಗ್ಗೆ ರಾಜಕೀಯ ಚರ್ಚೆ

ಬೆಂ. ದಕ್ಷಿಣ ಮಹಿಳೆಗೋ, ಪರಿಶಿಷ್ಟರಿಗೋ ?

ಎಸ್. ರುದ್ರೇಶ್ವರ

ದಿಗಂತ ವಿಶೇಷ

ರಾಮನಗರ: ಲೋಕಸಭಾ ಕ್ಷೇತ್ರ ವಿಂಗಡಣೆ ಕಾರ್ಯ ಬಿರುಸಿನಿಂದ ಸಾಗಿದೆ. ಕ್ಷೇತ್ರಗಳ ಬದಲಾವಣೆಯಿಂದಾಗಿ ಅಭ್ಯರ್ಥಿಗಳು, ಮತದಾರರ ನಡುವೆ ಹೊಸಮುಖ ಪರಿಚಯವಾಗುವ ಸಾಧ್ಯತೆ ಇದೆ. ಈ ನಡುವೆ ಜನಸಂಖ್ಯೆ ಆಧಾರದ ಮೇಲೆ ಕ್ಷೇತ್ರ ವಿಂಗಡಣೆಯಾದಲ್ಲಿ ದಕ್ಷಿಣ ಜಿಲ್ಲೆಗೆ ಸಿಗಬಹುದಾದ ಪ್ರಾಧಾನ್ಯತೆ ಬಗೆಗೆ ಹೆಚ್ಚು ಕುತೂಹಲ ಮೂಡಿದೆ.

ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಹೊಸದಾಗಿ ಎರಡು ಕ್ಷೇತ್ರಗಳು ರಚನೆಗೊಂಡು ವಿಧಾನಸಭಾ ಕ್ಷೇತ್ರಗಳಾದರೆ ಈ ಪೈಕಿ ಒಂದು ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರ ಹಾಗೂ ಒಂದು ಮಹಿಳಾ ಮೀಸಲು ಕ್ಷೇತ್ರ ಕಡ್ಡಾಯವಾಗಿ ಇರಲಿದೆ. ಹಾಗಾದರೆ ಯಾವ ಎರಡು ಕ್ಷೇತ್ರಗಳು ಮೀಸಲುಕ್ಷೇತ್ರಗಳಾಗಬಹುದು ಎನ್ನುವುದು ಮತದಾರರ ಮಾತಾಗಿದೆ.

ಪ್ರಸ್ತುತ ಇರುವ 543 ಸ್ಥಾನಗಳನ್ನು ಸುಮಾರು 816ಕ್ಕೇರಿಸುವ ಪ್ರಸ್ತಾವನೆ ಇದೆ. ಇದರಿಂದಾಗಿ ದಕ್ಷಿಣ ಭಾರತದ ಪ್ರಮುಖ ರಾಜ್ಯವಾಗಿರುವ ಕರ್ನಾಟಕದ ಪ್ರಾತಿನಿಧ್ಯವೂ ಹೆಚ್ಚಾಗಲಿದೆ. ಬೆಂಗಳೂರು ದಕ್ಷಿಣ ಜಿಲ್ಲೆಗೂ ಪ್ರತ್ಯೇಕ ಲೋಕಸಭಾಕ್ಷೇತ್ರ ಸಿಗುವ ಸಾಧ್ಯತೆ ಇದೆ.2029ರ ಲೋಕಸಭಾ ಚುನಾವಣೆಗೆ ಮೂರು ವರ್ಷ ಬಾಕಿ ಇದೆ. ಈ ಹೊತ್ತಲ್ಲಿ ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಬೃಹತ್ ಮತ್ತು ಐತಿಹಾಸಿಕ ನಿರ್ಧಾರಕ್ಕೆ ಕೈಹಾಕಿದೆ. ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ನೀಡುವ ಮಹಿಳಾ ಮೀಸಲಾತಿ ಕಾಯ್ದೆ ಈಗಾಗಲೇ ಸಂಸತ್ತಿನ ಉಭಯ ಸದನಗಳಲ್ಲಿ ಪಾಸ್ ಆಗಿದೆ. ಆದರೆ, ಇದು ಜಾರಿಯಾಗಿರಲಿಲ್ಲ, ಈಗ ಅದು ಜಾರಿಯಾಗುವ ಕಾಲ ಸನ್ನಿಹಿತವಾಗಿದೆ. ಇದಕ್ಕಾಗಿ ಪ್ರಸ್ತುತ 543 ಇರುವ ಲೋಕಸಭಾ ಸ್ಥಾನಗಳನ್ನು ಬರೋಬ್ಬರಿ 816ಕ್ಕೆ ಏರಿಸಲು ಕೇಂದ್ರ ಸರ್ಕಾರ ಮುಂದಾಗಿದೆ.

ಕರ್ನಾಟಕದಲ್ಲಿ 14 ಹೊಸ ಕ್ಷೇತ್ರಗಳ ರಚನೆ: ಉದ್ದೇಶಿತ ಕ್ಷೇತ್ರ ಪುನರ್ ವಿಂಗಡಣೆಯ ನಂತರ ರಾಜ್ಯದ ವಿಧಾನಸಭಾ ಕ್ಷೇತ್ರಗಳ ಸಂಖ್ಯೆ 224ರಿಂದ 336ಕ್ಕೆ ಏರಿಕೆಯಾಗಲಿದೆ. ಅದೇ ರೀತಿ ಲೋಕಸಭಾಕ್ಷೇತ್ರಗಳ ಸಂಖ್ಯೆ 28ರಿಂದ 42ಕ್ಕೆ ಏರಿಕೆಯಾಗಲಿದೆ. ಅಂದರೆ, ರಾಜ್ಯದಲ್ಲಿ ಬರೋಬ್ಬರಿ 14 ಹೊಸ ಕ್ಷೇತ್ರಗಳು ಅಸ್ತಿತ್ವಕ್ಕೆ ಬರಲಿವೆ. ಹೀಗಾದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯೂ ಸಹ ಪ್ರತ್ಯೇಕ ಲೋಕಸಭಾ ಕ್ಷೇತ್ರವನ್ನು ಹೊಂದಲಿದೆ ಎನ್ನುವ ನಿರೀಕ್ಷೆಗಳು ಜಿಲ್ಲೆಯಲ್ಲಿ ಗರಿಗೆದರಿದೆ.

ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಪ್ರತ್ಯೇಕ

ಸದ್ಯ ಜಿಲ್ಲೆಯ ನಾಲ್ಕೂ ವಿಧಾನಸಭಾ ಕ್ಷೇತ್ರಗಳು ಬೆಂಗಳೂರು ಗ್ರಾಮಾಂತರ ಲೋಕಸಭಾಕ್ಷೇತ್ರದ ವ್ಯಾಪ್ತಿಗೆ ಒಳಪಡುತ್ತವೆ. ಬೆಂಗಳೂರು ನಗರ ಜಿಲ್ಲೆಯ 3 ಕ್ಷೇತ್ರಗಳು ಹಾಗೂ ತುಮಕೂರು ಜಿಲ್ಲೆಯ ಕುಣಿಗಲ್ ಕ್ಷೇತ್ರವನ್ನು ಸೇರಿಸಿಕೊಂಡು ಈ ಲೋಕಸಭಾ ಕ್ಷೇತ್ರವನ್ನು ರಚಿಸಲಾಗಿದೆ. ಆದರೆ ಮುಂದಿನ ದಿನದಲ್ಲಿ ಕ್ಷೇತ್ರ ಪುನರ್ ವಿಂಗಡಣೆಯಾದರೆ ಬೇರೆ ಜಿಲ್ಲೆಯ ವಿಧಾನಸಭಾ ಕ್ಷೇತ್ರವನ್ನು ಬಿಟ್ಟು ಜಿಲ್ಲೆಗೆ ಪ್ರತ್ಯೇಕವಾಗಿ ಲೋಕಸಭಾಕ್ಷೇತ್ರ ದಕ್ಕಲಿದೆ ಎನ್ನುವ ಚರ್ಚೆ ನಡೆಯುತ್ತಿದೆ.



ಕ್ಷೇತ್ರಗಳೂ ಏರಿಕೆ

ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಸದ್ಯ ಐದು ತಾಲೂಕುಗಳಿವೆ. ರಾಮನಗರ, ಚನ್ನಪಟ್ಟಣ, ಮಾಗಡಿ, ಕನಕಪುರದ ಜತೆಗಿದ್ದ ಹಾರೋಹಳ್ಳಿ ತಾಲೂಕು ಹೊಸದಾಗಿ ರಚನೆಯಾಗಿದೆ. ಆದರೆ, ಜಿಲ್ಲೆಯಲ್ಲಿ ಸದ್ಯ ಕೇವಲ 4 ವಿಧಾನಸಭಾ ಕ್ಷೇತ್ರಗಳಿವೆ. ಜಿಲ್ಲೆಯ ಜನಸಂಖ್ಯೆಯ ಆಧಾರದ ಮೇಲೆ ಮತ್ತೆರಡು ಹೊಸ ವಿಧಾನಸಭಾ ಕ್ಷೇತ್ರಗಳು ಸೃಷ್ಟಿಯಾಗುವ ಸಾಧ್ಯತೆಗಳಿವೆ. ಚನ್ನಪಟ್ಟಣ ತಾಲೂಕಿನ ವಿರೂಪಾಕ್ಷಿಪುರ ಹೋಬಳಿಯನ್ನು ಸೇರಿಸಿಕೊಂಡು ಸಾತನೂರು ವಿಧಾನಸಭಾ ಕ್ಷೇತ್ರ, ಹಾಗೂ ಬಿಡದಿ ಹೋಬಳಿಯನ್ನು ಸೇರಿಸಿಕೊಂಡು ಹಾರೋಹಳ್ಳಿ ವಿಧಾನಸಭಾ ಕ್ಷೇತ್ರಗಳು ರಚನೆಯಾಗುವ ಸಾಧ್ಯತೆಗಳಿವೆ ಅಥವಾ ಬೆಂಗಳೂರಿಗೆ ಸಮೀಪದಲ್ಲಿರುವ ಪ್ರತಿಷ್ಠಿತ ಕೈಗಾರಿಕೆಗಳಿಗೆ ಆಶ್ರಯ ಒದಗಿಸಿರುವ ಬಿಡದಿ ಹೆಸರಿನಲ್ಲಿಯೇ ಹೊಸ ವಿಧಾನಸಭಾ ಕ್ಷೇತ್ರ ರಚನೆಯಾದರೂ ಆಶ್ಚರ್ಯವಿಲ್ಲ.

ಜಿಲ್ಲೆಯಲ್ಲಿ ಎರಡು ಮೀಸಲು ಕ್ಷೇತ್ರಗಳು

ಸದ್ಯ ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಯಾವುದೇ ಮೀಸಲು ಕ್ಷೇತ್ರಗಳಿರಲಿಲ್ಲ, ರಾಮನಗರ, ಚನ್ನಪಟ್ಟಣ, ಮಾಗಡಿ ಹಾಗೂ ಕನಕಪುರ ಈ ನಾಲ್ಕೂ ಕ್ಷೇತ್ರಗಳು ಸಾಮಾನ್ಯ ಕ್ಷೇತ್ರವಾಗಿದ್ದವು. ಆದರೆ ಕ್ಷೇತ್ರ ಪುನರ್ ವಿಂಗಡಣೆಯ ಬಳಿಕ ಬೆಂಗಳೂರು ದಕ್ಷಿನ ಜಿಲ್ಲೆಯಲ್ಲಿ ಮತ್ತೆರಡು ಹೊಸ ಕ್ಷೇತ್ರಗಳು ರಚನೆಯಾದಲ್ಲಿ, ಎರಡು ಮೀಸಲು ಕ್ಷೇತ್ರಗಳಾಗಿ ಉಳಿಯಲಿವೆ. ಒಂದು ಎಸ್ ಸಿ ಮೀಸಲು ಕ್ಷೇತ್ರ ಹಾಗೂ ಮತ್ತೊಂದು ಮಹಿಳಾ ಮೀಸಲು ಕ್ಷೇತ್ರವಾಗಲಿದೆ.

ಮಾಗಡಿಗೆ ಅನ್ಯಾಯ

ಕ್ಷೇತ್ರ ಪುನರ್ ವಿಂಗಡಣೆಯಾದರೆ ಮಾಗಡಿ ತಾಲೂಕಿಗೆ ಎರಡು ವಿಧಾನಸಭಾ ಕ್ಷೇತ್ರಗಳನ್ನು ಹೊಂದುವ ಅವಕಾಶವಿತ್ತು. ಆದರೆ ಸೋಲೂರು ಹೋಬಳಿಯನ್ನು ಪಕ್ಕದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲೂಕಿಗೆ ಸೇರಿಸಿರುವ ಪರಿಣಾಮ ಕುದೂರು ವಿಧಾನಸಭಾ ಕ್ಷೇತ್ರ ಕೇವಲ ಕನಸಾಗಿಯೇ ಉಳಿದು ಹೋಗಲಿದೆ ಎಂದು ಮಾಗಡಿಯಲ್ಲಿ ಸೋಲೂರನ್ನು ಉಳಿಸಿ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಕನ್ನಡ ಕುಮಾರ್ ಮಾಹಿತಿ ನೀಡಿದರು. ಸೋಲೂರು ಹೋಬಳಿ ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿಯೇ ಉಳಿದುಕೊಂಡಿದ್ದರೆ ಖಂಡಿತವಾಗಿಯೂ ಕುದೂರು ವಿಧಾನಸಭಾ ಕ್ಷೇತ್ರ ಅಸ್ತಿತ್ವಕ್ಕೆ ಬಂದು ಮಾಗಡಿ ತಾಲೂಕು ಎರಡು ಎಂಎಲ್ ಎ ಗಳನ್ನು ಪಡೆಯಲು ಸಾಧ್ಯವಿತ್ತು. ಹಾಲಿ ಇರುವ ಮಾಗಡಿ ವಿಧಾನಸಭಾ ಕ್ಷೇತ್ರದ ಜತೆಗೆ ಕುದೂರು, ತಿಪ್ಪಸಂದ್ರ ಹಾಗೂ ಸೋಲೂರು ಹೋಬಳಿಯನ್ನು ಒಳಗೊಂಡು ಕುದೂರು ವಿಧಾನಸಭಾ ಕ್ಷೇತ್ರ ರಚನೆಯಾಗುವ ಸಾಧ್ಯತೆಯಿತ್ತು ಎಂದರು. ಆದರೆ, ಸೋಲೂರು ನಮ್ಮ ಕೈತಪ್ಪಿ ಹೋದ ಪರಿಣಾಮ ಹಾಗೂ ಮಾಡಬಾಳು ಹೋಬಳಿ ರಾಮನಗರ ವಿಧಾನಸಭಾ ಕ್ಷೇತ್ರವನ್ನು ಸೇರುವ ಕಾರಣ, ಕುದೂರು ಹೋಬಳಿ, ತಿಪ್ಪಸಂದ್ರ ಹೋಬಳಿ ಮತ್ತು ಕಸಬಾ ಹೋಬಳಿಗಳ ಜನಸಂಖ್ಯೆ ಒಂದು ವಿಧಾನಸಭಾ ಕ್ಷೇತ್ರಕ್ಕೆ ಸರಿ ಹೊಂದಲಿದೆ. ಸೋಲೂರು ನಮ್ಮಲ್ಲಿಯೇ ಉಳಿದುಕೊಂಡಿದ್ದರೆ ಕುದೂರು ಅಥವಾ ಮಾಗಡಿ ಮೀಸಲು ಕ್ಷೇತ್ರವಾಗುತ್ತಿತ್ತು ಎಂದು ತಿಳಿಸಿದರು.

ರಾಮನಗರ ಪರಿಶಿಷ್ಟರ ಮೀಸಲು ಕ್ಷೇತ್ರ?

ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಹೊಸದಾಗಿ ಎರಡು ಕ್ಷೇತ್ರಗಳು ರಚನೆಗೊಂಡು ಒಟ್ಟು ವಿಧಾನಸಭಾ ಕ್ಷೇತ್ರಗಳಾದರೆ ಈ ಪೈಕಿ ಒಂದು ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರ ಹಾಗೂ ಒಂದು ಮಹಿಳಾಮೀಸಲು ಕ್ಷೇತ್ರ ಕಡ್ಡಾಯವಾಗಿ ಇರಲಿದೆ. ಹಾಗಾದರೆ ಯಾವ ಎರಡು ಕ್ಷೇತ್ರಗಳು ಮೀಸಲುಕ್ಷೇತ್ರಗಳಾಗಬಹುದು ಎನ್ನುವುದು ಭಾರೀ ಕುತೂಹಲವನ್ನು ಮೂಡಿದೆ.

ಒಂದು ವೇಳೆ ಮಾಡಬಾಳ್ ಹೋಬಳಿ ಸೇರ್ಪಡೆಯಾಗಿದ್ದೇ ಆದಲ್ಲಿ ರಾಮನಗರ ಕ್ಷೇತ್ರವೇ ಎಸ್ ಸಿ ಮೀಸಲು ಕ್ಷೇತ್ರವಾಗಲಿದೆ ಎನ್ನುವ ಮಾತುಗಳು ಕೂಡ ಕೇಳಿಬರುತ್ತಿವೆ. ಮತ್ತೊಂದೆಡೆ ಮಹಿಳಾಮೀಸಲು ಯಾವ ಕ್ಷೇತ್ರದ ಪಾಲಾಗಲಿದೆ ಎನ್ನುವುದು ಇನ್ನಷ್ಟು ಕುತೂಹಲದ ಸಂಗತಿಯಾಗಿದೆ.

ರಾಜ್ಯ ಒಕ್ಕಲಿಗರ ಸಂಘದ ಸದಸ್ಯತ್ವದ ಗುರುತು ಪತ್ರ ವಿತರಣೆ

ಒಗ್ಗಟಿನಿಂದ ಒಕ್ಕಲಿಗರಲ್ಲಿ ಬಲವರ್ಧನೆ

ನೆಲಮಂಗಲ: ರಾಜ್ಯ ಒಕ್ಕಲಿಗರ ಸಂಘ ಸಮುದಾಯದ ಬಲವರ್ಧನೆಗೆ ಶಕ್ತಿಯಾಗಿದೆ. ಸಂಘದ ನೋಂದಣಿ ಪಡೆದು ಕಾರ್ಯಚಟುವಟಿಕೆ ಬಗ್ಗೆ ಗಮನಹರಿಸಬೇಕು ಎಂದು ರಾಜ್ಯ ಒಕ್ಕಲಿಗರ ಸಂಘದ ಮಾಜಿ ಅಧ್ಯಕ್ಷ ಎಲ್.ಹನುಮಂತಯ್ಯ ತಿಳಿಸಿದರು.

ನಗರದ ತಾಲೂಕು ಕಚೇರಿ ಮುಂಭಾಗದ ತಾಲೂಕು ಒಕ್ಕಲಿಗರ ಸಂಘದ ಕಚೇರಿಯಲ್ಲಿ ರಾಜ್ಯ ಒಕ್ಕಲಿಗರ ಸಂಘದ ಸದಸ್ಯತ್ವದ ಕಾರ್ಡ್ ವಿತರಣೆ ಮಾಡಿ ಮಾತನಾಡಿ, ಒಕ್ಕಲಿಗ ಸಮುದಾಯ ಸಂಘಟಿತರಾಗದಿದ್ದರೆ ಮುಂದಿನ ದಿನ ಕಷ್ಟಕರವಾಗಲಿವೆಂದರು.

ನಗರದ ಬೆಕ್ಕು ಹೆಬ್ಬುಲಿಯಲ್ಲ, ಒಕ್ಕಲಿಗ ಪ್ರಾಧನಲ್ಲ ಎಂಬ ನಾಣ್ಣುಡಿ ಯಂತೆ ಆಗದೇ, ಒಕ್ಕಲಿಗರು ಬೇರೆ ಬೇರೆ ಸಮುದಾಯಗಳಿಗೆ ಮಾದರಿ ಯಾಗಿ ಬೆಳೆಯಬೇಕು. ಒಕ್ಕಲು ಮಕ್ಕಳು ನಾಡಿನ ಏಳ್ಗೆಗೆ ದುಡಿಯುವಂತಾಗಬೇಕು. ರಾಜ್ಯ ಒಕ್ಕಲಿಗರ ಸಂಘದ ಸದಸ್ಯತ್ವ ಪಡೆದು ರಾಜ್ಯ ಒಕ್ಕಲಿಗ ಸಂಸ್ಥೆಗಳಲ್ಲಿ ಅನುಕೂಲ ಪಡೆದುಕೊಳ್ಳಬೇಕು. ಸಂಘದ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸಿ ಎಂದರು.

ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ತಿಮ್ಮರಾಜು(ರಾಜಣ್ಣ) ಮಾತನಾಡಿ, ರಾಜ್ಯ ಒಕ್ಕಲಿಗರಸಂಘದಸದಸ್ಯತ್ವಪಡೆದವರಿಗೆಗುರುತಿನ ಚೀಟಿ ವಿತರಣೆ ಮಾಡಲಾಗಿದೆ. ನೆಲಮಂಗಲದಲ್ಲಿ ಅತಿಹೆಚ್ಚು ರಾಜ್ಯ ಒಕ್ಕಲಿಗರ ಸಂಘದಲ್ಲಿ ನೋಂದಣಿ ಪಡೆಯಬೇಕು. ಅದೇ ರೀತಿ ನೆಲಮಂಗಲ ತಾಲೂಕು ಒಕ್ಕಲಿಗರ ಸಂಘದಲ್ಲಿಯೂ ನೋಂದಣಿ ಪಡೆದುಕೊಳ್ಳಿ ಎಂದರು.



ತಾಲೂಕು ಒಕ್ಕಲಿಗರ ಸಂಘದ ಕಾರ್ಯದರ್ಶಿ ಬೈರಪ್ಪ, ಪಿಎಲ್ ಡಿ ಬ್ಯಾಂಕ್ ನಿರ್ದೇಶಕರಾದ ಭಾರತೀಪುರ ಶ್ರೀನಿವಾಸ್, ಬಿಡಿಸಿಸಿಬ್ಯಾಂಕ್‌ನಿರ್ದೇಶಕರಾದಮಾಚನಹಳ್ಳಿಜಯಣ್ಣ, ವಕೀಲರಾದ ಹಂಚೀಪುರ ಅಂದಾನಪ್ಪ, ಒಕ್ಕಲಿಗ ಸಮುದಾಯದ ಮುಖಂಡರಾದ ಎಚ್.ಜಿ. ರಾಜಣ್ಣ, ತ್ಯಾಮಗೊಂಡ್ಲು, ರಂಗಸ್ವಾಮಿ, ಭಾಸ್ಕರ್, ಎಂ.ಎಂ.ಗೌಡ, ಕೃಷ್ಣಮೂರ್ತಿ, ಕರವೇ ಉಮೇಶ್‌ಗೌಡ, ತ್ಯಾಮ ಗೊಂಡ್ಲು ಅಶ್ವತ್ಥಗೌಡ, ಬೂದಿಹಾಲ್ ಲಕ್ಷ್ಮಿವೆಂಕಟೇಶ್, ಪತ್ರಕರ್ತ ರಾದ ಹೊಸಹಳ್ಳಿ ವಿಜಯ್‌ಕುಮಾರ್, ಬೂದಿಹಾಲ್ ಕಿಟ್ಟಿ, ವೀರಸಾಗರ ಭಾನುಪ್ರಕಾಶ್, ಕರವೇ ಮಂಜೇಗೌಡ, ನಿಕಟ ಪೂರ್ವ ಕಸಾಪ ಪ್ರದೀಪ್, ಸೋಂಪುರ ಒಕ್ಕಲಿಗರ ಸಂಘದ ಅಧ್ಯಕ್ಷ ವಿ.ಎಚ್.ಗಂಗರುದ್ರಯ್ಯ ಹಲವರಿದ್ದರು.

ರೋಟರಿಯಿಂದ ಮಹಿಳೆಯರಿಗೆ ಹಸು ವಿತರಣೆ

ಕೋಲಾರ: ರೋಟರಿ ಸಂಸ್ಥೆಯಿಂದ ಕಾಮಧೇನು ಯೋಜನೆಯಲ್ಲಿ ಸುಗಟೂರು ಹೋಬಳಿಯ ತುರಾಂಡಹಳ್ಳಿ ಗ್ರಾಮದ 10 ಮಹಿಳೆಯರಿಗೆ ಉಚಿತವಾಗಿ 10 ಸೀಮೆಹಸುವನ್ನು ವಿತರಿಸಲಾಯಿತು.

ರೋಟರಿ ಸಂಸ್ಥೆಯ ರಾಜ್ಯಪಾಲ ಡಿ.ಜಿ ಶ್ರೀಧರ್ ಮಾತನಾಡಿ, ಗ್ರಾಮೀಣ ಪ್ರದೇಶದ ರೈತ ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ಉದ್ದೇಶದಿಂದ ಕಾಮಧೇನು ಯೋಜನೆಗೆ ಒತ್ತು ನೀಡಿ ಉಚಿತಯ ಹಸು ವಿತರಿಸಿದ್ದೇವೆ. ಮುಂದಿನ ದಿನದಲ್ಲಿ ಅವಶ್ಯಕತೆ ಇರುವ ಕಡೆ ಕೊಡುವ ಮೂಲಕ ಮತ್ತಷ್ಟು ಮಹಿಳೆಯರ ಆರ್ಥಿಕ ಅಭಿವೃದ್ಧಿಗೆ ನೆರವಾಗುವುದಾಗಿ ತಿಳಿಸಿದರು.

ಕೋಲಾರ ಜಿಲ್ಲೆಗೆ ಹೈನುಗಾರಿಕೆಯೇ ಜೀವಾಳವಾಗಿದ್ದು, ರೋಟರಿ ಸಂಸ್ಥೆ ನೀಡಿರುವ ಹಸುಗಳನ್ನು ಉತ್ತಮ ರೀತಿಯಲ್ಲಿ ಸಾಕಾಣೆ ಮಾಡುವ ಮೂಲಕ ಆರ್ಥಿಕವಾಗಿ ಸ್ವಾವಲಂಬಿ ಬದುಕು ನಡೆಸಿ ಎಂದು ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ರೋಟರಿ ಸಂಸ್ಥೆಯ ಕಾರ್ಯದರ್ಶಿ ಪ್ರಭಾಕರ್, ಕಾಮಧೇಯು ಯೋಜನೆಯ ನಿರ್ದೇಶಕ ಸುಧಾಕರ್, ನಿವೃತ್ತ ಬಿಇಒ ಸಿ.ಆರ್ ಅಶೋಕ್, ಕೆಡಿಪಿ ಸದಸ್ಯ ಹಾಗೂ ಪ್ರಗತಿಪರ ರೈತ ತುರಾಂಡಹಳ್ಳಿ ಟಿ.ಎನ್ ರವಿ, ಡೇರಿ ಅಧ್ಯಕ್ಷ ಟಿ.ವಿ ನಾಗರಾಜ್, ಸುಗಟೂರು ಗ್ರಾಪಂ ಮಾಜಿ ಅಧ್ಯಕ್ಷ ಭೂಪತಿಗೌಡ, ಮುಖಂಡರಾದ ಟಿ.ಎಂ ರಮೇಶ್, ಶ್ರೀನಿವಾಸ್, ಅನಿಲ್ ಕುಮಾರ್ ಸೇರಿದಂತೆ ಇತರರು ಇದ್ದರು.



ಹಳೆ ವಾಹನಗಳ ತೆರಿಗೆಯಲ್ಲಿ ಕಡಿತ

ಬೆಂಗಳೂರು : ಹಳೆಯ ಅಥವಾ ಬಳಸಿದ ವಾಹನಗಳಿಗೆ ಅವುಗಳ ವಯಸ್ಸಿನ ಆಧಾರದ ಮೇಲೆ ತೆರಿಗೆಯಲ್ಲಿ ಕಡಿತವನ್ನು ನೀಡಲಾಗಿದೆ. 2016ರಿಂದ ಎಲೆಕ್ಟ್ರಿಕ್ ಕಾರು, ಜೀಪ್, ಬಸ್ ಮತ್ತು ಖಾಸಗಿ ಸೇವಾ ವಾಹನಗಳಿಗೆ ನೀಡುತ್ತಿದ್ದ ಶೇ.100 ರಷ್ಟು ತೆರಿಗೆ ವಿನಾಯಿತಿ ರದ್ದುಗೊಳಿಸಿದೆ. ಏ.10ರಂದು ಹೊರಡಿಸಲಾದ ಅಧಿಸೂಚನೆ ಪ್ರಕಾರ ನೂತನ ತೆರಿಗೆ ದರ ಜಾರಿಗೆ ಬರಲಿದೆ. ಏ.10ರಂದು ಕರ್ನಾಟಕ ಮೋಟಾರು ವಾಹನಗಳ ತೆರಿಗೆ ತಿದ್ದುಪಡಿ ಕಾಯ್ದೆ 2026 ಅನ್ನು ಅಧಿಸೂಚನೆಗೊಳಿಸಿತ್ತು. ಇದಕ್ಕೆ ಏ.9ರಂದು ರಾಜ್ಯಪಾಲರ ಅನುಮೋದನೆ ದೊರೆತಿತ್ತು. ಆ ಮೂಲಕ ರಾಜ್ಯದಲ್ಲಿ ವಿದ್ಯುತ್ ವಾಹನಗಳಿಗೆ ನೀಡಲಾಗಿದ್ದ ತೆರಿಗೆ ವಿನಾಯಿತಿ ರದ್ದಾಯಿತು. ರಾಜ್ಯ ಸರ್ಕಾರವು 2016ರಿಂದ ಎಲೆಕ್ಟ್ರಿಕ್ ಕಾರು, ಜೀಪ್, ಬಸ್ ಮತ್ತು ಖಾಸಗಿಸೇವಾ ವಾಹನಗಳಿಗೆ ನೀಡುತ್ತಿದ್ದ ಶೇ.100 ರಷ್ಟು ತೆರಿಗೆ ವಿನಾಯಿತಿ ರದ್ದುಗೊಳಿಸಿದೆ. ಏ.10ರಂದು ಹೊರಡಿಸಲಾದ ಅಧಿಸೂಚನೆ ಪ್ರಕಾರ ನೂತನ ತೆರಿಗೆ ದರ ಜಾರಿಗೆ ಬರಲಿದೆನೂತನ ಬೆಲೆ ಅನುಗುಣವಾಗಿ ಮೂರು ಹಂತದಲ್ಲಿ ಜೀವಿತಾವಧಿ ತೆರಿಗೆಯನ್ನು ವಿಧಿಸಲಾಗುತ್ತದೆ. 10 ಲಕ್ಷ ರೂ.ವರೆಗಿನ ಎಲೆಕ್ಟ್ರಿಕ್ ವಾಹನಗಳಿಗೆ ಶೇ.5ರಷ್ಟು ತೆರಿಗೆ, 25 ಲಕ್ಷ ರೂ. ವರೆಗಿನ ವಾಹನಕ್ಕೆ ಶೇ.8ರಷ್ಟು ತೆರಿಗೆ ಹಾಗೂ 25 ಲಕ್ಷಕ್ಕಿಂತ ಅಧಿಕವಿರುವ ವಾಹನಕ್ಕೆ ಶೇ.10ರಷ್ಟು ತೆರಿಗೆ ವಿಧಿಸಲಾಗುತ್ತದೆ. ವಯಸ್ಸಿನ ಆಧಾರದ ತೆರಿಗೆ ಸ್ಲ್ಯಾಬ್‌ಗಳ ಮತ್ತು ಹಿಂದಿನ ತೆರಿಗೆಯ ಕುರಿತಾದ ಕಲಮಗಳು ಇತರ ರಾಜ್ಯಗಳಿಂದ ಎನ್‌ಒಸಿಯೊಂದಿಗೆ ತಂದ ನಂತರ ಕರ್ನಾಟಕದಲ್ಲಿ ಮರು-ನೋಂದಣಿ ಮಾಡಲಾದ ವಾಹನಗಳಿಗೆ ಮಾತ್ರ ಅನ್ವಯಿಸುತ್ತವೆ ಮತ್ತು ಅಸ್ತಿತ್ವದಲ್ಲಿರುವ ಇವಿ ಮಾಲೀಕರಿಗೆ ಅಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ಈ ಕ್ರಮದಿಂದ ರಾಜ್ಯಕ್ಕೆ ಸುಮಾರು 250 ಕೋಟಿ ರೂ.ಗಳ ಹೆಚ್ಚುವರಿ ಆದಾಯ ಬರುವ ನಿರೀಕ್ಷೆಯಿದೆ.

ಜು.6, 2023ರಂದು ವಿದ್ಯುತ್ ಚಾಲಿತ ವಾಹನಗಳಿಗೆ 100 ಪ್ರತಿಶತ ರಸ್ತೆ ತೆರಿಗೆ ವಿನಾಯಿತಿಯನ್ನು ಕೊನೆಗೊಳಿಸುವ ಸರ್ಕಾರದ ಪ್ರಸ್ತಾವನೆಯನ್ನು ಶಾಸಕರ ವಿರೋಧದ ನಂತರ ಸರ್ಕಾರವು 25 ಲಕ್ಷ ರೂ.ಗಿಂತ ಹೆಚ್ಚಿನ ಬೆಲೆಯ ವಿದ್ಯುತ್ ಚಾಲಿತ ಕಾರುಗಳ ಮೇಲೆ ಮಾತ್ರ ತೆರಿಗೆ ವಿಧಿಸಲು ನಿರ್ಧರಿಸಿತು.

ಕ್ರಾಫ್ಟ್ ರೂಟ್ಸ್ ಪ್ರದರ್ಶನಕ್ಕೆ ಚಾಲನೆ। ರಾಜ್ಯಪಾಲ ಥಾವರ ಚಂದ್ ಗೆಹಲೋತ್

ವೈವಿಧ್ಯವುಳ್ಳ ಭಾರತದ ದೊಡ್ಡ ಶಕ್ತಿ

ಬೆಂಗಳೂರು: ನಮ್ಮ ದೇಶದ ಪ್ರತಿಯೊಂದು ಪ್ರದೇಶವು ತನ್ನದೇ ಆದ ವಿಶಿಷ್ಟ ಕಲೆ, ಕಸೂತಿ, ಮಣ್ಣು, ಸಾಂಸ್ಕೃತಿಕ ಗುರುತನ್ನು ಹೊಂದಿದ್ದು, ಈ ವೈವಿಧ್ಯತೆಯು ಭಾರತದ ದೊಡ್ಡ ಶಕ್ತಿಯಾಗಿದೆ ಎಂದು ರಾಜ್ಯಪಾಲ ಥಾವರ ಚಂದ್ ಗೆಹಲೋತ್ ತಿಳಿಸಿದರು.

ಗ್ರಾಮಶ್ರೀ ಟ್ರಸ್ಟ್ ವತಿಯಿಂದ ಕ್ರಾಫ್ಟ್ ರೂಟ್ಸ್ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಜಗತ್ತು ಆಧುನಿಕತೆ ಮತ್ತು ಯಂತ್ರಗಳ ಕಡೆಗೆ ವೇಗವಾಗಿ ಚಲಿಸುತ್ತಿರುವಾಗ, ನಮ್ಮ ಸಾಂಪ್ರದಾಯಿಕ ಕರಕುಶಲ ವಸ್ತುಗಳನ್ನು ಸಂರಕ್ಷಿಸುವುದು ಅತ್ಯಂತ ಮುಖ್ಯವಾಗಿದೆ. ನಮ್ಮ ಕುಶಲಕರ್ಮಿಗಳು ತಮ್ಮ ಸಂಸ್ಕೃತಿ, ಭಾವನೆಗಳು ಮತ್ತು ತಲೆಮಾರುಗಳ ನೆನಪುಗಳನ್ನು ತಮ್ಮ ಸೃಷ್ಟಿಗಳಲ್ಲಿ ತುಂಬುತ್ತಾರೆ. ಕೈಯಿಂದ ತಯಾರಿಸಿದ ಸರಕುಗಳು ಮತ್ತು ಉತ್ಪನ್ನಗಳು ಭಾರತದ ಆತ್ಮವನ್ನು ಸಂಕೇತಿಸುತ್ತವೆ ಎಂದು ಹೇಳಿದರು.

ಕ್ರಾಫ್ಟ್ರೂಟ್ಸ್‌ನಂತಹ ಪ್ರದರ್ಶನಗಳು ನಮ್ಮ ಕುಶಲ ಕರ್ಮಿಗಳಿಗೆ ತಮ್ಮ ಕಲೆಯನ್ನು ಪ್ರದರ್ಶಿಸಲು, ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಮತ್ತು ಸ್ವಾವಲಂಬನೆಯತ್ತ ಸಾಗಲು ವಿಶ್ವ ದರ್ಜೆಯ ವೇದಿಕೆಯನ್ನು ಒದಗಿಸುತ್ತಿವೆ. ಗುಜರಾತ್‌ನ ಮೊದಲ ಮಹಿಳಾ ಮುಖ್ಯಮಂತ್ರಿ ಆನಂದಿಬೆನ್ ಪಟೇಲ್ ಮತ್ತು ಪ್ರಮುಖ ಸಾಮಾಜಿಕ ಉದ್ಯಮಿ ಅನರಬೆನ್ ಪಟೇಲ್ ಅವರು, 1994ರಲ್ಲಿ ಗ್ರಾಮಶ್ರೀ ಟ್ರಸ್ಟ್ ಅನ್ನು ಸ್ಥಾಪಿಸಿದ್ದಾರೆ ಎಂದರು.



ಗುಜರಾತ್‌ನ ಗ್ರಾಮೀಣ ಮತ್ತು ನಗರ ಕೊಳೆಗೇರಿಗಳಲ್ಲಿ ವಾಸಿಸುವ ಅಂಚಿನಲ್ಲಿರುವ ಮಹಿಳೆಯರನ್ನು ಆದಾಯ-ಉತ್ಪಾದಿಸುವ ಚಟುವಟಿಕೆಗಳ ಮೂಲಕ ಸಬಲೀಕರಣಗೊಳಿಸುವಲ್ಲಿ ಈ ಟ್ರಸ್ಟ್ ತೊಡಗಿಕೊಂಡಿದೆ. ಗ್ರಾಮಶ್ರೀ ಮಹಿಳೆಯರನ್ನು ಸಬಲೀಕರಣ ಗೊಳಿಸುವ ಧ್ಯೇಯವನ್ನು ಹೊಂದಿರುವ ಸಾಮಾಜಿಕ ಉಪಕ್ರಮವಾಗಿದ್ದು, ವೈವಿಧ್ಯಮಯ ಸ್ಥಳಗಳಲ್ಲಿ ಮಹಿಳೆಯರೊಂದಿಗೆ ಸಂಪರ್ಕ ಸಾಧಿಸುವ ಮೂಲಕ, ಗ್ರಾಮಶ್ರೀ ಸ್ಥಳೀಯ ಜೀವನೋಪಾಯದ ಅವಕಾಶಗಳನ್ನು ಸೃಷ್ಟಿ ಸುತ್ತಿದೆ ಮತ್ತು ಸಮುದಾಯಗಳಲ್ಲಿ ಆಧ್ಯಾತ್ಮಿಕ ಅಭಿವೃದ್ಧಿಯನ್ನು ಉತ್ತೇಜಿಸುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಸತೀಶ್ ರೆಡ್ಡಿ, ಕ್ರಾಫ್ಟ್ರೂಟ್ಸ್ ಸಂಸ್ಥಾಪಕಿ ಅನಾರ್ಬೆನ್ ಪಟೇಲ್, ಪ್ರೊ. ಎಸ್.ಸಿ. ಶರ್ಮಾ, ಸಲಹೆಗಾರರು, ಜೈನ್ ವಿಶ್ವವಿದ್ಯಾಲಯ, ಉದ್ಯಮಿ ಮತ್ತು ವಿನ್ಯಾಸಕಿ ಅಪರ್ಣಾ ಸಮಂತ್ ಸೇರಿದಂತೆ ಇತರರಿದ್ದರು.

ಮಳೆ ನಿರ್ವಹಣೆಗೆ ಮುನ್ನೆಚ್ಚರಿಕೆ। ಪಶ್ಚಿಮ ಪಾಲಿಕೆ ಆಯುಕ್ತರ ಪರಿಶೀಲನೆ

ರಾಜ ಕಾಲುವೆ ಒತ್ತುವರಿ ತೆರವುಗೊಳಿಸಿ

ಬೆಂಗಳೂರು: ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ರಾಜಕಾಲುವೆ ಸ್ವಚ್ಛತೆ ಹಾಗೂ ಒತ್ತುವರಿ ತೆರವುಗೊಳಿಸಿ ಎಂದು ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ.ರಾಜೇಂದ್ರ ಕೆ.ವಿ. ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಮಳೆಗಾಲ ಮುನ್ನೆಚ್ಚರಿಕಾ ಕ್ರಮಗಳ ಪರಿಶೀಲನೆ ನಡೆಸಿದ ಅವರು, ಕೆಂಗೇರಿ-ಮೈಸೂರು ರಸ್ತೆಯ ರಾಜಕಾಲುವೆಗಳ ಒತ್ತುವರಿ ತೆರವುಗೊಳಿಸಿ ಮಳೆ ನೀರು ಸರಾಗವಾಗಿ ಹರಿಯುವಂತೆ ಕ್ರಮ ಕೈಗೊಳ್ಳಿ. ಮೈಸೂರು ರಸ್ತೆಯಲ್ಲಿರುವ ಟ್ರೇಡ್ ಲೈಸೆನ್ಸ್ ಇಲ್ಲದ ಅನಧಿಕೃತ ಮಳಿಗೆಗಳನ್ನು ಗುರುತಿಸಿ ದಂಡ ವಿಧಿಸಿ ಮುಚ್ಚುವಂತೆ ಮಾರ್ಷಲ್ ಹಾಗೂ ಆರೋಗ್ಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೆಂಗೇರಿ ಬಸ್ ನಿಲ್ದಾಣ ಹತ್ತಿರದ ಸ್ಕೈ-ವಾಕ್‌ನ್ನು ಅಗತ್ಯ ಮಾರ್ಪಡಿಸುವಿಕೆಗೆ ಕ್ರಮವಹಿಸಿ. ರಾಜರಾಜೇಶ್ವರಿ ನಗರ ವ್ಯಾಪ್ತಿಯಲ್ಲಿ ರಾಜಕಾಲುವೆಗಳ ಸ್ವಚ್ಛತಾ ಕಾರ್ಯಗಳನ್ನು ತುರ್ತಾಗಿ ಕೈಗೊಂಡು ಡ್ರೇನೇಜ್ ವ್ಯವಸ್ಥೆ ಸುಧಾರಣೆಗೊಳಿಸಿ. ರಾಜಕಾಲುವೆಗಳಲ್ಲಿ ಮರದ ಕೊಂಬೆ ಹಾಗೂ ತ್ಯಾಜ್ಯ ಸಂಗ್ರಹವಾಗದಂತೆ ನೋಡಿ ಕೊಳ್ಳಬೇಕು ಹಾಗೂ ಅನಧಿಕೃತ ಕಟ್ಟಡಗಳಿಗೆ ನೋಟಿಸ್ ನೀಡಿ ಕಾನೂನು ಕ್ರಮ ಕೈಗೊಳ್ಳಲು ತಿಳಿಸಿದರು.



ನಾಯಂಡಹಳ್ಳಿ ಜಂಕ್ಷನ್ ಹಾಗೂ ಗಾಳಿ ಆಂಜನೇಯ ದೇವಸ್ಥಾನ ಸಮೀಪದ ರಾಜಕಾಲುವೆಗಳಲ್ಲಿ ಮಳೆ ನೀರು ಸರಾಗವಾಗಿ ಹರಿಯುವಂತೆ ಸ್ವಚ್ಛತೆ ಮತ್ತು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಿ. ಮಳೆಗಾಲದ ಅವಧಿಯಲ್ಲಿ ಯಾವುದೇ ಲೋಪ ಉಂಟಾಗದಂತೆ ವಿಭಾಗ ಮಟ್ಟದಲ್ಲಿ ಎಲ್ಲಾ ಅಭಿಯಂತರರು ಸಮರ್ಪಕ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದರು.

ಪಾಲಿಕೆ ವ್ಯಾಪ್ತಿಯಲ್ಲಿರುವ ನೀರು ನಿಲ್ಲುವ ಸ್ಥಳಗಳನ್ನು ಮುಂಚಿತವಾಗಿ ಗುರುತಿಸಿ ತಕ್ಷಣ ಪರಿಹಾರ ಕ್ರಮಗಳನ್ನು ಕೈಗೊಳ್ಳಿ, ರಾಜಕಾಲುವೆ ಹಾಗೂ ಶೋಲ್ಡರ್ ಡ್ರೇನೇಜ್‌ಗಳ ಸ್ವಚ್ಛತಾ ಕಾರ್ಯಗಳನ್ನು ತುರ್ತಾಗಿ ಕೈಗೊಳ್ಳಬೇಕು ಮತ್ತು ಡೆಬ್ರಿಸ್ ತೆರವುಗೊಳಿಸುವ ಕಾರ್ಯವನ್ನು ಸಮಗ್ರವಾಗಿ ನಡೆಸಲು ನಿರ್ದೇಶನ ನೀಡಿದರು. ಕೆಂಗೇರಿ, ಮೈಸೂರು ರಸ್ತೆ, ರಾಜರಾಜೇಶ್ವರಿ ನಗರ, ಹೊಸಕೆರೆಹಳ್ಳಿ, ನಾಯಂಡಹಳ್ಳಿ ಜಂಕ್ಷನ್, ಗಾಳಿ ಆಂಜನೇಯ ದೇವಸ್ಥಾನ, ವಿಜಯನಗರ ಹಾಗೂ ಗೋವಿಂದರಾಜನಗರ ಪ್ರದೇಶಗಳಲ್ಲಿ ರಾಜಕಾಲುವೆಗಳು ಹಾಗೂ ವಿವಿಧ ರಸ್ತೆ ಕಾಮಗಾರಿಗಳನ್ನು ಪರಿಶೀಲಿಸಲಾಯಿತು.

ಅಂಗನವಾಡಿ ಸಿಬ್ಬಂದಿ ಕಾರ್ಯಕ್ಕೆ ಶಾಸಕಿ ನಯನಾ ಮೋಟಮ್ಮ ಪ್ರಶಂಸೆ

ಸಮಾಜಮುಖಿ ಕಾರ್ಯದಲ್ಲಿ ತೊಡಗಿಕೊಳ್ಳಿ

ಚಿಕ್ಕಮಗಳೂರು: ಸರ್ಕಾರಗಳ ಬಹುತೇಕ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಜನ ಸಾಮಾನ್ಯರ ತಲುಪಿಸುವ ಕಾರ್ಯ ಅಂಗನವಾಡಿ ಸಿಬ್ಬಂದಿಗಳು ಮಾಡುತ್ತಿದ್ದಾರೆ. ಈ ಸಮಾಜಮುಖಿ ಕಾರ್ಯಕ್ಕೆ ಎಂದಿಗೂ ಬೆಲೆಕಟ್ಟಲು ಸಾಧ್ಯವಿಲ್ಲ ಎಂದು ಮೂಡಿಗೆರೆ ಶಾಸಕಿ ನಯನ ಮೋಟಮ್ಮ ಹೇಳಿದರು.

ನಗರದ ಕುವೆಂಪು ಕಲಾಮಂದಿರದಲ್ಲಿ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಫೆಡರೇಷನ್ ವತಿಯಿಂದ ಆಯೋಜಿಸಿದ್ದ ನಿವೃತ್ತ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಬೀಳ್ಕೊಡಿಗೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶೃಂಗೇರಿ ಶಾಸಕ ಟಿ.ಡಿ.ರಾಜೇಗೌಡ ಮಾತನಾಡಿ ತಾಯಿ-ಮಕ್ಕಳ ಆರೋಗ್ಯ, ಬಾಣಂತಿ ಮಹಿಳೆಯರಿಗೆ ಪೌಷ್ಟಿಕ ಆಹಾರ ವಿತರಣೆ, ಹಿಂದುಳಿದ ವರ್ಗ-ಆರೋಗ್ಯ ಸಮೀಕ್ಷೆ, ಚುನಾವಣೆ ಮತದಾನದಲ್ಲಿ ಕೆಲಸ ಸೇರಿದಂತೆ ಶಕ್ತಿಮೀರಿ ಅಂಗನವಾಡಿ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿರುವುದು ಶ್ಲಾಘನೀಯ ಎಂದರು.

ಜಿಪಂ ಸಿಇಒ ಎಚ್.ಎಸ್.ಕೀರ್ತನಾ ಮಾತನಾಡಿ ಕುಟುಂಬದಲ್ಲಿ ಒಂದು ಮಗು ಸುಧಾರಿಸುವುದು ಬಹಳ ಕಷ್ಟವಿದೆಎಂದು ತಿಳಿಸಿದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಹೆಚ್.ಡಿ.ತಮ್ಮಯ್ಯ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಗೌರವಧನದಡಿ ಪ್ರಾಮಾಣಿಕ ದುಡಿಯುತ್ತಿದ್ದಾರೆ. ಮಹಿಳೆಯರು ಸಮಾಜದಲ್ಲಿ ಪುರುಷ ಸರಿಸಮಾನಾಗಿದ್ದು, ಅವರಿಗೆ ಮೂಲಸೌಕರ್ಯ ಕಲ್ಪಿಸಲು ರಾಜ್ಯಸರ್ಕಾರ ಗ್ಯಾರಂಟಿ ಯೋಜನೆ ಜಾರಿಗೊಳಿಸಿ ಹೆಚ್ಚು ಆದ್ಯತೆ ಮಹಿಳೆಯರಿಗೆ ನೀಡಲಾಗಿದೆ ಎಂದರು.

ಇದೇ ವೇಳೆ ಸುಮಾರು 29 ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರು ನಿವೃತ್ತಿಗೊಂಡ ಹಿನ್ನೆಲೆ ಅಭಿನಂದಿಸುವ ಮೂಲಕ ಬೀಳ್ಕೊಡಲಾಯಿತು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಡಿ.ಸಂತೋಷ್, ತಹಶೀಲ್ದಾರ್ ಕೆ.ಎಸ್.ರೇಷ್ಮಾ, ಎ.ಐ.ಟಿ.ಯು.ಸಿ. ಜಿಲ್ಲಾ ಧ್ಯಕ್ಷೆ ಗ್ರೇಟಾ ಫರ್ನಾಂಡೀಸ್, ಪ್ರಧಾನ ಕಾರ್ಯದರ್ಶಿ ಪುಷ್ಪಾ ಬಸವರಾಜ್, ಶಿಶು ಅಭಿವೃದ್ಧಿ ಯೋಜ ನಾಧಿಕಾರಿ ಸಿ.ರಂಗನಾಥ್, ತಾ.ಪಂ. ಇಒ ವಿಜಯ್‌ಕುಮಾರ್ ಇತರರು ಇದ್ದರು.

ಚಿಕ್ಕಸಂದ್ರದಲ್ಲಿ ಶ್ರೀರಾಮನವಮಿ ಕಾರ್ಯಕ್ರಮ: ಶಾಸಕ ಸಲಹೆ

ರಾಮನ ಆದರ್ಶ ಪಾಲಿಸಿ



• **ಪೀಣ್ಯ ದಾಸರಹಳ್ಳಿ:** ಶ್ರೀರಾಮಚಂದ್ರ ಹಿಂದೂಗಳಿಗೆ ಆದರ್ಶ ಪುರುಷ. ಕೇವಲ ರಾಮನವಮಿ ದಿನ ರಾಮನನ್ನು ಪೂಜೆ ಮಾಡಿ ನಾವೆಲ್ಲರೂ ಮಜ್ಜಿಗೆ, ಪಾನಕ ಜತೆ ಪ್ರಸಾದ ಸೇವನೆ ಮಾಡಿ ಧನ್ಯರಾದರೆಂದು ಭಾವಿಸದೆ ಪ್ರತಿ ಮನೆಯಲ್ಲಿ ನಿತ್ಯ ಪೂಜೆ ಮಾಡಿ ರಾಮನ ಆದರ್ಶ ಗುಣವನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ ಎಂದು ದಾಸರಹಳ್ಳಿ ಶಾಸಕ ಎಸ್.ಮುನಿರಾಜು ಕರೆ ಕೊಟ್ಟರು.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಹೆಸರುಘಟ್ಟ ರಸ್ತೆಯ ಚಿಕ್ಕಸಂದ್ರದಲ್ಲಿ ಬಿಜೆಪಿ ಯುವ ಮುಖಂಡ ಮೋಹನ್ ಕುಮಾರ್ ಆಯೋಜನೆ ಮಾಡಿದ್ದ ಶ್ರೀರಾಮನವಮಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಿಂದೂ ಯುವಕರು ಇಂತಹ ಕಾರ್ಯಕ್ರಮಗಳನ್ನು ಗಲ್ಲಿ ಗಲ್ಲಿಗಳಲ್ಲಿ ಆಚರಣೆ ಮಾಡುವುದರ ಮೂಲಕ ನಮ್ಮ ಧರ್ಮ, ಸಂಸ್ಕೃತಿಗೆ ಉತ್ತೇಜನ ಕೊಟ್ಟು ನಮ್ಮ ಪರಂಪರೆ ಉಳಿಸಿ ಬೆಳೆಸುವ ಕೆಲಸ ಮಾಡುವುದರಿಂದ ಅವರೂ ಸಹ ನಮ್ಮ ಸಮಾಜಕ್ಕೆ ಆದರ್ಶರಾಗಿರುತ್ತಾರೆ ಎಂದು ಹೇಳಿದರು. ಬಿಜೆಪಿ ಯುವ ಮುಖಂಡ ಮೋಹನ್ ಕುಮಾರ್ ಮಾತನಾಡಿ, ನಾನು ಬಹಳ ವರ್ಷಗಳಿಂದ ನಮ್ಮ ಪ್ರದೇಶದಲ್ಲಿ ಹಿಂದೂ ವಿಚಾರ ಧಾರೆಯ ಕಾರ್ಯಕ್ರಮಗಳನ್ನು ಯಾರೇ ಮಾಡಿದರೂ ಸಹಾಯ ಸಹಕಾರ ಕೊಡುತ್ತಲೇ ಬಂದಿದ್ದೇನೆ ನನಗೆ ಈ ಸೇವೆಯಲ್ಲಿ ತೃಪ್ತಿ ಇದೆ ಎಂದು ತಿಳಿಸಿದರು. ಪೂಜಾ ಕಾರ್ಯಕ್ರಮದಲ್ಲಿ ಪ್ರಸಾದ, ಮಜ್ಜಿಗೆ ಪಾನಕ ವಿತರಿಸಲಾಯಿತು. ಈ ಸಂದರ್ಭದಲ್ಲಿ ಮೋಹನ್ ಕುಮಾರ್ ಕುಟುಂಬದವರು ಮತ್ತು ಗೋವಿಂದರಾಜ್, ಹನುಮಂತರಾಯಪ್ಪ, ನಿಶ್ಚಲ್ ಕುಮಾರ್, ಕಂಬರಾಜಣ್ಣ, ವಿನೋದ್ ಗೌಡ, ದಯಾನಂದ, ಮಂಜುನಾಥ್ ಮೂಳೆ, ರವಿ ವಾಜಪೇಯಿ ಹಾಗೂ ಮಹಿಳೆಯರು ಉಪಸ್ಥಿತರಿದ್ದರು.

ಶರಾವತಿ ಯೋಜನೆಗೆ ವಿರೋಧಿಸಿ ಪ್ರತಿಭಟನೆ



• **ಶಿವಮೊಗ್ಗ :** ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯನ್ನು ವಿರೋಧಿಸಿ ಏ.16ರಂದು ಬೆಳಗ್ಗೆ 10.30ಕ್ಕೆ ನಗರದಲ್ಲಿ ವಿವಿಧ ಸಂಘಟನೆಗಳಿಂದ ಬೃಹತ್ ಸೈಕಲ್, ಕಾರ್, ಬೈಕ್ ಸೇರಿದಂತೆ ದ್ವಿಚಕ್ರ ವಾಹನಗಳ ರ‍್ಯಾಲಿ ನಡೆಯಲಿದೆ ಎಂದು ಸಾಹಸ ಮತ್ತು ಸಂಸ್ಕೃತಿ ಅಕಾಡೆಮಿ ಪ್ರಮುಖರಾದ ಅ.ನಾ. ವಿಜಯೇಂದ್ರರಾವ್ ತಿಳಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರಭಕ್ತರ ಬಳಗ, ಶಿವಮೊಗ್ಗ ಸೈಕಲ್ ಕ್ಲಬ್, ಸಾಹಸ ಮತ್ತು ಸಂಸ್ಕೃತಿ ಅಕಾಡೆಮಿ, ಮಲೆನಾಡು ಇತಿಹಾಸ ಸಂಶೋಧನೆ ಮತ್ತು ಅಧ್ಯಯನ ವೇದಿಕೆ, ವೈ.ಹೆಚ್.ಎ.ಐ. ತರುಣೋದಯ ಘಟಕದ ಸಂಯುಕ್ತಾಶ್ರಯದಲ್ಲಿ ಈ ಬೃಹತ್ ರ‍್ಯಾಲಿ ನಡೆಯಲಿದೆ ಎಂದರು. ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಯಿಂದ ಪರಿಸರಕ್ಕೆ, ಜೀವ ಸಂಕುಲಕ್ಕೆ ಆರ್ಥಿಕ ವಾಗಿ, ಸಾಂಸ್ಕೃತಿಕವಾಗಿ, ಐತಿಹಾಸಿಕವಾಗಿ, ಪಶ್ಚಿಮ ಘಟ್ಟಗಳಿಗೆ ಆಗುತ್ತಿರುವ ಹಾನಿಯನ್ನು ಮನಗೊಂಡು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಈ ಯೋಜನೆಯನ್ನು ಕೂಡಲೇ ರದ್ದುಗೊಳಿಸಬೇಕೆಂದು ಆಗ್ರಹಿಸಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಸಲುವಾಗಿ ಈ ಜಾಥಾ ನಡೆಸಲಾಗುತ್ತದೆ ಎಂದರು. ಡಾ.ಶೇಖರ್ ಗೌಳೇರ್ ಮಾತನಾಡಿ, ಈ ಯೋಜನೆಯು ಸಿಂಗಳೀಕ ಸಂತತಿಯ ನಾಶಕ್ಕೆ ಕಾರಣವಾಗುತ್ತದೆ. 10,700 ಕೋಟಿ ರೂ. ಈ ಯೋಜನೆಯಿಂದ ರಾಜ್ಯ ಸರ್ಕಾರಕ್ಕೆ ಯಾವುದೇ ಆರ್ಥಿಕ ಲಾಭ ಇರುವುದಿಲ್ಲ, ವಿವಿಧ ಜಾತಿಯ 16 ಸಾವಿರ ಮೌಲ್ಯಯುತ ಮರಗಳ ಹನನವಾಗಲಿದೆ ಎಂದರು. ಇದರಿಂದ 11,900 ಕೋಟಿ ರೂ. ನಷ್ಟವಾಗಲಿದೆ. 18 ಸಾವಿರ ಟನ್ ಅಪಾಯಕಾರಿ ಸ್ಫೋಟಕ ಬಳಕೆಯಿಂದ ಮುಂದಿನ ದಿನಗಳಲ್ಲಿ ಈ ಯೋಜನಾ ಪ್ರದೇಶದಲ್ಲಿ ಭೂಕಂಪ ಹಾಗೂ ಭೂಕುಸಿತ ಆಗುವ ಸಾಧ್ಯತೆ ಇದೆ ಎಂದು ಐಎಫ್ಎಸ್ ಅಧಿಕಾರಿ ಪ್ರಣೀತಾ ಕೌಲ್ ಅವರು ಈಗಾಗಲೇ ಕೇಂದ್ರಕ್ಕೆ ವರದಿಯನ್ನು ನೀಡಿದ್ದು, ಕೆಪಿಸಿಎಲ್‌ನವರು ಅದನ್ನು ಕಡೆಗಣಿಸಿ ಈ ಯೋಜನೆ ಮಾಡಲು ಹೊರಟಿದ್ದಾರೆ ಎಂದರು. ಫ್ರೀಡಂಪಾರ್ಕ್‌ನಲ್ಲಿ ಮೆರವಣಿಗೆ ಪ್ರಾರಂಭಕ್ಕೂ ಮುನ್ನ ಈ ಜಾಥಾದ ಉದ್ದೇಶ ಮತ್ತು ಹೋರಾಟದ ಅನಿವಾರ್ಯತೆಯ ಬಗ್ಗೆ ಮಾಹಿತಿ ನೀಡಲಾಗುತ್ತದೆ. ವಿದ್ಯಾರ್ಥಿಗಳು, ಸಾರ್ವಜನಿಕರು, ವಾಹನ ಹೊಂದಿರುವ ಎಲ್ಲರೂ ಈ ಜಾಥಾದಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಡಾ. ಶ್ರೀಪತಿ, ರಾಷ್ಟ್ರಭಕ್ತ ಬಳಗದ ಶ್ರೀಕಾಂತ್, ಪರಿಸರ ರಮೇಶ್, ವಾಗೀಶ್, ದಿಲೀಪ್‌ನಾಡಿಗ್, ಜನಾರ್ಧನ್ ಪೈ, ಚನ್ನವೀರಪ್ಪ ಗಾಮನಗಟ್ಟಿ ಇದ್ದರು.

ಏ.16ರಂದು ವಿವಿಧ ಸಂಘಟನೆಗಳಿಂದ ಬೃಹತ್ ರ‍್ಯಾಲಿ

ನೆಲ್ಲಿಕೊಪ್ಪ ಬಸವೇಶ್ವರ ಸ್ವಾಮಿ ಜಾತ್ರೆ

ಸಮಾಜ ಒಗ್ಗೂಡಿಸುವ ಜಾತ್ರೆ

• **ಸೊರಬ :** ದೇವರು ಸಕಲ ಜೀವರಾಶಿಗಳನ್ನು ಸೃಷ್ಟಿಸಿ ಅವುಗಳಿಗೆ ಬದುಕಲು ಬೇಕಾದ ನೆಲ ಜಲ ಸೇರಿದಂತೆ ಸಕಲ ಸೌಲಭ್ಯಗಳನ್ನು ಒದಗಿಸಿದ್ದಾನೆ. ಆ ಕಾರಣಕ್ಕಾಗಿ ವರ್ಷಕ್ಕೊಂದು ಬಾರಿ ಜಾತ್ರೆ ನೆಪದಲ್ಲಿ ಭಗವಂತನ ಉತ್ಸವ ಮಾಡುವುದೇ ಜಾತ್ರೆ ಎನ್ನಿಸಿಕೊಳ್ಳುತ್ತದೆ. ಭಗವಂತನಿಗೆ ಕೃತಜ್ಞತೆ ಸಲ್ಲಿಸುವ ಒಂದು ವಿಧಾನವೇ ಜಾತ್ರೆ ಎಂದು ಸಮಾಧಾನ ಹಿರೇಮಠ ಜಡೆ ಬಂಕಸಾಣ ಹಾಗೂ ಸೊರಬ ಕಾನುಕೇರಿ ಮಠದ ಘನಬಸವ ಶ್ರೀ ಅಮರೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು. ತಾಲೂಕಿನ ನೆಲ್ಲಿಕೊಪ್ಪ ಗ್ರಾಮದೇವರಾದ ಬಸವೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವದಲ್ಲಿ ಮೂಡಿ ವಿರಕ್ತಮಠದ ಸದಾಶಿವ ಸ್ವಾಮಿಗಳ ನೇತೃತ್ವದಲ್ಲಿ ನಡೆದ ರಥೋತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿ, ಭಾರತೀಯ ಸಂಸ್ಕೃತಿಯಲ್ಲಿ ಜಾತ್ರೆಗಳು ದೇವರ ಸ್ಮರಣೆ ಮಾಡುವ ಪರ್ವ ಸಮಯವಾಗಿವೆ. ದೇವರಿಗೆ ಭಕ್ತಿ ಸಲ್ಲಿಸುವ ಸಮಯವಾಗಿವೆ. ಊರಿನ ಎಲ್ಲಾ ಜಾತಿ ಮತ ಪಂಥದವರು ಸೇರಿ ವೈಷಮ್ಯ ಮರೆತು ಒಂದಾಗಿ ಮಾಡುವ ಉತ್ಸವವಾಗಿದೆ. ವರ್ಷವಿಡೀ ನಾವು ಮಾಡಿರುವ ತಪ್ಪನ್ನು ಮನ್ನಿಸಿ ದೇವರ ಸೇವೆಯಲ್ಲಿ ಭಾಗವಹಿಸಿ ಕ್ಷಮೆ ಬೇಡುವ ಸಮಯವಾಗಿದೆ. ಗ್ರಾಮದಲ್ಲಿ ಎಲ್ಲರೂ ಒಂದಾಗಿ ಚೆಂದಾಗಿ ಬದುಕು ಕಟ್ಟಿಕೊಳ್ಳಲು ಜಾತ್ರೆಗಳು ಅವಕಾಶ ನೀಡುತ್ತವೆ. ನಮ್ಮ ದುರ್ಗುಣಗಳನ್ನು ಮರೆತು ಗ್ರಾಮದ ಹಿತ ದೃಷ್ಟಿಯಿಂದ ಒಂದಾಗಲು ಜಾತ್ರೆಗಳು ಸಹಕಾರಿಯಾಗಿವೆ. ಆ ನಿಟ್ಟಿನಲ್ಲಿ ನೆಲ್ಲಿಕೊಪ್ಪದ ಗ್ರಾಮಸ್ಥರು ಅತ್ಯಂತ ಭಕ್ತಿಯಿಂದ ಪ್ರತಿ ವರ್ಷವೂ ರೈತ ದೇವರಾದ ಬಸವಣ್ಣನ ಜಾತ್ರೆಯನ್ನು ತಪ್ಪದೆ ಮಾಡುತ್ತಿರುವುದು ಅತ್ಯಂತ ಸಂತಸದಾಯಕ. ಗ್ರಾಮದಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಇದ್ದು ಗ್ರಾಮದಲ್ಲಿ ಮಳೆ ಬೆಳೆ ಚೆನ್ನಾಗಿ ಆಗಲಿ ಎಂದು ಹಾರೈಸಿದರು.

ಸಾನಿಧ್ಯ ವಹಿಸಿ ಮಾತನಾಡಿದ ಮೂಡಿ ಹಾಗೂ ತುರುಬಿಗುಡ್ಡ ವಿರಕ್ತ ಮಠದ ಸದಾಶಿವ ಮಹಾಸ್ವಾಮಿಗಳು, ಬದುಕಿನಲ್ಲಿ ನಾವು ಎಲ್ಲವನ್ನು ಸಮವಾಗಿ ಸ್ವೀಕರಿಸಬೇಕು. ಆಗಿದ್ದೆಲ್ಲವೂ ಒಳ್ಳೆಯದೇ ಆಗುವುದೆಲ್ಲವೂ ಒಳ್ಳೆಯದೇ, ಆಗುತ್ತಿರುವುದೆಲ್ಲವೂ ಒಳ್ಳೆಯದೇ ಎಂಬ ಮಾತನ್ನು ನೆನಪಿನಲ್ಲಿಟ್ಟುಕೊಂಡು ಜೀವನ ನಡೆಸಬೇಕು. ಜಾತ್ರೆಗಳು ಗ್ರಾಮದಲ್ಲಿ ಸುಖ ಶಾಂತಿ ನೀಡುತ್ತವೆ. ಭಗವಂತನಿಗೆ ನಾವು ದರ್ಶನ ಮಾಡಲು ವರ್ಷ ಪೂರ್ತಿ ದೇವಾಲಯಕ್ಕೆ ಬರುತ್ತೇವೆ. ಆದರೆ ಇಂದು ರಥದ ಮೇಲೆ ಆಸೀನನಾದ ಭಗವಂತ ನಿಮ್ಮೆಲ್ಲರ ಮನೆಯ ಮುಂದೆಯೇ ಬರುತ್ತಾನೆ. ಇದು ನಮ್ಮ ಸಂಸ್ಕೃತಿಯ ವೈಶಿಷ್ಟ್ಯವಾಗಿದೆ. ಗ್ರಾಮದಲ್ಲಿ ಶಾಂತಿ ನೆಮ್ಮದಿ ನೆಲೆಸಲಿ ಎಂದು ಹರಸಿದರು.

ಚಿಕ್ಕಬಾಣಾವರ ಪೊಲೀಸ್ ಠಾಣೆಗೆ ಗೃಹಸಚಿವರಿಂದ ಗುದ್ದಲಿ ಪೂಜೆ

ಪೊಲೀಸ್ ಇಲಾಖೆಗೆ ಮೂಲ ಸೌಲಭ್ಯ



• **ಪೀಣ್ಯ ದಾಸರಹಳ್ಳಿ:** ಕರ್ನಾಟಕ ಸರ್ಕಾರದಲ್ಲಿ ಮೂರು ಬಾರಿ ಗೃಹ ಸಚಿವನಾಗಿರುವುದು ನನಗೆ ಹೆಮ್ಮೆ ಇದೆ. ಗೃಹ ಇಲಾಖೆ ಸೂಕ್ಷ್ಮವಾದ ಇಲಾಖೆ, ಕಳೆದ ಮೂರು ವರ್ಷದಲ್ಲಿ ಅನೇಕ ಪೊಲೀಸ್ ಕಟ್ಟಡವನ್ನು ಕಟ್ಟಿಸಿದ್ದೇವೆ, ಪೊಲೀಸ್ ಗೃಹ ಯೋಜನೆಯಲ್ಲಿ ಪೊಲೀಸರಿಗೆ ಮನೆ ಕಟ್ಟಿಸಿ ಕೊಡುತ್ತಿದ್ದೇವೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ತಿಳಿಸಿದರು.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಚಿಕ್ಕಬಾಣಾವರದ ಆಚಾರ್ಯ ಕಾಲೇಜು ರಸ್ತೆಯಲ್ಲಿ ಕರ್ನಾಟಕ ಪೊಲೀಸ್ ವಸತಿ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ಹಾಗೂ ಬೆಂಗಳೂರು ನಗರ ಪೊಲೀಸ್ ಸಹಯೋಗದಲ್ಲಿ 8.60 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಚಿಕ್ಕಬಾಣಾವರ ಪೊಲೀಸ್ ಠಾಣೆ, ಚಿಕ್ಕಬಾಣಾವರ ಸಂಚಾರ ಪೊಲೀಸ್ ಠಾಣೆ ಮತ್ತು ಎಸಿಪಿ ಉಪ ವಿಭಾಗಗಳ ನೂತನ ಕಟ್ಟಡ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿ, ದೊಡ್ಡವರಾದ ಮೇಲೆ ಹುಟ್ಟಿ ಬೆಳೆದ ಊರನ್ನೇ ಮರೆತು ಬಿಡುತ್ತೇವೆ, ಅಂತಹದರಲ್ಲಿ ಪೊಲೀಸ್ ಮಹಾ ನಿರ್ದೇಶಕ ಸಲೀಂ ಅವರು ಈಗ ತಮ್ಮ ಊರಿಗೆ (ಚಿಕ್ಕಬಾಣಾವರ) ಪೊಲೀಸ್ ಠಾಣೆಗಳನ್ನು ಮಾಡುವ ಮೂಲಕ ಶಾಶ್ವತ ಕೆಲಸ ಮಾಡಿದ್ದಾರೆ. ಅವರ ನಿವೃತ್ತಿ ಅವಧಿ ಮುಗಿಯುವುದರೊಳಗೆ ಈ ಕಟ್ಟಡದ ಕೆಲಸ ಮುಗಿಸಿ ಅವರಿರುವಾಗಲೇ ಕಟ್ಟಡದ ಉದ್ಘಾಟನೆ ಆಗಲಿ ಎಂದರು.

ಈ ಭಾಗದಲ್ಲಿರುವ ಪೊಲೀಸ್ ಠಾಣೆಗಳಲ್ಲಿ ಸಿಬ್ಬಂದಿ ಕೊರತೆ ಜಾಸ್ತಿಯಿದೆ. ಅದೇ ರೀತಿ ಜನ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಲೆ ಇದೆ. ಆದ್ದರಿಂದ ಅಧಿಕಾರಿ ಹಾಗೂ ಸಿಬ್ಬಂದಿಯನ್ನು ಹೆಚ್ಚಿಸಿ ಕೊಡುವಂತೆ ದಾಸರಹಳ್ಳಿ ಶಾಸಕ ಎಸ್. ಮುನಿರಾಜು ಗೃಹ ಸಚಿವರಿಗೆ ಇದೇ ಸಂದರ್ಭದಲ್ಲಿ ಮನವಿ ಮಾಡಿದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ. ಸಲೀಂ, ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ ಕುಮಾರ್ ಸಿಂಗ್, ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್, ಕರ್ನಾಟಕ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮದ ಡಿಜಿಪಿ ಅರುಣ್ ಚಕ್ರವರ್ತಿ, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ನಿಕಟ ಪೂರ್ವ ಅಧ್ಯಕ್ಷ ಜಿ.ಮರಿಸ್ವಾಮಿ, ಮಾಜಿ ಕಾರ್ಪೊರೇಟರ್ ಕೆ ನಾಗಭೂಷಣ್, ಜಂಟಿ ಕಮೀಷನರ್ ವಂಶಿಕೃಷ್ಣ ಮುಂತಾದವರಿದ್ದರು.

ಏ.14ಕ್ಕೆ ಪಿ.ಲಂಕೇಶ್ ಪ್ರಶಸ್ತಿ ಪ್ರದಾನ

• **ಶಿವಮೊಗ್ಗ :** ಪ್ರೆಸ್‌ಟ್ರಸ್ಟ್ ವತಿಯಿಂದ ಏ.14ರ ಬೆಳಗ್ಗೆ 10.30ಕ್ಕೆ ಆರ್‌ಟಿಓ ರಸ್ತೆಯಲ್ಲಿರುವ ಸರ್ಕಾರಿ ನೌಕರರ ಭವನದಲ್ಲಿ 2026ನೇ ಸಾಲಿನ ಪಿ. ಲಂಕೇಶ್ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದ್ದು, ಈ ಬಾರಿಯ ಪ್ರಶಸ್ತಿಯನ್ನು ಹಿರಿಯ ಪತ್ರಕರ್ತ ಡಿ. ಮಹಾದೇವಪ್ಪ ನೀಡಲಾಗುವುದೆಂದು ಪ್ರೆಸ್ ಟ್ರಸ್ಟ್ ಅಧ್ಯಕ್ಷ ಎನ್.ಮಂಜುನಾಥ್ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ರಾಜ್ಯ ಮಾಹಿತಿ ಹಕ್ಕು ಆಯೋಗದ ಆಯುಕ್ತ ಬಿ. ವೆಂಕಟಸಿಂಗ್ ಉದ್ಘಾಟನೆ, ಸಂಸ್ಕೃತಿ ಚಿಂತಕ ಡಾ.ರಾಜೇಂದ್ರಚೆನ್ನಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ವೈದ್ಯನಾಥ್ ಯು.ಹೆಚ್. ಉಪಸ್ಥಿತರಿರುತ್ತಾರೆ ಎಂದರು. ಡಿ.ಮಹಾದೇವಪ್ಪ ಅವರು ಮೈಸೂರಿನ ಕೃಷ್ಣರಾಜ ನಗರ ತಾಲೂಕಿನ ಸೌತನಹಳ್ಳಿಯಲ್ಲಿ ಡಿ. ಪಟೇಲ್ ದೇವಪ್ಪ ಮತ್ತು ಡಿ. ಶಿವಲಿಂಗಮ್ಮನವರ ಪುತ್ರರಾಗಿ ಜನಿಸಿದ್ದಾರೆ. 1973ರಲ್ಲಿ ಮೈಸೂರು ವಿವಿಯಿಂದ ಪತ್ರಿಕೋದ್ಯಮದಲ್ಲಿ ಎಂಎ ಪದವಿ ಪಡೆದಿದ್ದಾರೆ. ಲೋಕವಾಣಿ, ವಿಶಾಲ ಕರ್ನಾಟಕ ಪತ್ರಿಕೆಗಳಲ್ಲಿ ವರದಿಗಾರರಾಗಿ, ಕನ್ನಡಪ್ರಭ, ವಿಜಯ ಕರ್ನಾಟಕದ ಸಂಪಾದಕರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ.

ಶ್ರೀರಂಗಪಟ್ಟಣದ ಪ್ರಧಾನ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ,
ಪಿ.ಮಿಸ್ 6/2026.

[illegible]

ದಿನಾಂಕ : 10.04.2026 ...

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಶ್ರೀರಂಗಪಟ್ಟಣದ ನ್ಯಾಯಾಧೀಶರ ನ್ಯಾಯಾಲಯದಲ್ಲಿ,
... ಮಂಡ್ಯ ಜಿಲ್ಲೆ,
ಶ್ರೀರಂಗಪಟ್ಟಣ ಪಿನ್-571438, ಮೊ : 9902048245.

ಶ್ರೀರಂಗಪಟ್ಟಣದ ಪ್ರಧಾನ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ,
ಪಿ.ಮಿಸ್ 7/2026.

[illegible]

ದಿನಾಂಕ : 10.04.2026 ...

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಶ್ರೀರಂಗಪಟ್ಟಣದ ನ್ಯಾಯಾಧೀಶರ ನ್ಯಾಯಾಲಯದಲ್ಲಿ,
... ಮಂಡ್ಯ ಜಿಲ್ಲೆ,
ಶ್ರೀರಂಗಪಟ್ಟಣ ಪಿನ್-571438, ಮೊ : 9902048245.

IN THE COURT OF THE XLI ADDL CITY CIVIL JUDGE AT BANGALORE (CCH No.42) IC No. 13/2013

PETITIONER: P. Raja Reddy S/o Late. Pilla Reddy. Aged about 60 years, Residing at: 1279, 25th B Cross, 24th Main, 2nd Sector, HSR Layout, Bangalore-35. -VS-
Respondents: Venkataswamy Reddy &others.

NOTICE/SUMMONS TO THE RESPONDENTS U/O V RULE 20 OF CPC

1. **VENKATASWAMY REDDY,** Fathers name not known, Aged about 54 years, Banan merchant, Adi Goandana Halli, Attibele Hobli, Anekal Taluk.
2. **VENKATASWAMY REDDY,** Fathers name not known, Aged about 76 years, Land Lard, Benagana Halli, Attibele Hobli, Anekal Taluk.
8. **RAMA KRISHNA,** Audit Department, Aged about 58 years, Canara Bank, Head Office, Opp. Town Hall, Bangalore.
11. **POORNA CHANDRA REDDY,** S/o Yella Reddy. Aged about 51 years, ING Vysya Bank, Bommanahalli, Bangalore.
12. **N.PUTTAPPA,** S/o Late Narayanappa, Aged about 71 years, No.519, 16th Main road, 4th Sector, HSR Layout, Bangalore-560035.

WHEREAS the petitioner has instituted the above suit against respondents, for declare the petitioner as Insolvent and other reliefs. You nos. 7, & 10 are hereby summoned to appear before the Hon'ble CCH 42, City Civil Court Complex, Bangalore -09, in person or by pleader on **29th day of April 2026, at 11' O Clock,** to answer the same, failing which the petition will be disposed of ex-parte.

Given under my hand and seal of this the **27th day of March 2026.**

By order of the court , Asst Registrar City Civil Court, Bangalore
P. Reddy Nagendra Kumar, Advocate
#645,13A, B M Road, V.V.Puram, Basavanagudi, Bangalore -04

AFFIDAVIT

I, **MOHAMMED FIZZAH TASNEEM** C/o Mohammed Gayaz Ahmed aged about 21 years, Residing at: Villa No. 152/3, S J Green Paradise, Kamblipura, Hoskote, Bangalore Rural, Karnataka- 562114. In my Aadhar, Pan & SSLC Marks Card my name has been entered as **MOHAMMED FIZZAH TASNEEM.** But in my Passport my name has been entered as **FIZZAH TASNEEM.** I hereby declare that **MOHAMMED FIZZAH TASNEEM and FIZZAH TASNEEM** are one and the same person only. I hereby declare that affidavit is produced before the concerned department to enter my correct name as **MOHAMMED FIZZAH TASNEEM** in all the respective documents and records. Sworn before Advocate & Notary **R. Jyshree**
Dated : 11/02/2026.

ದಾಖಲಾತಿ ಪತ್ರ ಕಳೆದಿದೆ.

[illegible] ... 21-565-27A ... 235/234/235/3153/2768/40 ... 21-112-27 ... 236/234/3154/2768/41 ... 76/1997-98 ... 67/1988-89 ... ದಿನಾಂಕ: 25-11-2025 ... ದಿನಾಂಕ : 09.04.2026 ... ದಿನಾಂಕ : 09-04-2026 ... [illegible]

BEFORE THE ASSISTANT COMMISSIONER BENGALURU SOUTH SUB-DIVISION AT BENGALURU
R.A (S) NO. 25/2026

BETWEEN: Shivashankar. K ...Appellant
AND: The Tahsildar, Bangalore South Taluk, Bangalore and Anr...**Respondent.**

SUMMONS U/O 5 RULE 20 OF CPC ADDRESS OF THE RESPONDENT NO.2

Sri. Kenchappa, S/o. Late. Chikanna, aged about 70 years, R/at Nettigere Village, Uttarahalli Hobli, Bengaluru South Taluk, Bengaluru- 560 116.

Whereas, the above named Appellant have filed the above Appeal against the Respondents, challenging the MR. No. H58/2018-19 dated: 06.03.2025 in respect of land bearing Sy.No.73/2 to an extent of 0.12 guntas land situated at Nettigere Village, Uttarahalli Hobli, Bengaluru South Taluk, Bengaluru.

Notice is hereby given to you to appear in this court in person or through an advocate duly instructed or through some person able to answer all material question at **03.00 clock** on **22/04/2026.** If you fail to appear on the said day or any subsequent date to which the matter may be posted as directed by the court, without any further notice, the matter will be dealt with heard and decided on merits in your absence.

Issued under my hand and the seal of the court on this 08/04/2026.

By order of the Court, Assistant Commissioner, Bengaluru South Sub Division, Bengaluru.

Advocate for Appellant: **Harish C.S**
Reddy & Reddy Associates
#S-5, No.1, 2nd Floor, Thimmaiah Chambers, 1st Cross, Gandhinagar, Bengaluru-560 009.

IN THE COURT OF CIVIL JUDGE AND JUDICIAL MAGISTRATE FIRST CLASS AT BAGEPALLI
Crl.Mis No. 119/2026

Petitioner : 1. Sri. Shivappa.V S/o Late Venkatarayappa aged about 42 years, **2. Smt. Narayanamma** W/o Late Venkatarayappa aged about 65 years Both are R/at 2nd ward, Valmiki Nagara, Bagepalli Town and Taluk Chikkaballapura -V/s-
Respondent : The Chief officer Registrar of Births and Deaths, Bagepalli Town Municipal office, Bagepalli Taluk Chikkaballapur District.

PUBLIC NOTICE

The petitioners have filed this petition for Death certificate of deceased person Grandfather of 1st petitioner and Father-in-law of 2nd petitioner **LATE CHIKKA VENKATASWAMY S/O VENKATAPPA, was died on 10-03- 1999 in their house at 2nd ward, Valmiki Nagara, Bagepalli Town and Taluk, Chikkaballapur Dist.** in their house. The petition is pending. Any person have any right, or interest may appear before this Hon'ble court on 06.05.26 at 11.00 AM in person or through pleader to file your objections if any. Taken notice that in default of your appearance on the date before mentioned in the petition in will be heard and determine ex-parte.

By order of the court
Sherisedar, Civil Judge and JMFC at Bagepalli
Advocates for the petitioners
Anjinappa P.N, Advocate
Place : Bagepalli, Date : 11/03/2026

IN THE COURT OF THE CIVIL JUDGE AND J.M.F.C AT CHICKBALLAPUR
Crl.Misc No:636/2025

Petitioners : 1. Sri.K.T.Rajanna S/o. Late Timmappa Aged about 65 years, **2. Sri.K.T.Srinivasa** S/o. Late Timmappa Aged about 63 years, **3. Sri.K.T.Nagaraj** S/o. Late Timmappa Aged about 55 years, **4. Sri.K.T.Narayanaswamy** S/o. Late Timmappa, Aged about 53 years, **5. Sri.K.T.Govindappa** S/o. Late Timmappa, Aged about 50 years, 1 to 5 are Residing at Kammaganahalli village, Mandikal Hobli, Chickballapur Taluk and District. **6. Smt. Pramilamma** D/o. Late Thimmappa W/o. Lakshminarasimhappa, Aged about 56 years,R/at. Poolavarapalli village, Paragodu P, Kasaba Hobli, Bagepalli Taluk, Chickballapur District -V/s-
Respondent : The Registrar of Births and Deaths Office of the Tahasildar, Chickballapur.

DRAFT PAPER PUBLICATION

The petitioners have filed this petition for grant of death certificate of petitioner's father **Sri.Thimmappa S/o. Late Dibbanna** was died leaving behind petitioners as his legal heirs at **Kammaganahalli Village, Mandikal Hobli, Chickballapur Taluk.** He died on 03-03-1996.

1. Whom so ever if any person who are related or interest or dispute date of death of **Sri. Thimmappa S/o. Late Dibbanna** may hereby directed to appear in the above said court in person or through pleader duly instructed and to able to answer all material question raising in the on the day of **16.04.2026 at 11 AM** in said court. Take notice that in default of your appearance on the date before mentioned in the petition, it will be heard and determine ex-parte.Given under my hand seal of the court on the day of 9/04/2026

By Order Of The Court
In The Court Of The Civil Judge And J.M.F.C At Chickballapur
Jagadeeshwarachari, Advocate, Chickballapur

IN THE COURT OF CIVIL JUDGE AND JUDICIAL MAGISTRATE FIRST CLASS AT BAGEPALLI
Crl.Mis No. 08/2026

Petitioner : **Smt, Rathnamma** W/o Late Surendra aged about 66 years R/at H.No.13, 17th ward, Kanchukote, Bagepalli Town And Taluk, Chikkaballapur Dist. V/s
Respondent : The Chief officer, the Registrar of Births and Deaths, Town Muncipal Bagepalli, Chikkaballapur District.

PAPER PUBLICATION

The petitioner have filed this petition for Death certificate of deceased person petitioner husband **SURENDRA S/O DURGAM RUDRAPPA was died on 08/11/2009 in their house at H.No.13, 17th ward, Kanchukote, Bagepalli Town and Taluk, Chikkaballapur District.** The petition is pending. Any person have any right, or interest may appear before this Hon'ble court on 8.05.2026 at 11.00 AM in person or through pleader to file your objections if any. Taken notice that in default of your appearance on the date before mentioned in the petition in will be heard and determine ex-parte.

By order of be court
Sherisedar, Bagepalli Civil Judge and JMFC at Bagepalli
Anjinappa P.N, Advocate Bagepalli
Place: Bagepalli, Date: 16/03/2026

IN THE COURT OF THE CIVIL JUDGE AND J.M.F.C AT CHICKBALLAPUR
Crl.Misc No:637/2025

Petitioners : 1. Sri.K.T.Rajanna S/o. Late Timmappa Aged about 65 years, **2. Sri.K.T.Srinivasa** S/o. Late Timmappa Aged about 63 years, **3. Sri.K.T.Nagaraj** S/o. Late Timmappa Aged about 55 years, **4. Sri.K.T.Narayanaswamy** S/o. Late Timmappa, Aged about 53 years, **5. Sri.K.T.Govindappa** S/o. Late Timmappa, Aged about 50 years, 1 to 5 are Residing at Kammaganahalli village, Mandikal Hobli, Chickballapur Taluk and District. **6. Smt. Pramilamma** D/o. Late Thimmappa W/o. Lakshminarasimhappa, Aged about 56 years, R/at. Poolavarapalli village, Paragodu P, Kasaba Hobli, Bagepalli Taluk, Chickballapur District -V/s-
Respondent : The Registrar of Births and Deaths Office of the Tahasildar, Chickballapur.

DRAFT PAPER PUBLICATION

The petitioners have filed this petition for grant of death certificate of petitioner's grandfather **Sri.Dibbanna S/o. Late Thimmanna** was died leaving behind petitioners as his legal heirs at **Kammaganahalli Village, Mandikal Hobli, Chickballapur Taluk.** He died on 01-02-1980.

1. Whom so ever if any person who are related or interest or dispute date of death of **Sri. Dibbanna S/o. Late Thimmanna** may hereby directed to appear in the above said court in person or through pleader duly instructed and to able to answer all material question raising in the on the day of **16.04.2026 at 11 AM** in said court. Take notice that in default of your appearance on the date before mentioned in the petition, it will be heard and determine ex-parte.Given under my hand seal of the court on the day of 9/04/2026

By Order Of The Court
In The Court Of The Civil Judge And J.M.F.C At Chickballapur
Jagadeeshwarachari, Advocate, Chickballapur

ಕೊಳ್ಳೇಗಾಲ ... ನ್ಯಾಯಾಲಯ, ...

ಅಸಲು ದಾವಾ ಸಂಖ್ಯೆ : 421/2023.

[illegible]

ದಿನಾಂಕ : 2.06.2026 ...

[illegible]

ದಿನಾಂಕ : 04.11.2025

ಜಾಹೀರಾತಿಗಾಗಿ ಸಂಪರ್ಕಿಸಿ :
9845438807
9611755391

IN THE COURT OF THE 3rd ADDITIONAL SENIOR CIVIL JUDGE AND JMFC AT DEVANAHALLI
O.S. No. 355/2017

BETWEEN: CHANDRAMMA ...PLAINTIFF
AND: MUNIYAMMA AND OTHERS ... **DEFENDANT**

DEFENDANT NO. 2 AND 3 AND PROPOSED DEFENDANT NO. 4

D2. P.NARASIMHA RAJU, S/o Arjun Raju, aged about 56 years, Residing at No.216/8, II Floor, "Varalakshmi Nilaya" B.B.Road, Sadashivanagar, Bangalore-560 080. **D3. M/S ROYAL PARK PVT. LTD.** A Company Incorporated, Under the Companies Act, 1956, having its Registered Office at No.D1-D2, Arphi Apartments, No.2 Leonard Lane, Richmond Town, Bangalore Represented by its Chairman, Mr. Rudolph Mascarenhas. **PD4. M/s Shreshta Infra Projects Private Limited,** Having office at No. 10, Vittal Mallya Road, Bangalore- 560001. And Also having office at No.2/4, 3rd Floor, Adarsh Hamilton Hotel, Langford Gardens, Richmond Town, Bangalore Represented by its Partner Nischay Jayeshankar

Whereas the plaintiff has filed the above suit seeking Relief of partition and separate possession with respect to the Suit schedule property. You are hereby directed to appear before this court on **28/04/2026** at **11:00 AM** either in person or through an advocate to answer all material claims pertaining to the above suit, failing which the matter will be heard and determined in your absence placing you as ex- parte.

SCHEDULE

All Agricultural land bearing Sy.No. 94/B2, measuring 35 guntas, situated at Heggarahalli Village, Kundana Hobli, Devanahalli Taluk, Bangalore Rural District and bounded on the: **East by:** Chapparakallu Dinne Road, **West by:** Bettanahalli Village Boundary & Land in Sy.No.99 & 100, **North by:** Land in Sy.No.94/B3, **South by:** Land in Sy.No.94/B1.

Given under my hand and seal of the Court on this 10/04/2026.

By order of the Court, Chief Ministerial Officer, Senior Civil Judge & JMFC Court, Devanahalli.

Advocate for plaintiff: **S.V. SRIDHAR**
No.5, 3rd Floor, D.N.V Building, Opp. BIAAPA Office, Sulibele Road, Devanahalli Town, Devanahalli- 562110.

IN THE COURT OF THE HON'BLE III ADDL. PRL. JUDGE, FAMILY COURT, AT BENGALURU
G&W.C. No.: 98/2025

BETWEEN:
Smt. SARIKA BALACHANDRA SHETTY, Aged about 42 years, W/o. Sri. Venkatesh Yadav, Presently residing at No. 151, 3rd cross, 5th Block, Banshankari 3rd stage, Bengaluru-560085. ..... **PETITIONER**
AND: Sri. Venkatesh Yadav, Aged about 41 years, S/o. Late Sri. Damodharan, Resident of No. 57, 1st Cross, 2nd Stage, Michael Palyam, New Thippasandra, Bengaluru-560 075
..........**RESPONDENT**

NOTICE TO RESPONDENT

To, **Sri. Venkatesh Yadav,** Aged about 41 years, S/o. Late Sri. Damodharan, Resident of No. 57, 1st Cross, 2nd Stage, Michael Palyam, New Thippasandra, Bengaluru-560

Whereas, the above-named Petitioner has filed a Petition under section 6(a) of the Hindu Minority and Guardianship Act, 1956 read with section 7 of Guardianship and wards Act 1890. The above case is posted on 03.06.2026 for your appearance. Hence you are hereby directed to appear before this Hon'ble court on the said date at 11.00 A.M either in person or through Counsel duly instructed. Failing which, the above case will be heard and determined in your absence placing you as ex-parte.

Giving under my hand and seal of this court on this 9th day of MARCH 2026.

BY ORDER OF THE COURT
Senior Sheristeder, Family Court, Bengaluru
Advocate for Petitioner
B.N. NAGARAJA
AND ASSOCIATES Family Court, Bangalore No.760, 16th Main, BSK 2nd Stage Bangalore-560070.

IN THE COURT OF THE 1ST ADDITIONAL CIVIL JUDGE AT KOLAR
O.S.No.436/2022

Between: Smt. Saraswathamma & Ors..............Plaintiff
And ; Smt. Lakshmamma & Ors

D-3 Smt. Rathnamma D/o Late Hanumappa,W/o Late ChandrashekarAged about 60 years,R/at: Near Kumar Bick Garege,Kolar Circle, Srinivasapura Town.
D-5 Sri. Harish S/o Late Suresh,Aged about 30 years,R/at: Near Abinava Anjineyaswamy Temple, Shanthi Nagar, Kolar.
D-6 Smt. Gajalakshmi W/o Nagappa D/o Hanumappa,Aged about 40 years,R/at: Near Veerabhadra swamy Temple,Agadur, Whitefild Main Road, Bengaluru. ..... **Defendants**

SUMMONS.

Whereas, the decree Holder has filed the above execution petition against the Judgment Debtors for the property bearing Survey No.514/2, Measuring to an total extent of 13 1/2 guntas situated at Amanikere Village, Kasaba Hobli, Kolar Taluk.

You the Defendants No.3,5 &6 are hereby summoned to appear in this Court in Person or by a Pleader duly instructed and able to answer all material questions relating to the plaint on 08/06/26. at 11-00 A.M to answer the claim.

Take Notice that in default of your appearance on the day mentioned above, the Suit will be heard and determined in your absence as Ex-parte.

Given under my hand and the seal of the Court on this day of 27/03/26

BY ORDER OF THE COURT.
Shiresthedar, Prl. Civil Judge and J.M.F.C, at Kolar
Advocate for Plaintiffs.
A.Srinivasa, B.A.L., L.L.B Advocate Opp. Guru Mess, 2nd Main Road Kurubarapet, Kolar
Place: Kolar, Date: 16/3/26

IN THE COURT OF THE PRL. SENIOR CIVIL JUDGE AT TUMAKURU
O.S. No.860/2024

PLAINTIFF: Smt. Umadevi
V/s
DEFENDANTS: Smt. Siddagangamma and Others

DRAFT PAPER PUBLICATION

To,**1. Siddagangamma** D/o Chikkananjappa W/o Late Chandrappa, Aged about 67 years,**2. Sri. R. Lokesh** S/o Late Chikkananjappa Aged about 65 years, **3. Parvathamma** W/o Late PuttaveerabhadrappaD/o Chikkananj appa, Aged about 63 years, R/at Mavathooru Village,Kolala Hobli, Koratagere Taluk,Tumakuru District. **5. R. Eshwarappa** S/o Late Chikkananjappa, Aged about 58 years, BMTC Bus Conductor, 6.**Kalpana** W/o R. Eshwarappa Aged about 55 years,D-5 & D-6 are R/at 1st Main, 3rd Cross, Nagarabhavi Main Road, Priyadarshini Layout, Behind Evergreen Beauty Parlour, Govindaraju Nagara, Mudlapalya, Bengaluru - 72. Permanent R/at D-1, 2, 5 & 6 are R/at Rathnagiri Village, Rolla Mandal, Madakasira Taluk, Sri Satyasai District, Andhra Pradesh.**7. The Manager,** Andhra Pragathi Grameena Bank, Rathnagiri Village, Rolla Mandal, Madakasira Taluk, Sri Satyasai District, Andhra Pradesh. **8.The Manager,** Airtel Cellular Tower, Bharathi Infrastructure Pvt. Ltd., H. No.1-2-93/4/A/6, Flot No.203, Vijaya Courts, Road No.3, Gaganmahal Colony, Domalaguda, Hyderabad, Telangana - 500029. **10. Sri. Umesh** S/o Lokesh Aged about 32 years,R/at Rathnagiri Village, Rolla Mandal, Madakasira Taluk, Sri Satyasai District, Andhra Pradesh-515 321. (Defendant No.1 to 3, 5 to 8 & 10)

NOTICE

The plaintiff has filed suit in O.S. No.860/2024 on the file of the Prl. Senior Civil Judge at Tumakuru, seeking relief sought in plaint, that you are the Defendant No.1 to 3, 5 to 8 & 10 in the above case. **Hence, your appearance is required in person or through pleader on 04.06.2026 at 11.00 A.M. before the Hon'ble Prl. Senior Civil Judge at Tumakuru** to defend the case and in default of your appearance on that day specified, the case will be heard and placing you ex-parte.

Given under my hand the seal of the court this 10th day of April 2026.

BY ORDER OF THE COURT
IN THE COURT OF THE PRL. SENIOR CIVIL JUDGE AT TUMAKURU
Advocate for Plaintiff
S.N. Shivakumaraswamy B.Com., LL.B., **M.R. Prameela** B.A., LL.B.,Advocates, Sri Mukambika Law Chamber, Near Railway Station, Rayawara, Gubbi Town - 572223.

ತೋಟ ಉತ್ಪನ್ನಗಳ ಮಾರಾಟ ಸಹಕಾರ ಸಂಘ ನಿ.,
ಚನ್ನಗಿರಿ,-577213, ದಾವಣಗೆರೆ ಜಿಲ್ಲೆ,

ತುರ್ತು ಟೆಂಡರ್ ಪ್ರಕಟಣೆ

ಚನ್ನಗಿರಿ ತಾಲ್ಲೂಕು, **ತೋಟ ಉತ್ಪನ್ನಗಳ ಮಾರಾಟ ಸಹಕಾರ ಸಂಘ ನಿ.,** ಸಂಸ್ಥೆಗೆ 2026-27ನೇ ಸಾಲಿನಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕೆಲವು ವರ್ಗದ ಸಿಬ್ಬಂದಿಗಳನ್ನು ಒದಗಿಸಲು ಅರ್ಹ ಮ್ಯಾನ್‌ಪವರ್ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ದಾಖಲೆಗಳು ಮತ್ತು ವಿವರಗಳನ್ನು ವೆಬ್‌ಸೈಟ್ https://www.tumcos.com ಮೂಲಕ ಪಡೆಯಬಹುದಾಗಿದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು **ದಿನಾಂಕ:22-04-2026 ರಂದು ಸಂಜೆ 5.00 ರೊಳಗೆ** ಕೇಂದ್ರ ಕಛೇರಿಗೆ ಸಲ್ಲಿಸಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: **7349498866.**

ಸಹಿ/- ವ್ಯವಸ್ಥಾಪಕ ನಿರ್ದೇಶಕರು,
ತೋಟ ಉತ್ಪನ್ನಗಳ ಮಾರಾಟ ಸಹಕಾರ ಸಂಘ ನಿ.,

UJJIVAN SMALL FINANCE BANK

ನೋಂದಾಯಿತ ಕಚೇರಿ: ಗ್ರೇಪ್ ಗಾರ್ಡನ್, ನಂ.27, 3ನೇ ಎ ಕ್ರಾಸ್, 18ನೇ ಮೈನ್, 6ನೇ ಬ್ಲಾಕ್ ಕೋರಮಂಗಲ, ಬೆಂಗಳೂರು - 560095.

ಸ್ವಾಧೀನ ನೋಟಿಸ್ (ಸ್ಥಿರಾಸ್ತಿಗಳಿಗಾಗಿ) [ನಿಯಮ 8(1)] ಅನ್ವಯ

[illegible] ... 2002 ... 2002 ... 22.12.2025 ... ರೂ. 3,02,499 ... [illegible] ... 22.12.2025 ... ರೂ. 3,02,499/- ... [illegible]

ಸ್ಥಿರಾಸ್ತಿಯ ವಿವರಣೆ

[illegible] ... 150800001500820257 ... 7.9248 ಮೀಟರ್ ... 6.096 ಮೀಟರ್ ... [illegible]

ದಿನಾಂಕ: 09.04.2026 ಸಹಿ/- ಅಧಿಕೃತ ಅಧಿಕಾರಿ, ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

ಜಿಲ್ಲಾ ನಿರ್ಮಿತಿ ಕೇಂದ್ರ, ಉತ್ತರಕನ್ನಡ, ಕಾರವಾರ
ಕಡಿಮೆ ವೆಚ್ಚದ ಕಟ್ಟಡ ಸಾಮಗ್ರಿಗಳ ಹಾಗೂ ತಾಂತ್ರಿಕತೆಯ ವರ್ಗಾವಣೆ ಕೇಂದ್ರ
ZILLA NIRMITHI, KENDRA, KARWAR
Cost Effective Building Materials & Technology Transfer Centre
(PROMOTED BY HUDCO & Govt. OF KARNATAKA)

Chairman	Executive Chairman
Deputy Commissioner, Karwar-581301, Uttara Kannada	Chief Executive Officer, Zilla Panchayat Karwar-581301, Uttara Kannada

ನಂ:ಜನಿಕೇ/ಉ.ಕ/ಇ-ಟೆಂಡರ /2026-27

ಟೆಂಡರ ಪ್ರಕಟಣೆ

ಜಿಲ್ಲಾ ನಿರ್ಮಿತಿ ಕೇಂದ್ರ, ಉತ್ತರ ಕನ್ನಡ ಕಛೇರಿಯಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಬಿಡ್‌ಗಳನ್ನು ಆಹ್ವಾನಿಸುವ ಟೆಂಡರ ಪ್ರಕಟಣೆ

ಜಿಲ್ಲಾ ನಿರ್ಮಿತಿ ಕೇಂದ್ರ, ಉತ್ತರ ಕನ್ನಡ ಕಚೇರಿಗೆ ಅನುಮೋದನೆಗೊಂಡ ಈ ಕೆಳಗಿನ ಕಾಮಗಾರಿಯನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರ ಆಯ್ಕೆ ಮಾಡಲು ಕೆ.ಪಿ.ಪಿ.ಪಿ ಮೂಲಕ ಟೆಂಡರ್ ಕರೆಯಲಾಗಿದ್ದು, ಭಾಗವಹಿಸುವವರು ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸಿ ಕೆ.ಪಿ.ಪಿ.ಪಿ ಮೂಲಕ ಮಾತ್ರ ಬಿಡ್‌ನ್ನು ಸಲ್ಲಿಸುವುದು.

ಟೆಂಡರ್ ನಮೂದಿಸಿರುವ ಸಂಖ್ಯೆ	ಕಾಮಗಾರಿಗಳ ವಿವರ	ಟೆಂಡರ್‌ಗಿಟ್ಟ ಮೊತ್ತ (ಜಿ.ಎಸ್.ಟಿ ಹೊರತುಪಡಿಸಿ)
ZNK/2025-26/RD/WORK_INDENT10	ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಆನಗೋಡ ಗ್ರಾಮ ಪಂಚಾಯತ ವ್ಯಾಪ್ತಿಯ ಹಬಗಾರ ಕ್ರಾಸ್‌ನಿಂದ ನಿರ್ಗಮನೆ ರಸ್ತೆ ನಿರ್ಮಾಣ ಕಾಮಗಾರಿ	16,90,951.05

ಟೆಂಡರ್‌ಗೆ ಸಂಬಂಧಪಟ್ಟಂತೆ ಯಾವುದೇ ಪ್ರಶ್ನೆಗಳು/ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ	30-04-2026: 16.00.00
ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ	02-05-2026: 17.30.00
ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	04-05-2026: 11.00.00
ಟೆಂಡರ್‌ಗಳ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	05-05-2026: 11.00.00

ಮೇಲಿನ ಟೆಂಡರನಲ್ಲಿ ಭಾಗವಹಿಸುವವರು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಇರುವ ನಿಬಂಧನೆಗಳನ್ನು ಇಲಾಖಾ ವೆಬ್‌ಸೈಟ್: http://kppp.karnataka.gov.in ರಲ್ಲಿ ನೋಡಬಹುದು, ಹೆಚ್ಚಿನ ಮಾಹಿತಿಗಾಗಿ ಯೋಜನಾ ವ್ಯವಸ್ಥಾಪಕರು, ಜಿಲ್ಲಾ ನಿರ್ಮಿತಿ ಕೇಂದ್ರ, ಸಬ್ ರಜಿಸ್ಟ್ರಾರ್ ಕಚೇರಿ ಹಿಂದುಗಡೆ, ಕಾಜುಬಾಗ ಪಕ್ಕದಲ್ಲಿ, ಉತ್ತರ ಕನ್ನಡ, ಕಾರವಾರ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ. ದೂರವಾಣಿ ಸಂಖ್ಯೆ : (08382) 223184.

ಸಹಿ ಇದೆ/- ಯೋಜನಾ ವ್ಯವಸ್ಥಾಪಕರು
ಜಿಲ್ಲಾ ನಿರ್ಮಿತಿ ಕೇಂದ್ರ, ಕಾರವಾರ, ಉತ್ತರ ಕನ್ನಡ

ಎಚ್.ಎಂ.ತಾಂಬೂರಿನ್ ಅಪಾರ್ಟ್‌ಮೆಂಟ್‌ಗೆ ಆಯುಕ್ತರ ಭೇಟಿ

ಜಯನಗರ 42 ರಸ್ತೆಯಲ್ಲಿ ಪಾರ್ಕಿಂಗ್ ನೀತಿ

• ಬೆಂಗಳೂರು: ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಜಯನಗರದ 42 ರಸ್ತೆಗಳಲ್ಲಿ ಪಾರ್ಕಿಂಗ್ ನೀತಿಯನ್ನು ಜಾರಿಗೆ ತರಲಾಗುತ್ತಿದೆ ಎಂದು ಬೆಂಗಳೂರು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ತಿಳಿಸಿದರು.

ಕನಕಪುರ ರಸ್ತೆಯ ಎಚ್.ಎಂ. ತಾಂಬೂರಿನ್ ಅಪಾರ್ಟ್‌ಮೆಂಟ್‌ಗೆ ಭೇಟಿ ನೀಡಿ, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಒಕ್ಕೂಟದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪಾಲಿಕೆ ವ್ಯಾಪ್ತಿಯ ಪ್ರಮುಖ ರಸ್ತೆಗಳಲ್ಲಿ ಪಾರ್ಕಿಂಗ್ ನೀತಿ ಜಾರಿಗೆ ತರಲಾಗುತ್ತಿದ್ದು, ಈ ಸಂಬಂಧ ಜಯನಗರ ವಿಭಾಗದ 42 ರಸ್ತೆಗಳಲ್ಲಿ ಪಾರ್ಕಿಂಗ್ ನೀತಿ ಜಾರಿಗಾಗಿ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗಿದೆ. ಇದೇ ಮಾದರಿಯಲ್ಲಿ ಉಳಿದ ವಿಭಾಗಗಳಲ್ಲಿ ಪಾರ್ಕಿಂಗ್ ನೀತಿಯನ್ನು ಹಂತ-ಹಂತವಾಗಿ ಜಾರಿಗೆ ತರಲಾಗುವುದೆಂದು ಮಾಹಿತಿ ನೀಡಿದರು. ರಸ್ತೆ ಡಾಂಬರೀಕರಣ ಮತ್ತು ಗುಂಡಿಗಳ ಸಮಸ್ಯೆ, ಘನ ತ್ಯಾಜ್ಯ ನಿರ್ವಹಣೆಯಲ್ಲಿನ ನ್ಯೂನತೆಗಳು, ರಿಂಗ್ ರಸ್ತೆಯಲ್ಲಿ ಖಾಲಿ ಪಕ್ಕದಲ್ಲಿರುವ ಪಬ್‌ಗಳು ಹಾಗೂ ರಿಂಗ್ ರಸ್ತೆಯಲ್ಲಿನ ಅಕ್ರಮ ಪಾರ್ಕಿಂಗ್ ಕಿರಿಕಿರಿ ಸೇರಿದಂತೆ ಅನೇಕ ಸಮಸ್ಯೆಗಳನ್ನು ನಿವಾಸಿಗಳು ಆಯುಕ್ತರ ಗಮನಕ್ಕೆ ತಂದರು.

ನಿವಾಸಿಗಳ ಅಹವಾಲುಗಳನ್ನು ಆಲಿಸಿದ ಬಳಿಕ ಪ್ರತಿಕ್ರಿಯಿಸಿದ ಆಯುಕ್ತರು, ಪಾಲಿಕೆಯಲ್ಲಿ ಸಿಬ್ಬಂದಿಗಳ ಕೊರತೆ ಇರುವುದರಿಂದ ಕೆಲವು ಕೆಲಸಗಳು ವಿಳಂಬವಾಗುತ್ತಿವೆ. ಸಕಾಲದಲ್ಲಿ



> ದೇಶದ ಅಭಿವೃದ್ಧಿ ಯೋಜನೆಗಳ ರೂಪಿಸುವಲ್ಲಿ ಜನಗಣತಿಯು ಪ್ರಮುಖ ಪಾತ್ರ ವಹಿಸುತ್ತದೆ. ಪ್ರತಿಯೊಬ್ಬ ನಾಗರಿಕರು ಜವಾಬ್ದಾರಿಯಿಂದ ಜನಗಣತಿಯಲ್ಲಿ ಪಾಲ್ಗೊಳ್ಳುವುದು ಅತ್ಯಗತ್ಯ.
> ■ ಕೆ.ಎನ್ ರಮೇಶ್, ದಕ್ಷಿಣ ನಗರ ಪಾಲಿಕೆ ಆಯುಕ್ತ

ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ನಾಗರಿಕರು ಸಹಕರಿಸಬೇಕೆಂದು ಕೋರಿದರು.

ಪಬ್‌ಗಳ ಹಾವಳಿ ಹಾಗೂ ಪಾರ್ಕಿಂಗ್ ಸಮಸ್ಯೆಗಳ ಕುರಿತು ಪೊಲೀಸ್ ಇಲಾಖೆಯೊಂದಿಗೆ ಚರ್ಚಿಸಿ ಕಠಿಣ ಕ್ರಮ ಕೈಗೊಳ್ಳಲಾಗುವುದು. ಉಚ್ಚ ನ್ಯಾಯಾಲಯದ ಆದೇಶದಂತೆ ಸಾರಕ್ಕಿ ಕೆರೆಯ ಬಫರ್ ಝೋನ್‌ನಲ್ಲಿ ಅಧಿಕಾರಿಗಳು ಸರ್ವೆ ಕಾರ್ಯ ನಡೆಸುತ್ತಿದ್ದಾರೆ ಎಂದು ತಿಳಿಸಿದರು.

ಅರಿಶಿನಕುಂಟೆ ಪುನರ್ವಸು ಪಿಯು ಕಾಲೇಜಿಗೆ ಉತ್ತಮ ಫಲಿತಾಂಶ

• ಬೆಂಗಳೂರು: ನಗರದ ಅರಿಶಿನಕುಂಟೆಯಲ್ಲಿರುವ ಪುನರ್ವಸು ಪಿಯು ಕಾಲೇಜಿನ ವಿದ್ಯಾರ್ಥಿಗಳು 2026ನೇ ಸಾಲಿನ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಅತ್ಯುತ್ತಮ ಫಲಿತಾಂಶ ದಾಖಲಿಸುವ ಮೂಲಕ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಧೃತಿ ಭಟ್ ಶೇ.99.16 ರಷ್ಟು ಅಂಕಗಳನ್ನು ಪಡೆಯುವ ಮೂಲಕ ರಾಜ್ಯ ಮಟ್ಟದಲ್ಲಿ ಸ್ಥಾನ ಗಳಿಸುವುದಲ್ಲದೆ, ನೆಲಮಂಗಲ ತಾಲೂಕಿಗೆ ಪ್ರಥಮ ಸ್ಥಾನ ಪಡೆದು ಸಾಧನೆ ಮಾಡಿದ್ದಾರೆ.

ವಾಣಿಜ್ಯ ವಿಭಾಗದ ಇತರೆ ವಿದ್ಯಾರ್ಥಿಗಳಾದ ಪುನೀತ್ ಶೇ.95.5 ರಷ್ಟು ಮತ್ತು ಅಭಿಜ್ಞಾ ಶೇ.90.67 ರಷ್ಟು ಅಂಕಗಳನ್ನು ಗಳಿಸಿ ಗಮನಾರ್ಹ ಸಾಧನೆ ಮಾಡಿದ್ದಾರೆ. ವಿಜ್ಞಾನ ವಿಭಾಗದಲ್ಲೂ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿದ್ದು, ಮಾನಸ ಕೆ.ಎಲ್. ಶೇ.93.8 ರಷ್ಟು ಹಾಗೂ ಜ್ಞಾನೇಶ್ ಶೇ.91.5ರಷ್ಟು ಅಂಕಗಳನ್ನು ಪಡೆದು ಕಾಲೇಜಿನ ಯಶಸ್ಸಿನ ಪಟ್ಟಿಗೆ ಸೇರ್ಪಡೆಯಾಗಿದ್ದಾರೆ.

ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶವನ್ನು ಪಡೆದುಕೊಂಡಿದ್ದು, ವಿದ್ಯಾರ್ಥಿಗಳ ಈ ಗಮನಾರ್ಹ ಸಾಧನೆಗೆ ಪುನರ್ವಸು ಪಿ.ಯು.ಕಾಲೇಜಿನ ಅಧ್ಯಕ್ಷ ಅಜಿತ್ ಹರೀಶ್ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ವಿದ್ಯಾರ್ಥಿಗಳ ಶ್ರಮ ಮತ್ತು ಬೋಧಕ ವರ್ಗದ ಶಿಸ್ತುಬದ್ಧ ಮಾರ್ಗದರ್ಶನ ಈ ಯಶಸ್ಸಿಗೆ ಕಾರಣ ಎಂದು ಶ್ಲಾಘಿಸಿ, ಉತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಕ್ರೀಡಾಕೂಟ



ಕೇಂದ್ರ ನಗರ ಪಾಲಿಕೆಯಿಂದ ಡಾ. ಬಿ.ಆರ್. ಅಂಬೇಡ್ಕರ್ ದಿನಾಚರಣೆ ಅಂಗವಾಗಿ ಪೌರಕಾರ್ಮಿಕರಿಗೆ ಆಯೋಜಿಸಲಾದ ಕ್ರೀಡಾಕೂಟಕ್ಕೆ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಚಾಲನೆ ನೀಡಿದರು. ಅಪರ ಆಯುಕ್ತರಾದ ದಲ್ಜಿತ್ ಕುಮಾರ್, ಕೆ. ರಂಗನಾಥ್, ಜಂಟಿ ಆಯುಕ್ತ ಹೇಮಂತ್ ಶರಣ್ ಮತ್ತಿತರರಿದ್ದರು.

ಕಿರುಸುದ್ದಿ

ಹವಾ ನಿಯಂತ್ರಣರಹಿತ ಬಸ್ ಸೇವೆ

• ಬೆಂಗಳೂರು: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಪ್ರಯಾಣಿಕರ ಅನುಕೂಲಕ್ಕಾಗಿ ಹವಾನಿಯಂತ್ರಣ ರಹಿತ ಸೇವೆಗಳಲ್ಲಿ ನೂತನ ಮಾರ್ಗವನ್ನು ಏ.15 ರಿಂದ ಪರಿಚಯಿಸುತ್ತಿದೆ. 251-ಎ ಯಶವಂತಪುರ ಟಿಟಿಎಂಸಿಯಿಂದ ಕಾಕೋಳುವರೆಗೆ ನೂತನ ಮಾರ್ಗವನ್ನು ಪರಿಚಯಿಸಲಾಗಿದೆ. ಈ ಬಸ್ಸು ಜಾಲಹಳ್ಳಿ ಕ್ರಾಸ್, ಚಿಕ್ಕಬಾಣಾವರ, ಹೆಸರಘಟ್ಟ, ಟಿಬಿ ಕ್ರಾಸ್, ಮುತ್ತೂರು, ಲಿಂಗನಹಳ್ಳಿ, ಕೊಳುವರಾಯನಹಳ್ಳಿ, ಸೀತಕೆಂಪನಹಳ್ಳಿ ಕ್ರಾಸ್ ಮಾರ್ಗವಾಗಿ ಕಾಕೋಳುವರೆಗೆ ಕಾರ್ಯಾಚರಿಸಲಿದೆ. ಯಶವಂತಪುರದಿಂದ ಬೆಳಗ್ಗೆ 06:45, ಮಧ್ಯಾಹ್ನ 3:20ಕ್ಕೆ ಹಾಗೂ ಬೆಳಗ್ಗೆ 08:30 ಹಾಗೂ ಸಂಜೆ 5:30ಕ್ಕೆ ಕಾಕೋಳಿನಿಂದ ಹೊರಡಲಿದೆ.

ಏ.14ರಂದು ಹುಚ್ಚರಯ್ಯ ಹುಚ್ಚರು ನಾಟಕ ಪ್ರದರ್ಶನ

• ಬೆಂಗಳೂರು: ಪಯಣ ತಂಡದಿಂದ ಏ.14 ರಂದು ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ಸಂಜೆ 7.30ಕ್ಕೆ ಹುಚ್ಚರಯ್ಯ ಹುಚ್ಚರು ನಾಟಕದ 34 ನೇ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ನಾಟಕದ ಕಥೆ ಮತ್ತು ಸಭಾಂಷಣೆ ರಚನೆಯನ್ನು ಮನೋಜ್ ಎಂ.ಆರ್ ಮಾಡಿದ್ದಾರೆ. ಟಿಕೆಟ್‌ಗಳನ್ನು 150 ರೂ. ಮೂಲಕ ಬುಕ್ ಮೈ ಶೋ ನಲ್ಲಿ ಮುಂಗಡವಾಗಿ ಕಾಯ್ದಿರಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ 63633 33506 ಸಂಪರ್ಕಿಸಬಹುದು.

ಲೆವೆಲ್ ಕ್ರಾಸಿಂಗ್ ಕಾಮಗಾರಿ: ರೈಲು ಸಂಚಾರದಲ್ಲಿ ವ್ಯತ್ಯಯ

• ಬೆಂಗಳೂರು: ನೈರುತ್ಯ ಬೆಂಗಳೂರು ವಿಭಾಗದ ಮಲ್ಲಸಂದ್ರ ಮತ್ತು ಗುಬ್ಬಿ ನಿಲ್ದಾಣಗಳ ನಡುವೆ ಲೆವೆಲ್ ಕ್ರಾಸಿಂಗ್ ಕಾಮಗಾರಿ ಹಿನ್ನೆಲೆಯಲ್ಲಿ, ಕೆಲವು ರೈಲುಗಳ ಮಾರ್ಗ ಮಧ್ಯದಲ್ಲಿ ನಿಯಂತ್ರಿಸಿ ಸಂಚರಿಸಲಾಗುತ್ತದೆ. ರೈಲು ಸಂಖ್ಯೆ 19667 ಉದಯಪುರ ಸಿಟಿ - ಮೈಸೂರು ಹಂಸಫರ್ ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲನ್ನು ಈ ಹಿಂದೆ ಏ.6 ಮತ್ತು 13ರಂದು ಉದಯಪುರ ಸಿಟಿಯಿಂದ 200 ನಿಮಿಷ ಮರುನಿಗದಿಪಡಿಸಲಾಗುತ್ತದೆ ಎಂದು ತಿಳಿಸಲಾಗಿತ್ತು. ಇದೀಗ ಪರಿಷ್ಕೃತ ಆದೇಶದಂತೆ, ಏ.13ರಂದು ಈ ರೈಲನ್ನು ಮಾರ್ಗ ಮಧ್ಯದಲ್ಲಿ ನಿಯಂತ್ರಿಸಲಾಗುತ್ತದೆ. ಈ ರೈಲು ವಾಯುವ್ಯ ರೈಲ್ವೆ, ಪಶ್ಚಿಮ ರೈಲ್ವೆ, ಮಧ್ಯ ರೈಲ್ವೆ ಹಾಗೂ ನೈರುತ್ಯ ರೈಲ್ವೆಯ ಹುಬ್ಬಳ್ಳಿ ವಿಭಾಗದಲ್ಲಿ ತಲಾ 60 ನಿಮಿಷಗಳ ಕಾಲ ನಿಯಂತ್ರಣಕ್ಕೆ ಒಳಪಡಲಿದೆ. ಅದೇ ರೀತಿ, ರೈಲು ಸಂಖ್ಯೆ 22497 ಶ್ರೀ ಗಂಗಾನಗರ - ತಿರುಚಿರಾಪಳ್ಳಿ ಹಂಸಫರ್ ಎಕ್ಸ್‌ಪ್ರೆಸ್ ರೈಲನ್ನು ಈ ಹಿಂದೆ ಏ.6 ಮತ್ತು 13 ರಂದು ಶ್ರೀ ಗಂಗಾನಗರದಿಂದ 150 ನಿಮಿಷ ಮರುನಿಗದಿಪಡಿಸಲಾಗುತ್ತದೆ ಎಂದು ತಿಳಿಸಲಾಗಿತ್ತು. ಇದೀಗ ಪರಿಷ್ಕೃತ ಆದೇಶದಂತೆ, ಏ.13 ರಂದು ಈ ರೈಲು ವಾಯುವ್ಯ ರೈಲ್ವೆ, ಪಶ್ಚಿಮ ರೈಲ್ವೆ ಹಾಗೂ ಮಧ್ಯ ರೈಲ್ವೆ ವ್ಯಾಪ್ತಿಯಲ್ಲಿ ತಲಾ 50 ನಿಮಿಷಗಳ ಕಾಲ ನಿಯಂತ್ರಣಕ್ಕೆ ಒಳಪಡಲಿದೆ.



ಯಲಹಂಕದ ಟಾಪ್ ರೂಟ್ ಪಿಯು ಕಾಲೇಜಿನ ವಿದ್ಯಾರ್ಥಿನಿ ಆದ್ಯ ಮನು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.94.33 ಅಂಕವನ್ನು ಪಡೆದಿದ್ದಾರೆ.

ಗೇಲ್ ಬಯೋ ಗ್ಯಾಸ್ ಉತ್ಪಾದನಾ ಘಟಕ | ಹರಳಗುಂಟೆ ಗ್ರಾಮಸ್ಥರು, ನಾಗರಿಕರ ಆಗ್ರಹ

648 ಮರಗಳ ಸಂರಕ್ಷಣೆಯಾಗಲಿ

• ಬೆಂಗಳೂರು: ನಗರದ ದಕ್ಷಿಣ ಭಾಗದ ಹರಳಗುಂಟೆ ಗ್ರಾಮದಲ್ಲಿ ಗೇಲ್ ಬಯೋ ಗ್ಯಾಸ್ ಉತ್ಪಾದನಾ ಘಟಕ ಸ್ಥಾಪನೆಗೆ ಚಾಲನೆ ಸಿಕ್ಕ ಬೆನ್ನಲ್ಲೇ, ಈ ಯೋಜನೆಯಲ್ಲಿ ಬಲಿ ಕೊಡಲಾಗುತ್ತಿರುವ 648 ಮರಗಳ ಸಂರಕ್ಷಣೆಗಾಗಿ ನಾಗರಿಕರು ದನಿಯೆತ್ತಿದ್ದಾರೆ.

ಅಭಿವೃದ್ಧಿ ಹೆಸರಿನಲ್ಲಿ ಮರಗಳ ಮಾರಣ ಹೋಮ ನಡೆಸುವ ಬದಲು, ಮರುಸ್ಥಾಪನೆ ಹಾಗೂ ಪರ್ಯಾಯ ಸಸಿ ನೆಡುವಿಕೆಗೆ ಹೆಚ್ಚಿನ ಒತ್ತು ನೀಡಬೇಕೆಂಬ ಆಗ್ರಹ ಕೇಳಿಬಂದಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೇಗೂರು ಹೋಬಳಿಯ ಹರಳಗುಂಟೆ ಗ್ರಾಮದ ಸರ್ವೆ ನಂಬರ್ 39, 40 ಮತ್ತು 46ರಲ್ಲಿ ಮರವನ್ನು ಕತ್ತರಿಸುವ ಕುರಿತು ಏ. 2ರಂದು ಹೊರಡಿಸಲಾದ ಸಾರ್ವಜನಿಕ ಪ್ರಕಟಣೆಗೆ ಸಂಬಂಧಿಸಿದಂತೆ ಪರಿಸರ ಆಸಕ್ತರು ಅರಣ್ಯ ಇಲಾಖೆಗೆ ಹಲವು ಮಹತ್ವದ ಸಲಹೆಯನ್ನು ನೀಡಿದ್ದಾರೆ.

ತ್ಯಾಜ್ಯ ಮುಕ್ತಿ ಹಾಗೂ ಉದ್ಯೋಗಕ್ಕೆ ಸ್ವಾಗತ : ಪ್ರಸ್ತುತ ಕಸದ ರಾಶಿಯಿಂದ ಕೂಡಿದ ಡಂಪಿಂಗ್ ಯಾರ್ಡ್ ಆಗಿರುವ ಈ ಪ್ರದೇಶದಲ್ಲಿ ಬಯೋ ಗ್ಯಾಸ್ ಘಟಕ ಸ್ಥಾಪನೆಯಾಗುತ್ತಿರುವುದು ಸ್ವಾಗತಾರ್ಹ. ಇದರಿಂದ ಸ್ಥಳೀಯವಾಗಿ ಹರಡುತ್ತಿರುವ ದುರ್ವಾಸನೆಗೆ ಮುಕ್ತಿ ಸಿಗುವುದಲ್ಲದೆ, ಈಗಾಗಲೇ ಅಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಸ್ಥಿರ ಉದ್ಯೋಗಾವಕಾಶಗಳು ಲಭ್ಯವಾಗಲಿವೆ ಎಂದು ನಾಗರಿಕರು ಅಭಿಪ್ರಾಯಪಟ್ಟಿದ್ದಾರೆ.

ಪರಿಸರ ಎನ್ನುವುದು ಕೇವಲ ಮಾನವರಿಗಾಗಿ ಮಾತ್ರವಲ್ಲ, ಪ್ರಾಣಿ-ಪಕ್ಷಿ ಹಾಗೂ ಸಕಲ ಜೀವರಾಶಿಗಳ ಉಳಿವಿಗೂ ಅಗತ್ಯ. ಹರಳಗುಂಟೆಯ ಪರಿಸರ ಸಮತೋಲನವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ಹಾಗೂ ಗೇಲ್ ಸಂಸ್ಥೆ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಬೇಕು ಎಂಬುದು ಸ್ಥಳೀಯರ ಮನವಿಯಾಗಿದೆ.



ಪರಿಸರ ಪ್ರೇಮಿಗಳ ಪ್ರಮುಖ ಬೇಡಿಕೆ

ಯೋಜನಾ ಪ್ರದೇಶದಲ್ಲಿರುವ ಮರಗಳ ವಯಸ್ಸು ಮತ್ತು ಗಾತ್ರವನ್ನು ಲೆಕ್ಕಿಸದೆ, ಸಾಧ್ಯವಿರುವ ಎಲ್ಲ ಮರಗಳನ್ನು ಅತ್ಯಾಧುನಿಕ ತಂತ್ರಜ್ಞಾನದ ಮೂಲಕ ಬೇರೆಡೆಗೆ ಸ್ಥಳಾಂತರಿಸಬೇಕು. ಅನಿವಾರ್ಯವಾಗಿ ಕತ್ತರಿಸುವ ಪ್ರತಿ ಮರದ ಬದಲಿಗೆ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ 1976 ರ ಅನ್ವಯ ಕನಿಷ್ಠ 10 ಸಸಿಗಳನ್ನು ಸಮೀಪದ ಗ್ರಾಮಗಳಲ್ಲಿ ನೆಡಬೇಕು.

ನೆಟ್ಟ ಸಸಿಗಳ ಮಾಹಿತಿ ಲಭ್ಯವಾಗಲಿ

ನೆಟ್ಟ ಸಸಿಗಳ ಸ್ಥಳದ ಮಾಹಿತಿ ಸಾರ್ವಜನಿಕರಿಗೆ ಲಭ್ಯವಾಗಬೇಕು. ಅವುಗಳು ಸ್ವಾವಲಂಬಿಯಾಗಿ ಬೆಳೆಯುವವರೆಗೆ ನಿಯಮಿತವಾಗಿ ನೀರುಣಿಸುವ ಹಾಗೂ ಪೋಷಿಸುವ ಜವಾಬ್ದಾರಿಯನ್ನು ಗೇಲ್ ಸಂಸ್ಥೆ ಹೊರಬೇಕು. ಬಯೋ ಗ್ಯಾಸ್ ಘಟಕದ ಆವರಣ ಮತ್ತು ಸುತ್ತಮುತ್ತಲಿನ ಪ್ರದೇಶವನ್ನು ಮಾದರಿ ಹಸಿರು ವಲಯವನ್ನಾಗಿ ಅಭಿವೃದ್ಧಿಪಡಿಸಬೇಕೆಂದು ಪರಿಸರ ಪ್ರೇಮಿಗಳು ಆಗ್ರಹಿಸಿದ್ದಾರೆ.

- ಪರಿಸರ ರಕ್ಷಣೆ ಹಾಗೂ ಅಭಿವೃದ್ಧಿಯ ನಡುವೆ ಸಮತೋಲನ ಅಗತ್ಯ
- ಮರಗಳ ತೆರವಿಗೆ ಸಾರ್ವಜನಿಕರ ಆಕ್ಷೇಪ: ಪ್ರತಿ ಮರಕ್ಕೆ ಹತ್ತು ಸಸಿ ನೆಡಲು ಆಗ್ರಹ

ಲೋಡ್ ಟೆಸ್ಟಿಂಗ್ ಪ್ರಕ್ರಿಯೆ ಮುಂದೂಡಿಕೆ

• ಬೆಂಗಳೂರು: ಪೀಣ್ಯ ಎಲಿವೇಟೆಡ್ ಫ್ಲೈಓವರ್‌ನ ಅಂತಿಮ ಹಂತದ ಲೋಡ್ ಟೆಸ್ಟಿಂಗ್ ಪ್ರಕ್ರಿಯೆ ಮುಂದೂಡಲಾಗಿದೆ ಎಂದು ಪೀಣ್ಯ ಸಂಚಾರ ಪೊಲೀಸರು ತಿಳಿಸಿದ್ದಾರೆ. ತುಮಕೂರು ರಸ್ತೆಯ ಪೀಣ್ಯ ಎಲಿವೇಟೆಡ್ ಫ್ಲೈಓವರ್‌ನ ಕೇಬಲ್ ದುರಸ್ತಿ ಕಾರ್ಯ ಯಶಸ್ವಿಯಾಗಿ ಮುಕ್ತಾಯಗೊಂಡಿದೆ. ಅಂತಿಮ ಹಂತದ ಲೋಡ್ ಟೆಸ್ಟಿಂಗ್ ಪ್ರಕ್ರಿಯೆಗೆ ಏಪ್ರಿಲ್ 13 ರಿಂದ 17 ರ ವರೆಗೆ ಸಂಪೂರ್ಣವಾಗಿ ಬಂದ್ ಮಾಡಲಾಗುವುದೆಂದು ಪೀಣ್ಯ ಸಂಚಾರ ಪೊಲೀಸರು ತಿಳಿಸಿದ್ದರು. ಆದರೆ ಕಾರಣಾಂತರಗಳಿಂದ ಉದ್ದೇಶಿತ ಅಂತಿಮ ಹಂತದ ಲೋಡ್ ಟೆಸ್ಟಿಂಗ್ ಪ್ರಕ್ರಿಯೆ ಮುಂದೂಡಿರುವುದರಿಂದ ಮೇಲ್ಸೇತುವೆ ಎಂದಿನಂತೆ ವಾಹನಗಳ ಸಂಚಾರಕ್ಕೆ ಮುಕ್ತವಾಗಿರಲಿದೆ ಎಂದು ಪೀಣ್ಯ ಸಂಚಾರ ಪೊಲೀಸರು ತಿಳಿಸಿದ್ದಾರೆ.

ದಯಾನಂದ ಸಾಗರ ಕಾಲೇಜಿಗೆ ಶೇ.98 ಫಲಿತಾಂಶ

• ಬೆಂಗಳೂರು: ಬೊಮ್ಮನಹಳ್ಳಿಯ ದಯಾನಂದ ಸಾಗರ ಕಾಲೇಜಿನ ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದಲ್ಲಿ ದಿವ್ಯಶ್ರೀ ಎಂ. ಶೇ. 98.3 ಫಲಿತಾಂಶ ಗಳಿಸುವ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ. ಇವರ ಪರಿಶ್ರಮ ಹಾಗೂ ಸಾಧನೆಗೆ ಬೊಮ್ಮನಹಳ್ಳಿ ಸಿ.ಎಂ.ಪುಟ್ಟಶೆಟ್ಟಿ ಮತ್ತು ಕುಟುಂಬದವರು ಹರ್ಷ ವ್ಯಕ್ತಪಡಿಸಿ, ಅಭಿನಂದನೆ ಸಲ್ಲಿಸಿದ್ದಾರೆ.

ಕೆಎಸ್‌ಆರ್‌ಟಿಸಿಗೆ ಮೂರು ರಾಷ್ಟ್ರ ಪ್ರಶಸ್ತಿ

• ಬೆಂಗಳೂರು: ಕೆಎಸ್‌ಆರ್‌ಟಿಸಿಗೆ ಮೂರು ರಾಷ್ಟ್ರಮಟ್ಟದ ಪ್ರಶಸ್ತಿ ಲಭಿಸಿದೆ. ಅತ್ಯುತ್ತಮ ಗ್ರಾಹಕ ಸ್ವಾಧೀನ ಮತ್ತು ಧಾರಣ ವರ್ಗದಲ್ಲಿ, ನಿಗಮದ ಬಸ್‌ಗಳ ಬ್ರ್ಯಾಂಡಿಂಗ್‌ಗೆ, ತಂತ್ರಜ್ಞಾನದ ಅತ್ಯುತ್ತಮ ಬಳಕೆ ವರ್ಗದಲ್ಲಿ ಅವತಾರ್ ಹಾಗೂ ಮಾನವ ಸಂಪನ್ಮೂಲ ಮತ್ತು ಆರೋಗ್ಯ ಉಪಕ್ರಮಗಳಿಗೆ ಪ್ರಶಸ್ತಿ ಲಭಿಸಿದೆ.

ಅವತಾರ್ ವ್ಯವಸ್ಥೆ ಮೂಲಕ ಆನ್‌ಲೈನ್ ಟಿಕೆಟ್ ಕಾಯ್ದಿರಿಸುವಿಕೆ, ನೈಜ-ಸಮಯ ಆಸನ ಮಾಹಿತಿ ಮತ್ತು ನಗದುರಹಿತ ಯುಪಿಐ ಪಾವತಿಗಳು ಸುಲಭವಾಗಿವೆ. ನಿಗಮದ ಅತ್ಯುತ್ತಮ ಮಾನವ ಸಂಪನ್ಮೂಲ ಮತ್ತು ಆರೋಗ್ಯ ಉಪಕ್ರಮಗಳಿಗೆ ಹಾಗೂ ನಿಗಮದ ಬಸ್ ಬ್ರ್ಯಾಂಡಿಂಗ್ ಅಂಬಾರಿ ಉತ್ಸವ, ಪಲ್ಲಕ್ಕಿ, ಐರಾವತ ಕ್ಲಬ್ ಕ್ಲಾಸ್ 2.0, ಅಶ್ವಮೇಧ ಬಸ್ಸುಗಳು ಪ್ರಯಾಣಿಕರಲ್ಲಿ ಹೆಚ್ಚು ಜನಮನ್ನಣೆ ಗಳಿಸಿದೆ ಎಂಬುದಾಗಿ



ಗುರುತಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಹೊಸದಿಲ್ಲಿಯಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಹುಲ್ಟ್ ಇಂಟರ್‌ನ್ಯಾಷನಲ್ ಬಿಸಿನೆಸ್ ಸ್ಕೂಲ್‌ನ ಮಾರ್ಕೆಟಿಂಗ್ ಲೀಡರ್ ನಿಧಿ ಎಸ್. ಮಿತ್ತಲ್ ರವರು ಪ್ರಶಸ್ತಿ ಪ್ರದಾನ ಮಾಡಿದರು. ನಿಗಮದ ಪರವಾಗಿ ಪುತ್ತೂರು ವಿಭಾಗ ವಿಭಾಗೀಯ ನಿಯಂತ್ರಣಾಧಿಕಾರಿ ಎಂ.ಪಿ. ಶ್ರೀಹರಿಬಾಬು ಹಾಗೂ ಹಾಸನ ವಿಭಾಗ ವಿಭಾಗೀಯ ನಿಯಂತ್ರಣಾಧಿಕಾರಿ ಎಸ್. ಎಸ್.ದಶರಥ್ ಪ್ರಶಸ್ತಿಯನ್ನು ಸ್ವೀಕರಿಸಿದರು.

ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಆಯ್ಕೆ

• ಬೆಂಗಳೂರು: ಕರ್ನಾಟಕಸಹಕಾರಿಗಳಮತ್ತು ಸಹಕಾರಿ ಸಂಸ್ಥೆಗಳ ಸಿಬ್ಬಂದಿ ಗೃಹ ನಿರ್ಮಾಣ



ಸಹಕಾರ ಸಂಘ ನಿಯಮಿತದ ಆಡಳಿತ ಮಂಡಳಿಯ ಚುನಾವಣೆಯು ಇತ್ತೀಚೆಗೆ ನಡೆದಿದೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. ಮಾ.28 ರಂದು ನಡೆದ ಚುನಾವಣೆಯಲ್ಲಿ ಆಡಳಿತ ಮಂಡಳಿಯ ನಿರ್ದೇಶಕರಾಗಿ ಎಂ.ಹೊನ್ನೇಗೌಡ, ಚೊಕ್ಕ ಬಸವನಗೌಡ, ನಾಗರಾಜ, ಪ್ರಕಾಶ್, ನರೇಂದ್ರ.ಎನ್.ಆರ್, ಪವನ್ ಕುಮಾರ್. ಎಂ.ಪಿ, ಸಚಿನ್ ಕುಮಾರ್ ಮತ್ತು ರಾಮಕೃಷ್ಣ ಸೇರಿಂದತೆ ಎಂಟು ಮಂದಿ ಬಹುಮತದೊಂದಿಗೆ ಆಯ್ಕೆಯಾಗಿದ್ದಾರೆ. ಉಮೇಶ್ ನಡುವಿನಹಳ್ಳಿ, ವರದರಾಜು, ರಕ್ಷಿತಾ.ಎಮ್.ಎಸ್ ಮತ್ತು ನಾಗರತ್ನಮ್ಮ ನಾಲ್ವರು ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ

ಏ. 9 ರಂದು ನಡೆದ ಸಂಘದ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯಲ್ಲಿ, ಎಂ.ಹೊನ್ನೇಗೌಡ ಅವರು ಅಧ್ಯಕ್ಷರಾಗಿ ಹಾಗೂ ವರದರಾಜು ಅವರು ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಿಳಿಸಿದ್ದಾರೆ. ಪದಾಧಿಕಾರಿಗಳು ಸಿಹಿ ಹಂಚಿ ಸಂಭ್ರಮಿಸಿದರು.

ಜೆಎಸ್ ಪದವಿ ಪೂರ್ವ ಕಾಲೇಜಿನ 45 ವಿದ್ಯಾರ್ಥಿಗಳಿಗೆ ರ‍್ಯಾಂಕ್: ಅಭಿನಂದನೆ

ಅಪೂರ್ವ ಸಾಧನೆಗೆ ಅಪಾರ ಮೆಚ್ಚುಗೆ

• ಕೆಂಗೇರಿ: ಜೆ.ಎಸ್.ಪದವಿ ಪೂರ್ವ ಕಾಲೇಜು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ 45 ವಿದ್ಯಾರ್ಥಿಗಳು ರಾಜ್ಯ ಮಟ್ಟದ ರ‍್ಯಾಂಕ್ ಪಡೆಯುವಲ್ಲಿ ಅಭೂತ ಪೂರ್ವ ಸಾಧನೆ ಮಾಡಿದ್ದಾರೆ.

ಮಲ್ಲತಹಳ್ಳಿಯಲ್ಲಿರುವ ಜೆ.ಎಸ್.ಪದವಿಪೂರ್ವ ಕಾಲೇಜು ಡಾ.ಜಯರಾಮ ಶೆಟ್ಟಿ ಅವರ ನೇತೃತ್ವದಲ್ಲಿ, ಈ ಕಾಲೇಜು 2025-26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.99.5ರಷ್ಟು ಫಲಿತಾಂಶದೊಂದಿಗೆ ರಾಜ್ಯಮಟ್ಟದಲ್ಲಿ 45 ವಿದ್ಯಾರ್ಥಿಗಳು ರ‍್ಯಾಂಕ್ ಪಡೆದಿದೆ. ವಿಜ್ಞಾನ ಮತ್ತು ವಾಣಿಜ್ಯ ವಿಭಾಗದಲ್ಲಿ ಒಟ್ಟು 298 ವಿದ್ಯಾರ್ಥಿಗಳು ಶೇ.85ಕ್ಕಿಂತ ಹೆಚ್ಚು ಅಂಕಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. 105 ವಿದ್ಯಾರ್ಥಿಗಳು ಹಲವು ವಿಷಯಗಳಲ್ಲಿ 100 ಕ್ಕೆ 100



ಅಂಕಗಳನ್ನು ಪಡೆದು ಕಾಲೇಜಿಗೆ ಮತ್ತು ಪೋಷಕರಿಗೆ ಕೀರ್ತಿ ತಂದಿದ್ದಾರೆ.

ಪ್ರಥಮ ಪಿಯುಸಿಗೆ ದಾಖಲಾದ ವಿದ್ಯಾರ್ಥಿಗಳಲ್ಲಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 45 -50 ಅಂಕ ಪಡೆದು ಉತ್ತೀರ್ಣರಾಗಿ, ಜೆ.ಎಸ್.ಪದವಿಪೂರ್ವ ಕಾಲೇಜಿಗೆ ಪ್ರಥಮ ಪಿಯುಸಿಗೆ ದಾಖಲಾಗಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.95 ರಷ್ಟು ಅಂಕಗಳಿಸಿ ರ‍್ಯಾಂಕ್ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಜೆ.ಎಸ್.ಕಾಲೇಜಿನ ಸಂಸ್ಥಾಪಕ ಅಧ್ಯಕ್ಷ ಡಾ.ಜಯರಾಮಶೆಟ್ಟಿ ಮಾತನಾಡಿ, ಕಾಲೇಜಿನಲ್ಲಿ ಶಿಕ್ಷಣ, ಸಮಯ ಮತ್ತು ಶಿಸ್ತಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ನಮ್ಮ ಕಾಲೇಜಿನಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವುದರ ಜತೆಗೆ ಸಂಸ್ಕಾರ ಕಲಿಸಿ ಉತ್ತಮ ಪ್ರಜೆಗಳಾಗುವಂತೆ ಪ್ರೇರಣೆ ನೀಡಿದ ಪರಿಣಾಮದಿಂದಾಗಿ ಈ ಸಾಧನೆ ಮಾಡಲು ಸಾಧ್ಯವಾಗಿದೆ ಎಂದು ತಿಳಿಸಿದರು. ಜೆ.ಎಸ್.ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ವಿಜಯಲಕ್ಷ್ಮಿ ಎನ್.ಕೆ., ಕಾರ್ಯದರ್ಶಿ ನಿದೀಶ್ ಜೆ. ಶೆಟ್ಟಿ, ಪ್ರಾಧ್ಯಾಪಕರು, ಪೋಷಕರು ಹಾಗೂ ಆಡಳಿತ ಮಂಡಳಿ ಉಪಸ್ಥಿತರಿದ್ದರು.

ಇಂದು ಸ್ಮಿತಾ ರಾಮಣ್ಣ ರಂಗಪ್ರವೇಶ

• ಬೆಂಗಳೂರು: ಖ್ಯಾತ ನೃತ್ಯ ಗುರು ಭಾನು ಪ್ರಿಯಾ ರಾಕೇಶ್ ಅವರ ಶಿಷ್ಯೆ ಸ್ಮಿತಾ ರಾಮಣ್ಣ ಅವರು ಮಾರ್ಗಂ ಸಂಪ್ರದಾಯದಲ್ಲಿ ಏ.12ರ ಸಂಜೆ 5.30 ಕ್ಕೆ ಕೋಣನಕುಂಟೆಯ ಮೀನಾಕ್ಷಿ ರಂಗಮಂಚ ಆಡಿಟೋರಿಯಂನಲ್ಲಿ ರಂಗಪ್ರವೇಶ ಮಾಡಲಿದ್ದಾರೆ.



ಭರತನಾಟ್ಯ ಕಲಾವಿದೆಯರಲ್ಲಿ ತಮ್ಮದೇ ಆದ ಅಸ್ಮಿತೆಯನ್ನು ಸಾಬೀತುಗೊಳಿಸಿರುವ ನೃತ್ಯ ಕಲಾವಿದೆ-ಆಚಾರ್ಯ ವಿದುಷಿ. ಭಾನು ಪ್ರಿಯಾ ರಾಕೇಶ್ ಇವರಲ್ಲಿ ತರಬೇತಿ ಪಡೆಯುತ್ತಿರುವ ಸ್ಮಿತಾ ರಾಮಣ್ಣ ಅವರು, ಕಳೆದ ಕೆಲವು ವರ್ಷಗಳಿಂದ ಪರಿಣತ ನಾಟ್ಯ ಶಿಕ್ಷಣ ಪಡೆಯುತ್ತಾ ಕರ್ನಾಟಕ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತವನ್ನೂ ಅಭ್ಯಸಿಸುತ್ತಿದ್ದಾರೆ. ಸ್ಮಿತಾ ಅವರು ದೇಶದಾದ್ಯಂತವಲ್ಲದೆ, ವಿದೇಶದಲ್ಲೂ ಅನೇಕ ನೃತ್ಯ ಪ್ರದರ್ಶನಗಳನ್ನು ನೀಡಿದ್ದು, ಇದುವರೆಗೂ ಒಟ್ಟು 250ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಿದ್ದಾರೆ. ಹೈದರಾಬಾದ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ತೆಲುಗು ಮತ್ತು ಇಂಗ್ಲೀಷ್ ಭಾಷೆಯ ಅನೇಕ ನಾಟಕಗಳಲ್ಲಿ ಪಾಲ್ಗೊಂಡಿರುವ ಇವರು, ಕೆಲವು ಕಿರುಚಿತ್ರಗಳಲ್ಲೂ ಅಭಿನಯಿಸಿದ್ದಾರೆ.

ಏ.15ರಂದು ಸಾಂಸ್ಕೃತಿಕ ಕಾರ್ಯಕ್ರಮ

• ಬೆಂಗಳೂರು: ರಂಗಚಂದಿರ ಟ್ರಸ್ಟ್ ನಿಂದ ಏ.15 ರಂದು ಸಂಜೆ 5 ಗಂಟೆಗೆ ನಗರದ ರವೀಂದ್ರ ಕಲಾಕ್ಷೇತ್ರ ಆವರಣದ ನಯನ ರಂಗಮಂದಿರದಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಖ್ಯಾತ ಸಾಹಿತಿ ಎಸ್.ಜಿ. ಸಿದ್ದರಾಮಯ್ಯ ಅವರ ಮಹಾಮನೆ ನಾಟಕ ಕೃತಿಯ ಪುಸ್ತಕ ಬಿಡುಗಡೆ, ರಂಗಗೀತೆಗಳ ಗಾಯನ ಹಾಗೂ ರಂಗಗೌರವ ಸಮಾರಂಭ ಒಂದೇ ವೇದಿಕೆಯಲ್ಲಿ ಜರುಗಲಿದೆ. ರಂಗಾಸಕ್ತರಿಗೆ ಅಪರೂಪದ ಸಾಂಸ್ಕೃತಿಕ ಸಂಭ್ರಮ ಒದಗಿಸಲಿದೆ. ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಪ್ರೊ. ಶಿವರಾಮಯ್ಯ ಅವರು ಮಹಾಮನೆ ಕೃತಿಯನ್ನು ಬಿಡುಗಡೆಗೊಳಿಸಲಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಡಾ. ಕೆ.ವಿ. ನಾಗರಾಜಮೂರ್ತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ರಂಗ ನಿರ್ದೇಶಕ ಮತ್ತು ನಾಟಕಕಾರ ಡಾ. ಬೇಲೂರು ರಘುನಂದನ್ ಕೃತಿಯ ಕುರಿತು ವಿಮರ್ಶಾತ್ಮಕವಾಗಿ ಮಾತನಾಡಲಿದ್ದಾರೆ.

ಕಾರ್ಯಕ್ರಮಕ್ಕೆ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ. ಪ್ರಕಾಶಮೂರ್ತಿ, ಹಿರಿಯ ಪತ್ರಕರ್ತ ಜಿ.ಎನ್. ಮೋಹನ್, ರಂಗಚಂದಿರ ಟ್ರಸ್ಟ್ ಗೌರವಾಧ್ಯಕ್ಷ ರಾಧಾಕೃಷ್ಣ ಹೆಗಡೆ ಹಾಗೂ ಚಾರುಮತಿ ಪ್ರಕಾಶನದ ಬಿ.ಎಸ್. ವಿದ್ಯಾರಣ್ಯ ಹಾಗೂ ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ.

ಇಗ್ಗಲೂರು ಗ್ರಾಮದ ಬಳಿ 129ನೇ ದಿ ಗ್ರೇಟ್ ಸ್ಲೀಪ್ ಸ್ಟೋರ್ ಆರಂಭ

• ಬೆಂಗಳೂರು: ದೇಶದ ಪ್ರಮುಖ ಸ್ಪ್ರಿಂಗ್ ಮ್ಯಾಟ್ರೆಸ್ ಬ್ರ್ಯಾಂಡ್‌ಗಳಲ್ಲಿ ಒಂದಾದ ಪೆಪ್ಸ್ ಇಂಡಸ್ಟ್ರೀಸ್ ಪ್ರೈವೇಟ್ ಲಿ., ಸಿಲಿಕಾನ್ ಸಿಟಿಯಲ್ಲಿ ತನ್ನ ವಿಸ್ತರಣೆಯನ್ನು ಮುಂದುವರಿಸಿದ್ದು, ಚಂದಾಪುರ-ಆನೇಕಲ್ ಮುಖ್ಯ ರಸ್ತೆಯ ಇಗ್ಗಲೂರು ಬಳಿ ತನ್ನ 129ನೇ ದಿ ಗ್ರೇಟ್ ಸ್ಲೀಪ್ ಸ್ಟೋರ್ ಅನ್ನು ಆರಂಭಿಸಿದೆ.

ಕಾರ್ಯಕ್ರಮದಲ್ಲಿ ಪೆಪ್ಸ್ ಮ್ಯಾನೇಜಿಂಗ್ ಡೈರೆಕ್ಟರ್ ಜಿ. ಶಂಕರ್ ರಾಮ್ ಮಾತನಾಡಿ, ಪೆಪ್ಸ್ ತನ್ನ ವೈಜ್ಞಾನಿಕ ವಿನ್ಯಾಸದ ಸ್ಪ್ರಿಂಗ್ ಮ್ಯಾಟ್ರೆಸ್‌ಗಳಿಗೆ ಚಿರಪರಿಚಿತವಾಗಿದೆ. ಬೆಂಗಳೂರಿನ ಜನರ ಜೀವನಶೈಲಿ ವೇಗವಾಗಿ ಬದಲಾಗುತ್ತಿದೆ. ಗುಣಮಟ್ಟದ ನಿದ್ರೆಯ ಅವಶ್ಯಕತೆ ಹೆಚ್ಚಾಗಿದೆ. ಗ್ರಾಹಕರು ನೇರವಾಗಿ ಮ್ಯಾಟ್ರೆಸ್ ಗಳನ್ನು ಪರೀಕ್ಷಿಸಿ, ತಮ್ಮ ದೇಹದ ಅಗತ್ಯಕ್ಕೆ ತಕ್ಕಂತೆ ಸರಿಯಾದ ಆಯ್ಕೆ ಮಾಡಲು ಈ ಮಳಿಗೆಯಲ್ಲಿ ಪರಿಣಿತರ ಮಾರ್ಗದರ್ಶನ ಸಿಗಲಿದೆ



ಎಂದು ತಿಳಿಸಿದರು.

ಮಳಿಗೆಯಲ್ಲಿ ಪೆಪ್ಸ್‌ನ ಪ್ರಸಿದ್ಧ ಸ್ಪ್ರಿಂಗ್ ಮ್ಯಾಟ್ರೆಸ್‌ಗಳು ಮಾತ್ರವಲ್ಲದೆ, ಕಾಯಿರ್ ಮತ್ತು ಫೋಮ್ ಮ್ಯಾಟ್ರೆಸ್‌ಗಳ ದೊಡ್ಡ ಶ್ರೇಣಿಯೇ ಲಭ್ಯವಿದೆ. 6 ಸಾವಿರದಿಂದ 1.5 ಲಕ್ಷದವರೆಗೆ ವಿವಿಧ ಬೆಲೆಯ ಉತ್ಪನ್ನಗಳಿವೆ. ಕಾರ್ಯಕ್ರಮದಲ್ಲಿ ಮಾಜಿ ಕೇಂದ್ರ ಸಚಿವ ಎ. ನಾರಾಯಣಸ್ವಾಮಿ, ಚಲನಚಿತ್ರ ನಿರ್ಮಾಪಕ ಹಾಗೂ ಕೆಪಿಸಿಸಿ ಸದಸ್ಯ ಉಮಾಪತಿ ಶ್ರೀನಿವಾಸ್‌ಗೌಡ ಮತ್ತು ಆನೇಕಲ್ ಕ್ಷೇತ್ರದ ಶಾಸಕ ಬಿ. ಶಿವಣ್ಣ ಸೇರಿದಂತೆ ಇತರರಿದ್ದರು.

ಲಿಂಗತ್ವ ಅಲ್ಪಸಂಖ್ಯಾತರ ಹಕ್ಕು ರಕ್ಷಣೆಗೆ ಆಗ್ರಹಿಸಿ ಪ್ರತಿಭಟನೆ

• ಬೆಂಗಳೂರು: ಕೇಂದ್ರ ಸರ್ಕಾರ ಜಾರಿಗೊಳಿಸಲು ಮುಂದಾಗಿರುವ ಲಿಂಗತ್ವ ಅಲ್ಪಸಂಖ್ಯಾತರ (ಹಕ್ಕುಗಳ ರಕ್ಷಣೆ) ತಿದ್ದುಪಡಿ ಮಸೂದೆ-2026 ರದ್ದುಪಡಿಸಿ ಸಮಾನತೆ ಕಾಪಾಡಿ, ಮಾನವಹಕ್ಕನ್ನು ಗೌರವಿಸುವ ನೂತನ ಕಾಯ್ದೆ ಜಾರಿಗೊಳಿಸುವಂತೆ ರಾಷ್ಟ್ರೀಯ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಒಕ್ಕೂಟ ಒತ್ತಾಯಿಸಿದೆ.

ಒಕ್ಕೂಟದ ನೇತೃತ್ವದಲ್ಲಿ ಲಿಂಗತ್ವ ಅಲ್ಪಸಂಖ್ಯಾತರು ನಗರದ ಫ್ರೀಡಂಪಾರ್ಕ್‌ನಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಲಿಂಗತ್ವ ಅಲ್ಪಸಂಖ್ಯಾತ ಹೋರಾಟಗಾರ್ತಿ ಮಂಜಮ್ಮ ಜೋಗತಿ ಮಾತನಾಡಿ, ತಿದ್ದುಪಡಿ ಮಸೂದೆ ಪ್ರಕಾರ ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಯನ್ನು ಕಿನ್ನರ, ಅರವಾಣಿ, ಜೋಗತ ಎಂಬ ಸಾಂಸ್ಕೃತಿಕ ಗುರುತುಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ. ಈ ಮೂಲಕ ಲಿಂಗತ್ವ ಅಲ್ಪಸಂಖ್ಯಾತರ ಸ್ವಯಂ ಗುರುತಿಸಿಕೊಳ್ಳುವ ಹಕ್ಕುಗಳನ್ನು ಕಸಿದುಕೊಳ್ಳಲಾಗುತ್ತಿದೆ. ಅಲ್ಲದೇ ಸಂವಿಧಾನಾತ್ಮಕ ಮೂಲ ಹಕ್ಕುಗಳ ಹರಣವಾಗಿದೆ. ಹಾಗಾಗಿ ಈ ತಿದ್ದುಪಡಿ ಕಾಯ್ದೆಯನ್ನು ಕೂಡಲೇ



ಹಿಂಪಡೆಯಬೇಕು. ಸಮುದಾಯಕ್ಕೆ ಉದ್ಯೋಗ, ಶಿಕ್ಷಣ, ಆರೋಗ್ಯ, ಭದ್ರತೆ ಜೊತೆಗೆ ಸಮಾನತೆಯನ್ನು ಕಾಪಾಡುವ ಹೊಸ ಕಾಯ್ದೆಯನ್ನು ರೂಪಿಸಬೇಕು ಎಂದು ಆಗ್ರಹಿಸಿದರು.

ಸಮುದಾಯದ ಪ್ರತಿನಿಧಿಗಳೊಂದಿಗೆ ಯಾವುದೇ ಚರ್ಚೆ ಇಲ್ಲದೇ ಸರ್ವಾಧಿಕಾರಿ ಧೋರಣೆ ಮೂಲಕ ಕೇಂದ್ರ ಸರ್ಕಾರ ತಿದ್ದುಪಡಿ ಕಾಯ್ದೆ ಜಾರಿಗೊಳಿಸಲು ಮುಂದಾಗಿದೆ. ಇದು ಲಿಂಗತ್ವ ಅಲ್ಪಸಂಖ್ಯಾತರ ರಕ್ಷಣೆ ಬದಲಾಗಿ ಸಂವಿಧಾನಾತ್ಮಕವಾದ ಖಾಸಗಿ ಹಕ್ಕುಗಳನ್ನು ಉಲ್ಲಂಘಿಸುವ ವಿರೋಧಿ ಕಾಯ್ದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜಿಕೆವಿಕೆಯಲ್ಲಿ ರೈತರ ಸಂತೆ

• ಯಲಹಂಕ: ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಆವರಣ, ಜಿಕೆವಿಕೆಯಲ್ಲಿ ನಡೆದ ಯುಎಚ್ಎಸ್ ಸಂತೆಯಲ್ಲಿ ರೈತರು, ಉದ್ದಿಮೆದಾರರು, ಮಹಿಳೆಯರು, ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.



ನಗರದ ಸುತ್ತಮುತ್ತಲ ಜಿಲ್ಲೆಗಳ ರೈತರು ಹಾಗೂ ರೈತ ಉತ್ಪಾದಕ ಸಂಘಗಳು ಹಾಗೂ ಹೊಸ ಹೊಸ ಉದ್ದಿಮೆದಾರರು ತಾವು ಬೆಳೆದ ತಾಜಾ ತರಕಾರಿ, ಹಣ್ಣು, ಹೂ, ಮೌಲ್ಯ ವರ್ಧಿತ ಪದಾರ್ಥಗಳಾದ ವಿವಿಧ ಸಾಂಬಾರು ಪುಡಿಗಳು, ಶುದ್ಧ ನಾಟಿ ಬೆಣ್ಣೆ, ಕೋಲ್ಡ್ ಪ್ರೆಸ್ಡ್ ಆಯಿಲ್, ಗೋವು ಉತ್ಪನ್ನಗಳು, ತರಕಾರಿ ಮತ್ತು ಹೂವಿನ ಬೀಜಗಳು ಹಾಗೂ ಇನ್ನಿತರೆ ಮೌಲ್ಯ ವರ್ಧಿತ ಪದಾರ್ಥಗಳನ್ನು ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡಲು 52 ಮಳಿಗೆಗಳಲ್ಲಿ ಅವಕಾಶವನ್ನು ಕಲ್ಪಿಸಲಾಗಿತ್ತು. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಮೆಗಾ ನರ್ಸರಿಯಲ್ಲಿ ಅಭಿವೃದ್ಧಿ ಪಡಿಸಿದ ಅಲಂಕಾರಿಕ ಸಸಿಗಳು, ಹಣ್ಣಿನ ಕಸಿ ಸಸಿಗಳು, ಪ್ಲಾಂಟೇಶನ್, ಔಷಧಿಯ ಮತ್ತು ಸುಗಂಧಿ ಸಸಿಗಳನ್ನು ಮಾರಾಟ ಮಾಡಲಾಗಿದ್ದು, ನಗರವಾಸಿಗಳಿಗೆ ಹಾಗೂ ಇತರ ಸಾರ್ವಜನಿಕರಿಗೆ ತೋಟಗಾರಿಕೆ ಬೆಳೆಗಳ ತಾಂತ್ರಿಕತೆ ಸಮಗ್ರ ಗಾರ್ಡನಿಂಗ್ ಮಾಹಿತಿ ಹಾಗೂ ಮೌಲ್ಯ ವರ್ಧಿತ ಪದಾರ್ಥಗಳ ಬಗ್ಗೆ ಮಾಹಿತಿಯನ್ನು ನೀಡಲಾಯಿತು.

ಈ ಸಂತೆಯಲ್ಲಿ ಐದು ಸಾವಿರಕ್ಕೂ ಹೆಚ್ಚು ಗ್ರಾಹಕರು ಭಾಗವಹಿಸಿದ್ದರು. ರೈತರು ಮತ್ತು ಉದ್ದಿಮೆದಾರರಿಗೆ ಸುಮಾರು 5 ರಿಂದ 6 ಲಕ್ಷ ರೂ.ಗಳ ವಹಿವಾಟಾಗಿದೆ ಎಂದು ವಿಸ್ತರಣಾ ನಿರ್ದೇಶಕ ಡಾ.ಎಸ್.ಎಲ್.ಜಗದೀಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಇಂದು ನಗರದಲ್ಲಿ...

- ವಿಶ್ವ ಹೋಮಿಯೋಪತಿ ದಿನಾಚರಣೆ, ಸ್ಥಳ : ಎ.ವಿ. ರಾಮರಾವ್ ಸಭಾಂಗಣ, ಬಿಐ ಎಸ್ಸಿ ಮಲ್ಲೇಶ್ವರ, ಬೆಳಗ್ಗೆ 8.30
- ಡಾ. ರಾಜ್‌ಕುಮಾರ್ ಅವರ ಕಲಾ ಬದುಕಿನ ಛಾಯಾಚಿತ್ರಗಳ ಗ್ಯಾಲರಿ ಉದ್ಘಾಟನೆ ಸ್ಥಳ : ಬ್ಯಾಂಕ್ವೆಟ್ ಸಭಾಂಗಣ, ಬೆಳಗ್ಗೆ 11
- ಸ್ಟಾರ್ಟ್‌ಕ್ರಿಕ್ ಸಂಸ್ಥೆಯಿಂದ ಯಶಸ್ವಿನಿ ವಿಜಯೋತ್ಸವ-2026, ಸ್ಥಳ: ಡಾ. ಬಾಬು ಜಗಜೀವನ್ ರಾಂ ಸಭಾಂಗಣ, ಸುಮನಹಳ್ಳಿ ಜಂಕ್ಷನ್, ಮಧ್ಯಾಹ್ನ 3
- 33ನೇ ರಾಮನವಮಿ ಸಂಗೀತೋತ್ಸವ, ಸ್ಥಳ: ವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 5

ಹೈದರಾಬಾದ್ ವಿರುದ್ಧ 6 ವಿಕೆಟ್‌ಗಳ ಜಯ | ಅಭಿಷೇಕ್ ಹೋರಾಟ ವ್ಯರ್ಥ

ಪಂಜಾಬ್‌ಗೆ ಗೆಲುವಿನ ಶ್ರೇಯಸ್ಸು



• **ಚಂಡೀಗಢ:** ಗೆಲುವಿನ ಹಾದಿ ಹಿಡಿದಿರುವ ಪಂಜಾಬ್ ಕಿಂಗ್ಸ್ ತಂಡವು ಕಳೆದ ಬಾರಿಯಂತೆ ಈ ಬಾರಿಯೂ ಅತ್ಯುತ್ತಮ ಪ್ರದರ್ಶನ ನೀಡುತ್ತಿದ್ದು, ಹೈದರಾಬಾದ್ ತಂಡದ ವಿರುದ್ಧ ಜಯಭೇರಿ ಬಾರಿಸಿದೆ.

ಶ್ರೇಯಸ್ ಅಯ್ಯರ್ ಅವರ ನಾಯಕತ್ವ ಮತ್ತು ಬ್ಯಾಟಿಂಗ್ ಜೊತೆಗೆ ಪಂಜಾಬ್ ತಂಡದ ಆರಂಭಿಕರ ಆರ್ಭಟದ ಮುಂದೆ ಹೈದರಾಬಾದ್ ಆಟ ನಡೆಯಲೇ ಇಲ್ಲ. ಮೂರು ಪಂದ್ಯಗಳಲ್ಲಿ ಮೊದಲೇ ಎರಡು ಗೆಲುವು ಮತ್ತು ಒಂದು ರದ್ದಿನೊಂದಿಗೆ ಇಳಿದಿದ್ದ ಪಂಜಾಬ್ ಬೌಲಿಂಗ್ ಆಯ್ಕೆ ಮಾಡಿಕೊಂಡಿತ್ತು. ಹೈದರಾಬಾದ್ ಸ್ಫೋಟಕ ಆರಂಭ ಪಡೆದ ನಂತರ ಕುಸಿತ ಕಂಡು 20 ಓವರ್‌ಗಳಲ್ಲಿ 219 ರನ್ ಗಳಿಸಿತು. ಆರು ವಿಕೆಟ್ ಕಳೆದುಕೊಂಡಿತು. ಗುರಿ ಬೆನ್ನತ್ತಿದ ಪಂಜಾಬ್ ಲಯದಲ್ಲೇ ಸಾಗಿ 18.5 ಓವರ್‌ಗಳಲ್ಲಿ ಪಂದ್ಯ ಮುಗಿಸಿಕೊಂಡು ಬಂದಿತು. ಮೂರನೇ ಜಯ ಸಾಧಿಸಿ ಅಗ್ರಸ್ಥಾನದ ಪೈಪೋಟಿಗೆ ಅಣಿಯಾಯಿತು.

ಆರಂಭಿಕರು v/s ಆರಂಭಿಕರು ಪಂದ್ಯದಲ್ಲಿ ಬ್ಯಾಟಿಗರೇ ಪಾರುಪತ್ಯ ಸಾಧಿಸಿದರು. ಅಭಿಷೇಕ್ ಶರ್ಮಾ ತಮ್ಮ ಅಸಲು ಆಟದೊಂದಿಗೆ ಪಂದ್ಯದ ಉತ್ತಮ ಬ್ಯಾಟರ್ ಅನ್ನಿಸಿಕೊಂಡರು. ಶ್ರೇಯಸ್ ಅಯ್ಯರ್ ಅಜೇಯ 69 ರನ್ ಬಾರಿಸಿ ಪಂದ್ಯ ಗೆಲ್ಲಿಸಿದವರಾದರು. ಹೈದರಾಬಾದ್‌ನ ಟ್ರಾವಿಸ್ ಹೆಡ್, ಕ್ಲಾಸೆನ್ ಮತ್ತು ಪಂಜಾಬ್ ತಂಡದ ಪ್ರಿಯಾಂಶ್ ಆರ್ಯ, ಪ್ರಭುಸಿಮ್ರನ್ ಸಿಂಗ್ ಕೂಡ ಅರ್ಧಶತಕ ಬಾರಿಸಿ ಗೆಲುವಿನ ರೂವಾರಿ ಎನಿಸಿಕೊಂಡರು. ಶಿವಾಂಗ್ ಕುಮಾರ್ 3 ವಿಕೆಟ್ ಪಡೆದು ಬೆಸ್ಟ್ ಬೌಲರ್ ಅನಿಸಿಕೊಂಡರು.

ಅಭಿಷೇಕ್ ಅಬ್ಬರ: ಮೊದಲು ಬ್ಯಾಟಿಂಗ್ ಮಾಡಿದ ಹೈದರಾಬಾದ್‌ಗೆ ಜೋಶ್. ಹೆಡ್ ಹಾಗೂ ಅಭಿಷೇಕ್ ಶರ್ಮಾ ತಮ್ಮ ಸ್ವಾಭಾವಿಕ ಲಯಕ್ಕೆ ಬಂದ ಖುಷಿ. ಶರ್ಮಾ ಸಿಕ್ಸರ್‌ಗಳ ಸುರಿಮಳೆಗೈದರು. ಹೆಡ್ ಬೌಂಡರಿಗಳ ಹೊಳೆ ಹರಿಸಿದರು. ಇದರೊಂದಿಗೆ ಪವರ್‌ಪ್ಲೇನಲ್ಲೇ ಪಂಜಾಬ್ 105 ರನ್ ಬಾರಿಸಿತು. ಅಭಿಷೇಕ್ ಅರ್ಧಶತಕ ಪೂರೈಸಿಕೊಂಡು ಅದೇ ಸ್ಫೋಟಕ ಬ್ಯಾಟಿಂಗ್ ಮುಂದುವರಿಸಿದರು. ಇತ್ತ ಹೆಡ್ ಕೂಡ ಬೌಂಡರಿಗಳೊಂದಿಗೆ ಮಿಂಚಿದರು. ಹೈದರಾಬಾದ್ ರನ್‌ರೇಟ್ 15ರ ಆಸುಪಾಸು. ನಿರೀಕ್ಷಿತ ಸ್ಕೋರ್ 300ಕ್ಕಿತ್ತು.

ಅಯ್ಯರ್ ಆರ್ಭಟ

ಪಂಜಾಬ್ ಪವರ್‌ಪ್ಲೇನಲ್ಲಿ 93 ರನ್ ಗಳಿಸಿತ್ತು. ವಿಕೆಟ್ ಕಳೆದುಕೊಂಡ ನಂತರ ಬರುವಿಸಿ ಬ್ಯಾಟಿಂಗ್ ಶುರು ಮಾಡಿದ ನಾಯಕ ಶ್ರೇಯಸ್ ಅಯ್ಯರ್ ಕ್ರಮೇಣವಾಗಿ ಹೈದರಾಬಾದ್ ಪಡೆಯಿಂದ ಗೆಲುವು ಕಸಿದರು. 5 ಬೌಂಡರಿ ಮತ್ತು 5 ಸಿಕ್ಸರ್‌ಗಳನ್ನು ಬಾರಿಸಿ ಅರ್ಧ ಶತಕ ಬಾರಿಸಿದರು. ಮಧ್ಯಮ ಓವರ್‌ಗಳಲ್ಲಿ ಪಂಜಾಬ್ 104 ರನ್ ಗಳಿಸಿತು. ಶ್ರೇಯಸ್ ಅಯ್ಯರ್ ಕೊನೆಯ ಬಾಲ್‌ವರೆಗೂ ನಿಂತು ಪಂದ್ಯ ಗೆಲ್ಲಿಸಿದರು. ಒಟ್ಟು 69 ರನ್ ಬಾರಿಸಿದ ಅವರು ಗೆಲುವಿನ ರೂವಾರಿ ಅನ್ನಿಸಿಕೊಂಡರು.

ಪಂಜಾಬ್‌ಗೆ ಸರಳ ಕೆಲಸ

ದೊಡ್ಡ ಗುರಿ ಪಂಜಾಬ್‌ಗೆ ಕಾಟ ನೀಡಲೇ ಇಲ್ಲ. ಆರಂಭಿಕರಾದ ಪ್ರಭುಸಿಮ್ರನ್ ಹಾಗೂ ಪ್ರಿಯಾಂಶ್ ಆರ್ಯ ಕೂಡ ಅಷ್ಟೇ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಮೊದಲಿನಿಂದಲೂ ತಂಡವನ್ನು ದಂಡಿಸಿದರು. ಸಿಕ್ಸರ್‌ಗಳ ಬೆಟ್ಟ ಕಟ್ಟಿದ ಪ್ರಿಯಾಂಶ್ ಆರ್ಯ 20 ಬಾಲ್ ಮಾತ್ರದಲ್ಲೇ 57 ರನ್ ಚಚ್ಚಿ ವಿಕೆಟ್ ಒಪ್ಪಿಸಿದರು. ಇತ್ತ ಪ್ರಭುಸಿಮ್ರನ್ ಕೂಡ ಸ್ಫೋಟಕ ಬ್ಯಾಟಿಂಗ್ ಮಾಡಿ 25 ಬಾಲ್‌ಗಳಲ್ಲಿ 51 ರನ್ ಗಳಿಸಿ ವಿಕೆಟ್ ಕೊಟ್ಟರು. ಕೂಪರ್ ಕೊನೊಲಿ 11 ರನ್‌ಗೆ ಔಟಾದಮೇಲೆ ತಂಡ ಸಂಕಷ್ಟ ಎದುರಿಸಿತ್ತು. ಅಲ್ಲಿ ಬಂದವರೆ ಶ್ರೇಯಸ್ ಅಯ್ಯರ್.

ಶ್ರೇಯಸ್ ಅಯ್ಯರ್ ಮಾಸ್ಟರ್ ಪ್ಲಾನ್

ನಾಗಾಲೋಟದಲ್ಲಿದ್ದ ಹೈದರಾಬಾದ್ ಕಡಿವಾಣಕ್ಕೆ ಶ್ರೇಯಸ್ ಅಯ್ಯರ್ ಭಾರೀ ಮಾಸ್ಟರ್ ಪ್ಲಾನ್ ಮಾಡಿ ಯಶಸ್ವಿಯಾದರು. ದಂಡಿಸಿಕೊಂಡಿದ್ದ ಪ್ರಮುಖ ಬೌಲರ್‌ಗಳ ಬದಲಾಗಿ ಪಾರ್ಟ್‌ಟೈಮ್ ಬಾಲರ್ ಶಶಾಂಕ್ ಸಿಂಗ್ ಅವರನ್ನು ಕಣಕ್ಕಿಳಿಸಿದರು. ಮೊದಲನೇ ಓವರ್‌ನಲ್ಲಿ ದಂಡಿಸಿಕೊಂಡರೂ ತಮ್ಮ ಎರಡನೇ ಓವರ್‌ನಲ್ಲಿ ಅವರು ಹೆಡ್ ವಿಕೆಟ್ ಪಡೆದರು. ಅಷ್ಟಕ್ಕೆ ನಿಲ್ಲದೆ 264 ಸ್ಟ್ರೈಕ್ ರೇಟ್‌ನಲ್ಲಿ ಬ್ಯಾಟಿಂಗ್ ಮಾಡುತ್ತಿದ್ದ ಅಭಿ ಅವರಿಗೂ ಪೆವಿಲಿಯನ್ ದಾರಿ ತೋರಿದರು. ಪಂದ್ಯದ ಗತಿಯೇ ಬದಲಾಯಿತು. ಆರಂಭಿಕ ಓವರ್‌ಗಳಲ್ಲಿ 105 ರನ್ ಬಾರಿಸಿದ್ದ ಹೈದರಾಬಾದ್ ಮಧ್ಯಮ ಓವರ್‌ಗಳಲ್ಲಿ 77 ರನ್ ಮಾತ್ರ ಗಳಿಸಿತು. ಅಂತಿಮ ಓವರ್‌ಗಳಲ್ಲಿ 26 ರನ್ ಮಾತ್ರ ಗಳಿಸಿತು.



ಸಂಕ್ಷಿಪ್ತ ಸ್ಕೋರ್

- ಹೈದರಾಬಾದ್: 20 ಓವರ್‌ಗಳಲ್ಲಿ 219/6; ಅಭಿಷೇಕ್ 74, ಕ್ಲಾಸೆನ್ 39, ಶಶಾಂಕ್ 20/2
- ಪಂಜಾಬ್: 18.5 ಓವರ್‌ಗಳಲ್ಲಿ 223/4; ಶ್ರೇಯಸ್ 69★, ಪ್ರಿಯಾಂಶ್ 57, ಪ್ರಭುಸಿಮ್ರನ್ 51; ಶಿವಾಂಗ್ 33/3

ಮುಂಬೈ ವಿರುದ್ಧ ಪಾಟಿದಾರ ಬಣ ಪಂದ್ಯ

ಆರ್‌ಸಿಬಿಗೆ ಜಯದ ಹಂಬಲ



ಪಂದ್ಯಗಳ ವಿವರ

ಗುಜರಾತ್-ಲಖನೌ
ಯಾವಾಗ: ಭಾನುವಾರ
ಎಲ್ಲಿ: ಏಕಾನಾ ಕ್ರೀಡಾಂಗಣ, ಲಖನೌ
ಸಮಯ: ಮಧ್ಯಾಹ್ನ 3:30

ಆರ್‌ಸಿಬಿ-ಮುಂಬೈ
ಯಾವಾಗ: ಭಾನುವಾರ
ಎಲ್ಲಿ: ವಾಂಖೆಡೆ , ಮುಂಬೈ
ಸಮಯ: ಸಂಜೆ 7:30
(2 ಪಂದ್ಯಗಳ ಪ್ರಸಾರ; ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

• **ಮುಂಬೈ:** ವಾರಾಂತ್ಯದ ಸೂಪರ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಮುಂಬೈ ಇಂಡಿಯನ್ಸ್ ನಡುವಿನ ಎಲ್-ಕ್ಲಾಸಿಕೋ ಪಂದ್ಯ ನಡೆಯಲಿದೆ. ಲಖನೌ ಸೂಪರ್ ಜೇಂಟ್ಸ್ ಹಾಗೂ ಗುಜರಾತ್ ಟೈಟಾನ್ಸ್ ನಡುವಿನ ಮೊದಲ ಪಂದ್ಯದ ನಂತರ ಎರಡನೇ ಪಂದ್ಯ ನಡೆಯಲಿದೆ.

ರಾಜಸ್ಥಾನ ವಿರುದ್ಧ ಶುಕ್ರವಾರದಂದು ನಡೆದಿರುವ ಪಂದ್ಯದಲ್ಲಿ ಸೋಲನುಭವಿಸಿದ್ದ ಬೆಂಗಳೂರು ಕೂಟದಲ್ಲಿ ಮೊದಲ ಬಾರಿಗೆ ಪರಾಭವ ಕಂಡಿದೆ. ಇತ್ತ ಮುಂಬೈ ಇಂಡಿಯನ್ಸ್ ತಂಡವು ಗೆಲುವಿಗಾಗಿ ಪರದಾಟ ನಡೆಸುತ್ತಿದ್ದು ಪಂದ್ಯ ರೋಮಾಂಚನಕಾರಿಯಾಗಲಿದೆ.

ಇತ್ತ ಹಿಂದಿನ ಪಂದ್ಯದಲ್ಲಿ ಗೆಲುವು ಸಾಧಿಸಿರುವ ಗುಜರಾತ್ ಟೈಟಾನ್ಸ್ ಮತ್ತು ಲಖನೌ ಸೂಪರ್ ಜೇಂಟ್ಸ್ ತಂಡಗಳು ಮುಖಾಮುಖಿಯಾಗಲಿವೆ. ಸೋಲಿನಿಂದ ಹೊರಬಂದಿರುವ ಲಖನೌ ಮುಕುಲ್ ಚೌದರಿ ಅವರ ಬ್ಯಾಟಿಂಗ್‌ನಿಂದಾಗಿ ಕೆಕೆಆರ್ ತಂಡವನ್ನು ಸೋಲಿಸಿತ್ತು. ಹೀಗಿರುವಾಗ ಗುಜರಾತ್ ತಂಡವನ್ನು ಎದುರಿಸಲಿದೆ.

ಗೆಲುವಿನ ಹಳಿಗೆ ಮರಳುತ್ತೇ ಆರ್‌ಸಿಬಿ: ಹೈದರಾಬಾದ್ ಹಾಗೂ ಚೆನ್ನೈ ತಂಡವನ್ನು ತವರಿನಲ್ಲಿ ಸೋಲಿಸಿರುವ ಬೆಂಗಳೂರು ತವರಲ್ಲದ ಮೊದಲ ಪಂದ್ಯದಲ್ಲೇ ಸೋತಿದೆ. ಬಲಿಷ್ಠ ಬ್ಯಾಟಿಂಗ್ ಮತ್ತು ಸಮತೋಲಿತ ಬೌಲಿಂಗ್ ದಾಳಿಯೊಂದಿಗೆ ತಂಡ ಮಿಂಚುತ್ತಿದೆ. ಆದರೆ ಸಾಲ್ಟ್ ಅವರ ಲಯದ ಕೊರತೆ ತಂಡಕ್ಕೆ ಕಾಡುತ್ತಿದೆ. ಕೊಹ್ಲಿ, ಪಾಟಿದಾರ್ ಭರ್ಜರಿ ಲಯದಲ್ಲಿದ್ದಾರೆ. ಫಿನಿಶಿಂಗ್ ವಿಭಾಗದಲ್ಲಿ ಸ್ಫೋಟಕ ಬ್ಯಾಟರ್‌ಗಳಾದ ಟೀಮ್ ಡೇವಿಡ್, ಶೆಫರ್ಡ್ ಸಿದ್ಧವಾಗಿದ್ದಾರೆ. ಬೌಲಿಂಗ್‌ನಲ್ಲಿ ತಂಡಕ್ಕೆ ಜೋಶ್ ಹ್ಯಾಜಲ್‌ವುಡ್ ಬಲ ಸಿಕ್ಕಿದೆ. ಆದಾಗ್ಯೂ ಕಳೆದ ಪಂದ್ಯದಲ್ಲಿ ಎಲ್ಲಾ ಬೌಲರ್‌ಗಳು ದಂಡಿಸಿಕೊಂಡಿದ್ದಾರೆ. ಆದಾಗ್ಯೂ ಬೆಂಗಳೂರು ಲಯಕ್ಕೆ ಮರಳುವ ವಿಶ್ವಾಸದಲ್ಲಿದೆ. ಇತ್ತ ಮುಂಬೈ ಇಂಡಿಯನ್ಸ್ ಗೆಲುವಿನ ಹುಡುಕಾಟದಲ್ಲಿದೆ.

ಮೊದಲನೇ ಪಂದ್ಯದಲ್ಲಿ ಗೆದ್ದ ನಂತರ ಮುಂದಿನ ಎಲ್ಲಾ ಪಂದ್ಯಗಳಲ್ಲಿ ಸೋಲನುಭವಿಸಿದೆ. ಅನುಭವಿ ಬ್ಯಾಟರ್‌ಗಳನ್ನು ಹೊಂದಿದ್ದರೂ ಲಯದ ಹಿನ್ನಡೆ ತಂಡ ಅನುಭವಿಸುತ್ತಿದೆ. ಬೌಲಿಂಗ್‌ನಲ್ಲೂ ಅದೇ ಕಥೆ. ಬೂಮ್ರಾ, ಬೋಲ್ಟ್, ದೀಪಕ್ ವಿಕೆಟ್ ಹುಡುಕಾಟದಲ್ಲಿದ್ದಾರೆ.

ಪಿಚ್ ರಿಪೋರ್ಟ್: ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬ್ಯಾಟಿಗರು ವಿಶ್ವಾಸದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಫ್ಲ್ಯಾಟ್ ಪಿಚ್ ಇರುವುದು ಸ್ಫೋಟಕ ಬ್ಯಾಟರ್‌ಗಳಿಗೆ ಭರವಸೆ ತಂದಿದೆ. ಸ್ಪಿನ್, ಸ್ವಿಂಗ್ ಕೂಡ ಇರಲಿದೆ. ಎರಡನೇ ಇನ್ನಿಂಗ್ಸ್‌ನಲ್ಲಿ ಇಬ್ಬನಿ ಕಾಟ ಇದ್ದು, ಟಾಸ್ ಗೆದ್ದವರು ಬೌಲಿಂಗ್ ತೆಗೆದುಕೊಳ್ಳುವ ಸಾಧ್ಯತೆ ಇದೆ. ಮಳೆ ಸಾಧ್ಯತೆ ಕಮ್ಮಿಯಿದೆ.

ಗುಜರಾತ್‌ಗೆ ಗೆಲುವಿನ ವಿಶ್ವಾಸ

ಮೊದಲ ಪಂದ್ಯದಲ್ಲಿ ಗುಜರಾತ್ ಮತ್ತು ಲಖನೌ ಮುಖಾಮುಖಿಯಾಗಲಿವೆ. ಹಿಂದಿನ ಪಂದ್ಯದಲ್ಲಿ ಮುಕಲ್ ಅವರ ಆಟದೊಂದಿಗೆ ಮಿಂಚಿರುವ ಲಖನೌ ಎರಡು ಗೆಲುವು ಮತ್ತು ಒಂದು ಸೋಲಿನೊಂದಿಗೆ ಪೈಪೋಟಿ ನಡೆಸುತ್ತಿದೆ. ಗುಜರಾತ್ ಕೂಡ ಕಳೆದ ಪಂದ್ಯದಲ್ಲಿ ಉತ್ತಮ ಬ್ಯಾಟಿಂಗ್ ಮಾಡಿದೆ. ಅಲ್ಲದೆ ಕೊನೆಯ ಓವರ್‌ನ ಥ್ರಿಲ್ಲರ್ ಪಂದ್ಯದಲ್ಲಿ ಗೆಲುವು ಸಾಧಿಸಿದೆ. ಬ್ಯಾಟಿಂಗ್ ಬಲ ಹೊತ್ತಿರುವ ಗುಜರಾತ್‌ಗೆ ಅನುಭವಿ ಬೌಲರ್‌ಗಳ ಕೊರತೆಯಿದೆ ಎಂದರೆ ತಪ್ಪಿಲ್ಲ. ಇತ್ತ ಲಖನೌ ಕೂಡ ಸ್ಫೋಟಕ ಬ್ಯಾಟರ್‌ಗಳನ್ನು ಹೊಂದಿದ್ದರೂ ಶಮಿ, ರಾಥಿ ಹೊರತು ಪಡಿಸಿ ಇನ್ನಿಷ್ಟು ಬೌಲರ್‌ಗಳು ದುಬಾರಿಯಾಗಿದ್ದಾರೆ.



ಕಿರುಸುದ್ದಿ

ಆರ್ಚರಿ: ಸಿಂಗಲ್ಸ್‌ನಲ್ಲಿ ನಿರಾಸೆ

• **ಹೊಸದಿಲ್ಲಿ:** ಮೆಕ್ಸಿಕೋದ ಪ್ಯೂಬ್ಲಾದಲ್ಲಿ ನಡೆದ ಆರ್ಚರಿ ವಿಶ್ವಕಪ್ ಹಂತ-1 ರಲ್ಲಿ ಭಾರತೀಯ ಬಿಲ್ಲುಗಾರರು ವೈಯಕ್ತಿಕ ಸ್ಪರ್ಧೆಗಳಲ್ಲಿ ನೀರಸ ಪ್ರದರ್ಶನ ನೀಡಿದರು. ವಿ. ಜ್ಯೋತಿ ಸುರೇಖಾ ವಿಶ್ವ ಚಾಂಪಿಯನ್ ಮತ್ತು ವಿಶ್ವದ ನಂ. 1 ಸ್ಥಾನದಲ್ಲಿರುವ ಮೆಕ್ಸಿಕೋದ ಆಂಡ್ರಿಯಾ ಬೆಸೆರಾ (146-146, 10★-10,) ಮತ್ತು ಗ್ರೇಟ್ ಬ್ರಿಟನ್‌ನ ವಿಶ್ವದ ನಂ. 2 ಸ್ಥಾನದಲ್ಲಿರುವ ಎಲ್ಲಾ ಗಿಬ್ಸನ್ ಅವರನ್ನು ಸತತ ಸುತ್ತುಗಳಲ್ಲಿ ಹಿಂದಿಕ್ಕಿ - ಕ್ವಾರ್ಟರ್ ಫೈನಲ್‌ಗೆ ತಲುಪುವ ಮೂಲಕ ಭಾರತೀಯರಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದರು, ನಂತರ ಕಾಂಪೌಂಡ್‌ನಲ್ಲಿ ಮೆಕ್ಸಿಕನ್ ದಷ್ನೆ ವಿರುದ್ಧ 143-149 ಸೋತರು.

ಫುಟ್‌ಬಾಲ್: ಭಾರತಕ್ಕೆ ಸೋಲು


• **ಹೊಸದಿಲ್ಲಿ:** ಶನಿವಾರ ರಷ್ಯಾದ ಸೋಚಿಯಲ್ಲಿರುವ ಮ್ಯಾಟ್ಸೆಸ್ಟಾ ಫುಟ್‌ಬಾಲ್ ಸೆಂಟರ್‌ನಲ್ಲಿ ನಡೆದ ಮೂರು ಸ್ನೇಹಪರ ಪಂದ್ಯಗಳ ಪೈಕಿ ಭಾರತದ ಅಂಡರ್-17 ಮಹಿಳಾ ತಂಡವು ರಷ್ಯಾ ವಿರುದ್ಧ 0-4 ಅಂತರದಲ್ಲಿ ಸೋತಿತು. ವಲೇರಿಯಾ ಮೆನ್ಶಿಕೋವಾ 44ನೇ ನಿಮಿಷದಲ್ಲಿ ಆತಿಥೇಯ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಡಾನಾ ಡೊಬ್ರೊವಿಟ್ಸ್ಕಯಾ ಮತ್ತು ಅಲಿಸಾ ಕ್ರಿವೋವಾ ಕ್ರಮವಾಗಿ 57ನೇ ಮತ್ತು 72ನೇ ನಿಮಿಷಗಳಲ್ಲಿ ಪೆನಾಲ್ಟಿಗಳನ್ನು ಗೋಲು ಗಳಿಸಿದರು, ನಂತರ ಏಂಜಲೀನಾ ಗುಲ್ಯಾಯೇವಾ 88ನೇ ನಿಮಿಷದಲ್ಲಿ ಗೋಲು ಗಳಿಸಿದರು. ಇಟಾಲಿಯನ್ ಪಮೇಲಾ ಕಾಂಟಿ ತರಬೇತುದಾರರಾಗಿರುವ ಯಂಗ್ ಟೈಗ್ರೆಸ್ಸ್ ತಂಡವು ಮುಂದಿನ ತಿಂಗಳು ನಡೆಯಲಿರುವ ಅತ್ಯಂತ ಪ್ರಮುಖವಾದ ಅ-17 ಮಹಿಳಾ ಏಷ್ಯನ್ ಕಪ್ ತಯಾರಿ ನಡೆಸಲು ಈ ಪಂದ್ಯಗಳನ್ನು ಆಡಲಿದೆ.

ರಾಜಸ್ಥಾನಕ್ಕೆ 4ನೇ ಗೆಲುವು

• **ಗುವಾಹಟಿ:** ಬ್ಯಾಟಿನ ಮೂಲಕ ಕ್ರಿಕೆಟ್ ಕ್ಷೇತ್ರದಲ್ಲಿ ಪಂದ್ಯಕ್ಕೊಂದರಂತೆ ದಾಖಲೆ ಮಾಡಿರುವ ವೈಭವ್ ಸೂರ್ಯವಂಶಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ತಮ್ಮದೆ ಸ್ಟೈಲ್‌ನಲ್ಲಿ ದಂಡಿಸಿ ತಮ್ಮದೇ ದಾಖಲೆ ಮುರಿದರು, ಗಟ್ಟಿ ಅಡಿಪಾಯದ ನಂತರ ತಕ್ಕ ಆಟದೊಂದಿಗೆ ಇನ್ನಿಂಗ್ಸ್ ಕಟ್ಟಿದ ಧ್ರುವ್ ಜುರೇಲ್ ರಾಜಸ್ಥಾನಕ್ಕೆ ಸತತ ನಾಲ್ಕನೇ ಗೆಲುವು ತಂದುಕೊಟ್ಟರು. ಆರ್‌ಸಿಬಿ ಪಂದ್ಯಾವಳಿಯಲ್ಲಿ ಮೊದಲನೇ ಸೋಲನುಭವಿಸಿತು.

ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಮೂಲಕ ವಿಶ್ವ ಕ್ರಿಕೆಟ್ ಪ್ರಿಯರ ಮನೆಮಾತಾಗಿರುವ ವೈಭವ್, ಶುಕ್ರವಾರದ ಪಂದ್ಯದಲ್ಲಿ ಅವರು ಅನುಭವಿ ಬೌಲರ್‌ಗಳ ಬೆವರಿಳಿಸಿಬಿಟ್ಟರು. ಬೂಮ್ರಾ ಬಾರಿ ಮುಗಿದ ನಂತರ ಇದು ಭುವನೇಶ್ವರ್ ಕುಮಾರ್, ಹ್ಯಾಜೆಲ್‌ವುಡ್ ಸರದಿಯಾಗಿತ್ತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್‌ಗಿಳಿದಿದ್ದ ಆರ್‌ಸಿಬಿ ಪಾಟಿದಾರ್ ಅವರ ಆಟದೊಂದಿಗೆ ಉತ್ತಮ ಸ್ಕೋರ್ ನಿರ್ಮಿಸಿ ಗೆಲುವಿನ ಯೋಜನೆಯಲ್ಲಿತ್ತು. ಆದರೆ ರಾಜಸ್ಥಾನ ಬ್ಯಾಟಿಂಗ್ ಮಾಡುವಾಗ ಯಾವುದೇ ಅವಕಾಶ ಸಿಗಲಿಲ್ಲ, ಜುರೇಲ್, ಜೈಸ್ವಾಲ್ ಮತ್ತು ವೈಭವ್ ಬಂದ ಬಾಲ್‌ಗಳನ್ನೆಲ್ಲಾ ಬೌಂಡರಿ, ಸಿಕ್ಸರ್‌ಗಟ್ಟಿದ ನಂತರ ಪಂದ್ಯ 18 ಓವರ್‌ಗಳಲ್ಲಿ ಮುಕ್ತಾಯಗೊಂಡಿತು.

ಸೂರ್ಯವಂಶಿ ಸ್ಟ್ರೈಕ್‌ರೇಟ್ ಬರೋಬ್ಬರಿ 300! ಇಡೀ ಪಂದ್ಯದಲ್ಲಿ ಆರ್‌ಸಿಬಿ 7 ಸಿಕ್ಸರ್‌ಗಳನ್ನು ಬಾರಿಸಿದ್ದರೆ, ವೈಭವ್ ಒಬ್ಬರೇ 7 ಸಿಕ್ಸರ್ ಬಾರಿಸಿದರು. ಇತ್ತ ಜುರೇಲ್ ಆಟಕ್ಕೂ ಮಿತಿ ಇರಲಿಲ್ಲ, ವೈಭವ್ ಔಟಾದ ನಂತರ ದಡ ಸೇರಿಸುವ ಜವಾಬ್ದಾರಿ ಎತ್ತಿಕೊಂಡ ಅವರು, ಅಜೇಯ 81 ರನ್ ಬಾರಿಸಿ ಪಂದ್ಯ ಗೆಲ್ಲಿಸಿದರು.



ವೈಭವ್‌ಗೆ ಕೊಹ್ಲಿಯಿಂದ ಉಡುಗೊರೆ

ಸ್ಫೋಟಕ ಬ್ಯಾಟಿಂಗ್ ಮಾಡಿದ ವೈಭವ್ ಸೂರ್ಯವಂಶಿಗೆ ವಿರಾಟ್ ಕೊಹ್ಲಿಯಿಂದ ಉಡುಗೊರೆ ಸಿಕ್ಕಿದೆ. ಪಂದ್ಯದ ನಂತರ ಸೋತ ಆರ್‌ಸಿಬಿ ತಂಡದ ಎಲ್ಲಾ ಆಟಗಾರರೂ ವೈಭವ್ ಸೂರ್ಯವಂಶಿ ಅವರನ್ನು ಕೊಂಡಾಡಲು ಸೇರಿದರು. ಪಾಟಿದಾರ್, ಭುವನೇಶ್ವರ್ ಸೇರಿದಂತೆ ಎಲ್ಲರೂ ವೈಭವ್‌ಗೆ ಅಭಿನಂದನೆ ಸಲ್ಲಿಸಿದರು. ಅತ್ತ ವಿರಾಟ್ ಕೊಹ್ಲಿ ತಮ್ಮ ಕ್ಯಾಪ್ ಮೇಲೆ, ವೈಭವ್ ಉತ್ತಮವಾಗಿ ಆಡುತ್ತಿದ್ದೀಯ ಎಂದು ಬರೆದು ಕೊಟ್ಟಿದ್ದಾರೆ.

ಸಂಕ್ಷಿಪ್ತ ಸ್ಕೋರ್

- ಬೆಂಗಳೂರು: 20 ಓವರ್‌ಗಳಲ್ಲಿ 201/8; ಪಾಟಿದಾರ್ 63, ಕೊಹ್ಲಿ 32; ಬಿಷ್ಣೋಯ್ 32/2
- ರಾಜಸ್ಥಾನ: 18 ಓವರ್‌ಗಳಲ್ಲಿ 202/4; ಜುರೇಲ್★, ವೈಭವ್ 78; ಕೃಣಾಲ್ 30/2

ಸಂಜು ಶತಕ, ದಿಲ್ಲಿಗೆ ದೊಡ್ಡ ಗುರಿ

• **ಚೆನ್ನೈ:** ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಚೆನ್ನೈ ಪರ ಮೊದಲ ಶತಕ ಬಾರಿಸಿರುವ ಸಂಜು ಸ್ಯಾಮ್ಸನ್ ಕೊನೆಗೂ ಲಯಕ್ಕೆ ಮರಳಿದ್ದು, ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಚೆನ್ನೈ ಮೊದಲ ಬಾರಿಗೆ ಸ್ಥಿರ ಪ್ರದರ್ಶನ ನೀಡಿದೆ.

ದಿಲ್ಲಿ ವಿರುದ್ಧದ ಪಂದ್ಯದಲ್ಲಿ ಸ್ಯಾಮ್ಸನ್ ಶತಕ ಮತ್ತು ಆಯುಷ್ ಮಾತ್ರೆ ಅವರ ಸ್ಫೋಟಕ ಅರ್ಧಶತಕದೊಂದಿಗೆ ಚೆನ್ನೈ ಸೂಪರ್ ಕಿಂಗ್ಸ್ ತಂಡ ದಿಲ್ಲಿ ಕ್ಯಾಪಿಟಲ್ಸ್‌ಗೆ ಕಠಿಣ ಗುರಿ ನೀಡಿತು. ಸ್ಯಾಮ್ಸನ್ ಅವರ 115★ ರನ್ ಬ್ಯಾಟಿಂಗ್‌ನೊಂದಿಗೆ 20 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 212 ರನ್ ಗಳಿಸಿತು.

ಕೊನೆಗೂ ಮಿಂಚಿದ ಸಂಜು: ಮೊದಲು ಬ್ಯಾಟಿಂಗ್‌ಗಿಳಿದ ಚೆನ್ನೈ ಸ್ಫೋಟಕ ಆರಂಭ ಪಡೆಯಲಿಲ್ಲ, ವಿಕೆಟ್ ಬೀಳದಿದ್ದರೂ ದಿಲ್ಲಿ ಬೌಲರ್‌ಗಳು ರುತುರಾಜ್ ಗಾಯಕ್ವಾಡ್ ಅವರನ್ನು ಕಟ್ಟಿ ಹಾಕಿದರು. ಅತ್ತ ಸಂಜು ಸೆಟ್ ಆಗುವ ನಿಟ್ಟಿನಲ್ಲಿ ಬದ್ದರು. 18 ಬಾಲ್ ಎದುರಿಸಿದ ಗಾಯಕ್ವಾಡ್ ರನ್‌ಗಾಗಿ ಪರದಾಟ ನಡೆಸಿದರು. ಚೆನ್ನೈಗೆ ಹಿನ್ನಡೆಯಾಯಿತು. ಆದರೆ ಅಷ್ಟೊತ್ತಿಗಾಗಲೇ ಹೊಂದಿಕೊಂಡ ಸಂಜು ತಮ್ಮ ಅಸಲಿ ಲಯಕ್ಕೆ ಬಂದರು. ಸಂಜು ಸ್ಯಾಮ್ಸನ್ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ತಂಡವು ಪವರ್‌ಪ್ಲೇನಲ್ಲಿ 61 ರನ್ ಗಳಿಸಿತು. ಏಳನೇ ಓವರ್‌ನಲ್ಲಿ ಗಾಯಕ್ವಾಡ್ ವಿಕೆಟ್ ಒಪ್ಪಿಸಿದರು. ನಂತರ ಮೂರನೇ ಕ್ರಮಾಂಕದಲ್ಲಿ ಬಂದ ಆಯುಷ್ ಮಾತ್ರೆ, ಸಂಜು ಸ್ಯಾಮ್ಸನ್‌ಗೆ ಸಾಥ್ ನೀಡಿದರು. ಸ್ಯಾಮ್ಸನ್ 26 ಬಾಲ್‌ಗಳಲ್ಲಿ ಅರ್ಧ ಶತಕ ಬಾರಿಸಿ ತಮ್ಮ ಅಬ್ಬರ ಮುಂದುವರಿಸಿದರು. ಆಯುಷ್ ಕೂಡ ಸಿಕ್ಸರ್‌ಗಳೊಂದಿಗೆ ಮಿಂಚತೊಡಗಿದರು. ಚೆನ್ನೈ ವಿಕೆಟ್ ಕಳೆದುಕೊಳ್ಳಲಿಲ್ಲ, ಮಧ್ಯಮ ಓವರ್‌ಗಳಲ್ಲಿ ಬರೋಬ್ಬರಿ 107 ರನ್ ಗಳಿಸಿತು. ಆಯುಷ್ ಅರ್ಧ ಶತಕ ಬಾರಿಸಿದರು. 39 ಬಾಲ್‌ಗಳಲ್ಲಿ ಅವರು 59 ರನ್ ಗಳಿಸಿದರು. ಸ್ಲಾಗ್ ಓವರ್‌ಗಳಲ್ಲಿ ಅವರು ನಿವೃತ್ತರಾದರು. ದುಬೆ 20 ರನ್ ಗಳಿಸಿದರು.



ಚೆನ್ನೈ ಪರ ಮೊದಲ ಶತಕ

ಸಂಜು ಸ್ಯಾಮ್ಸನ್ ಚೆನ್ನೈ ತಂಡದ ಪರ ಮೊದಲ ಶತಕ ಬಾರಿಸಿದರು. ಮೂರು ಪಂದ್ಯಗಳಲ್ಲಿ ಸತತ ಹಿನ್ನಡೆ ಅನುಭವಿಸಿದ್ದ ಅವರು ನಾಲ್ಕನೇ ಪಂದ್ಯದಲ್ಲಿ ಲಯಕ್ಕೆ ಮರಳಿದರು. ಬರೋಬ್ಬರಿ 15 ಸ್ಫೋಟಕ ಬೌಂಡರಿ, 4 ಬಾನೆತ್ತರದ ಸಿಕ್ಸರ್‌ಗಳನ್ನು ಬಾರಿಸಿದರು. 56 ಎಸೆತ ಎದುರಿಸಿ 115 ರನ್ ಗಳಿಸಿದರು.

ಫೈನಲ್‌ಗೆ ಆಯುಷ್ ಶೆಟ್ಟಿ!

• **ನಿಂಗ್ಬೋ(ಚೀನಾ):** ಪ್ರತಿ ಪಂದ್ಯದಲ್ಲೂ ಕರಾರುವಾಕ್ ಪ್ರದರ್ಶನದೊಂದಿಗೆ ವಿಶ್ವ ಬ್ಯಾಡ್ಮಿಂಟನ್ ಕ್ಷೇತ್ರದಲ್ಲಿ ಸರದಾರನಾಗುತ್ತಿರುವ ಕನ್ನಡಿಗ ಆಯುಷ್ ಶೆಟ್ಟಿ ಬ್ಯಾಡ್ಮಿಂಟನ್ ಪ್ರಿಯರು ನಿಬ್ಬೆರಗಾಗುವಂತೆ ವಿಶ್ವದ ನಂಬರ್ 1 ಆಟಗಾರ ಕೆ. ವಿಟಿಡ್ಸರ್ನ್ ಅವರನ್ನು ಸೋಲಿಸಿದರು. ಪ್ರತಿಷ್ಠಿತ ಬ್ಯಾಡ್ಮಿಂಟನ್ ಏಷ್ಯನ್ ಚಾಂಪಿಯನ್‌ಶಿಪ್ ಪಂದ್ಯಾವಳಿಯಲ್ಲಿ ಮಿಂಚಿನಾಟ ಪ್ರದರ್ಶನ ನೀಡುತ್ತಿರುವ ಆಯುಷ್ ಪದಕ ಖಚಿತಪಡಿಸಿಕೊಂಡಿದ್ದಲ್ಲದೆ, ತಮ್ಮ ವೃತ್ತಿಜೀವನದ ಅತಿ ದೊಡ್ಡ ಸಾಧನೆ ಮಾಡಿದ್ದಾರೆ. ವಿಶ್ವದ ಅಗ್ರ ಶ್ರೇಯಾಂಕಿತ ಆಟಗಾರರನ್ನು ಸೋಲಿಸುತ್ತಾ ಸೆಮಿಫೈನಲ್‌ಗೇರಿದ್ದ ಅವರು, ಕೆ. ವಿಟಿಡ್ಸರ್ನ್ ಅವರನ್ನು ಎದುರಿಸಿ ಚಾಂಪಿಯನ್ ಪ್ರದರ್ಶನ ನೀಡಿದ್ದಾರೆ. ಇದರೊಂದಿಗೆ ಚಿನ್ನದ ನಿರೀಕ್ಷೆ ದ್ವಿಗುಣಗೊಳಿಸಿದ್ದಾರೆ. ಶನಿವಾರದಂದು ನಡೆದ ಪಂದ್ಯದಲ್ಲಿ ಅವರು ಕಠಿಣ ಪೈಪೋಟಿಯಲ್ಲಿ 3-1ರಿಂದ ಗೆದ್ದರು. ಮೊದಲಿನ ಸುತ್ತಲ್ಲಿ ಸೋತರೂ ಉಳಿದೆರಡೂ ಸುತ್ತಿನಲ್ಲಿ ಮಿಂಚಿದರು.



ಕಂಬ್ಯಾಕ್ ಕಿಂಗ್ ಆಯುಷ್

ಪಂದ್ಯದ ಆರಂಭಿಕ ಸೆಟ್‌ನಲ್ಲಿ ಪ್ಯಾರಿಸ್ ಒಲಿಂಪಿಕ್ಸ್‌ನ ಬೆಳ್ಳಿ ವಿಜೇತ ಕೆ. ವಿಟಿಡ್ಸರ್ನ್ ಮುನ್ನಡೆ ಸಾಧಿಸಿದರು. ಆಯುಷ್ ಅವರನ್ನು ಸರ್ವ್ ಅಂಕಗಳಲ್ಲಿ ಕಟ್ಟಿದ ಅವರು, 5 ಅಂಕಗಳ ಮುನ್ನಡೆ ಹಿಗ್ಗಿಸುತ್ತಾ 21 ಅಂಕದ ಗಳಿಸಿದರು. ಇತ್ತ ಭಾರತೀಯ 10 ಮಾತ್ರ ಅಂಕಗಳಿಸಿದ್ದರು. ಮೊದಲ ಸೆಟ್‌ನಲ್ಲಿ ಹಿನ್ನಡೆಯ ಬಿಸಿ. ಎದುರಿಗೆ ನಂಬರ್ 1 ಆಟಗಾರ... ಹೀಗೆ ಸವಾಲುಗಳನ್ನು ಎದುರಿಸಿದ ಆಯುಷ್ ಯಾವುದೇ ಸಮಯದಲ್ಲಿ ಒತ್ತಡಕ್ಕೊಳಗಾಗದೆ ಸ್ಥೈರ್ಯ ತೋರಿಸಿದರು. ಎರಡನೇ ಸೆಟ್‌ನ ಆರಂಭದಲ್ಲೇ ಆಕ್ರಮಣಕಾರಿ ಮನಸ್ಥಿತಿಯೊಂದಿಗೆ ಆಟವಾಡಿದ ಅವರು, ಮುನ್ನಡೆ ಸಾಧಿಸಿದರು. ಇತ್ತ ಎದುರಾಳಿ ಕೂಡ ಅದೇ ಪ್ರದರ್ಶನ ನೀಡಿದ ನಿಟ್ಟಿನಲ್ಲಿ ಸಮಬಲವಾಯಿತು. ಆದರೆ ಮುನ್ನಡೆ ಹಿಗ್ಗಿಸುತ್ತಾ ಬಂದ ಆಯುಷ್ ಸೆಟ್ ಅನ್ನು 21-19ರಿಂದ ಗೆದ್ದುಕೊಂಡರು. ನಿರ್ಣಾಯಕ ಹಂತಕ್ಕೆ ಕೊಂಡೊಯ್ದರು. ಅಲ್ಲಿ ಮೊದಲಿನಿಂದಲೂ ನಿಖರ ಪ್ರದರ್ಶನ ನೀಡುತ್ತಾ, ಮುನ್ನಡೆ ಕಾಯ್ದುಕೊಂಡರು. ಮಧ್ಯಮ ಆಟದಲ್ಲಿ ಎದುರಾಳಿ ಕಂಬ್ಯಾಕ್ ಮಾಡಿದರೂ ಗೆಲುವಿಗೆ ಅಡಚಣೆಯಾಗಲಿಲ್ಲ. ಪಂದ್ಯವನ್ನು 21-17ರಿಂದ ಗೆದ್ದ ಆಯುಷ್ ಫೈನಲ್‌ಗೇರಿದ್ದಾರೆ.

ಏಷ್ಯನ್ ಕುಸ್ತಿ: ಭಾರತ ಉತ್ತಮ ಪ್ರದರ್ಶನ

• **ಹೊಸದಿಲ್ಲಿ:** ಕಿರ್ಗಿಸ್ತಾನದ ಬಿಶ್ಕೆಕ್‌ನಲ್ಲಿ ನಡೆದ ಏಷ್ಯನ್ ಕುಸ್ತಿ ಚಾಂಪಿಯನ್‌ಶಿಪ್‌ನಲ್ಲಿ ಭಾರತೀಯ ಕುಸ್ತಿಪಟುಗಳು ಉತ್ತಮ ಪ್ರದರ್ಶನ ನೀಡಿ ಗಮನಸೆಳೆದಿದ್ದಾರೆ.

ಪುರುಷರ ಫ್ರೀಸ್ಟೈಲ್ ವಿಭಾಗದಲ್ಲಿ ಸುಜೀತ್ ಕಲ್ಕಲ್ (65 ಕೆಜಿ), ಅಭಿಮನ್ಯು (70 ಕೆಜಿ) ಮತ್ತು ಸಂದೀಪ್ ಸಿಂಗ್ ಮಾನ್ (79 ಕೆಜಿ) ಫೈನಲ್‌ಗೆ ಪ್ರವೇಶಿಸಿ ಪದಕ ಖಚಿತಪಡಿಸಿಕೊಂಡಿದ್ದಾರೆ. ಸುಜೀತ್ ಕಲ್ಕಲ್ ಅವರು ಕಿರ್ಗಿಸ್ತಾನದ ರುಸ್ತಂಝಾನ್ ಕಾಖರೋವ್ ಅವರನ್ನು 10-0 ಅಂತರದಲ್ಲಿ ಹಾಗೂ ತಜಿಕಿಸ್ತಾನದ ವಿಶ್ವ ಕಂಚಿನ ಪದಕ ವಿಜೇತ ಅಬ್ದುಲ್ಮಝಿದ್ ಕುಡಿಯೆವ್ ಅವರನ್ನು 7-2 ಅಂತರದಲ್ಲಿ ಸೋಲಿಸಿದರು. ಚಿನ್ನದ ಪದಕಕ್ಕಾಗಿ ಅವರು ಉಜ್ಬೇಕಿಸ್ತಾನದ ಅಲಿಬೆಗ್ ಅಲಿಬೆಗೋವ್ ವಿರುದ್ಧ ಸೆಣಸಲಿದ್ದಾರೆ.

ಅಭಿಮನ್ಯು ಅವರು ಚೀನಾದ ಸಿಮಿಂಗ್ ವಾಂಗ್ ಅವರನ್ನು 11-1 ಅಂತರದಲ್ಲಿ ಸೋಲಿಸಿ, ಬಳಿಕ ಕಿರ್ಗಿಸ್ತಾನದ ವಿಶ್ವ ಕಂಚಿನ ಪದಕ ವಿಜೇತ ಹಾಗೂ ಏಷ್ಯನ್ ಚಾಂಪಿಯನ್ ಎರ್ನಜಾರ್




ಅಕ್ಮತಾಲಿಯೇವ್ ವಿರುದ್ಧ 6-3 ಅಂತರದಲ್ಲಿ ಜಯ ಸಾಧಿಸಿದರು. ಫೈನಲ್‌ನಲ್ಲಿ ಅವರು ಮಂಗೋಲಿಯಾದ ತುಲ್ಗಾ ತುಮೂರ್ ಒಚಿರ್ ವಿರುದ್ಧ ಮುಖಾಮುಖಿಯಾಗಲಿದ್ದಾರೆ. ಸಂದೀಪ್ ಸಿಂಗ್ ಮಾನ್ ಅವರು ಜೋರ್ಡಾನ್‌ನ ಎರ್ಝೋರ್ಗ ಶಮಿಲ್ ಇಸಾಕೋವ್ ಅವರನ್ನು 6-5 ಅಂತರದಲ್ಲಿ ಮತ್ತು ತಜಿಕಿಸ್ತಾನದ ಸೋಮೋಂಜೋನ್ ಇಕ್ರಮೋವ್ ಅವರನ್ನು 10-0 ಅಂತರದಲ್ಲಿ ಸೋಲಿಸಿ ಫೈನಲ್‌ಗೆ ಪ್ರವೇಶಿಸಿದ್ದಾರೆ. ಅವರು ಚಿನ್ನದ ಹೋರಾಟದಲ್ಲಿ ಜಪಾನ್‌ನ ಕೇವನ್ ಫರೇಪ್ಶಾಹಿ ಅವರನ್ನು ಎದುರಿಸಲಿದ್ದಾರೆ. ಇನ್ನೂ ಅಂಕುಶ್ (57 ಕೆಜಿ) ಮತ್ತು ವಿಕ್ಕಿ (97 ಕೆಜಿ) ಕಂಚಿನ ಪದಕದ ಹೋರಾಟದಲ್ಲಿ ಉಳಿದಿದ್ದಾರೆ.

ಮಹಿಳೆಯರ ವಿಭಾಗದಲ್ಲಿ: ಮಹಿಳಾ ವಿಭಾಗದಲ್ಲಿ ಮೀನಾಕ್ಷಿ ಅವರು ಚೀನಾದ ಜಿನ್ ಝೂಂಗ್ ವಿರುದ್ಧ 10-0 ಅಂತರದಲ್ಲಿ ಸೋತು ಬೆಳ್ಳಿ ಪದಕ ಪಡೆದರು. ಇನ್ನೂ ಮೋನಿಕಾ (65 ಕೆಜಿ) ದಕ್ಷಿಣ ಕೊರಿಯಾದ ಹ್ಯಾನ್‌ಬಿಟ್ ಲೀ ಅವರನ್ನು 9-0 ಅಂತರದಲ್ಲಿ ಸೋಲಿಸಿ ಕಂಚು ಗೆದ್ದರು. ಹರ್ಷಿತಾ (72 ಕೆಜಿ) ಉಜ್ಬೇಕಿಸ್ತಾನದ ಸೆವಿಂಚೋಯ್ ಪೊಲ್ವೊನೋವಾ ಅವರನ್ನು 5-0 ಅಂತರದಲ್ಲಿ ಸೋಲಿಸಿ ಕಂಚಿನ ಪದಕ ಪಡೆದುಕೊಂಡರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5951

ಎಡದಿಂದ ಬಲಕ್ಕೆ
2. ಈತ ಪಾದಸೇವಕ-ಆಳು (5)
4.ಪತ್ರಿಕೆಗಳಿಗೆ ಸುದ್ದಿ ಕೊಡುವವನು (5)
7.ಸಮತಟ್ಟಾದ ನೆಲ-ಪ್ರದೇಶ (2)
9.ಪಟ್ಟಣವಾಸಿಗಳಲ್ಲಿರುವ ಸಭ್ಯತೆ (5)
11.ಕಡ್ಡಿಪೆಟ್ಟಿಗೆಯ ಇನ್ನೊಂದು ಹೆಸರು (5)
14.ಮುಟ್ಟಕಂದ ಇಲ್ಲಿ ಉಲ್ಟಾ ಕಾಣುತ್ತಿದೆ (2)
17.ಬರಗಾಲದಲ್ಲುಂಟಾಗುವ ಭೀಕರ ಸ್ಥಿತಿ (5)
18.ಪಾತ್ರೆಗಳಿಗೆ ತವರಿನ ಲೇಪನಕ್ಕಾಗಿ ಬಳಸುವ ವಸ್ತು (5)

ಮೇಲಿನಿಂದ ಕೆಳಕ್ಕೆ
1.ವನಿತೆ ನನಗೆ ಕೊಟ್ಟ ಬೆಣ್ಣೆ (3)
2.ಯಾವಾಗಲೂ ಚಲಿಸುತ್ತಿರುವಂಥಾದ್ದು (2)
3.ಪಾರ್ವತಿಯ ಪತಿಯಾಗಿ ಶಿವ (3)
5.ಹಾಡುಗಾರಿಕೆಯು ಕಡೆಯಲ್ಲಿ ದೀರ್ಘವಾಗಿದೆ (3)
6.ಸಂಕಟದಿಂದ ದಾಟದ ಸೇತುವೆ (2)
8.ಸಹಾಯ-ಆಸರೆಯಲ್ಲಿ ತಲೆಕೆಳಗಾಗಿದೆ (3)
10.ಆಂಧ್ರಪ್ರದೇಶದ ಜನರ ಭಾಷೆಯಿದು (3)
12.ತೀವ್ರವಾದ ಬೆಂಕಿ-ಉರಿಯಿದು (2)
13.ಸಾವು ಇಲ್ಲಿ ಉಲ್ಟಾ ಬಂದಿದೆ (3)
15.ಇದು ಮನದ ಆಸೆ-ಕಾಮನೆ (4)
16.ವಾಯುಮಾರ್ಗದ ವಾಹನವಿದು (3)
17.ಇದು ಉಪ್ಪಿನ ರುಚಿಯುಳ್ಳದ್ದು (2)

5950 ಉತ್ತರ

ಎಡದಿಂದ ಬಲಕ್ಕೆ:
3.ಪರಮಗತಿ
5.ಶೀತಕಯಂತ್ರ
6.ಚಕ್ರವಾಕ 7.ಜೀವ
8.ಜಡತನ 10.ನನಸಾಗು
12.ರಕ್ಷ 13.ನಾರುಮಡಿ
15.ಭಗವದ್ಗೀತೆ
16.ಗರಲಗ್ರೀವ

ಮೇಲಿನಿಂದ ಕೆಳಕ್ಕೆ :
1.ಪಠೀಲಿ 2.ಶಂಕರಗಂಡ
3.ಪತ್ರ 4.ತಿರುಕ 6.ಚವನ
9.ಜರಡಿ 11.ಕವಲುಮನ
13.ನಾಕಿಗ 14.ಕಂತೆಗ
15.ಭವ



ಆರ್‌ಸಿ ಸ್ಟುಡಿಯೋಸ್ ನಿರ್ಮಾಣದ

ಫಾದರ್ ಚಿತ್ರಕ್ಕೆ ಮಾತಿನ ಜೋಡಣೆ

ಆರಂಭದಿಂದಲೂ ಸಾಕಷ್ಟು ಕುತೂಹಲ ಮೂಡಿಸಿರುವ, ಪ್ರಕಾಶ್‌ರಾಜ್ ಮತ್ತು ಡಾರ್ಲಿಂಗ್ ಕೃಷ್ಣ ತಂದೆ ಮಗನಾಗಿ ಪ್ರಮುಖ ಪಾತ್ರದಲ್ಲಿ ನಟಿಸಿರುವ ಬಹುನಿರೀಕ್ಷಿತ ಚಿತ್ರ ಫಾದರ್. ಈ ಚಿತ್ರದ ಮಾತಿನ ಮರುಜೋಡಣೆ ಕಾರ್ಯ ಇತ್ತೀಚೆಗಷ್ಟೇ ಮುಕ್ತಾಯವಾಗಿದೆ. ಬಹುಭಾಷಾ ನಟ ಪ್ರಕಾಶ್‌ರಾಜ್ ಅವರು ಶ್ರೀರಂಗಪಟ್ಟಣದಲ್ಲಿರುವ ತಮ್ಮ ಸ್ಟುಡಿಯೋದಲ್ಲೇ ತಮ್ಮ ಪಾತ್ರಕ್ಕೆ ಡಬ್ಬಿಂಗ್ ಮಾಡಿ ಕೊಟ್ಟಿದ್ದಾರೆ. ಈಗಾಗಲೇ ಡಾರ್ಲಿಂಗ್ ಕೃಷ್ಣ ಅಭಿನಯದ ಲವ್ ಮಾಕ್ಟೇಲ್ 3 ಚಿತ್ರವು ಭರ್ಜರಿ ಯಶಸ್ಸು ಕಂಡಿದೆ. ಇದೀಗ ಡಾರ್ಲಿಂಗ್ ಕೃಷ್ಣ ಅಭಿನಯದ ಫಾದರ್ ಚಿತ್ರದ ಪ್ರಚಾರ ಕಾರ್ಯಕ್ಕೂ ಸಹ ಚಾಲನೆ ದೊರಕಿದೆ. ಫಾದರ್ ಚಿತ್ರವನ್ನು ಆದಷ್ಟು ಬೇಗ ತೆರೆಗೆ ತರುವ ಸಿದ್ಧತೆ ನಿರ್ಮಾಪಕರಿಂದ ನಡೆಯುತ್ತಿದೆ. ಈಗಾಗಲೇ ಚಿತ್ರದ ಫಸ್ಟ್ ಲುಕ್ ಹಾಗೂ ಕಿಚ್ಚ ಸುದೀಪ್ ಅವರು ಅನಾವರಣಗೊಳಿಸಿದ ಟೀಸರ್ ಎಲ್ಲ ಪ್ರೇಕ್ಷಕರ ಮನಸ್ಸನ್ನು ಗೆದ್ದಿದೆ.

ಕನ್ನಡ ಚಿತ್ರರಂಗದಲ್ಲಿ ಪ್ರತಿಭಾವಂತ ನಿರ್ದೇಶಕ ಎಂದೇ ಗುರುತಿಸಿಕೊಂಡಿರುವ ಆರ್. ಚಂದ್ರು, ಅವರು ಚಿತ್ರರಂಗದಲ್ಲಿ ಯಾವತ್ತೂ ಹೊಸತನ್ನೇ ಮಾಡಿಕೊಂಡು ಬಂದವರು, ಹಾಗಾಗಿ ಆ ಛಾರ್ಮ್‌ನ್ನು ತಮ್ಮ ಮೊದಲ ಚಿತ್ರದಿಂದಲೇ ಬೆಳೆಸಿಕೊಂಡು ಬಂದಿದ್ದಾರೆ, ಕಂಟೆಂಟ್ ಹಾಗೂ ಮೇಕಿಂಗ್ ಚಿತ್ರಗಳ ಮೂಲಕ ಕನ್ನಡ ಚಿತ್ರರಂಗವನ್ನು ವಿಶ್ವಾದ್ಯಂತ ಪಸರಿಸಿದವರಲ್ಲಿ ಆರ್.ಚಂದ್ರು ಮೊದಲಿಗರೆಂದೇ ಹೇಳಬಹುದು, ಇಡೀ ದೇಶವೇ ಕನ್ನಡದತ್ತ ತಿರುಗಿ ನೋಡುವಂತೆ ಮಾಡಿದ ಆರ್. ಚಂದ್ರು.



ಅವರ ನೇತೃತ್ವದ ಆರ್‌ಸಿ ಸ್ಟುಡಿಯೋಸ್ ಸಂಸ್ಥೆಯ ಮೊದಲ ಕೊಡುಗೆಯಾಗಿ ಫಾದರ್ ಚಿತ್ರ ಮೂಡಿಬರುತ್ತಿದೆ, ಈಗಾಗಲೇ ತನ್ನೆಲ್ಲ ಕೆಲಸಗಳನ್ನು ಮುಗಿಸಿಕೊಂಡು ಕೊನೆಯ ಹಂತದ ಸಿದ್ಧತೆಯಲ್ಲಿರುವ ಈ ಚಿತ್ರದ ಪ್ರಮುಖ ಪಾತ್ರಧಾರಿ ಪ್ರಕಾಶ್ ರಾಜ್ ಅವರ ಪಾತ್ರಕ್ಕೆ ಮಾತುಗಳ ಮರುಮುದ್ರಣ ಮಾಡುವ ಕೆಲಸವ ಮುಗಿದಿದೆ.

ತಂದೆ - ಮಗನ ನಡುವಿನ ಅವಿನಾಭಾವ ಸಂಬಂಧದ ಸುತ್ತ ನಡೆಯುವ ಕಥಾಹಂದರ ಹೊತ್ತು ಬರುತ್ತಿರುವ ಫಾದರ್ ಚಿತ್ರದಲ್ಲಿ ತಂದೆಯಾಗಿ ಹಿರಿಯನಟ ಪ್ರಕಾಶ್ ರೈ ಹಾಗೂ ಮಗನ ಪಾತ್ರದಲ್ಲಿ ಲವ್ ಮಾಕ್ಟೇಲ್ ಖ್ಯಾತಿಯ ಡಾರ್ಲಿಂಗ್ ಕೃಷ್ಣ ಅವರು ಕಾಣಿಸಿಕೊಂಡಿದ್ದಾರೆ. ಈ ಚಿತ್ರಕ್ಕೆ ರಾಜ್‌ಮೋಹನ್ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ.

ಉತ್ತಮ ಕಂಟೆಂಟ್ ಹಾಗೂ ಮೇಕಿಂಗ್ ಚಿತ್ರವೂ ಆದ ಫಾದರ್ ತುಂಬಾನೇ ಚೆನ್ನಾಗಿ ಮೂಡಿಬಂದಿದೆ ಎಂಬ ಅಭಿಪ್ರಾಯ ಎಲ್ಲಾ ಕಡೆ ಹರಿದಾಡುತ್ತಿದೆ, ಬಿಡುಗಡೆಗೂ ಮುನ್ನವೇ ಓಟಿಟಿ ಪ್ಲಾಟ್ ಫಾರಂಗಳಲ್ಲಿ ಈ ಚಿತ್ರಕ್ಕೆ ದೊಡ್ಡ ಮಟ್ಟದ ಡಿಮ್ಯಾಂಡ್ ಇದೆ. ನಿರ್ಮಾಪಕ ಆರ್.ಚಂದ್ರು ಮಾತ್ರ ಕನ್ನಡ ಚಿತ್ರಪ್ರೇಕ್ಷಕರಿಗೆ ಮೊದಲು ಚಿತ್ರವನ್ನು ತೋರಿಸುವ ಸಿದ್ಧತೆ ನಡೆಸಿದ್ದಾರೆ, ಗಾಂಧಿ ನಗರದಲ್ಲಿ ಒಂದು ಸಿನಿಮಾ ಬಗ್ಗೆ ಪಾಸಿಟಿವ್ ಸುದ್ದಿ ದೊಡ್ಡಮಟ್ಟದಲ್ಲಿ ಹರಿದಾಡುತ್ತಿದೆ ಎಂದರೆ ಅದರಲ್ಲಿ ಸಾಕಷ್ಟು ವಿಶೇಷತೆಗಳಿವೆ ಎನ್ನಬಹುದು. ಈ ವರ್ಷದ ಹಿಟ್ ಲಿಸ್ಟ್ ಚಿತ್ರಗಳ ಸಾಲಿಗೆ ಸೇರುವ ಎಲ್ಲಾ ಲಕ್ಷಣಗಳು ಈ ಚಿತ್ರಕ್ಕಿದೆ. ಅಭಿಮಾನಿಗಳು ಸಹ ಈ ಚಿತ್ರದ ಬಿಡುಗಡೆಗೆ ಕಾತುರದಿಂದ ಕಾಯುತ್ತಿದ್ದಾರೆ. ಈ ಹಿಂದೆ ಸಿದ್ದೇಶ್ವರ ಎಂಟರ್ ಪ್ರೈಸಸ್ ಬ್ಯಾನರ್‌ನಲ್ಲಿ 12 ಚಿತ್ರಗಳನ್ನು ನಿರ್ಮಿಸಿದ್ದ ಅವರು ಇದೀಗ ಆರ್.ಸಿ. ಸ್ಟುಡಿಯೋಸ್ ಎಂಬ ನಿರ್ಮಾಣ ಸಂಸ್ಥೆಯನ್ನು ಹುಟ್ಟುಹಾಕಿ, ಆ ಮೂಲಕ ಅತ್ಯುತ್ತಮ ಚಿತ್ರಗಳನ್ನು ನಿರ್ಮಿಸುವ ಉದ್ದೇಶ ಹೊಂದಿದ್ದಾರೆ, ಮೊದಲ ಪ್ರಯತ್ನವಾಗಿ ಫಾದರ್ ಚಿತ್ರವನ್ನು ಪ್ಯಾನ್ ಇಂಡಿಯಾ ಮಟ್ಟದಲ್ಲಿ ಬಿಡುಗಡೆ ಮಾಡುತ್ತಿದ್ದಾರೆ.

ಫಾದರ್ ಚಿತ್ರದಲ್ಲಿ ಅಪ್ಪ - ಮಗನ ಬಾಂಧವ್ಯದ ಕುರಿತಾದ ಮನಮಿಡಿಯುವ ಕಥಾಹಂದರವಿದೆ, ಯುವಪ್ರತಿಭೆ ರಾಜ್ ಮೋಹನ್ ಅವರು ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ, ಫಾದರ್ ಚಿತ್ರದಲ್ಲಿ ತಂದೆಯ ಪಾತ್ರದಲ್ಲಿ ಹಿರಿಯನಟ ಪ್ರಕಾಶ್ ರೈ ಹಾಗೂ ಮಗನ ಪಾತ್ರದಲ್ಲಿ ನಟ ಡಾರ್ಲಿಂಗ್ ಕೃಷ್ಣ ಮನೋಜ್ಞವಾಗಿ ಅಭಿನಯಿಸಿದ್ದಾರೆ. ನಾಗಭೂಷಣ್ ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ, ಫಾದರ್ ಈಗಾಗಲೇ ಸಾಕಷ್ಟು ನಿರೀಕ್ಷೆಗಳನ್ನು ಹುಟ್ಟುಹಾಕಿದೆ. ಅದಕ್ಕೆ ಕಾರಣ, ಲವ್‌ಮಾಕ್ಟೇಲ್ ಜೋಡಿ ಇಲ್ಲೂ ಒಂದಾಗಿದೆ. ಡಾರ್ಲಿಂಗ್ ಕೃಷ್ಣ ಅವರ ಜೊತೆ ಅಮೃತಾ ಅಯ್ಯಂಗಾರ್ ಕೂಡ ಇದ್ದಾರೆ ಎನ್ನುವುದು ಮತ್ತೊಂದು ವಿಶೇಷ. ಇವರೊಂದಿಗೆ ಅನೇಕ ನುರಿತ ಕಲಾವಿದರು ಫಾದರ್ ಚಿತ್ರದ ತಾರಾಬಳಗದಲ್ಲಿದ್ದಾರೆ. ಮುಂಬೈನ ಉದ್ಯಮಿ ಆನಂದ್ ಪಂಡಿತ್ ಅರ್ಪಿಸಿ, ಅಲಂಕಾರ್ ಪಾಂಡ್ಯನ್ ಅವರ ಸಹಯೋಗದಲ್ಲಿ ಆರ್.ಸಿ.ಸ್ಟುಡಿಯೋಸ್ ಈ ಚಿತ್ರವನ್ನು ನಿರ್ಮಿಸಿದರೆ, ರಾಜ್ ಮೋಹನ್ ಈ ಚಿತ್ರಕ್ಕೆ ನಿರ್ದೇಶನದ ಜವಾಬ್ದಾರಿ ಹೊತ್ತಿದ್ದಾರೆ. ಮಂಜು ಮಾಂಡವ್ಯ ಅವರ ಸಂಭಾಷಣೆ, ಸುಜ್ಞಾನ್ ಅವರ ಕ್ಯಾಮೆರಾವರ್ಕ್, ನಕುಲ್ ಅಭಯಂಕರ್ ಅವರ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ.

ಕೆಪಿ. ಶ್ರೀಕಾಂತ್ ಚಿತ್ರದಲ್ಲಿ ಮಲಯಾಳಂ ನಟ ಸೌಬಿನ್ ಶಾಹಿರ್



ಕನ್ನಡ ಚಿತ್ರರಂಗದಲ್ಲೀಗ ಸಾಕಷ್ಟು ಹೊಸ ಪ್ರಯೋಗಗಳು ನಡೆಯುತ್ತಿವೆ. ಸಿನಿಮಾ ನಿರ್ಮಾಣ ಶುರು ಮಾಡಿದ ಆರಂಭದಲ್ಲಿಯೇ ಎರಡು, ಮೂರು ಭಾಷೆಗಳನ್ನು ಗಮನದಲ್ಲಿ ಇಟ್ಟುಕೊಂಡು ಚಿತ್ರೀಕರಣ ನಡೆಸುವ ವಾತಾವರಣ ಸೃಷ್ಟಿಯಾಗಿದೆ. ಹೀಗಾಗಿ ಸಿನಿಮಾದ ಬಜೆಟ್ ಕೂಡ ಹೆಚ್ಚಾಗಿದೆ. ಇದೇ ಕಾರಣಕ್ಕೆ ಪರಭಾಷೆಯಿಂದ ಸ್ಟಾರ್ ನಟರನ್ನು ಕೂಡ ಕನ್ನಡಕ್ಕೆ ಕರೆದುಕೊಂಡು ಬರಲಾಗುತ್ತಿದೆ.

ಈ ಹಂತದಲ್ಲಿ ಕನ್ನಡ ಚಿತ್ರರಂಗಕ್ಕೆ ಪರಭಾಷೆಯಿಂದ ಸಾಕಷ್ಟು ಜನಪ್ರಿಯ ನಟರು ಕನ್ನಡ ಚಿತ್ರರಂಗಕ್ಕೆ ಬರುತ್ತಿದ್ದಾರೆ. ಈಗ ಮಲಯಾಳಂನ ಹೆಸರಾಂತ ನಟ ಸೌಬಿನ್ ಶಾಹಿರ್ ಕನ್ನಡ ಚಿತ್ರರಂಗಕ್ಕೆ ಎಂಟ್ರಿ ಕೊಡುತ್ತಿದ್ದಾರೆ. ಇತ್ತೀಚೆಗೆ ಸೂಪರ್‌ಸ್ಟಾರ್ ರಜನಿಕಾಂತ್ ನಟಿಸಿದ 'ಕೂಲಿ' ಸಿನಿಮಾದಲ್ಲಿ, ಸೌಬಿನ್ ಶಾಹಿರ್ ವಿಲನ್ ಆಗಿ ನಟಿಸಿದ್ದರು. ಇವರ ಪಾತ್ರಕ್ಕೆ ಎಲ್ಲೆಡೆ ಮೆಚ್ಚುಗೆ ವ್ಯಕ್ತವಾಗಿತ್ತು.

ಈ ಹಿಂದೆ ಮೈಲಾರಿ, ಟಗರು, ಸಲಗ ಹಾಗೂ ಯುಐನಂಥ ಸೂಪರ್ ಹಿಟ್ ಚಿತ್ರಗಳನ್ನು ನಿರ್ಮಿಸಿದ ಕೆಪಿ. ಶ್ರೀಕಾಂತ್ ಅವರು ತಮ್ಮ ವೀನಸ್ ಎಂಟರ್‌ಟೈನರ್ ಬ್ಯಾನರ್ ಅಡಿಯಲ್ಲಿ ನಿರ್ಮಾಣ ಮಾಡುತ್ತಿರುವ ಹಲ್ಕಾ ಡಾನ್ ಚಿತ್ರದಲ್ಲಿ ಸೌಬಿನ್ ಶಾಹಿರ್ ನಟಿಸುತ್ತಿದ್ದಾರೆ, ಚಿಲಾ ಅವರ ಕಥೆ, ಚಿತ್ರಕಥೆ ಹಾಗೂ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಈ ಚಿತ್ರ ವೀನಸ್ ಎಂಟರ್‌ಟೈನರ್ ಬ್ಯಾನರ್‌ನ ನಾಲ್ಕನೇ ಕೊಡುಗೆಯಾಗಿದೆ.



ಈ ಚಿತ್ರದಲ್ಲಿ ರತ್ನನ್‌ಪ್ರಪಂಚ ಖ್ಯಾತಿಯ ಪ್ರಮೋದ್ ಪಂಜು ನಾಯಕ ನಟನಾಗಿ ನಟಿಸುತ್ತಿದ್ದು, ನಟಿ ಅಮೃತಾ ಅಯ್ಯಂಗಾರ್ ನಾಯಕಿಯ ಪಾತ್ರಕ್ಕೆ ಬಣ್ಣ ಹಚ್ಚುತ್ತಿದ್ದಾರೆ. ಹಿರಿಯ ಬಹುಭಾಷಾ ನಟ ಡೈಲಾಗ್‌ಕಿಂಗ್ ಸಾಯಿಕುಮಾರ್ ಅವರು ಪ್ರಮುಖ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ರಮೇಶ್ ಇಂದಿರಾ, ಜ್ಯೋತಿ ರೈ ಉಳಿದ ತಾರಾಬಳಗದಲ್ಲಿದ್ದಾರೆ. ಸೌಬಿನ್ ಶಾಹಿರ್ ಮಲಯಾಳಂ ಚಿತ್ರರಂಗದಲ್ಲಿ, ಒಬ್ಬ ನಟನಾಗಿ, ನಿರ್ದೇಶಕನಾಗಿ, ಸಹ-ನಿರ್ದೇಶಕನಾಗಿ, ನಿರ್ಮಾಪಕನಾಗಿಯೂ ಗುರುತಿಸಿಕೊಂಡಿದ್ದಾರೆ.

ಈ ಜನಪ್ರಿಯ ನಟನನ್ನು ಇದೀಗ ನಿರ್ಮಾಪಕ ಕೆಪಿ ಶ್ರೀಕಾಂತ್ ಅವರು ಕನ್ನಡ ಚಿತ್ರರಂಗಕ್ಕೆ ಕರೆದುಕೊಂಡು ಬರುತ್ತಿದ್ದಾರೆ. ನಿರ್ಮಾಪಕ ಕೆಪಿ. ಶ್ರೀಕಾಂತ್ ಮಾತನಾಡುತ್ತ ನಮ್ಮ ವೀನಸ್ ಎಂಟರ್ ಪ್ರೈಸಸ್ ನಿರ್ಮಾಣದ ಮತ್ತೊಂದು ಅದ್ದೂರಿ ಚಿತ್ರ ಹಲ್ಕಾ ಡಾನ್. ಚಿತ್ರಕ್ಕೆ ಬೆಂಗಳೂರು ಹಾಗೂ ಕರಾವಳಿಯ ಮಂಗಳೂರು ಸುತ್ತಮುತ್ತ ಹಾಗೂ ಹೈದರಾಬಾದ್‌ನಲ್ಲಿ ಚಿತ್ರೀಕರಣ ನಡೆಸಲಾಗಿದೆ, ಹಲ್ಕಾ ಡಾನ್ ಮಂಗಳೂರು ಭಾಗದಲ್ಲಿ ನಡೆಯುವ ಒಂದು ಅದ್ಭುತ ಕಥೆಯಾಗಿದ್ದು, ಪ್ರೇಕ್ಷಕರಿಗೆ ಒಂದು ಹೊಸ ಅನುಭವ ನೀಡಲಿದೆ. ಈ ಚಿತ್ರದಲ್ಲಿ ನಾಯಕ ಪ್ರಮೋದ್ ಅವರು ಡೈಲಾಗ್ ಕಿಂಗ್ ಸಾಯಿಕುಮಾರ್ ಅವರ ಫ್ಯಾನ್ ಆಗಿ ಕಾಣಿಸಿಕೊಂಡಿದ್ದಾರೆ. ಅದಕ್ಕೇ ಚಿತ್ರದ ಟ್ಯಾಗ್‌ಲೈನ್ ಸಾಯಿಕುಮಾರ ಫ್ಯಾನ್ ಅಂತಿರುತ್ತದೆ. ನನ್ನಜೊತೆ ಒಂದೊಳ್ಳೆ ಚಿತ್ರತಂಡ ಇದೆ. ಎಲ್ಲರ ಆಶೀರ್ವಾದದಿಂದ ಈ ಸಿನಿಮಾ ಚೆನ್ನಾಗಿ ಮೂಡಿಬರಲಿದೆ. ಹಲ್ಕಾ ಡಾನ್ ಎಂಬುದು ಆಡುಭಾಷೆ, ಅಲ್ಲದೆ ನಾಯಕನ ನಿಕ್ ನೇಮ್ ಎಂದಿದ್ದಾರೆ. ಕನ್ನಡ ಹಾಗೂ ತೆಲುಗು ಸೇರಿದಂತೆ ಎರಡು ಭಾಷೆಗಳಲ್ಲಿ ಏಕಕಾಲಕ್ಕೆ 'ಹಲ್ಕಾ ಡಾನ್' ಚಿತ್ರವು ಅದ್ದೂರಿಯಾಗಿ ನಿರ್ಮಾಣವಾಗುತ್ತಿದೆ. ಎ.ಹರಿಕೃಷ್ಣ ಅವರ ಸಂಗೀತ ಸಂಯೋಜನೆ, ಸತ್ಯಾ ಹೆಗಡೆ ಅವರ ಛಾಯಾಗ್ರಹಣ ಹಲ್ಕಾ ಡಾನ್ ಚಿತ್ರಕ್ಕಿದೆ. ಮಲಯಾಳಂ ನಟ ಸೌಬಿನ್ ಶಾಹಿರ್ ಮಲಯಾಳಂ ಚಿತ್ರರಂಗ ಜನಪ್ರಿಯ ನಟ. 2013ರಲ್ಲಿ ತೆರೆಕಂಡಿದ್ದ 'ಅನ್ನಯುಂ ರಸೂಲಂ' ಸಿನಿಮಾ ಮೂಲಕ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟಿದ್ದರು. ಆದರೆ, 2015ರಲ್ಲಿ ತೆರೆಕಂಡ ಮಲಯಾಳಂ ಸೂಪರ ಹಿಟ್ ಸಿನಿಮಾ 'ಪ್ರೇಮಂ' ಮೂಲಕ ಜನಪ್ರಿಯತೆ ಗಿಟ್ಟಿಸಿಕೊಂಡರು. ಆದರೆ, 2019ರಲ್ಲಿ ತೆರೆಕಂಡ 'ಕುಂಬಳಂಗಿ ನೈಟ್ಸ್' ಹಾಗೂ ಮಲಯಾಳಂ ಬಾಕ್ಸಾಫೀಸ್ನಲ್ಲಿ ದಾಖಲೆ ಬರೆದ 'ಮಂಜುಮ್ಮೆಲ್ ಬಾಯ್ಸ್' ನಲ್ಲೂ ನಟಿಸಿ ಮೆಚ್ಚುಗೆ ಗಳಿಸಿದ್ದಾರೆ.



ಚಕ್ರವರ್ತಿ ಇಮ್ಮಡಿ ಪುಲಕೇಶಿಯ ಜೀವನಕಥೆಗೆ ಕೆಎಂ. ಚೈತನ್ಯ ನಿರ್ದೇಶನ

ಆರನೇ ಶತಮಾನದಲ್ಲಿ, ಆಡಳಿತ ನಡೆಸಿದ ದಕ್ಷಿಣ ಭಾರತದ ದಂತಕಥೆಯೆನಿಸಿರುವ ಚಕ್ರವರ್ತಿ ಇಮ್ಮಡಿ ಪುಲಕೇಶಿ ಅವರ ಜೀವನ ಮತ್ತು ಪರಂಪರೆಯನ್ನು ಆಧರಿಸಿದ ಚಿತ್ರ ಎರೆಯ ಬಹುಭಾಷೆಗಳಲ್ಲಿ ನಿರ್ಮಾಣವಾಗುತ್ತಿದೆ, ಭಾರತೀಯ ಚಿತ್ರರಂಗದಲ್ಲಿ ಸಾಕಷ್ಟು ಬಯೋಪಿಕ್ ಸಿನಿಮಾಗಳು ನಿರ್ಮಾಣವಾಗುತ್ತಿವೆ. ಅದರಲ್ಲೂ ಹಿಂದಿ, ತೆಲುಗು, ತಮಿಳು ಭಾಷೆಗಳಲ್ಲಿ ಬಯೋಪಿಕ್ ಸಿನಿಮಾಗಳ ನಿರ್ಮಾಣ ಹೆಚ್ಚು, ಕನ್ನಡದಲ್ಲಿ ಆತ್ಮಚರಿತ್ರೆಯ ಸಿನಿಮಾಗಳು ಬರೋದು ಕಮ್ಮಿಯಾಗಿದೆ. ಇದೀಗ ಐತಿಹಾಸ ಕಮ್ ಬಯೋಪಿಕ್ ಸಿನಿಮಾ ಸೆಟ್ಟೇರಿದೆ. ಆರನೇ ಶತಮಾನದಲ್ಲಿ, ಭಾರತವನ್ನು ಆಳಿದ ಚಾಲುಕ್ಯ ಸಾಮ್ರಾಜ್ಯದ ದೊರೆ, ದಕ್ಷಿಣ ಭಾರತದ ದಂತಕಥೆ ಚಕ್ರವರ್ತಿ ಇಮ್ಮಡಿ ಪುಲಿಕೇಶಿ ಅವರ ಜೀವನ ಚರಿತ್ರೆಯನ್ನು ತೆರೆಯ ಮೇಲೆ ತರಲು ಸಕಲ ಸಿದ್ಧತೆಗಳು ನಡೆಯುತ್ತಿವೆ. ಈ ದೊರೆಯ ಪರಂಪರೆಯನ್ನು ಆಧರಿಸಿದ ಚಿತ್ರಕ್ಕೆ 'ಎರೆಯ' ಎಂದು ಟೈಟಲ್ ಇಡಲಾಗಿದೆ. ಈ ಮಹತ್ವಾಕಾಂಕ್ಷೆಯ ಚಿತ್ರಕ್ಕೆ ಆ ದಿನಗಳು ಖ್ಯಾತಿಯ ನಿರ್ದೇಶಕ ಕೆ.ಎಂ. ಚೈತನ್ಯ ಅವರು ಆಕ್ಷನ್ ಕಟ್ ಹೇಳುತ್ತಿದ್ದಾರೆ. ಕೆ.ಎಂ. ಚೈತನ್ಯ ಕನ್ನಡದಲ್ಲಿ ಹಲವಾರು ಯಶಸ್ವಿ ಚಲನಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಇತ್ತೀಚೆಗಷ್ಟೇ ಕೆ.ಎ ಚೈತನ್ಯ ನಿರ್ದೇಶನದ, ವಿನೋದ್ ಪ್ರಭಾಕರ್ ನಟನೆಯ 'ಬಲರಾಮನ ದಿನಗಳು' ಚಿತ್ರ ಬಿಡುಗಡೆಗೆ ಸಿದ್ಧವಾಗಿದೆ.

'ಎರೆಯ' ಚಿತ್ರವನ್ನು ವಿಂಗ್ಸ್ ಪ್ಯಾನ್ ಮೋಷನ್ ಪಿಕ್ಚರ್ಸ್ ಎಂಬ ಸಂಸ್ಥೆ ನಿರ್ಮಾಣ ಮಾಡುತ್ತಿದೆ. ಈ ಮೂಲಕ ಒಂದು ಅಭೂತಪೂರ್ವ ಸಿನಿಮಾ ಸಾಹಸಗಾಥೆಗೆ ಮುನ್ನುಡಿ ಬರೆಯುತ್ತಿದೆ. ಸುನೀಶ್ ಜಾವಡೇಕರ್ ಮತ್ತು ನಿವೇದಿತಾ ಕೊಠಾರೆ ಅವರು 'ಎರೆಯ' ಚಿತ್ರದ ನಿರ್ಮಾಣಕ್ಕೆ ಕೈಹಾಕಿದ್ದಾರೆ. ಎರೆಯ ಚಿತ್ರದಲ್ಲಿ ಚಕ್ರವರ್ತಿ ಇಮ್ಮಡಿ ಪುಲಕೇಶಿಯ ಸಾಹಸ, ಚಾತುರ್ಯ ಮತ್ತು ಅದ್ವಿತೀಯ ಆಡಳಿತ ಸೂತ್ರಗಳ ಮೂಲಕ ವಿಶಾಲ ಸಾಮ್ರಾಜ್ಯವನ್ನು ಆಳಿದ ಅವರ ಆಳ್ವಿಕೆಯನ್ನು ಚಿತ್ರಿಸಲಾಗುವುದು. ಇಮ್ಮಡಿ ಪುಲಕೇಶಿಯ ಕಾಲವನ್ನು ಇತಿಹಾಸದಲ್ಲಿ ಒಂದು ಸುವರ್ಣಯುಗ ಎಂದೇ ಹೇಳಲಾಗುತ್ತದೆ. ಕನ್ನಡಕ್ಕೆ ಒಂದು ಮೈಲಿಗಲ್ಲಾಗಲಿರುವ ಈ ಚಿತ್ರವನ್ನು ನಿರ್ದೇಶಿಸುತ್ತಿರುವುದು ನಿರ್ದೇಶಕ ಕೆ.ಎಂ. ಚೈತನ್ಯ.







ಸೂಕ್ಷ್ಮತೆಯ ಕಥೆಗಾರಿಕೆ ಮತ್ತು ವಿಭಿನ್ನ ದೃಶ್ಯ ಶೈಲಿಗೆ ಹೆಸರುವಾಸಿಯಾಗಿರುವ ಕೆಎಂ.ಚೈತನ್ಯ ಕನ್ನಡದಲ್ಲಿ 8 ಯಶಸ್ವಿ ಚಲನಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಅವರ ಮೊದಲ ಚಲನಚಿತ್ರ ಆ ದಿನಗಳು ಒಂದು ಮಹತ್ವದ ಮೈಲಿಗಲ್ಲಾಗಿದ್ದು, 2007ರಲ್ಲಿ ಅತ್ಯುತ್ತಮ ನಿರ್ದೇಶಕ ಮತ್ತು ಅತ್ಯುತ್ತಮ ಚಲನಚಿತ್ರ ಸೇರಿದಂತೆ ಹಲವಾರು ಫಿಲಂಫೇರ್ ಪ್ರಶಸ್ತಿಗಳನ್ನು ಗೆದ್ದಿದೆ. ಎರೆಯ ಸಿನಿಮಾದಲ್ಲಿ ಚಕ್ರವರ್ತಿ ಇಮ್ಮಡಿ ಪುಲಿಕೇಶಿಯ ಸಾಹಸ, ಚಾತುರ್ಯ ಮತ್ತು ಆತನ ಅದ್ವಿತೀಯ ಆಡಳಿತ ಸೂತ್ರಗಳನ್ನು ಹೇಳಗುತ್ತಿದೆ. ಇಮ್ಮಡಿ ಪುಲಿಕೇಶಿಯ ಕಾಲವನ್ನು ಇತಿಹಾಸದಲ್ಲಿ ಒಂದು ಸುವರ್ಣಯುಗ ಎಂದೇ ಹೇಳಲಾಗುತ್ತದೆ. ಡಾ. ಭೂಷನ್ ಶಾನಭಾಗ್ ಅವರ ಆಳವಾದ ಸಂಶೋಧನೆಯನ್ನು ಆಧಾರವಾಗಿಟ್ಟುಕೊಂಡು ಈ ಚಿತ್ರಕಥೆ ಹೆಣೆಯಲಾಗಿದೆ. ಎರೆಯ ಇತಿಹಾಸದ ಪುಟಗಳಲ್ಲಿ ಕಂಡ ಭಾರತದ ಭವ್ಯತೆಯನ್ನು ಬಿಂಬಿಸುವ ಸಿನಿಮಾ ಆಗಲಿದೆ. ಎರೆಯ ಚಿತ್ರವನ್ನು ಕನ್ನಡ, ಹಿಂದಿ ಅಲ್ಲದೆ ದಕ್ಷಿಣ ಭಾರತದ ಎಲ್ಲಾ ಭಾಷೆಗಳಲ್ಲೂ ನಿರ್ಮಿಸಲಾಗುವುದು. ಈ ಚಿತ್ರವು ರಾಷ್ಟ್ರದ ಎಲ್ಲಾ ಭಾಗಗಳಿಂದ ಬರುವ ಪ್ರತಿಷ್ಠಿತ ತಾರಾಬಳಗವನ್ನು ಹೊಂದಿದ್ದು, ನುರಿತ ತಂತ್ರಜ್ಞರ ತಂಡ ಈ ಚಿತ್ರದಲ್ಲಿ ಕೆಲಸ ಮಾಡಲಿದೆ. ಈ ಚಿತ್ರದ ಪ್ರಮುಖ ಕಲಾವಿದರ ಆಯ್ಕೆ ಪ್ರಕ್ರಿಯೆ ಮತ್ತು ತಾಂತ್ರಿಕ ತಂಡದ ವಿವರಗಳನ್ನು ಶೀಘ್ರದಲ್ಲೇ ಪ್ರಕಟಿಸಲಾಗುತ್ತದೆ. ಹೆಸರಾಂತ ನಟವರ್ಗವನ್ನೊಳಗೊಂಡ ಈ ಚಿತ್ರವು ಈ ವರ್ಷಾಂತ್ಯಕ್ಕೆ ಬಿಡುಗಡೆಯಾಗುವ ಸಾಧ್ಯತೆಯಿದೆ. ಈ ಚಿತ್ರವು ರಾಷ್ಟ್ರದ ಎಲ್ಲಾ ಭಾಗಗಳಿಂದ ಬಂದ ಉತ್ಕೃಷ್ಟ ತಾರಾಬಳಗವನ್ನು ಒಳಗೊಂಡಿದ್ದು, ಅತ್ಯಂತ ನುರಿತ ತಂತ್ರಜ್ಞರ ತಂಡ ಇದನ್ನು ತೆರೆಗೆ ತರಲು ಸಿದ್ಧತೆ ಮಾಡಿಕೊಳ್ಳುತ್ತಿದೆ.

ಜನ ನಾಯಗನ್ ಬೆಂಬಲಕ್ಕೆ ನಿಂತ ರಿಷಬ್ ಶೆಟ್ಟಿ, ರಜನಿಕಾಂತ್

ದಳಪತಿ ವಿಜಯ್ ಅಭಿನಯದ ಸಿನಿಮಾ ಎಂದರೆ ಅಭಿಮಾನಿಗಳಲ್ಲಿ ಹಬ್ಬದ ವಾತಾವರಣವಿರುತ್ತದೆ. ಅದರಲ್ಲೂ, ಅವರ ರಾಜಕೀಯ ಪ್ರವೇಶದ ನಂತರದ ಸಿನಿಮಾಗಳ ಮೇಲೆ ದೊಡ್ಡ ಮಟ್ಟದ ನಿರೀಕ್ಷೆಗಳು ಇದ್ದವು. ಆದರೆ, ವಿಜಯ್ ಅವರು ನಟಿಸಿರುವ ಬಹುನಿರೀಕ್ಷಿತ ಚಿತ್ರ ಜನ ನಾಯಗನ್ ಅಧಿಕೃತವಾಗಿ ತೆರೆಗೆ ಬರುವ ಮೊದಲೇ ಅಂತರ್ಜಾಲದಲ್ಲಿ ಲೀಕ್ ಆಗಿರುವುದು ಇಡೀ ಚಿತ್ರತಂಡಕ್ಕೆ ದೊಡ್ಡ ಆಘಾತ ತಂದಿದೆ. ಈ ಕೃತ್ಯದ ವಿರುದ್ಧ ಸೂಪರ್ ಸ್ಟಾರ್ ರಜನಿಕಾಂತ್, ನಟ ರಿಷಬ್ ಶೆಟ್ಟಿ ಮತ್ತು ಸೂರ್ಯ ಸೇರಿದಂತೆ ಹಲವು ಕಲಾವಿದರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.





ದಳಪತಿ ವಿಜಯ್ ನಟನೆಯ ಜನ ನಾಯಗನ್ ಸಿನಿಮಾ ಸೆನ್ಸಾರ್ ಪ್ರಕ್ರಿಯೆ ಮತ್ತು ಚುನಾವಣೆಗಳ ಕಾರಣದಿಂದಾಗಿ, ರಿಲೀಸ್ ಮಾಡುವುದು ತಡವಾಗಿತ್ತು. ತಮಿಳುನಾಡು ವಿಧಾನಸಭಾ ಚುನಾವಣೆಗಳು ಮುಗಿದ ಬೆನ್ನಲ್ಲೇ ಚಿತ್ರವನ್ನ ದೊಡ್ಡ ಮಟ್ಟದಲ್ಲಿ ರಿಲೀಸ್ ಮಾಡಲು ಕೆವಿಎನ್ ಪ್ರೊಡಕ್ಷನ್ಸ್ ಸಿದ್ಧತೆ ನಡೆಸಿತ್ತು. ಆದರೆ, ಚಿತ್ರ ಬಿಡುಗಡೆಗೂ ಮುನ್ನ ಕೆಲವೇ ದಿನಗಳಿರುವಾಗ ಕಿಡಿಗೇಡಿಗಳು ಜನನಾಯಗನ್ ಸಿನಿಮಾದ ಪ್ರಮುಖ ದೃಶ್ಯಗಳನ್ನ ಸೋಶಿಯಲ್ ಮೀಡಿಯಾದಲ್ಲಿ ಸೋರಿಕೆ ಮಾಡಿದ್ದಾರೆ. ಇದು ಚಿತ್ರತಂಡದ ಹಲವು ವರ್ಷಗಳ ಪರಿಶ್ರಮಕ್ಕೆ ದೊಡ್ಡ ಕೊಡಲಿ ಪೆಟ್ಟು ನೀಡಿದಂತಾಗಿದೆ.

ರಜನಿಕಾಂತ್: ಜನ ನಾಯಗನ್ ಸಿನಿಮಾ ಲೀಕ್ ಆಗಿರುವ ಬಗ್ಗೆ ಟ್ವೀಟ್ ಮಾಡಿರುವ ನಟ ರಜನಿಕಾಂತ್ ಅವರು, ಜನ ನಾಯಗನ್ ಸಿನಿಮಾವನ್ನ ಯಾರೋ ಅಂತರ್ಜಾಲದಲ್ಲಿ ಪೋಸ್ಟ್ ಮಾಡಿರುವುದು ಆಘಾತಕಾರಿ ಮತ್ತು ನೋವಿನ ಸಂಗತಿ. ಚಲನಚಿತ್ರ ಸಂಸ್ಥೆಗಳು ಇದರ ವಿರುದ್ಧ ಧ್ವನಿ ಎತ್ತಬೇಕು, ಮತ್ತು ಸರ್ಕಾರ ಆ ಅಪರಾಧಿಗಳನ್ನ ಪತ್ತೆಹಚ್ಚಿ ಅವರಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಇಂತಹ ಅಪರಾಧ ಮುಂದುವರಿಯಬಾರದು ಎಂದಿದ್ದಾರೆ.

ರಿಷಬ್ ಶೆಟ್ಟಿ: ಡಿವೈನ್ ಸ್ಟಾರ್ ರಿಷಬ್ ಶೆಟ್ಟಿ ಅವರು ಈ ಚಿತ್ರತಂಡದ ಪರವಾಗಿ ಧ್ವನಿ ಎತ್ತಿದ್ದಾರೆ. ಯಾವುದೇ ಒಂದು ಚಿತ್ರ ಉತ್ಸಾಹ, ಕನಸುಗಳು ಮತ್ತು ಪ್ರೀತಿಯ ಮೇಲೆ ನಿರ್ಮಿಸಲ್ಪಟ್ಟಿದೆ. ಪ್ರೇಕ್ಷಕರಿಗೆ ಮನರಂಜನೆಯನ್ನು ನೀಡಲು ಲೆಕ್ಕವಿಲ್ಲದಷ್ಟು ಜನರು ಅವಿಶ್ರಾಂತವಾಗಿ ಕೆಲಸ ಮಾಡುತ್ತಾರೆ. ಯಾರಾದರೂ ಆ ಪ್ರಯತ್ನವನ್ನು, ಚಿಕ್ಕ ರೀತಿಯಲ್ಲಿಯೂ ಸಹ, ಹಾಳುಮಾಡಲು ಪ್ರಯತ್ನಿಸಿದಾಗ, ಅದರಲ್ಲಿ ಒಳಗೊಂಡಿರುವ ಪ್ರತಿಯೊಬ್ಬರ ಮೇಲೆ ಅದು ತೀವ್ರ ಪರಿಣಾಮ ಬೀರುತ್ತದೆ. ಜನನಾಯಗನ್ ದುರದೃಷ್ಟಕರ ಸೋರಿಕೆ ಗಂಭೀರ ಮತ್ತು ಸ್ವೀಕಾರಾರ್ಹವಲ್ಲದ ಕೃತ್ಯವಾಗಿದೆ. ಪ್ರೇಕ್ಷಕರಾಗಿ ದಯವಿಟ್ಟು ಪ್ರಯತ್ನಗಳನ್ನು ಗೌರವಿಸಿ ಮತ್ತು ಸೋರಿಕೆಯಾದ ದೃಶ್ಯಗಳನ್ನು ಹರಡುವುದನ್ನು ನಿಲ್ಲಿಸಿ. ನಾಳೆ ನಿಮಗೆ ಇನ್ನೂ ಅನೇಕ ಸಿನಿಮಾಗಳನ್ನು ನೀಡುವ ಶಕ್ತಿಯನ್ನು ಕೊಲ್ಲಬೇಡಿ. ಈ ಕಷ್ಟದ ಸಮಯದಲ್ಲಿ ನಾನು ಇಡೀ ಚಿತ್ರ ತಂಡ ಮತ್ತು ಕೆವಿಎನ್ ಪ್ರೊಡಕ್ಷನ್ಸ್ ಜೊತೆ ಒಗ್ಗಟ್ಟಿನಿಂದ ನಿಲ್ಲುತ್ತೇನೆ. ನಮ್ಮ ಸಿನಿಮಾ ಕುಟುಂಬವನ್ನು ರಕ್ಷಿಸಿ ಎಂದು ಟ್ವೀಟ್ ಮಾಡಿದ್ದಾರೆ.

ಹೃದಯವಿದ್ರಾವಕ ಮತ್ತು ಅನ್ಯಾಯ - ಇಡೀ ತಂಡದ ಉತ್ಸಾಹ ಇದಕ್ಕೆ ಇಳಿದಿದೆ. ನಾನು ನಿಮ್ಮೆಲ್ಲರನ್ನೂ ಪ್ರಾಮಾಣಿಕವಾಗಿ ವಿನಂತಿಸುತ್ತೇನೆ, ದಯವಿಟ್ಟು ಇಲ್ಲಿ ಚಿತ್ರವನ್ನು ನೋಡಬೇಡಿ, ಹಂಚಿಕೊಳ್ಳಬೇಡಿ ಅಥವಾ ಚರ್ಚಿಸಬೇಡಿ. ಅವರ ಕೆಲಸವನ್ನು ಗೌರವಿಸಿ. ನಾನು ನನ್ನ ಸ್ನೇಹಿತರೊಂದಿಗೆ ನಿಂತು ಈ ಕೃತ್ಯವನ್ನು ಖಂಡಿಸುತ್ತೇನೆ, ಇದು ಕ್ಷಮಿಸಲಾಗದು ಎಂದು ನಟ ಸೂರ್ಯ ಟ್ವೀಟ್ ಮಾಡಿದ್ದಾರೆ.

ಪುನೀತ್ ಹೆಸರಲ್ಲಿ ಹಣ ಮಾಡ್ತಾರೆ ಅಂದೋರಿಗೆ ಅನುಶ್ರೀ ಖಡಕ್ ಉತ್ತರ

ಕರ್ನಾಟಕದ ನಂಬರ್ ಒನ್ ನಿರೂಪಕಿ ಎನಿಸಿಕೊಂಡ ಅನುಶ್ರೀ ಅವರು ಪುನೀತ್ ರಾಜ್‌ಕುಮಾರ್ ಅವರ ಅಪ್ಪಟ ಅಭಿಮಾನಿ ಎನ್ನುವುದು ಎಲ್ಲರಿಗೂ ಗೊತ್ತು, ಇತ್ತೀಚೆಗೆ ಅನುಶ್ರೀ ಅವರು ಪುನೀತ್ ರಾಜಕುಮಾರ್ ಹೆಸರಲ್ಲಿ ಹಣ ಮಾಡುತ್ತಿದ್ದಾರೆ ಎಂಬ ಅಪವಾದನೆ ಅವರ ಮೇಲೆ ಬಂದಿತ್ತು, ಅದಕ್ಕೀಗ ಅನುಶ್ರೀ ಖಡಕ್ ಉತ್ತರ ನೀಡಿದ್ದಾರೆ. ಪುನೀತ್ ರಾಜ್‌ಕುಮಾರ್ ಕಂಡ್ರೆ ಅನುಶ್ರೀಗೆ ಮೊದಲಿಂದಲೂ ಅಭಿಮಾನ, ಅದೇ ಕಾರಣದಿಂದ ಅನುಶ್ರೀ ತಮ್ಮ ಯೂಟ್ಯೂಬ್ ಚಾನೆಲ್ ಲೋಗೋದಲ್ಲಿ ಪುನೀತ್ ಅವರ ಫೋಟೋ ಸೇರಿಸಿಕೊಂಡಿದ್ದಾರೆ. ಪುನೀತ್ ರಾಜಕುಮಾರ್ ನಿಧನದ ಬಳಿಕ ಅವರನ್ನು ನೆನೆದು ಅನುಶ್ರೀ ಸಾಕಷ್ಟು ಸಲ ಅತ್ತಿದ್ದೂ ಇದೆ.



ತಮ್ಮ ಮದುವೆಯ ಸಂದರ್ಭದಲ್ಲಿ ಪುನೀತ್ ಅವರ ಫೋಟೋ ಇಟ್ಟು ಪೂಜಿಸಿದ್ದರು. ಇದು ಪುನೀತ್ ಮೇಲೆ ಅವರಿಗಿರೋ ಪ್ರೀತಿಗೆ ಸಾಕ್ಷಿ. ಆದರೆ, ಕೆಲವರು ಇದನ್ನು ಟ್ರೋಲ್ ಮಾಡಿದ್ದರು, ಅದಕ್ಕೆ ಅನುಶ್ರೀ ಖಡಕ್ ಉತ್ತರ ನೀಡಿದ್ದಾರೆ.

ಪುನೀತ್‌ರನ್ನು ಅನುಶ್ರೀ ಆರಾಧಿಸುತ್ತಾರೆ. ಅನೇಕ ಸಂದರ್ಭಗಳಲ್ಲಿ ಪುನೀತ್‌ರ ಬಗ್ಗೆ ಹಾಡಿ ಹೊಗಳಿದ್ದಾರೆ. ನೆನೆದು ಕಣ್ಣೀರೂ ಹಾಕಿದ್ದಾರೆ. ಇದನ್ನು ನೋಡಿದ ಅನೇಕರು ಅನುಶ್ರೀ ಅವರನ್ನು ಟೀಕೆ ಮಾಡಿದ್ದರು. ಅವರದ್ದು ಮೊಸಳೆ ಕಣ್ಣೀರು, ಪುನೀತ್ ಹೆಸರಲ್ಲಿ ಅವರು ದುಡ್ಡು ಮಾಡುತ್ತಿದ್ದಾರೆ ಎಂದಿದ್ದರು. ಕಾರ್ಯಕ್ರಮವೊಂದರಲ್ಲಿ ಪುನೀತ್, ಅನುಶ್ರೀ ಅವರ ವಾಕ್ಚಾತುರ್ಯಕ್ಕೆ ಬೆರಗಾಗಿ ನೀವು ತುಂಬಾನೇ ಸ್ವೀಟ್. ನಿಮ್ಮಂತವರ ಅಭಿಮಾನ ಹೊಂದಲು ನಿಜಕ್ಕೂ ಖುಷಿಯಾಗುತ್ತದೆ. ದೇವರು ನಿಮಗೆ ಒಳ್ಳೆಯದು ಮಾಡಲಿ ಎಂದು ಹೇಳಿದ್ದರಂತೆ. ಇದರ ಸ್ಕ್ರೀನ್ ಶಾಟ್ ಕೂಡ ಇಟ್ಟುಕೊಂಡಿರುವ ಅನುಶ್ರೀ, ನಾನು ಎಂತಹ ಫ್ಯಾನ್ ಅಂತ ಅವರಿಗೆ ಗೊತ್ತು. ಹೀಗಿರುವಾಗ ಇಂಥವರಿಗೆ ಯಾಕೆ ಉತ್ತರಿಸಬೇಕು. ಗಿಲ್ಲಿ ಸ್ಟೈಲ್‌ನಲ್ಲಿ ಹೇಳ್ತೀನಿ, ಜಸ್ಟ್ ಲೀವ್ ಇಟ್ ಎಂದು ಅನುಶ್ರೀ ಹೇಳಿದ್ದಾರೆ.

ನಾಗತಿಹಳ್ಳಿ ಚಂದ್ರಶೇಖರ್ ಪ್ರತಿಭೆಗಳಿಗೆ ಅವಕಾಶ

ಅಮೇರಿಕಾ ಅಮೇರಿಕಾ, ನನ್ನ ಪ್ರೀತಿಯ ಹುಡುಗಿ, ಅಮೃತಧಾರೆ, ಪ್ಯಾರಿಸ್ ಪ್ರಣಯ ಹೀಗೆ ಹಲವಾರು ಸೂಪರ್ ಹಿಟ್ ಚಿತ್ರಗಳನ್ನು ಕನ್ನಡ ಚಿತ್ರರಂಗಕ್ಕೆ ಕೊಡುಗೆಯಾಗಿ ನೀಡಿರುವ ಸುಮಾರು 40 ವರ್ಷಗಳ ಅನುಭವ ಹೊಂದಿರುವ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಅವರು ತೆರೆಯ ಮುಂದೆ ಹಾಗೂ ಹಿಂದೆ ಅನೇಕ ನೂತನ ಪ್ರತಿಭೆಗಳನ್ನು ಅವಕಾಶ ನೀಡಿ ಬೆಳಕಿಗೆ ತಂದಿದ್ದಾರೆ, ಇವರಲ್ಲಿ ಗೋಲ್ಡನ್ ಸ್ಟಾರ್ ಗಣೇಶ್, ಕಲಿಸವಯ್ಯ, ಧ್ಯಾನ್, ರಘು ಮುಖರ್ಜಿ, ದೀಪಾಲಿ, ಮನೋಮೂರ್ತಿ ಮುಂತಾದ ಹೆಸರುಗಳು ಸೇರ್ಪಡೆಯಾಗಿದೆ. ಕನ್ನಡ ಚಿತ್ರರಂಗದಲ್ಲಿ ಮೇಷ್ಟ್ರು ಎಂದೇ ಪ್ರಖ್ಯಾತಿ ಪಡೆದಿರುವ ಡಾ.ನಾಗತಿಹಳ್ಳಿ ಚಂದ್ರಶೇಖರ್ ಅವರು ಟೆಂಟ್ ಸಿನಿಮಾ ಎಂಬ ತರಬೇತಿ ಶಾಲೆಯನ್ನು ಸ್ಥಾಪಿಸಿದ್ದು, ಕಳೆದ 14 ವರ್ಷದಿಂದ ಚಿತ್ರರಂಗಕ್ಕೆ ಹಲವಾರು ಪ್ರತಿಭೆಗಳನ್ನು ಅರ್ಪಿಸಿದ್ದಾರೆ.



ಈ ರಂಗಶಾಲೆಯಲ್ಲಿ ಸಿನಿಮಾರಂಗದ ಅನೇಕ ಕ್ಷೇತ್ರಗಳಾದ - ನಟನೆ, ನಿರ್ದೇಶನ, ಛಾಯಾಗ್ರಹಣ, ಸಂಕಲನ ಮುಂತಾದ ವಿಷಯಗಳಲ್ಲಿ ಡಿಪ್ಲೊಮಾ ಕೋರ್ಸ್‌ಗಳು ಹಾಗೂ ವರ್ಕ್‌ಶಾಪ್‌ಗಳನ್ನು ನಡೆಸಲಾಗುತ್ತಿದೆ. ಚಿತ್ರರಂಗದ ಗಣ್ಯರು, ಅನುಭವಸ್ಥರು, ನುರಿತ ತಂತ್ರಜ್ಞರು ಈ ಶಾಲೆಯಲ್ಲಿ ಉಪನ್ಯಾಸಕರುಗಳಾಗಿದ್ದು, ಅವರ ಸಿನಿಮಾ ಅನುಭವದ ಉತ್ತಮ ಮಾರ್ಗದರ್ಶನದಿಂದ, ಕೋರ್ಸ್ ಮುಗಿಯುವ ವೇಳೆಗೆ ವಿದ್ಯಾರ್ಥಿಗಳಿಗೆ ಚಿತ್ರರಂಗದಲ್ಲಿ ಉತ್ತಮ ಅವಕಾಶಗಳು ಸಿಗುತ್ತಿವೆ. ಪ್ರಸ್ತುತ ಸಂಕಲನ ಹಾಗೂ 100 ದಿನಗಳ ನಟನಾ ತರಬೇತಿಗೆ ಪ್ರವೇಶವನ್ನು ಪಡೆಯಬಹುದು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26